ವೀರಶೈವ ಸಾಹಿತ್ಯ
ಮತ್ತು
ಸಂಸ್ಕೃತಿ



ಅ.ನ. ಕೃಷ್ಣರಾಯ

ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ

ಅ. ನ. ಕೃಷ್ಣರಾಯ



ಪ್ರಕಾಶಕರು
ಎಸ್. ಎಸ್. ಎನ್. ಬುಕ್ ಡಿಪೋ
ನ್ಯೂ ಮಾರ್ಕೆಟ್, ಬೆಂಗಳೂರು ನಗರ

ಮುದ್ರಕರು
ಎಚ್. ಎಲ್. ಪ್ರಸಾದ್
ಟೌನ್ ಪ್ರೆಸ್, ಪತ್ರಪ್ಪ ರೋಡ್
ಬೆಂಗಳೂರು ನಗರ

ಮುನ್ನುಡಿ

ವೀರಶೈವ ಸಾಹಿತ್ಯವನ್ನು ನಾವು ಅಭ್ಯಾಸ ಮಾಡುವುದಕ್ಕೆ ಆರಂಭಿಸಿ ವರ್ಷಗಳಾದವು. ಆಗಾಗ್ಗೆ ಕೆಲವು ಲೇಖನಗಳ ಮೂಲಕ ನಮ್ಮ ಾರವನ್ನು ಕನ್ನಡ ಬಂಧುಗಳ ಮುಂದೆ ಇಡುತ್ತ ಬಂದಿದ್ದೇವೆ. ವೀರಶೈವ ಸಾಹಿತ್ಯವನ್ನು ಒಳಹೊಕ್ಕು ನೋಡುತ್ತ ನೋಡುತ್ತ ಅದರಲ್ಲಿ ತಲೆಯೆತ್ತಿ ನಿಂತಿರುವ 'ಕನ್ನಡತನ' ನಮ್ಮ ಹೃದಯವನ್ನು ಸೆರೆಹಿಡಿಯುತ್ತ ಬಂದಿತು. ವೀರಶೈವ ಸಾಹಿತ್ಯ ಸಂಸ್ಕೃತಿಗಳೆಂದರೆ ಕನ್ನಡ ಸಾಹಿತ್ಯ ಸಂಸ್ಕೃತಿ; ವೀರ ಶೈವ ಧರ್ಮವೆಂದರೆ ಕನ್ನಡ ಧರ್ಮವೆನ್ನುವಷ್ಟು ದೂರ ನಮ್ಮ ವಿಚಾರಲಹರಿ ಮುಂದುವರಿದಿದೆ. ಆದರೆ ಅಭ್ಯಾಸಿಗೆ ಒದಗುವ ಅನಂತ ಸಂಕಷ್ಟಗಳಿಂದ ನಾವು ಉದ್ದೇಶಪಟ್ಟಷ್ಟು ಕೆಲಸ ಮಾಡಲಾಗಿಲ್ಲವೆಂದಲ್ಲಿ ತಪ್ಪಾಗಲಾರದು. ಂದ್ರ ಪುಸ್ತಕಾಲಯದ ಅಭಾವ, ಹಸ್ತಪ್ರತಿಗಳ ಕೊರತೆ, ಜತೆಗೆ ಪ್ರೋತ್ಸಾ ದ ದಾರಿದ್ರ್ಯಗಳಿಂದ ನಾವೂ ಕುಂಟುತ್ತ ಎಡವುತ್ತ ನಡೆದಿದ್ದೇವೆ.

ವೀರಶೈವ ಸಾಹಿತ್ಯದ ವ್ಯಾಪ್ತಿ, ರೂಪರೇಷೆಯನ್ನು ತೋರುವ ಗ್ರಂಥದ ಆವಶ್ಯಕತೆಯನ್ನು ನಾವು ಅಡಿಗಡಿಗೂ ಅನುಭವಿಸಿದ್ದೇವೆ. ನಮ್ಮೀ ಪ್ರಯತ್ನ ನಮ್ಮ ಹಾಗೆ ಹೆಣಗುತ್ತಿರುವವರ ಸಲುವಾಗಿ ಮಾಡಿದುದಾಗಿದೆ.

ಗ್ರಂಥಕ್ಕೆ ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿಯೆಂದು ಹೆಸರಿಟ್ಟು ದಾಯಿತು. ಆದರೆ ಸ್ಥಳ ಸಂಕೋಚದಿಂದ ಸಾಂಸ್ಕೃತಿಕ ವಿಭಾಗದ ಕೆಲವು ಅಂಶ ನ್ನು ಮಾತ್ರ ಇದರಲ್ಲಿ ಪ್ರಸ್ತಾಪಿಸಿ ಮಿಕ್ಕುದನ್ನು ನಮ್ಮ ಮುಂದಿನ ಂಥಕ್ಕ ಮೀಸಲಿಡಬೇಕಾಗಿ ಬಂತು.

ಕವಿ, ಕಾವ್ಯವಿಮರ್ಶೆ ಮಾಡುವಾಗ ನಮ್ಮ ಪ್ರಸ್ಥಾನವೊಂದೇರ್ಪಟ್ಟಿರು ದನ್ನು ಓದುಗರು ಕಂಡುಕೊಳ್ಳಬಹುದು. ಕವಿ ನಮ್ಮವನೆಂದೂ, ನಮ್ಮ ಊರಿನವನೆಂದೂ ನಮ್ಮ ಜಾತಿಯವನೆಂದೂ ಅವನನ್ನು ಮುಗಿಲಮುಟ್ಟಕ್ಕೇರಿ ವ ಮನೋಭಾವಕ್ಕೆ ವಿಚಾರವಾದಿಗಳಾದ ನಾವು ಮನ್ನಣೆ ಕೊಡುವು ು. ನಮ್ಮ ಸ್ವತಂತ್ರ ವಿವೇಚನೆಯಲ್ಲಿ ಹಿಂದೆ ಕೆಲಸ ಮಾಡಿದ ಹಿರಿಯರ ತಗಳನ್ನು ಕೆಲವು ಕಡೆ ಖಂಡಿಸಬೇಕಾಗಿ ಬಂತು. ಇದನ್ನು ಹಿರಿಯರಿಗೆ

ನಾವೆಸಗಿರುವ ಅಪಚಾರವೆಂದು ಯಾರೂ ಭಾವಿಸಬಾರದು. ಅಭಿಪ್ರಾಯ ಭೇದಗಳು, ಅರಿವಿನ ಕಣದಲ್ಲೇ ವಿನಾ ವ್ಯಕ್ತಿ ಜೀವನದಲ್ಲಲ್ಲ. ತಿಳಿವಿನ ತಳ ತಡಕುವುದಕ್ಕೆ ಕಷ್ಟಪಟ್ಟ ಯಾರೂ ಇತರರ ಕಷ್ಟವನ್ನು ತೆಗಳುವುದಿಲ್ಲ, ಕಿರಿದೆಂದು ಭಾವಿಸುವುದಿಲ್ಲ.

ಇಂದು ಕಾವ್ಯಾಭ್ಯಾಸ, ಕಾವ್ಯವಿಮರ್ಶೆ ನಾನಾಮುಖವಾಗಿ ನಮ್ಮ ನಾಡಿನಲ್ಲಿ ನಡೆಯುತ್ತಿದೆ. ವಿದ್ವಾಂಸರು ದೊಡ್ಡ ಕಾವ್ಯಗಳನ್ನು ಸಂಗ್ರಹಿಸಿ, ಕವಿಯ ರಸಭಾಗವನ್ನು ಜನತೆಯ ಮುಂದಿಟ್ಟು ಮಹೋಪಕಾರ ಮಾಡುತ್ತಿದ್ದಾರೆ. ಸಂಗ್ರಹ ಕೆಲಸ ಬಹಳ ಕಷ್ಟವಾದ ಕೆಲಸ. ಇದರಿಂದ ಎಲ್ಲರನ್ನೂ ಮೆಚ್ಚಿಸುವುದು ಸಾಧ್ಯವಿಲ್ಲ. ಸಂಗ್ರಹಕಾರರು ತಮ್ಮ ಗ್ರಂಥದ ಮಿತಿಯ ಮೇಲೆ ಲಕ್ಷ್ಯವಿಟ್ಟು ಕವಿಯ ಅನೇಕ ಉತ್ತಮ ಭಾಗಗಳನ್ನು ವಿಧಿಯಿಲ್ಲದೆ ತೆಗೆದುಬಿಡಬೇಕಾಗುತ್ತದೆ. ಆದರೆ ಹಾಗೆ ವರ್ಜಿತವಾದ ಭಾಗಗಳು ಕಸವೆಂದು ಭಾವಿಸುವುದು ತಪ್ಪು. ಮೈಸೂರು ವಿಶ್ವವಿದ್ಯಾನಿಲಯದ 'ಹರಿಶ್ಚಂದ್ರಕಾವ್ಯ ಸಂಗ್ರಹ'ವನ್ನು ಮೆಚ್ಚುವ ಭರದಲ್ಲಿ ಕೆಲವು ವಿಮರ್ಶಕರು ಅದನ್ನು ಕಸಗಳೆದ ರಸವೆಂದು ಕರೆದಿದ್ದಾರೆ. ನಾವು ಸಂಗ್ರಹಗಳಿಂದಲೂ ಸಹಾಯ ತೆಗೆದುಕೊಂಡಿದ್ದೇವೆ, ಅವಶ್ಯ ಬಿದ್ದೆಡೆಗಳಲ್ಲಿ ಮೂಲಗ್ರಂಥಗಳಿಂದಲೂ ಧಾರಾಳವಾಗಿ ಉದಹರಿಸಿದ್ದೇವೆ. ಕವಿಯ ಕಾಲ ಚರಿತ್ರೆಗಳ ಪರಿಚಯದೊಂದಿಗೆ ಅವನ ಕಾವ್ಯದ ಸ್ಥೂಲಪರಿಚಯವನ್ನೂ ಕೊಡುತ್ತ ಹೋಗಿದ್ದೇವೆ.

ವೀರಶೈವ ಕಾವ್ಯ, ವಚನ ಸಾಹಿತ್ಯವನ್ನು ಪ್ರಕಟಿಸಿರುವ ರಾ|| ಸಾ|| ಹಳಕಟ್ಟಿ, ಪ್ರೊ. ಬಸವನಾಳ, ಶ್ರೀ ಮಂಜಪ್ಪ ಹರ್ಡೇಕರ್ ... ಾದ ಟಿ. ಎಸ್. ವೆಂಕಣ್ಣಯ್ಯ, ಮತ್ತು ಡಿ. ಎಲ್. ನರಸಿಂ...ಚಾರ್ಯ, ಶ್ರೀ ಉತ್ತಂಗಿ ಚೆನ್ನಪ್ಪ, ವೇ|| ಕರಿಬಸವ ಶಾಸ್ತ್ರಿ, ಶ್ರೀ ಮಂ. ಅ...ರಾಮಾನುಜ ಅಯ್ಯಂಗಾರ್ಯ, ಶ್ರೀ ಎಂ. ಬಸವಲಿಂಗಶಾಸ್ತ್ರಿ, ಶ್ರೀ ಚೆನ್ನವ... ಶ್ರೀ ಬಿ. ಮಲ್ಲಾರಾಧ್ಯ, ಮೈಸೂರು, ಮದರಾಸು, ಮುಂಬಯಿ ... ನಿಲಯಗಳ ಪ್ರಕಟಣೆಗಳು, ಮೈಸೂರಿನ ಓರಿಯಂಟಲ್ ಲೈಬ್ರರಿಯ ಪ್ರ... ಗಳು, ಬಳ್ಳಾರಿಯ ಪ್ರಕಟಣೆಗಳು, ಬೆಂಗಳೂರಿನ ವೈಶ್ಯ ಪ್ರಕಟನಗ...ಂರ ಪ್ರಕಟನೆಗಳು ಇವೆಲ್ಲವುಗಳ ನೆರವನ್ನು ಪಡೆದಿದ್ದೇವೆ. ಅಚ್ಚಾಗದಿರುವ ಕೆಲವು

ಪರಿವಿಡಿ

ವೀರಶೈವ ಸಾಹಿತ್ಯ

ಸಾಹಿತ್ಯ ಮತ್ತು ಧರ್ಮ : ಸಾಹಿತ್ಯವನ್ನು ಧರ್ಮಾನುಗುಣವಾಗಿ ವಿಂಗಡಿಸುವುದಕ್ಕೆ ಆಧುನಿಕ ವಿಚಾರವಾದಿಗಳು ಆಕ್ಷೇಪಿಸುತ್ತಾರೆ. ಸಾಹಿತ್ಯ ಅನಂತವಾದುದು, ಧರ್ಮ ಮತಾತೀತವಾದುದು, ಸರ್ವಸಮನ್ವಯವನ್ನು ಗುರಿಯಾಗಿ ಉಳ್ಳುದು ಎಂಬ ತತ್ತ್ವ ಪರಿಗ್ರಾಹ್ಯವಾಗಿದ್ದರೂ ಭಾರತವರ್ಷದ ಸಾಂಸ್ಕೃತಿಕ ಪರಂಪರೆಯ ದೃಷ್ಟಿಯಿಂದ ಧರ್ಮಾನುಗುಣವಾದ ವಿಂಗಡನೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಪುರಾತನ ಗ್ರೀಕರು ಮಾನವನ ವ್ಯಕ್ತಿತ್ವ, ಸೌಂದರ್ಯ, ಸಾಹಸಗಳನ್ನೇ ತಮ್ಮ ಸಾಹಿತ್ಯದ ಗುರಿಯನ್ನಾಗಿ ಮಾಡಿಕೊಂಡಂತೆ ಭಾರತೀಯರು ಧರ್ಮವನ್ನೇ ತಮ್ಮ ಗುರಿಯನ್ನಾಗಿ ಮಾಡಿಕೊಂಡರು. ಅವರ ಜೀವನದ ಪ್ರತಿಯೊಂದು ಅಂಶದಲ್ಲಿಯೂ ಧರ್ಮ ಹಾಸುಹೊಕ್ಕಾಗಿ ಹೊಂದಿಕೊಂಡಿತು. ಕಾವ್ಯ, ಕಲೆ, ರಾಜನೀತಿ ಪ್ರತಿಯೊಂದನ್ನೂ ಧರ್ಮದ ಕಸೋಟಿಯ ಮೇಲೆ ಒರೆಯಿಕ್ಕಿ ನೋಡುವ ಮನೋಧರ್ಮವನ್ನು ಅವರು ಬೆಳಸಿಕೊಂಡು ಬಂದರು.

ಮಾನವನು ದೇವರ ಒಂದು ಅಂಶವೆಂಬ ಕಲ್ಪನೆ ಒಂದು ಕಡೆ ಬೆಳೆಯಿತು, ಮಾನವನು ದೇವರ ಕೈಯೊಳಗಣ ಸೂತ್ರದ ಗೊಂಬೆಯೆಂಬ ಕಲ್ಪನೆ ಇನ್ನೊಂದು ಕಡೆ ಬೆಳಗಿತು. ಈ ಮತವನ್ನನುಸರಿಸಿ ಸಾಹಿತ್ಯ ಕಾಲಕಾಲಗಳಲ್ಲಿ ರೂಪಗುಣ ವ್ಯತ್ಯಾಸವನ್ನು ಹೊಂದುತ್ತಾ ಮೂಲಸೂತ್ರವಾಗಿ ಧಾರ್ಮಿಕ ಸ್ವರೂಪವನ್ನು ನಿರ್ದೇಶಿಸಿಕೊಂಡಿತು.

ಮಾನವ ಸಂಸ್ಕೃತಿಯನ್ನು ಉಚ್ಚಗೊಳಿಸಿ, ಮಾನವನನ್ನು ಉನ್ನತ ವಿಹಾರ, ಉತ್ತಮ ವಿಚಾರಗಳಲ್ಲಿ ಲೀನನನ್ನಾಗಿ ಮಾಡುವುದೇ ಸಾಹಿತ್ಯದ ಗುರಿಯೆಂದು ಒಪ್ಪಿದಲ್ಲಿ ವೀರಶೈವ ಸಾಹಿತ್ಯಕ್ಕೆ ಆ ಕೀರ್ತಿ ಯಥೇಚ್ಛವಾಗಿ ಸಲ್ಲುತ್ತದೆ. ಉಚ್ಚ ಆಚಾರದ ಪ್ರತೀಕವಾದ ಉಚ್ಚ ವಿಚಾರವನ್ನೂ ಸಾಹಿತ್ಯ ಒಳಗೊಂಡಿದೆಯೆನ್ನುವ ತತ್ತ್ವದ ಬದಲು, ಉಚ್ಚ ಆಚಾರ,

ವಿಚಾರಗಳಿಲ್ಲದಿದ್ದಲ್ಲಿ ಉತ್ತಮ ಸಾಹಿತ್ಯವಾಗುವುದೇ ಇಲ್ಲವೆಂದು ಖಂಡಿತವಾಗಿ ಸಾರಿದ ಕೀರ್ತಿ ವೀರಶೈವ ಸಾಹಿತ್ಯದ್ದು. ಕಾವ್ಯವು

"ಸತ್ತವರ ಕಥೆಯಲ್ಲ,
ಜನನದ ಕುತ್ತದಲಿ ಕುದಿಕುದಿದು
ಕರ್ಮದ ಕತ್ತಲೆಗೆ ಸಿಲುಕುವವರ ಹೊಲಬುತಾನಲ್ಲ,
ಹೊತ್ತು ಹೋಗದೆ ಪುಂಡರಾಲಿಪ ಮತ್ತಮತಿಗಳ ಗೋಷ್ಠಿಯಲ್ಲ"

ಎಂಬ ಶಾಸನವನ್ನು ಹಾಕಿಕೊಂಡೇ ವೀರಶೈವ ಸಾಹಿತಿಗಳು ಮುಂದೆ ಹೊರಟರು. ಈಶ್ವರನೇ ದೇವರು, ಶರಣರೇ ಅವನ ಪ್ರಿಯಭಕ್ತರು. ಈಶ್ವರನ ಮತ್ತು ಅವನ ಶರಣರನ್ನಲ್ಲದೆ ಅನ್ಯರನ್ನು ಸ್ತುತಿಸಬಾರದು. ವಾಗೀಶ್ವರಿಯ ಪ್ರಸಾದವನ್ನು ಆ ಮಹೋನ್ನತ ಗುರಿಗೇ ವಿನಿಯೋಗಮಾಡಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು ಎನ್ನುವ ತತ್ತ್ವವೇ ವೀರಶೈವ ಸಾಹಿತ್ಯದ ಕೈದೀವಿಗೆ.

ಬಸವೇಶ್ವರ : ವೀರಶೈವ ಸಾಹಿತ್ಯ ಸುಮಾರು ಆರು ಶತಮಾನ ಕಾಲ ಕನ್ನಡ ನಾಡಿನಲ್ಲಿ ತನ್ನ ಪ್ರಭಾವವನ್ನು ಬೀರಿತು. ಇದು ಯಾವಾಗ ಹುಟ್ಟಿತು ಎಂಬುದನ್ನು ನಿಷ್ಕರ್ಷಿಸಲು ಸಾಧ್ಯವಿಲ್ಲವಾಗಿದೆ. ಆದರೆ ವೀರಶೈವ ಧರ್ಮ ಸಂಸ್ಥಾಪಕನೆಂದು ಕೀರ್ತಿಗೊಂಡಿರುವ ಬಸವೇಶ್ವರನಿಂದ ವೀರಶೈವ ಸಾಹಿತ್ಯದ ಹುಟ್ಟನ್ನು ಗಣಿಸಲಾಗಿದೆ. ಮೊಗ್ಗೆಯ ಮಾಯಿದೇವನು (೧೪೩೦) ಬಸವೇಶ್ವರನನ್ನು 'ವೀರಶೈವ ನಿರ್ಣಯ ಪರಮಾವತಾರ .. ಜಗದಾದಿ ದೇಶಿಕ ಪುರಾತನ ಪುಂಗವನೆಂದೂ', ಚತುರ್ಮುಖ ಬೊಮ್ಮರಸನು (೧೪೫೦) 'ವೀರಶೈವಾಚಾರ್ಯನೆಂದೂ', ಮರಿತೋಂಟದಾರ್ಯನು (೧೫೬೦) 'ವರ ವೀರಶೈವವ ನೆಲೆಗೊಳಿಸಿದ ಬಸವರಸನೆಂದೂ' ಸಂಬೋಧಿಸಿದ್ದಾರೆ. ಬಸವೇಶ್ವರನ ಸಮಕಾಲೀನನಾದ ಅಲ್ಲಮ ಪ್ರಭು 'ಶಿವಸಮಯ ಪ್ರತಿಷ್ಠಾಪನಾಚಾರ್ಯ ಬಸವಣ್ಣನೆಂದೂ' ಚೆನ್ನಬಸವೇಶ್ವರ 'ಶಿವಾಚಾರದ ಧ್ವಜವ ನೆತ್ತಿಸಿದನಯ್ಯಾ ಬಸವಣ್ಣನು' ಎಂದು ಸ್ತುತಿಸಿದ್ದಾರೆ. ಸುಪ್ತವೂ, ತೇಜೋಹೀನವೂ, ಅನಂತ ಕ್ರಿಯೆ ಆಚಾರಗಳ ಬಂದಿಯೂ ಆಗಿದ್ದ ವೀರಶೈವ ಧರ್ಮವನ್ನು ಪುನರ್ಪ್ರತಿಷ್ಠಿಸಿದ ಕೀರ್ತಿ ಬಸವೇಶ್ವರನಿಗೆ ಸಲ್ಲತಕ್ಕದಾಗಿದೆ.

ಅವನ ನಿಷ್ಠೆ, ತಪಸ್ಸುಗಳಿಂದ ವೀರಶೈವವ್ರಳಿಯಿತು; ನಿಷ್ಕಲ್ಮಷವಾದ ತತ್ತ್ವ ಜಗತ್ತನ್ನು ಜಾಗೃತಗೊಳಿಸಿತು.

ಧರ್ಮರಂಗದಲ್ಲಿ ಬಸವೇಶ್ವರ ಯಾವ ರೀತಿ ಷಟ್ಸ್ಥಳ, ಪಂಚಾಚಾರ, ಅಷ್ಟಾವರಣಗಳಿಗೆ ಹೊಸ ಅರ್ಥವನ್ನೂ, ವಿಸ್ತಾರವನ್ನೂ ಕಲ್ಪನೆಮಾಡಿ ಕೊಟ್ಟು ತನ್ನ ಕಾರ್ಯಕ್ಷೇತ್ರವನ್ನಾಗಿ ಉಪಯೋಗಿಸಿಕೊಂಡನೋ ಹಾಗೆ ನಾಡಿನಲ್ಲಿ ಪ್ರಸಾರದಲ್ಲಿದ್ದ ವಚನಪದ್ಧತಿಯನ್ನೂ ತನ್ನ ಸಾಹಿತ್ಯ, ಧಾರ್ಮಿಕ ಕೃತಿಗಳಿಗೆ ಅಳವಡಿಸಿಕೊಂಡನು. ೧೦೪೦ರಲ್ಲಿಯೇ ಜೇಡರ ದಾಸಿಮಯ್ಯ, ಮೆರೆಮಿಂಡಯ್ಯ, ಬಿಬ್ಬ ಬಾಚಯ್ಯ, ಏಲೇಶ್ವರದ ಕೇತಯ್ಯ, ಆದಯ್ಯ, ಹಾವಿನಹಳ್ಳ ಕಲ್ಲಯ್ಯ, ಮಾದರ ಧೂಳಯ್ಯ ಮೊದಲಾದವರು ವಚನಗಳನ್ನು ರಚಿಸಿದ್ದರು. ಅವರಲ್ಲಿ ಜೇಡರ ದಾಸಿಮಯ್ಯನು ಪ್ರಸಿದ್ಧ ವ್ಯಕ್ತಿಯಾಗಿದ್ದ. ಮೊದಲನೆಯ ಚಾಳುಕ್ಯ ಜಯಸಿಂಹನ ಪಟ್ಟದರಸಿಯಾದ ಸುಗ್ಗಳಾ ದೇವಿಯ ಗುರುವಾಗಿದ್ದ ದಾಸಿಮಯ್ಯ ಧೊರೆಯನ್ನು ವೀರಶೈವ ಧರ್ಮಕ್ಕೆ ಪರಿವರ್ತಿಸಿದಂತೆ ಪ್ರತೀತಿಯಿದೆ. ಧೊರೆಯ ಆಸ್ಥಾನದಲ್ಲಿ ಜೈನ ಪಂಡಿತ ರೊಂದಿಗೆ ವಾಕ್ಯಾರ್ಥ ನಡೆಸಿ ವೀರಶೈವ ಮತ ಸರ್ವೋತ್ತಮತ್ವವನ್ನು ದಾಸಿಮಯ್ಯನು ಸ್ಥಾಪಿಸಿದುದಾಗಿಯೂ ಐತಿಹ್ಯವಿದೆ. ದಾಸಿಮಯ್ಯನನ್ನು ಬಸವೇಶ್ವರ ತನ್ನ ವಚನಗಳಲ್ಲಿ ಧಾರಾಳವಾಗಿ ಉಲ್ಲೇಖಿಸಿ ಸ್ತುತಿಸಿದ್ದಾನೆ.

"ಅಯ್ಯಾ, ಜೇಡರ ದಾಸಯ್ಯಂಗೊಲಿದಾತ ಮತ್ತೊಬ್ಬ ದೇವನೆ ಅಯ್ಯ!"
"ಭಕ್ತಿಯಿಲ್ಲದ ಬಡವ ನಾನಯ್ಯ - ದಾಸಯ್ಯನ ಮನೆಯಲ್ಲು ಬೇಡಿದೆ."
"ದಾಸಿಮಯ್ಯನಂತೆ ಉಡಕೊಡಬಲ್ಲೆನೆ?"
"ದಾಸಿದೇವ ತನ್ನ ವಸ್ತ್ರವನಿತ್ತು ತವನಿಧಿಯ ಪ್ರಸಾದವ ಪಡೆದ."
"ದಾಸ ದುಗ್ಗಳೆಯಂತೆ ನೆರೆನಂಬೋ, ನೆರೆನಂಬೋ .... ನಂಬಿದೆಯಾದರೆ ತನ್ನನೀವ ಕೂಡಲ ಸಂಗಮದೇವ."

ದಾಸಿಮಯ್ಯನ ಜೀವನವನ್ನು ಬಸವೇಶ್ವರ ಮೆಚ್ಚಿಕೊಂಡಿದ್ದಂತೆ ಅವನ ವಚನವಾಣಿಯನ್ನೂ ಮೆಚ್ಚಿಕೊಂಡಿರಬೇಕು. ಅದರಲ್ಲಿ ತನ್ನ ಮುಂದಿನ ಕರ್ತವ್ಯದ ಸಾಧನವನ್ನು ಬಸವೇಶ್ವರ ಕಂಡುಕೊಂಡಿರಬೇಕು. ರಾ. ಬ. ಫ. ಗು. ಹಳಕಟ್ಟಿಯವರು ಅಭಿಪ್ರಾಯಪಡುವಂತೆ 'ಇವನ ವಚನಗಳು ಅತ್ಯುತ್ಕೃಷ್ಟವಾಗಿದ್ದು ವಚನವಾಙ್ಮಯದಲ್ಲಿ ಅವುಗಳಿಗೆ ಅತ್ಯಂತ ಉನ್ನತ

ಸ್ಥಾನವನ್ನು ಕೊಡಬಹುದಾಗಿದೆ. ಅವು ಸೂತ್ರರೂಪವಾಗಿದ್ದು ಬಹು ಅರ್ಥಗರ್ಭಿತವಾಗಿವೆ. ಲಲಿತವೂ ರಮಣೀಯವೂ ಅರ್ಥಬೋಧವೂ ಆದ ಅವನ ವಚನಗಳು ಸಂಕ್ಷಿಪ್ತವಾಗಿದ್ದರೂ ಸ್ಫುಟವಾದ ವಿಚಾರವುಳ್ಳವಾಗಿವೆ. ಅವುಗಳನ್ನು ಓದಿದೊಡನೆಯೇ ಅವು ಒಡಪಿನಂತೆ ಭಾಸವಾಗುತ್ತವೆ. ದೇವರ ದಾಸಿಮಯ್ಯನ ವಚನಗಳು ಕನ್ನಡಕ್ಕೆ ಅಲಂಕಾರಪ್ರಾಯವಾಗಿವೆಯೆಂದು ಹೇಳಲು ಏನೂ ಪ್ರತ್ಯಾವಾಯವಿಲ್ಲ,

"ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ,
ಅಂಬರಕ್ಕೆ ಗದ್ದುಗೆ ಬೋದುಗೆ ಇಲ್ಲದಂತಿರಿಸಿದೆ,
ಎಲೆ ಮೃಡನೇ, ನೀನಲ್ಲದೆ ಉಳಿದ ದೈವಂಗಳಿಗಹುದೇ ರಾಮನಾಥಾ."

"ಹೊಲಬನರಿಯದ ಗುರುವು
ಸುಲಭನಲ್ಲದ ಶಿಷ್ಯ
ಕೆಲಬಲನ ನೋಡಿ ವಿಚಾರಿಸಿ ಮಾಡದುಪದೇಶ
ಅಂಧಕನ ಕಯ್ಯ ಅಂಧಕ ಹಿಡಿದಂತೆ ಕಾಣಾ ರಾಮನಾಥಾ."

"ಹೊಲೆಯರ ಭಾವಿಯಲೊಂದು ಎಲು ನಟ್ಟಿದಡೆ
    ಹೊಲೆ ಹೊಲೆಯೆಂಬುದೀ ಲೋಕವೆಲ್ಲ,
ಹಲವೆಲುವಿದ್ದ ಬಾಯಲ್ಲಿ ಒಲವರವ ನುಡಿದಡೆ
    ಅದು ಹೊಲೆಯರ ಭಾವಿಂದ ಕರಕಷ್ಟ ಕಾಣಾ ರಾಮನಾಥಾ."

"ಕತ್ತೆ ಬಲ್ಲುದೆ ಕತ್ತುರಿಯ ವಾಸನೆಯ?
ತೊತ್ತು ಬಲ್ಲಳೆ ಗುರುಹಿರಿಯರುತ್ತಮರೆಂಬುದ?
ಭಕ್ತಿಯನರಿಯದ ವ್ಯರ್ಥಜೀವಿಗಳು ನಿಮ್ಮನೆತ್ತ ಬಲ್ಲರೈ ರಾಮನಾಥಾ."

ದೇವರ ದಾಸಿಮಯ್ಯನ ವಚನಗಳು ಬಸವೇಶ್ವರನಿಗೆ ಸ್ಫೂರ್ತಿಯನ್ನಿತ್ತವು. ದಾಸಿಮಯ್ಯಾದಿ ಮೊದಲಿಗರು ಒಬ್ಬ ಮಹಾವೀರನ ಬರುವಿಗೆ ಹಾದಿಯನ್ನು ಹಸನು ಮಾಡಿದರು. ಆವನಿಂದ ಜಗತ್ತಿಗೆ ಆಗಬೇಕಾಗಿದ್ದ ಉದ್ಧಾರ ಕಾರ್ಯದಲ್ಲಿ ತಮ್ಮನ್ನು ತಾವು ಸೇನಾನಿಗಳಾಗಿ ಅರ್ಪಿಸಿಕೊಂಡು ಕೃತಾರ್ಥರಾದರು. ೧೧೬೦ರಲ್ಲಿ ಬಸವಣ್ಣನವರು ಜೇಡರ ದಾಸಿಮಯ್ಯಾದಿಗಳು ಅವಲಂಬಿಸಿದ ವಚನ ಪದ್ಧತಿಯನ್ನೇ ಅನುಸರಿಸಿ ತಮ್ಮ ಷಟ್ಸ್ಥಲ ವಚನ, ಕಾಲಜ್ಞಾನ ವಚನ, ಮಂತ್ರಗೋಪ್ಯ, ಶಿಖಾರತ್ನ

ವಚನಾದಿ ಗ್ರಂಥಗಳನ್ನು ರಚಿಸಿದರು. ಹೊಸ ಛಂದಸ್ಸು, ಹೊಸ ಭಾಷೆಯನ್ನು ಹುಡುಕುವ ವ್ಯವಧಾನ ಬಸವಣ್ಣನವರಿಗಿರಲಿಲ್ಲ. ಪ್ರಸಾರದಲ್ಲಿದ್ದ ವಚನರೀತಿಯು ಸರ್ವಜನಾದರಣೀಯವಾಗಿ ಸರ್ವರಿಗೂ ಸುಲಭಗ್ರಾಹ್ಯವಾಗಿದ್ದುದನ್ನು ಗ್ರಹಿಸಿ ಅದನ್ನೇ ಬಳಸಿಕೊಂಡರು. ಬಸವಣ್ಣನವರು ಸಾಹಿತ್ಯವನ್ನು ಸೃಷ್ಟಿಮಾಡಲು ಹೊರಡಲಿಲ್ಲ, ಕಾವ್ಯಗಳನ್ನು ರಚಿಸಲು ಇಚ್ಛಿಸಲಿಲ್ಲ. ತಮ್ಮ ವಿಚಾರಗಳನ್ನು ತಮ್ಮ ಅನುಭಾವಗಳನ್ನು ತಮ್ಮ ಅಧ್ಯಾತ್ಮಿಕ ಪ್ರಗತಿಯ ಕೋಟಲೆಗಳನ್ನು ಜನತೆಯ ಪ್ರಯೋಜನಕ್ಕಾಗಿ ನುಡಿಯುತ್ತ ಹೋದರು. ಅವರ ವಚನಗಳು ಅವರ ಆತ್ಮ ತೇಜಸ್ಸಿನ ಕುರುಹುಗಳು; ಅವರ ಜೀವನದ ಮಹಾಪ್ರಭೆಯ ಕಣಗಳು; ಅವರ ಪ್ರಗತಿಯ ಹಂತಗಳು. ಅಂತೇ ಅವುಗಳಲ್ಲಿ ಸಾಹಿತ್ಯದ ಎಲ್ಲ ಲಕ್ಷಣಗಳೂ ಕೂಡಿಕೊಂಡವು.

"ಭಕ್ತಿಯೆಂಬುದ ಮಾಡಬಾರದು, ಗರಗಸದಂತೆ ಹೋಗುತ್ತ ಕೊಯ್ವುದು ಬರುತ್ತ ಕೊಯ್ವುದು, ಘಟಸರ್ಪದಲ್ಲಿ ಕೈದುಡುಕಿದರೆ ಹಿಡಿವುದು ಮಾಬುದೇ ಕೂಡಲ ಸಂಗಮದೇವಾ."

"ಸಂಸಾರವೆಂಬುದೊಂದು ಗಾಳಿಯ ಸೊಡರು, ಸಿರಿಯೆಂಬುದೊಂದು ಸಂತೆಯ ಮಂದಿ ಕಂಡೈಯ್ಯ. ಇದನೆಚ್ಚಿ ಕೆಡಬೇಡ ಸಿರಿಯೆಂಬುದ. ಮರೆಯದೆ ಪೂಜಿಸು ನಮ್ಮ ಕೂಡಲ ಸಂಗಮದೇವನ"

"ಸೂಳೆಗೆ ಹುಟ್ಟಿದ ಕೂಸಿನಂತೆ, ಆರನಾದಡೆಯೂ ಅಯ್ಯ ಅಯ್ಯ ಎನಲಾರೆನಯ್ಯಾ"

"ಅರಸನ ಕಂಡು ತನ್ನ ಪುರುಷನ ಮರೆದರೆ, ಮರನನೇರಿ ಕೈಯ್ಯ ಬಿಟ್ಟಂತಾದೆನಯ್ಯಾ"

"ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ
ಅಂಬುಜಕ್ಕೆ ಭಾನುವಿನ ಉದಯದ ಚಿಂತೆ
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ
ಎನಗೆ ನಮ್ಮ ಕೂಡಲ ಸಂಗಮದೇವರ ನೆನೆವ ಚಿಂತೆ"

"ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವನು?
ಕೋಳಿ ಒಂದು ಕುಟಕ ಕಂಡರೆ ಕರೆಯದೆ ತನ್ನ ಕುಲವೆಲ್ಲವ?

ಶಿವಭಕ್ತನಾಗಿ, ಭಕ್ತಿಪಕ್ಷವಿಲ್ಲದಿದ್ದರೆ ಆ ಕಾಗೆ ಕೋಳಿಗಿಂತ
ಕರಕಷ್ಟ ಕೂಡಲ ಸಂಗಮದೇವಾ."

"ಉಳ್ಳವರು ಶಿವಾಲಯವ ಮಾಡುವರು,
ನಾನೇನ ಮಾಡುವೆ! ಬಡವನಯ್ಯಾ!
ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಶವಯ್ಯಾ,
ಕೂಡಲ ಸಂಗಮದೇವ ಕೇಳಯ್ಯ! ಸ್ಥಾವರಕ್ಕಳಿವುಂಟು,
ಜಂಗಮಕ್ಕಳಿವಿಲ್ಲ."

ಮುಂತಾದ ಮುತ್ತಿನ ಮಾತುಗಳಲ್ಲಿ ತಮ್ಮ ಅಪಾರವಾದ ಲೋಕಾನುಭವ, ಅನ್ಯಾದೃಶ್ಯವಾದ ಲೋಕಕಲ್ಯಾಣ ಚಿಂತೆಯನ್ನು ಒಡಮೂಡಿದರು. ಈ ವಚನ ಪರಂಪರೆಯನ್ನು ಶಿವಶರಣ ಶರಣೆಯರು ನೂರಾರು ಮಂದಿ ಅನುಸರಿಸಿ ಕನ್ನಡ ನಾಡಿನ ದೆಸೆದಿಕ್ಕುಗಳಿಗೆ ಮೂಲೆ ಮೂಲೆಗಳಿಗೆ ಬಸವಣ್ಣನವರ ಸಂದೇಶವನ್ನೊಯ್ದರು. ಬಸವಣ್ಣನವರ ಗುರುಸ್ಥಾನದಲ್ಲಿದ್ದ ಪ್ರಭುದೇವರೂ ಬಸವಣ್ಣನವರ ಸೋದರಳಿಯನಾದ ಚೆನ್ನಬಸವಣ್ಣನೂ ಜ್ಞಾನದ ಮಹತ್ತ್ವವನ್ನು ಸಾರಿದರು. ಸಿದ್ಧರಾಮಣ್ಣನವರು ಯೋಗದ ಮಹತ್ತ್ವವನ್ನು ಸಾರಿದರು. ಚೌಡಯ್ಯ, ಮಾಚಯ್ಯ, ಚೆಂದಯ್ಯಾದಿಗಳು ಕರ್ಮದ ಮಹತ್ತ್ವವನ್ನು ಸಾರಿದರು. ಅಕ್ಕಮಹಾದೇವಿ ಇವೆಲ್ಲದರ ಸಮನ್ವಯವನ್ನು ಸಾರಿದಳು. ಈ ಸಂದೇಶ ಪ್ರಚಾರ ದೇಶದಲ್ಲಿ ನವಚೈತನ್ಯವನ್ನಂಕುರಿಸಿತು. ಪರಂಪರೆಯ ಮೌಢ್ಯವನ್ನು ತುಂಡಿರಿಸಿತು. ಜೀವನ ಸ್ಮೃತಿಯನ್ನು ಮರೆತಿದ್ದ ಕನ್ನಡ ಜನತೆ ಮತ್ತೆ ಮಿಡಿಯುವಂತೆ ಮಾಡಿತು. ರಾಜಕೀಯ, ಸಾಮಾಜಿಕ, ಸಾಹಿತ್ಯ - ಎಲ್ಲ ರಂಗಗಳಲ್ಲಿಯೂ ಹೊಸ ಕಳೆ ಬೆಳಗಿತು, ಹೊಸ ಬೆಳೆ ಅಂಕುರಿಸಿತು.

ವಚನ ವಾಙ್ಮಯದ ಮೂಲ ಉದ್ದೇಶ ಸಾಹಿತ್ಯ ಪ್ರಸಾರವಾಗಿರಲಿಲ್ಲ. ಸ್ವಯಂಸ್ಫೂರ್ತಿಯಿಂದಲೂ, ವಚನಕಾರರ ತೇಜಸ್ಸಿನಿಂದಲೂ ಅದು ಸಾಹಿತ್ಯ ಸ್ವರೂಪವನ್ನು ತೆಗೆದುಕೊಂಡು ಕನ್ನಡದಲ್ಲಿ ನೂತನ ಮಾರ್ಗವೊಂದನ್ನು ಆವಿಷ್ಕಾರ ಮಾಡಿತು. ಬಸವಣ್ಣನವರಾಗಲಿ, ಇತರ ವಚನಕಾರರಾಗಲಿ ವಿರಾಮವಾಗಿ ಕುಳಿತು ಕಾವ್ಯಗಳನ್ನು ಬರೆಯುವ ಗೋಜಿಗೆ ಹೋಗಲಿಲ್ಲ. ಅವರಿಗೆ ಮಾತೆ ಜ್ಯೋತಿರ್ಲಿಂಗವಾಗಿತ್ತು. ಮನಮುಟ್ಟುವಂತೆ ಅರ್ಥವನ್ನು

ತಿಳಿದು ಹಾಡಬೇಕು. ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಲಿಂಗಮೆಚ್ಚಿ ಅಹುದೆನಬೇಕು.

ಹರಿಹರ : ಈ ನವೋದಯದ ಚೈತನ್ಯವನ್ನು ಸಾಹಿತ್ಯದಲ್ಲಿ ಮೂಡಿಸುವ ಹೊಣೆಗಾರಿಕೆ ಕನ್ನಡಜಾಣ ಹರಿಹರನ (೧೨೧೬) ಮೇಲೆ ಬಿತ್ತು. ಅವನು ಹುಟ್ಟುವುವಕ್ಕೆ ಕೆಲಕಾಲ ಮುಂಚೆ ತಾನೆ ಬಸವಣ್ಣನವರು ಲಿಂಗೈಕ್ಯರಾಗಿದ್ದರು. ಬಸವಣ್ಣನವರ ಪಟ್ಟಶಿಷ್ಯರನೇಕರು ಇನ್ನೂ ಜೀವಂತರಾಗಿಯೇ ಇದ್ದರು. ಅವರಲ್ಲಿ ಕೆಲವರನ್ನಾದರೂ ಹರಿಹರ ಕಂಡು ವಿಚಾರ ವಿನಿಮಯಮಾಡಿ ಕೊಂಡಿರಬೇಕು. ಬಸವಣ್ಣನವರ ಯುಗಕ್ಕೆ ಅತ್ಯಂತ ಸಮಿಾಪನಾದ ಕವಿ ಹರಿಹರನಾದುದರಿಂದ ಅವನ ಕಾವ್ಯಗಳಲ್ಲಿ ಐತಿಹಾಸಿಕ ಸಂಗತಿಗಳೂ ಹೇರಳವಾಗಿ ಸೇರಿಕೊಂಡಿವೆ. ಜತೆಗೆ ಹರಿಹರ ಸ್ವಯಂ ವಿರಕ್ತಶೀಲನಾದ ಕವಿ. ಬಸವಣ್ಣನವರ ತ್ಯಾಗಜೀವನ, ಕ್ರಾಂತಿಕಾರ್ಯಗಳು ಅವನ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿದ್ದವು. ಜೀವನದಲ್ಲಿ ಬಸವಣ್ಣನವರು ಸಾಧಿಸಿದುದನ್ನು ತಾನು ಸಾಹಿತ್ಯದಲ್ಲಿ ಸಾಧಿಸಿ ಆ ಮೂಲಕ ತನ್ನ ಮಹಾ ಗುರುವಿಗೆ ಕಾಣಿಕೆಯನ್ನರ್ಪಿಸಬೇಕೆಂದು ಅವನು ನಿಶ್ಚಯಿಸಿಕೊಂಡಿರಬಹುದು.

ಹರಿಹರನು ರಚಿಸಿದ ಮೊದಲನೆಯ ಮಹಾಕಾವ್ಯ ಗಿರಿಜಾಕಲ್ಯಾಣ. ಅದನ್ನು ರಚಿಸುವ ಕಾಲಕ್ಕೆ ಅವನು ಬಸವಣ್ಣನವರ ಪಂಥಕ್ಕೆ ಸೇರಿರಲಿಲ್ಲ ವೆಂದು ಕಾಣುತ್ತದೆ. ಗಿರಿಜಾಕಲ್ಯಾಣದಲ್ಲಿ ಬರುವ ಶಿವ, ಪಾರ್ವತಿ ವಿವಾಹ ವರ್ಣನೆಯಲ್ಲಿ ಕಂಡುಬರುವ ವೈದಿಕ ಸಂಪ್ರದಾಯವೂ, ತನ್ನ ಕಾವ್ಯೋನ್ನತಿ ಯನ್ನು ಸಾರಿಕೊಂಡಿರುವ ಧಾಟಿಯೂ ಇದಕ್ಕೆ ಸಾಕ್ಷ್ಯಗಳಾಗಿವೆ.

ಸುರತರುವಿನಂತೆ ಸುಜನರ
ಸಿರಿಯಂತೆ ಸರೋಜದಂತೆ ಸುಧೆಯಂತೆ ಸುಧಾ ॥
ಕರ ಕಿರಣದಂತೆ ಹಂಪೆಯ
ಹರಿದೇವನ ಕಾವ್ಯಮಖಿಳ ಸೇವ್ಯಂ ನವ್ಯಂ ॥

ಪ್ರಿಯವಚನದಂತೆ ಪುಣ್ಯತತಿಯಂತೆ ಸುಧಾಕರನಂತೆ ಕೂರ್ತಮು-
ಗ್ಧೆಯ ಕಡುನೇಹದಂತಮೃತದಂತೆ ವಸಂತಕನಂತೆ ಪುಷ್ಪಮಾ ॥
ಲೆಯ ಪೊಸಗಂಪಿನಂತೆ ಮಲಯಾನಿಲನಂತೆ ಮರಾಳನಂತೆ ಹಂ-
ಪೆಯ ಹರಿದೇವನುನ್ನತಕೃತಿ ಪ್ರಸರಂ ಭುವನೈಕ ಭಾಸುರಂ ॥

ಕಾವ್ಯದಲ್ಲಿ ಸಾರಳ್ಯ, ಸುಭಗತೆ, ಲಲಿತ ಮಾಧುರ್ಯಗಳಿರಬೇಕೆಂದು ಪ್ರತಿಪಾದಿಸುತ್ತಾ

ಓದಿದೊಡೆ ಕಲ್ಲಮಾಲೆಯು-
ನಾದಂ ಕರ್ಬೊನ್ನ ಕಡಲೆ ವಾದಿಸೆ ರಸಮುಂ
ಸೋದಿಸೆಯುರ್ಕಿನ ಪುಡಿಯೆನಿ-
ಪಾ ದುಷ್ಕವಿತೆಗಳನೆಣಿಸಲೇಕೀ ಕೃತಿಯೊಳ್ ॥

ಎಂದು ಸಾಂಪ್ರದಾಯಿಕವಾದ ಕುಕವಿನಿಂದನೆ ಮಾಡಿ ಕಾವ್ಯ ರಸಾಸ್ವಾದನಕ್ಕೆ ರಸಿಕರ ಸಹೃದಯತೆಯೇ ಕಾರಣವೆಂದು ಹೇಳುತ್ತಾನೆ.

ರಸಮಿದು ಭಾವಮಿದರ್ಥಮಿ-
ದು ಸಮಾಸಮಿದುಚಿತಪದಮಿದುತ್ಪ್ರೇಕ್ಷೆಯಿದೆಂ-
ದು ಸವಿದು ಸವಿದು ಕರಂ ನವ-
ರಸದೊಳಗಾಳುತ್ತುಮಿರ್ಪ ರಸಿಕರೆ ಬಲ್ಲರ್ ॥

ಕವಿಯ ದೃಷ್ಟಿ ಪಂಡಿತರ ಮೇಲೂ ರಸಿಕರ ಮೇಲೂ ಇದೆ ಇನ್ನೂ ಸಾಮಾನ್ಯ ಜನತೆಯನ್ನು ಪರಿಗಣಿಸುವ ಮನೋಭಾವ ಅವನಲ್ಲಿ ಮೂಡಿಲ್ಲ

ಗೌರೀವರ ಕರ್ಣಾಲಂ
ಕಾರಂ ರಸಪೂರಮತಿ ಗಂಭೀರಂ ಕಾವ್ಯಂ
ನೀರಸರರಿವಂತೇನಿದು
ತಾರೆಲೆಯೆ ಬೀದಿವಾಡೆ ನೆರವಿಯ ತುಮುಕೇ ॥

ಎಂದು ಹರಿಹರನು ಕೇಳುವುದು ಧರ್ಮನಾಥ ಪುರಾಣಕರ್ತೃವಾದ ಮಧುರಕವಿಯ (೧೩೮೫)

ಪಂಡಿತರುಂ ವಿವಿಧ ಕಳಾ
ಮಂಡಿತರುಂ ಕೇಳತಕ್ಕ ಕೃತಿಯುಂ ಕ್ಷಿತಿಯೊಳ್
ಕಂಡರ್ ಕೇಳ್ದೊಡೆ ಗೊರವರ
ಮಂಡುಚಿಯೋ ಬೀದಿವರೆಯೋ ಬೀರನ ಕತೆಯೋ ॥

ಎನ್ನುವ ಮಾತನ್ನು ಜ್ಞಾಪಕಕ್ಕೆ ತರುತ್ತವೆ. ಚಂಪೂ ಸಂಪ್ರದಾಯದ ಪ್ರೌಢ ನಿರೂಪಣೆ, ಅಷ್ಟಾದಶ ವರ್ಣನಾಪ್ರಿಯತೆಗಳೇ ಕಾವ್ಯದ ಜೀವ ಜೀವಾಳವೆಂದು ಹರಿಹರನೂ ಗಿರಿಜಾ ಕಲ್ಯಾಣ ಬರೆಯುವ ಕಾಲಕ್ಕೆ

ನಂಬಿದ್ದನು. ಈ ಕಾಲಕ್ಕೆ ಅವನಿನ್ನೂ ನರಸಿಂಹ ಬಲ್ಲಾಳನ ಆಸ್ಥಾನದಲ್ಲಿ ಕರಣೀಕನಾಗಿದ್ದನು. ರಾಜಮರ್ಯಾದೆ, ಕವಿಚಕ್ರವರ್ತಿಯೆಂಬ ಬಿರುದು ಇವುಗಳ ಕಡೆಗೆ ಲಕ್ಷ್ಯವಿರದಿರಲಿಲ್ಲ. ಆದರೆ ಇವನ ಜೀವನ ಮಾರ್ಪಾಡು ಹೊಂದುವ ಸನ್ನಿವೇಶ ಬಂದಿತು. ಹಳೆಯಬೀಡನ್ನು ಬಿಟ್ಟು ಹಂಪೆಗೆ ಹರಿಹರನು ಹೊರಟುಹೋದ. ಅಲ್ಲಿಂದ ಅವನ ಚಿತ್ತವೃತ್ತಿಯೂ, ಕಾವ್ಯ ರೀತಿಯೂ ಕ್ರಾಂತಿಗೊಳಗಾದವು. ಹಂಪೆಗೆ ಬಂದ ತರುಣದಲ್ಲಿಯೇ ಪಂಪಾ ಶತಕವನ್ನು ಹರಿಹರ ರಚಿಸಿರಬಹುದು. ಆದರಲ್ಲಿ ಒಂದು ಕಡೆ

ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪದ್ಯಮಂ।
ತನತನಗಿಂದ್ರಚಂದ್ರ ರವಿಕರ್ಣ ದಧೀಚಿ ಬಲೀಂದ್ರನೆಂದು ತಾ ॥
ನನವರತಂ ಪೊಗಳ್ದು ಕೆಡಬೇಡೆಲೆ ಮಾನವ ನೀನಹರ್ನಿಶಂ।
ನೆನೆ ಪೊಗಳರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದಂ ॥

ಇವನ ಮೇಲ್ಪಂಕ್ತಿಯನ್ನು ತರುವಾಯ ಬಂದ ವೀರಶೈವ ಕವಿಗಳು ಅಕ್ಷರಶಃ ಪಾಲಿಸಿಕೊಂಡು ಹೋಗಿದ್ದಾರೆ. ರಾಘವಾಂಕ 'ಜನ ಬದುಕ ಬದುಕಬೇಕೆಂದು' ಹರನೆಂಬುದು ಸತ್ಯ, ಸತ್ಯವೆಂಬುದು ಹರನು ಎಂಬ ಸೂತ್ರವನ್ನನುಸರಿಸಿ ಕಾವ್ಯರಚನೆ ಮಾಡಿದ. ಶಿವಭಕ್ತನಾದರೂ ನರಶ್ರೇಷ್ಠನೆನಿಸಿದ್ದ ಹರಿಶ್ಚಂದ್ರನ ಮೇಲೆ ಕಾವ್ಯವನ್ನು ಬರೆದುದಕ್ಕೆ ಅಳಿಯ ರಾಘವಾಂಕನನ್ನು ಹರಿಹರ ದಂಡಿಸಿದನೆಂದು ಐತಿಹ್ಯವೂ ಬೆಳೆಯಿತು. ಹರಿಹರನಿಗೆ ನಾಲ್ಕು ಶತಮಾನಗಳಾನಂತರ ಬಂದ ಷಡಕ್ಷರದೇವನೂ ಇದೇ ನಿಷ್ಠೆಯನ್ನು ತೋರಿದ್ದಾನೆ.

ಧರೆಯೊಳ್ ಮೆಟ್ಟಿ ಪುಟ್ಟುತ್ತುರುಳ್ವ ನರರ ಮೇಲುರ್ಬಿ ಕರ್ಬಂಗಳಂ ಬಿ
ತ್ತರಿಸುತ್ತಂ ಸಪ್ರಯಾಸಂ ಕೆಲಕೆಲರಕಟಾ ಕಬ್ಬಿಗರ್ ಕೆಟ್ಟುಪೋದರ್ ॥
ಹರಿದೇವಂ ದೇವದೇವೋತ್ತಮನ ಶರಣಂ ಪಾಡಿ ಕೈವಲ್ಯ ಲಕ್ಷ್ಮೀ
ವರನಾದಂ ಮತ್ತಮಂಗಧಿಕ ಶಿವಕವೀಂದ್ರಂಗದಾರ್ ಸಾಟಿಯಪ್ಪರ್ ॥

ಎಂದು ಹರಿಹರನಿಗೆ ತನ್ನ ಭಕ್ತಿಕುಸುಮಾಂಜಲಿಯನ್ನು ಸಮರ್ಪಿಸಿ

ರಸೆಯೊಳ್ ರಸವತ್ಕವಿತೆಯ
ನುಸಿರಲ್ಪಡೆದ ಸಮನಯನನಂ ಪೊಗಳದೆ ಮಾ ॥

ನಿಸರಂ ಸುರರಂ ಪೊಗಳ್ವುದು
ಕಸವರಂ ಕಳೆದು ಕಸವಸಾಂತಪ್ಪೊಲಕ್ಕುಂ ॥

ಅದರಿಂದೆ ಮಹಿತಮಹಿಮಾ
ಸ್ಪದನಂ ಶಿವನಂ ತದೀಯ ಶರಣವ್ರಜಮುಂ ॥
ಪದೆದು ಮುದಮುದವೆ ಬಲ್ಲಂ
ದದೆ ನುತಿಪೆಂ ನುತಿಸೆನುಳಿದ ಸುರರಂ ನರರಂ ॥

ಎಂದು ಖಂಡಿತವಾಗಿ ನುಡಿದಿದ್ದಾನೆ. ಹರಿಹರನ ಜೀವನಾದರ್ಶವು ನಾಲ್ಕು ಶತಮಾನಗಳಾನಂತರವೂ ಅಚ್ಚಳಿಯದಿರುವುದೇ ಅವನ ಹೆಚ್ಚು ಗಾರಿಕೆಯ ಸಾಕ್ಷ್ಯವಾಗಿದೆ.

ಸಂಸ್ಕೃತದ ಚಂಪೂಶೈಲಿ ಕನ್ನಡ ಕವಿಗಳಿಗೆ ಕರತಲಾಮಲಕವಾಗಿತ್ತು. ಅದರ ಪ್ರೌಢಬಂಧಕ್ಕೆ ಬೆರಗಾಗಿದ್ದ ಕನ್ನಡ ಕವಿಗಳು ಬೇರೆ ಕನ್ನಡ ಛಂದಸ್ಸು ಗಳನ್ನು ಗಣನೆಗೇ ತಂದುಕೊಂಡಿರಲಿಲ್ಲ. ಹರಿಹರನೂ ಗಿರಿಜಾಕಲ್ಯಾಣ ಬರೆಯುವ ಕಾಲಕ್ಕೆ ಇದೇ ಮನೋಭಾವದವನಾಗಿ ಚಂಪೂ ಶೈಲಿಯಲ್ಲಿ ತನಗಿದ್ದ ಅಪಾರ ಪ್ರೇಮ, ಪಾಂಡಿತ್ಯ, ಪ್ರಾವೀಣ್ಯತೆಗಳನ್ನು ತೋರಿದ್ದಾನೆ. ಆದರೆ ಹಂಪೆಯಾಳ್ದನ ಕೃಪೆಯಿಂದ ಕನ್ನಡದಲ್ಲಿ ಒಂದು ಹೊಸ ಮಾರ್ಗ ಹುಟ್ಟಬೇಕಾಗಿತ್ತು. ಅದರ ಪ್ರವಾದಿಯಾಗುವ ಪುಣ್ಯ ಹರಿಹರನಿಗೆ ಕಾದಿತ್ತು. ಹರಿಹರನ ಮನಸ್ಸು ಜನಪದದ ಕಡೆಗೇ ಹರಿಯಿತು. ಜನತೆಯ ನುಡಿಕಟ್ಟುಗಳು, ಗಾದೆಮಾತುಗಳು, ಪದಪ್ರಯೋಗಗಳು ಕುಶಲ ಕವಿಯ ಕೈಗೆ ಸಿಕ್ಕಿದಲ್ಲಿ ಅವಕ್ಕೆ ಸಾಹಿತ್ಯಮಂದಿರದಲ್ಲಿ ಎಡೆಕೊಡಬಹುದೆಂಬ ಧೈರ್ಯವೂ ಔದಾರ್ಯವೂ ಹರಿಹರನಲ್ಲಿ ಹುಟ್ಟಿತು. ಶಿವಶರಣರ ಚರಿತ್ರೆ ಗಳನ್ನು ಕಾವ್ಯರೂಪಕ್ಕೆ ಇಳಿಸಬೇಕೆಂದು ಹರಿಹರ ಮನಸ್ಸುಮಾಡಿದನು. ಇದಕ್ಕೆ ಸುಲಭವೂ ಸುಭಗವೂ ಆದ ಛಂದಸ್ಸು ಬೇಕಾಗಿತ್ತು. ಕಥೆ ಸರಾಗ ವಾಗಿ ಹರಿದು, ಓದುಗರಿಗೆ ಕ್ಲಿಷ್ಟವಾಗದಂತೆ ಇದ್ದ ಕನ್ನಡ ರಗಳೆ ಛಂದಸ್ಸು ಹರಿಹರನಿಗೆ ಅತ್ಯಂತ ಪ್ರಿಯವಾಯಿತು. ಅವನು ಅದರಲ್ಲಿ ತನ್ನ ಶಿವಶರಣ ಚರಿತ್ರ ವಿಲಾಸವನ್ನು ಬರೆದಾಗ ಜನ 'ರಗಳೆ ಕವಿ' ಎಂದು ಜರಿದರಂತೆ. ಅವರ ಆಡಿಕೆಯ ಮಾತಿಗೆ ಹರಿಹರನು ಸೋಲದಿದ್ದುದು ಕನ್ನಡ ವಾಗ್ದೇವಿಯ ಪುಣ್ಯ.

ಹರಿಹರ ೧೦೧ ರಗಳೆಗಳನ್ನು ಬರೆದಿದ್ದಾನೆಂದೂ ೧೨೦ ರಗಳೆಗಳನ್ನು ಬರೆದಿದ್ದಾನೆಂದೂ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಅವುಗಳಲ್ಲಿ ಬಹು ಭಾಗ ಶಿವಶರಣರನ್ನು ಕುರಿತದ್ದಾಗಿದೆ. ಕೆಲವು ಪುಷ್ಪ, ಲಿಂಗಾರ್ಚನೆ, ಪ್ರಾರ್ಥನೆ, ಹಂಪೆ, ವಿರೂಪಾಕ್ಷ, ಸಂಸಾರ ವ್ಯಾಮೋಹ ನಿರಸನಗಳನ್ನು ಕುರಿತವುಗಳಾಗಿವೆ. ಮಹಾಕವಿಯೆಂಬ ಪ್ರಶಸ್ತಿ ಛಂದಸ್ಸನವಲಂಬಿಸದೆ ವಿಷಯ ನಿರೂಪಣೆ, ಸಾರಳ್ಯ, ಗುರಿಗವ್ಯಜ್ಞಾನಗಳನ್ನವಲಂಬಿಸಿದೆಯೆಂಬುದನ್ನು ಹರಿಹರ ತನ್ನ ರಗಳೆಗಳಲ್ಲಿ ಸಿದ್ಧಮಾಡಿಕೊಟ್ಟಿದ್ದಾನೆ. ಅವನ ಕೈಯಲ್ಲಿ ಕನ್ನಡ ಗಂಗಾಸಲಿಲದಂತೆ ಹರಿಯುತ್ತದೆ. ಗದ್ಯವನ್ನು ಬರೆಯಲಿ ಪದ್ಯವನ್ನು ಬರೆಯಲಿ ಅದೇ ದೀಧೀತಿ, ಅದೇ ಸಿಂಹವಾಣಿ, ಅದೇ ಕುಸುಮ ಕೋಮಲತೆ.

ಹರಿಹರನ ಭಾವ, ರಸಸಿದ್ಧಿಗೆ ಅವನ ಪುಷ್ಪದ ರಗಳೆಯನ್ನು ಉದ್ಧರಿಸಬಹುದು. ಅಧ್ಯಾತ್ಮಜೀವಿಯಾದ ಕವಿಯ ಕಣ್ಣಿಗೆ ಬಗೆಬಗೆಯ ಹೂಗಳ ಚೆಲುವು ಚೆಲುವೇ. ಆದರೆ ಅವುಗಳ ಪ್ರಯೋಜನ ಇಂದ್ರಿಯ ತೃಪ್ತಿಯಲ್ಲ, ಶರ್ವನ ಪೂಜೆ.

“ಅಳಿಯೆರಗದನಿಲನಲುಗದ ರವಿಕರಂ ಪುಗದ
ಬೆಳೆಬೆಳೆದು ನಳನಳಿಸಿ ಮಘಮಘಿಸುತಲವರಿದು ॥
ಇರವಂತಿ ಇರೆಕಂಡು ನೋಡಲಮ್ಮದೆ ನಿಂದು
ಪರಶಿವಂಗೋಲೈಪ ಪೂವ ನೀಡೌಯೆಂದು ॥
ನನೆಮುಗುಳ್ ಕೊನೆಮುಗುಳ್ಬಿರಿದಿರೆ ಮುಗುಳ್ಗಳಂ
ತನಿಗಂಪು ತೀವಿರ್ದ ಪೊಚ್ಚಪೊಸ ಪೂಗಳಂ ॥
ಕೊಂಡು ಕುಕಿಲಿರಿವುತಂ ಕುಣಿವುತಂ ನಡೆತಂದು
ಕಂಡು ಸಂಪಿಗೆಯ ಮರಸಿರ್ದೆಡೆಗೆ ಪರಿತಂದು ॥
ಏನವ್ವ ಸಂಪಿಗೆಯೆ ಶಿವನ ಸಿರಿಮುಡಿಗಿಂದು
ನೀನೀವ ಪೊಸ ಕುಸುಮವಂ ನೀಡು ನೀಡೆಂದು ॥
ಅಳಿಮನದ ಪರಿಯೆಂದು ಬಗೆಯುದಿರ್ನೀನೆನುತ
ತಿಳಿದು ಪೊಸಪೂಗಳಂ ನೀಡವ್ವ ನೀನೆನುತ ॥
ಆನಂದದಿಂದೆ ಶಿವಲಿಂಗಕರ್ಚಿಪೆನೆನುತೆ
ಏನವ್ವ ನೀಡು ಬಿರಿಮುಗಳ ಸಂಪಿಗೆಯೆನುತೆ ॥

ಅಂತವಂ ಕೊಂಡು ಸೇವಂತಿಯುಲ್ಲಿಗೆ ಬಂದು।
ಮುಂತೆ ಕುಂಕುಮದ ತಾರಗೆಗಳಂತಿರೆ ನಿಂದು ॥
ಎಲೆಲೆ ಪರಿಮಳದ ತಣ್ಪಂಗರೆಯು ಬಾರವ್ವ
ಕುಲಪತಿಯು ಜಡೆಗಳ್ಗೆ ಪೂಗಳಂ ತಾರವ್ವ ॥
ದೇವಂಗೆ ದೇವರ ಶಿಖಾಮಣಿಯು ಜಡೆಮುಡಿಗೆ
ಸೇವಂತಿ ನಿನ್ನಯಾ ಪೂವನೀಯಾ ಎನಗೆ ॥
ಎಂದಲ್ಲಿ ಪನ್ನೀರ ಪರಿಮಳದ ಪೂಗೊಂಡು
ಮುಂದೆ ತೋರುತ್ತಿರ್ಪ ಪೂಗಿಡುಗಳಂ ಕಂಡು ॥
ಇದೆ ಮಲ್ಲಿಕಾಲತೆ ವಿರೂಪಾಕ್ಷ ನಿನಗೆನುತೆ
ಅದೆ ಮಾಧವೀಲತೆ ವಿರೂಪಾಕ್ಷ ನಿನಗೆನುತೆ
ಮಲ್ಲಿಗೆಯು ಮುಂದಕ್ಕೆ ಮಲೆಯುತಂ ನಡೆತಂದು
ಸಲ್ಲೀತಿ ಪೆರ್ಚೆ ಕಂಪಿನ ನಿಧಿಯಿರಲ್ಕಿಂದು ॥
ಹಸುರಳಿದು ಬೆಳ್ಪಳಿದು ನನೆಯೇರಿ ಹೊದೆದೋರಿ
ಹೊಸ ಪರಿಯು ಬಿರಿಮುಗುಳ್ಗಳಿರೆ ಬೀಗಿ ನಲವೇರಿ ॥
ಮಲ್ಲಿಗೆಯುರಳ್ಗಳಂ ಮನವಾರೆ ತಿರಿಯುತಂ
ಮೆಲ್ಲಮೆಲ್ಲನೆ ನೋಡುತಲ್ಲಲ್ಲಿ ಕುಣಿವುತಂ ॥
ಏನವ್ವ ಅದ್ರುಗಂಚಿ ತುಂಬಿ ತುಳಕದ ಮುನ್ನ
ಆನಂದನಿಧಿ ಶಿವಂಗಳ್ಕರಿಂದಂ ನಿನ್ನ ॥
ಸುಖದ ಸದ್ಗಂಧ ಮಿಾಸಲನೀಯುಂ ನೀಯೆನುತ
ಮುಖವೈದರಿಂಗೆ ಸಂದೊಡೆ ಬರ್ದುಂಕುವೆನೆನುತ ॥
ಪೊಸಪೂವನಲ್ಲಿ ಕೊಂಡಾಡುತಂ ನಡೆತಂದು
ಎಸೆವ ಜಾತಿಯು ಸಮಿಾಪಕ್ಕೆ ಮನಮಂ ತಂದು ॥
ಜಾತಿ ನೀನೇ ಸಕಲ ಪುಷ್ಪಜಾತಿಗೆ ಜಾತಿ
ಭೂತೇಶ್ವರನ ಜಡೆಯು ಮುಡಿಗೇರಿದೊಡೆ ಜಾತಿ ॥
ಎಂದು ಪೊಗಳುತ್ತಲ್ಲಿ ಪೊಸ ಕುಸುಮಮಂ ಕೊಂಡು
ಮುಂದೆ ಕೇತಕಿಯು ಕುಸುಮಂಗಳಂ ಕೈಕೊಂಡು ॥
ಹೊರಗೆ ಮುಳ್ಳೊಳಗೆ ಕಂಪಕ್ಕಕ್ಕು ನಿನ್ನ ಪರಿ
ಹೆರೆ ಸೂಡಿದನ ಗುಪ್ತನಂತಿರ್ಪ ನಿನ್ನ ಪರಿ ॥
ಅಲ್ಲಿಂದಲೈತಂದು ಮಡಿವಾಳದೊಳ್ಕಿಂದು।
ಬೇರರಿತವರ್ಗೆ ನೀನೆಲೆ ದೊರಕಲೇಕೆಂದು ॥
ಪರಿಮಳದ ಬೇರ್ಗಳಂ ಕೊಂಡು ನಲಿದಾಡುತಂ

ದವನವೇ ಶಿವನ ಪರಿಮಳದ ಹಬ್ಬಂ ಬಾರ ॥
ಭುವನದೊಳ್ನಿನಗೆ ಸರಿಯಿಲ್ಲ ಸೌರಭಸಾರ
ಅಲ್ಲಿಂದ ಬಂದು ಸುರಹೊನ್ನೆಯಲ್ಲಿಗೆ ನಿಂದು ॥
ಏನೆನ್ನ ಹೊನ್ನೆ ಸುರಹೊನ್ನೆ ಪರಿಮಳದರಸಿ
ನೀಮುನ್ನ ಪುಲಿಗೆರೆಯ ಸೋಮಯ್ಯನಂ ಬರಸಿ ॥
ಕೊಂಡ ಸದ್ಭಕ್ತಿ ಪರಿಯುಂಟೆ ಬಾ ನಿನಗೆನುತೆ
ಅಲ್ಲಿಂದ ಬಂದು ಪೊಸಪೂಗಳಂ ಗೈದುತ್ತೆ॥

ಎಂದು ಎಷ್ಟು ಬಗೆಯಲ್ಲಿ ವರ್ಣಿಸಿದರೂ ಕವಿಗೆ ತೃಪ್ತಿಯಿಲ್ಲ. ಸ್ವಯಂ ಕರುಣಾಮಯನಾದ ಕವಿ ಮನದೆಗೆದು ಹಾಡುವಾಗ ಚರಾಚರಾತ್ಮಕವಾದ ಪ್ರತಿಯೊಂದು ವಸ್ತುವೂ ಅವನ ಹಾಡಿಗೆ ಮೈಸೋತು ಕುಣಿದು ಕುಕಿಲಿರಿಯುತ್ತದೆ. ತನ್ನ ಭಕ್ತಿವೀಣೆಗೆ ಜಗದಜೀವಿಗಳ ಹೃದಯತಂತ್ರಿಗಳನ್ನು ಕೂಡಿಸಿ ಘನಗೀತೆಯನ್ನು ಕವಿ ಹಾಡುತ್ತಾನೆ.

ಶಬ್ದಚಿತ್ರಗಳನ್ನು ಕಲ್ಪಿಸುವುದರಲ್ಲಿ ಹರಿಹರನದು ಅಸಾಧಾರಣವಾದ ಜಾಣ್ಮೆ. ಲಕ್ಷಣಬದ್ಧವಾದ ಉಪಮೆಗಳನ್ನೇ ಉಪಯೋಗಿಸಿಕೊಂಡು ಹೇಳಿದ್ದನ್ನೇ ಹೇಳುವ ಹವ್ಯಾಸ ಅವನಿಗಿಲ್ಲ. ಮನೋವಿಶ್ಲೇಷಣೆಯ ಕಡೆಗೆ ಅವನ ಲಕ್ಷ್ಯವಿರುವುದರಿಂದ ಅಂತರಂಗದ ಸಮರವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಬಲ್ಲ. ಬಸವೇಶ್ವರ ಹರಿಹರನ ಆರಾಧ್ಯಮೂರ್ತಿ. ಬಸವರಾಜದೇವರ ರಗಳೆಯ ತುಂಬ ಇಂತಹ ಚಿತ್ರವರ್ಣನೆಗಳನ್ನು ಹರಿಹರನು ತುಂಬಿದ್ದಾನೆ. ವರ್ಣನೆಗಳು ಸ್ಥಿರಚಿತ್ರದಂತಿರದೆ ನಡೆಯೊಡಗೂಡಿ ಕಥಾವಸ್ತುವನ್ನು ಮುಂದಕ್ಕೆ ಒಯ್ಯುತ್ತವೆ.

"ಪೂಜೆಯುಂ ನೋಡಿ ಮೆಚ್ಚದೆ ಪೂಜೆಯಂ ಮಾಡಿ
ಓಜೆಗೆಟ್ಟಿರುಹುಗೆಟ್ಟತಿ ಲಲ್ಲೆಯಂ ಮಾಡಿ
ನಯನಂಗಳೊಳು ಪೂಜೆ ಮೆರೆವಂತೆ ಮಾಡುತಂ
ಚಿತ್ತದೊಳು ಪೂಜೆಯುಚ್ಚೊತ್ತಿದಂತಿರ್ಚಿಸುತೆ
ಚಿತ್ತದೊಳು ಪೂಜೆಪುಟ್ಟಿರ್ದಂತೆ ಈಕ್ಷಿಸುತೆ"

ಎಂದು ಮೈಮರೆತು ಕವಿ ವರ್ಣಿಸುವಾಗ ಓದುಗರಿಗೆ ಪುಳಕಂಗೇಳುವಂತೆ ಮಾಡುತ್ತಾನೆ.

ಕನ್ನಡ ಸಂಸ್ಕೃತಿಗನುಗುಣವಾದ ವಿಶಿಷ್ಟರೀತಿಯ ಗದ್ಯಶೈಲಿ ಹುಟ್ಟಿದುದೇ ಬಸವಣ್ಣನವರಿಂದ. ಅದು ಹರಿಹರನ ಕೈಗೆ ಸಿಕ್ಕಿ ಕಳಿತು ಫಲವಾಯಿತು. ಚಂಪೂ ಕಾವ್ಯಕಾರರು ಗದ್ಯವನ್ನು ಪದ್ಯಸಂಯೋಗ ಸಾಧನದಂತೆ ಬಳಸುತ್ತಿದ್ದರು. ಹರಿಹರನು ತನ್ನ ರಗಳೆಗಳಲ್ಲಿ ಅದಕ್ಕೆ ಪ್ರತ್ಯೇಕ ಸ್ಥಲಗಳನ್ನು ನಿರ್ದೇಶಿಸಿ ಗದ್ಯಶೈಲಿಯನ್ನು ರೂಪುಗೊಳಿಸಿದನು. ಗದ್ಯದಲ್ಲಿಯೂ ಅದೇ ಕೈವಾಡ, ಅದೇ ಮಾಧುರ್ಯ, ಅದೇ ವಿನೂತನತೆ.

ಮಹಾದೇವಿಯಕ್ಕನ ಬಾಲಲೀಲೆಯನ್ನು ಹರಿಹರ ಈ ರೀತಿ ವರ್ಣಿಸುತ್ತಾನೆ.

"ತಾಯ ಮಗ್ಗುಲ ತಂಪಿನೊಳುಂ ಮೊಲೆವಾಲಿಂಪಿನೊಳುಂ
ತೊಟ್ಟಿಲ ತೂಕದೊಳುಂ ರಾಗಿಸುವರ ಜೋಗುಳದೊಳುಂ
ಸಾಗಿಸುವರ ಸೋಗಿಲೊಳಂ ಎತ್ತಿಕೊಂಬರಳ್ತಿಯೊಳಂ
ಮುಟ್ಟುವರ ಮೋಹದೊಳಂ ಸೋಂಕುವರ ಸುಖದೊಳಂ
ತರ್ಕೈಸುವರಪ್ಪಿನೊಳಂ ಶಶಿಕಳೆಯಂತೆ ದಿನದಿನಕೆ ಕಳೆ
ಯೇರೆ ನಳನಳಿಸಿ ಬೆಳಗುತಿರ್ಪ ಮಹಾದೇವಿಯಕ್ಕಂ,
ಉತ್ಪಳದೊಳು ಸಿಲ್ಕಿದ ಪೆಣ್ದುಂಬಿ ಜಿನುಗುವಂತೆ
ಒಮ್ಮೊಮ್ಮೆಯುಳುತ್ತಂ ಕಮಲಕುಟ್ಮಲವರಳ್ವಂತೆ ನಗುತ್ತಂ
ಕುಮುದಂ ಮುಗಿವಂತೆ ಕಣ್ಮುಚ್ಚುತ್ತಂ ಶಿವಭಕ್ತಿಯ
ಮುಚ್ಚುಳಂಪೆಗೆವಂತೆ ಕಣ್ದೆರೆವುತ್ತಂ ಮಂದಾನಿಲನಂ
ಸೋಂಕಿದೆಳಲತೆಯಲುಗುವಂತೆ ತೋಳಾಡಿಸುತ್ತಂ
ಜೀವರತ್ನವೇಳುವಂತೆ ಅಂಬೆಳಿಕ್ಕುತಂ ನಿಷ್ಠೆ ನಿಮಿರ್ದಂತೆ
ನಿಂದಿರುತ್ತಂ ಸುಖಂ ಸುಳಿವಂತೆ ನಡೆಗಲಿವುತ್ತಂ
ಅರಳೆಲೆಯ ಸಿರಿವಂತೆ ನೊಸಲದ ಸುಮ್ಮಾನಿ ಭಸಿತದಭಾವಕಿ
ಅಂಜನದ ರಂಜನೆ ಮಾಗಾಯ ಮುಗುದೆ ಹೊನ್ನೋಲೆಯ
ಚೆನ್ನೆ ಮೂಕುತಿಯ ಮುಗುಳು ಪುಲಿಯುಗುರ ಸುಲಲಿತೆ
ನೇವಣದ ನೀರೆ ರತ್ನದಾಳಿಯ ರಾಜಹಂಸೆ ತೋಳಬಂದಿಯ
ಬಾಳಕಿ ಹೊಂಗಡದ ಲಿಂಗವಂತೆ ಕಂಕಣದ ಕಾಮಧೇನು
ತೊಡಿಗೆಯ ಬೆಡಂಗಿ ಅಂದುಗೆಯ ಮಂದಯಾನೆ ಗೆಜ್ಜೆ
ಗಳ ಸಜ್ಜನೆ ಎನಿಸಿ ನಳನಳಿಸಿ ಬಳೆಯುಮೀ ತೆರದೊಳು..."

ಎಂದು ಕೆನೆವಾಲಕಡೆದು ನವನೀತಮಂ ತೆಗೆವಂತೆ ಕನ್ನಡ ಸಾಹಿತ್ಯವನ್ನು ಕಡೆದು ಭಾವನವನೀತಮುಂ ತೆಗೆಯುತ್ತಾನೆ.

ಹರಿಹರನು ಕನ್ನಡ ಸಾಹಿತ್ಯದಲ್ಲಿ ಒಬ್ಬ ಸೀಮಾಪುರುಷ. ವೀರಶೈವ ಸಾಹಿತ್ಯಕ್ಕಂತೂ ಅವನು ಸೂರ್ಯಸ್ವರೂಪ. ಕವಿ ಪೊನ್ನ ಹೇಳಿದಂತೆ 'ಬಹುಶ್ರುತನಲ್ಪಶ್ರುತನೆನ್ನದಾರ ಕಿವಿಗಂ ನುಣ್ಪಿಂಪಿನೊಳ್ ಕೂಡೆ ಪಂಡಿತರುಂ ಮೂರ್ಖರುಂ ಮೆಕ್ಕೆಯಿಂ ಪೊಗಳೆ' ಕಾವ್ಯವನ್ನು ರಚಿಸಿದ ಪ್ರತಿಭೆ ಹರಿಹರನದಾಗಿದೆ.

ಹರಿಹರನ ಕೊನೆಗಾಲವನ್ನು ಕುರಿತು ಒಂದು ದಂತಕಥೆಯಿದೆ. ಅವನ ಶವವನ್ನು ತಮ್ಮ ತಮ್ಮ ಧರ್ಮಾನುಸಾರವಾಗಿ ಒಪ್ಪಗಾಣಿಸಬೇಕೆಂದು ಬ್ರಾಹ್ಮಣ - ವೀರಶೈವರಲ್ಲಿ ವಾಗ್ವಾದ ಹುಟ್ಟಿತಂತೆ. ಆಗ ಶವಕ್ಕೆ ಹೊದೆಸಿದ್ದ ವಸ್ತ್ರವನ್ನು ತೆಗೆದುನೋಡಲು ಅದು ಶಿವಲಿಂಗವಾಗಿತ್ತಂತೆ. ಇಬ್ಬರೂ ಲಿಂಗಕ್ಕೆ ಪೂಜೆಯನ್ನರ್ಪಿಸಿ ಧನ್ಯರಾದರು. ಹರಿಹರ ಬ್ರಾಹ್ಮಣ - ವೀರಶೈವರಿಬ್ಬರಿಗೂ ಪ್ರಿಯನಾದ ಕವಿಯೆಂದು ತೋರುವುದಕ್ಕೆ ಈ ಕಥೆ ಹುಟ್ಟಿರಬಹುದು. ಅವನು ಬ್ರಾಹ್ಮಣ, ವೀರಶೈವರಿಗೆ ಮಾತ್ರವೇ ಅಲ್ಲ ಅಖಿಲ ಕರ್ನಾಟಕಕ್ಕೇ ಪ್ರಿಯನೂ ಮಾರ್ಗದರ್ಶಕನೂ ಆದ ಕವಿಲಲಾಮನಾಗಿದ್ದಾನೆ.

ರಾಘವಾಂಕ : ಹರಿಹರನ ಸಮಕಾಲೀನನೂ ಸೋದರಳಿಯನೂ ಆದ ರಾಘವಾಂಕ ಪ್ರಥಮ ಶ್ರೇಣಿಗೆ ಸೇರಿದ ಕವಿ. ತನ್ನ ಕಾಲದಲ್ಲಿಯೇ ಇವನು ಅಖಂಡವಾದ ಕೀರ್ತಿಯನ್ನು ಗಳಿಸಿಕೊಂಡಿದ್ದುದಲ್ಲದೆ ಮುಂದೆ ಬಂದ ಕವಿಗಳಿಗೆ ಮಾರ್ಗದರ್ಶಕನಾಗಿ ಅವರಿಂದ ವಿಶೇಷ ಮನ್ನಣೆಯನ್ನೂ ಪಡೆದಿದ್ದಾನೆ. ಸುಮಾರು ೧೬೫೦ರಲ್ಲಿ ಸಿದ್ಧನಂಜೇಶನು ರಾಘವಾಂಕನ ಚರಿತ್ರೆಯನ್ನು ಬರೆದು ಅವನ ಗ್ರಂಥಗಳ ಸಾರವನ್ನಿತ್ತು ಉಪಕಾರ ಮಾಡಿದ್ದಾನೆ. ಇವನ ಗ್ರಂಥಗಳಲ್ಲಿ ಹರಿಶ್ಚಂದ್ರಕಾವ್ಯ, ಸೋಮನಾಥ ಚರಿತ್ರೆ, ಸಿದ್ಧರಾಮ ಪುರಾಣ, ವೀರೇಶ ಚರಿತ್ರೆಗಳು ಸಿಕ್ಕಿ ಅಚ್ಚಾಗಿವೆ. ಶರಭಚಾರಿತ್ರ, ಹರಿಹರ ಮಹತ್ವಗಳು ಸಿಕ್ಕಿಲ್ಲ. ರಾಘವಾಂಕನಿಗೆ ಉಭಯಕವಿ ಶರಭಭೇರುಂಡ, ಉಭಯಕವಿ ಕಮಲರವಿ, ಅದಟಕವಿನಿಕರಚೌದಂತ ಮೊದಲಾದ ಬಿರುದುಗಳಿದ್ದವೆಂದೂ ಇವನ ಪಾಂಡಿತ್ಯವನ್ನು ಮೆಚ್ಚಿದ ಹಂಪೆಯ ದೇವರಾಯನು ಕವಿಶರಭ

ಭೇರುಂಡನೆಂಬ ಪಾದಪೆಂಡೆಯವನ್ನು ಕೊಟ್ಟನೆಂದೂ ಸಿದ್ಧನಂಜೇಶನ ಹೇಳಿಕೆ.

ಹಂಪೆಯ ದೇವರಾಜನ ಆಸ್ಥಾನದಲ್ಲಿ 'ಹರಿಶ್ಚಂದ್ರ ಕಾವ್ಯ' ವನ್ನು ವಿದ್ವಾಂಸರು ಮೆಚ್ಚುವಂತೆ ರಚಿಸಿ ಓದಿದುದಕ್ಕಾಗಿ ಸೋದರಮಾವ ಹರಿಹರ ನಿಂದ ಹಲ್ಲುಗಳನ್ನು ಮುರಿಸಿಕೊಂಡನೆಂದು ದಂತಕಥೆಯಿದೆ. ಆ ಪಾಪ ನಿವಾರಣಕ್ಕಾಗಿ 'ಸಿದ್ಧರಾಮ ಚಾರಿತ್ರ' ಸೋಮನಾಥ ಚರಿತ್ರೆಗಳನ್ನು ಬರೆದು ಮರಳಿ ಹಲ್ಲುಗಳನ್ನುದೊರಕಿಸಿಕೊಂಡನಂತೆ. ಅಲ್ಲಿಂದ ನರಸಿಂಹ ಬಲ್ಲಾಳನ ಮಂತ್ರಿಯಾದ ಕೆರೆಯ ಪದ್ಮರಸನನ್ನು ನೋಡಲು ಹೊಯ್ಸಳ ನಗರಕ್ಕೆ ಹೋದನು. ಕೆರೆಯ ಪದ್ಮರಸ ತ್ರಿಭುವನತಾತನೆಂಬ ವೈಷ್ಣವ ಪಂಡಿತ ನೊಂದಿಗೆ ವಾದಮಾಡಲು ದೋರಸಮುದ್ರಕ್ಕೆ ಹೋದಾಗ ಅವನ ಜತೆಯಲ್ಲಿ ಹೋದ ಪಂಡಿತ ಗಣದಲ್ಲಿ ರಾಘವಾಂಕನೂ ಇದ್ದನೆಂದು ಪದ್ಮಣಾಂಕನು (ಸು ೧೩೮೫) ತನ್ನ ಪದ್ಮರಾಜ ಪುರಾಣದಲ್ಲಿ ಹೇಳುತ್ತಾನೆ. ಅಲ್ಲಿಂದ ಹಂಪೆಗೆ ಬಂದು ಓರುಗಲ್ಲಿನ ಪ್ರತಾಪರುದ್ರನ ಆಸ್ಥಾನಕ್ಕೆ ಹೋಗಿ ಅಲ್ಲಿ ಆಸ್ಥಾನದಲ್ಲಿ ಕೋಲಾಹಲಮಾಡುತ್ತಿದ್ದ ಕುಕವಿಗಳನ್ನು 'ವೀರೇಶ್ವರ ಚರಿತ್ರೆ' ಬರೆದು ಭಂಗಿಸಿ ಹಂಪೆಗೆ ಬಂದು, ಹರೀಶ್ವರನ ಆಜ್ಞಾನುಸಾರ ಬೇಲೂರಿಗೆ ಹೋಗಿ ನಿಂತು ಅಲ್ಲಿ ಸಮಾಧಿ ಸೌಖ್ಯವನ್ನು ಪಡೆದನು.

ಕಾವ್ಯದೃಷ್ಟಿಯಿಂದ ಸೋಮನಾಥ ಚರಿತ್ರೆ, ವೀರೇಶ್ವರ ಚರಿತ್ರೆಗಳಿಗೆ ಏನೂ ಮಹತ್ವವಿಲ್ಲ. ಸೋಮನಾಥ ಚರಿತ್ರೆಯಲ್ಲಿ ರಾಘವಾಂಕ ತೋರಿರುವ ಅಸಹಿಷ್ಣುತೆ, ಪರಮತನಿಂದನೆ ಅಸಹ್ಯವನ್ನುಂಟುಮಾಡುತ್ತವೆ. ಅವನ ಕೀರ್ತಿಯ ಕಳಶಗಳಾಗಿ ನಿಂತಿರುವುದು ಹರಿಶ್ಚಂದ್ರಕಾವ್ಯ ಮತ್ತು ಸಿದ್ಧ ರಾಮ ಚರಿತ್ರ.

ಅಚ್ಚಗನ್ನಡ ಛಂದಸ್ಸಾದ 'ಷಟ್ಪದಿ' ಯ ಜನಕನೆಂದು ರಾಘವಾಂಕ ನಿಗೆ ಹೆಸರಿದೆ. ಅವನ ಹಿಂದೆ ಷಟ್ಪದಿ ಬರೆದ ಕವಿಗಳಿದ್ದರೂ ರಾಘವಾಂಕ ಅದನ್ನು ಒಂದು ಪರಿಪೂರ್ಣದೆಸೆಗೆ ತಂದನೆಂಬುದು ನಿರ್ವಿವಾದ. ವೀರೇಶ ಚರಿತ್ರೆಯಲ್ಲಿ ಉದ್ದಂಡ ಷಟ್ಪದಿಯೆಂಬ ಛಂದಸ್ಸನ್ನು ಬಳಸಿ ತನ್ನ ಪ್ರಯೋಗ ಪ್ರಿಯತೆಯನ್ನು ಕವಿ ತೋರಿಸಿದ್ದಾನೆ.

ರಾಘವಾಂಕ ಹರಿಹರನಿಗೆ ತಕ್ಕ ಶಿಷ್ಯನೆಂಬುದಕ್ಕೆ ಅವನು ಸಿದ್ಧರಾಮ, ಸೋಮನಾಥ, ಶರಭ ಚಾರಿತ್ರಗಳ ವಸ್ತುಗಳನ್ನು ಹರಿಹರನಿಂದಲೇ ತೆಗೆದು ಕೊಂಡಿರುವುದೇ ನಿದರ್ಶನವಾಗಿದೆ. ಜತೆಗೆ ರಾಘವಾಂಕ ವೀರ ಕನ್ನಡ ವಾದವನ್ನು ಮುಂದೊತ್ತಿ ಚಂಪುವಿನ ಚದುರಿಂಪಿಗೆ ಕವಿಯಾನದೆ ಷಟ್ಪದಿಯ ಝೇಂಕಾರವನ್ನು ಕನ್ನಡ ನಾಡಿನಲ್ಲಿ ತುಂಬಿಬಿಟ್ಟನು. ತನ್ನ ಕಾವ್ಯಲಕ್ಷಣ ವನ್ನು ಸ್ಪಷ್ಟವಾದ ಮಾತುಗಳಿಂದ ನುಡಿದು ಕವಿ ಮುಂದಿನ ಪೀಳಿಗೆಗೆ ಮಾರ್ಗದರ್ಶಕನಾದ.

ಛಂದಶ್ಶಾಸ್ತ್ರದಿಂದ ಕಾವ್ಯವಾಗುವುದಿಲ್ಲವೆಂದು ರಾಘವಾಂಕನ ನಿಶ್ಚಿತಷ್ಟವಾದ ಅಭಿಪ್ರಾಯ. ರಸಜೀವ, ಭಾವವೊಡಲ್, ಅರ್ಥಅವಯವ, ಶಬ್ದವಿಸರವೇ ನುಡಿ, ಅಲಂಕಾರವೇ ತೊಡಿಗೆ, ಸುಲಕ್ಷಣವೇ ಲಕ್ಷಣ, ವಿಮಳ ಪದನ್ಯಾಸ, ನಡೆರೀತಿ ಸುಕುಮಾರತೆಗಳು ಕಾವ್ಯ ಜೀವಾಳವೆಂದು ರಾಘವಾಂಕ ನಂಬಿದ್ದನು.

"ವರ ಸುಧಾರೋಗಣೆಗೆ ಮಾಧುರದ ಹಂಗೇಕೆ
ತರಣಿಯೋಲಗಕ್ಕೆ ಸೊಡರಂ ಪಿಡಿವ ತೊಡಕೇಕೆ
ಪರುಷದಾಭರಣಗೆಲಸಕ್ಕೆ ಮಿಸುನಿಯನರಸಿ ತೊಳಲುವಾಯಸವೇತಕೆ ॥
ನೆರೆದ ಸೊಗಸಿನ ಸುಗ್ಗಿ ರಸದ ಮಡು ಪುಣ್ಯದಾ
ಗರವೆನಿಪ ಸಿದ್ಧರಾಮನ ಕಥೆಗೆ ಕಾವ್ಯಮಂ
ವಿರಚಿಸುವಡಷ್ಟಾದಶಸ್ಥಲವ ಪೊಗಳಲೇಕಗ್ಗದ ಸಮರ್ಥಕವಿಗೆ ॥"

ಎಂದು ದಿಟ್ಟತನದಿಂದ ಅಷ್ಟಾದರ್ಶವರ್ಣನಾಪ್ರಿಯರಾದ ಕವಿಗಳನ್ನು ಜರಿದಿದ್ದಾನೆ.

ಕವಿಯು ಉತ್ತಮನಾಗಿದ್ದ ಹೊರತೂ ಅವನಿಂದ ಉತ್ತಮ ಕಾವ್ಯವು ಸೃಷ್ಟಿಯಾಗಲಾರದೆಂದು ರಾಘವಾಂಕನು ನಂಬಿದ್ದ ಹಾಗೆ ಕಾಣುತ್ತದೆ

"ಪೆರರೊಡವೆಯಂ ಕೊಂಡು ಕೃತಿಯ ಪೇಳದ ಭಾಷೆ
ಪೆರರ ಕಾವ್ಯಾರ್ಥಗಳಂ ಛಿದ್ರಿಸದ ಭಾಷೆ
ಪೆರರ ದೈವವ ನುತಿಸದಿಹ ಭಾಷೆ ಪೆರರ ಖೇದವಂ ನಿರೀಕ್ಷಿಸದ ಭಾಷೆ॥
ಪೆರರ ನಿಂದಿಸಿ ತನ್ನ ಪೊಗಳಿಕೊಳ್ಳದ ಭಾಷೆ
ಪೆರರ ವಧುವಂ ಕಂಡು ಮನವೆಳಸದಿಹ ಭಾಷೆ
ಪೆರರ ವಸ್ತುವ ತೃಣಕೆ ಸರಿಯೆಂಬ ಭಾಷೆಯಿದು ರಾಘವಾಂಕಗೆ ಸಂದುದು॥"

ಹರಿಹರನಂತೆ ರಾಘವಾಂಕನೂ 'ಹಂಪೆಯರಸನ ಪೊಗಳ್ವ ನಾಲಗೆಯೊಳನ್ಯದೈವವ ಭವಿಗಳಂ ಕೀರ್ತಿಸಿದೆನಾದಡೆ ಮನಸಿಜಾರಿಯ ಭಕ್ತನಲ್ಲ' ಎಂದು ದೃಢವಾಗಿ ನಂಬಿದ್ದನು.

"ಸಲ್ಲಲಿತ ಪುಣ್ಯಕಾವ್ಯ ಕಥನದೊಳು ಮು
ನ್ನಿಲ್ಲದುದ ನುಡಿದುಳ್ಳುದಂ ಪೊಳ್ದು ಹುಲ್ಲುಹೊಲ
ನೆಲ್ಲವಂ ಪೊಗಳಿ ಸುಧೆಯೊಳಗೆ ನಂಜಿಡುವಂತೆ ಮೇಳವಿಸಿ ಪೇಳೆ ನಾನು ‖
ಬಲ್ಲಂತೆ ಮರ್ತ್ಯಾನುಸಾರದಿಂ ಶಿವಸಿದ್ಧ
ವಲ್ಲಭನ ಮಹಿಮೆಯಂ ಸರ್ವರರಿಯಲು ನಟ್ಟ
ಕಲ್ಲೆ ನಿಸಿದಿಳೆಯೊಳಗೆ ಸುಳಿವ ಶಾಸನವೆನಿಸಿ ಪೇಳ್ವೆನೀ ಸತ್ಕೃತಿಯನು ‖
ಸಾದರಂ ಮಿಗೆ ಕಥಾನಾಯಕಂ ದುರ್ವ್ಯಸನಿ
ಯಾದೊಡಂ ನಿಷ್ಕಾಮನೆಂದೆಂದು ದುರ್ನೀತ
ನಾದೊಡಂ ನೀತಿವಿದನೆಂದಜ್ಞನಾದೊಡಂ ಸಲೆಶಿವಜ್ಞಾನಿಯೆಂದು ‖
ಮೋದದಿಂ ಕವಿ ಕಾವ್ಯದೊಳ್ ಪೊಗಳಬೇಕೆಂಬ
ಹಾದಿಯಿಂ ಪೊಗಳ್ದರೀಶ್ವರನಾಣೆ ಶಿವಸಿದ್ಧ
ರಾದಿತ್ಯ ಸಿದ್ಧರಾಮನ ಚರಿತ್ರವನೆಯ್ದೆ ಪೊಗಳಲಾನೆನಿತರಿವನು ‖"

ರಾಘವಾಂಕನ ಕಥಾನಾಯಕನಾದ ಸಿದ್ಧರಾಮನು ಒಬ್ಬ ಮಹಾವ್ಯಕ್ತಿ. ಶಿವಶರಣರಲ್ಲಿ ಹಿರಿಯಸ್ಥಾನವಾತನದು. ಅಲ್ಲಮಪ್ರಭು ಅವನನ್ನು ಕುರಿತು

"ಕಾಮನ ಕೊಲುವಲ್ಲಿ ಹೋಮವ ಸುಡುವಲ್ಲಿ ತ್ರಿಪುರ ಸಂಸಾರದ
ಕೀಲನರಿವಲ್ಲಿ ಆತ ಯೋಗಿ ಎನ್ನಬೇಡಾ. ಆತನ ಭೋಗಿ ಎನ್ನ
ಬೇಡಾ. ಆತನು ಅಚ್ಚ ಲಿಂಗೈಕ್ಯನು. ಹಸಿವ ಮರೆತಲ್ಲಿ
ವ್ಯಸನ ಮರೆತಲ್ಲಿ ಗುಹೇಶ್ವರ ಲಿಂಗವು ಸಿದ್ಧರಾಮಯ್ಯದೇವರು ತಾನೆ ‖"

ಎಂದೂ ಚೆನ್ನಬಸವರಾಜ

"ಕಬ್ಬಿನಗಿಡ ಬಲ್ಲುದೆ ಹಾಲಸವಿಯ
ಗಗನದಲಾಡುವ ಪಕ್ಷಿ ಬಲ್ಲುದೆ ರವಿಯ ನಿಲವ
ಹಗರಣಕ್ಕೆ ಪೂಜಿಸುವರು ಬಲ್ಲರೆ ನಮ್ಮ ಶರಣರ ಸುಳುಹ
ನಡುಮುರಿದು ಗುಡಗೂರಿದರೇನು, ಲಿಂಗದ ನಿಜವನ್ನರಿಯದನ್ನಕ್ಕ.
ಸಾವನ್ನಕ್ಕ ಜಪವ ಮಾಡಿದರೇನು, ಲಿಂಗದ ಪ್ರಾಣ ತನ್ನಪ್ರಾಣ
ಒಡಗೂಡದನ್ನಕ್ಕ.

ಇಂತಿವರೆಲ್ಲರೂ ಅಭ್ಯಾಸಶಕ್ತಿಗರುಹಿಗರು.
ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ಮಾಯಾ ಕೋಳಾಹಳ
ಸಿದ್ಧರಾಮಯ್ಯ ದೇವರಿಗೆ ಅಹೋರಾತ್ರಿಯಲ್ಲಿ ನಮೋ
ನಮೋ ಎಂದು ಬದುಕಿದೆನು . . ॥"

ಎಂದು ಸ್ತುತಿಸುತ್ತಾರೆ. ವಸ್ತುವಿನ ಗಾಂಭೀರ್ಯ ಘನತೆಗಳಿಗುಚಿತವಾಗಿ ರಾಘವಾಂಕ ಕಾವ್ಯವನ್ನು ಗಹನ ಗಂಭೀರವಾಗಿ ರಚಿಸಿದ್ದಾನೆ.

ರಾಘವಾಂಕನ ಕಣ್ಣಿಗೆ ಸಿದ್ಧರಾಮ ಪವಾಡಪುರುಷನೂ ಹೌದು, ಮಾನವಪ್ರೇಮಿಯೂ ಹೌದು. ಸಿದ್ಧರಾಮನ ಜೀವನದಲ್ಲಿ ಕವಿಯ ಮನಸ್ಸನ್ನು ಹಿಡಿದಿರುವುದು ಅವನ 'ಸಾಕಾರನಿಷ್ಠೆ ಭೂತಂಗಳೊಳಗನುಕಂಪೆ ತಾನೆ ಪರಬೊಮ್ಮವೆನಲು.' ಇದು ರಾಘವಾಂಕನ ಕಾವ್ಯಕಲ್ಪನೆಯಲ್ಲ. ಸಿದ್ಧರಾಮನ ವಚನಸುಧಾಸರಸ್ಸಿನಲ್ಲಿ ಮಿಂದ ರಾಘವಾಂಕ ಅವನ ಜೀವನಸೂತ್ರವಾದ 'ಸರ್ವಭೂತಾನುಕಂಪೆ' ಯನ್ನು ಮುಖ್ಯವಾಗಿ ಎತ್ತಿಕೊಂಡಿದ್ದಾನೆ. ಸಿದ್ಧರಾಮ ತನ್ನ ವಚನಗಳಲ್ಲಿ

"ಸರ್ವಜೀವ ದಯಾಪರತ್ವ ನೈದೆಗೆದರೆ ನಿಮ್ಮ ಪಾದಸಾಕ್ಷಿ ಎನ್ನ ಮನಸಾಕ್ಷಿ"

"ಸಮತೆ ಎಂಬ ಕಂಥೆ ಧರಿಸಿಪ್ಪ ನೋಡಾ ಜಂಗಮನು . . .
ಸರ್ವಜೀವ ದಯಾಪಾರಿ ಎಂಬ ವಿಮಲರುದ್ರಾಕ್ಷಿ ಧರಿಸಿಪ್ಪ ನೋಡಾ
ಜಂಗಮನು"

ಎಂದು ಸಾರಿಸಾರಿ ಹೇಳಿ, ಈ ಸರ್ವಜೀವದಯಾಪಾರಿತ್ವವನ್ನು ಕಾರ್ಯೋನ್ಮುಖಮಾಡಲು

"ನಿರ್ಮಲ ಕರ್ಮವದು ಸದ್ಗತಿಗೆ ಸಾಧ್ಯ ನೋಡಾ
ನಿರ್ಮಲ ಕರ್ಮವದು ಜ್ಞಾನಕ್ಕೆ ವರ್ಧನ ನೋಡಾ
ನಿರ್ಮಲ ಕರ್ಮವದು ಕಪಿಲಸಿದ್ಧ ಮಲ್ಲಿಕಾರ್ಜುನನ
ಕೂಡುವ ಕೂಟ ನೋಡಾ."

ಎಂದು ಕರ್ಮದ ಕಾಸಾರದಲ್ಲಿ ಬಿದ್ದುದು. ತನ್ನ ಧ್ಯಾನ, ಯೋಗ, ಪೂಜಾದಿಗಳನ್ನು ಮರೆತು

" . . . ಅಜ್ಞಾನಿ ಜನ್ಮವೆತ್ತು
ಹೊರಗಿಪ್ಪ ಪಶುಪಕ್ಷಿ ಕ್ರಿಮಿಕೀಟಕಾವಳಿಗ

ಅರಿತು ನೀರ್ಗುಡಿಯೆ ಭವವಳಿವಂತು ಕಟ್ಟುವೆಂ
ಕೆರೆಯ ನಮರಾಪಗೆಯ ನೈಮರೆಯ ಮಾಂಗಲ್ಯ
ಮೆರೆಯಲೆಂದನುಗೆಯ್ದನು ॥"

ಆದರೆ ಕರ್ಮ ಒಂದು ಮಹೋನ್ನತ ಗುರಿಯ ಸಾಧನವಾಗಲಿಲ್ಲ. ಅದು ಅಲ್ಲಿಯೇ ಒಂದು ವ್ಯೂಹವನ್ನು ರಚಿಸಿಕೊಂಡು ತೊಳಲಾಡುತ್ತ ನಿಂತಿತು. ಇಂತಹ ಸಂದರ್ಭದಲ್ಲಿ ಎಚ್ಚರಿಕೆಯನ್ನು ಕೊಡುವ ಸದ್ಗುರುವೂ ದೂರ ನಿಲ್ಲಲಿಲ್ಲ. ಪರ್ಯಟನದಲ್ಲಿದ್ದ ಪ್ರಭುದೇವ ಸೊನ್ನಲಿಗೆಗೆ ಬಂದು, ಸಿದ್ಧ ರಾಮನನ್ನು ಕಟುವಾಗಿ ಕೆಣಕಿ ಎಚ್ಚರಿಸುತ್ತಾನೆ. ಈ ಭಾಗವನ್ನು ಚಾಮರಸ, ಗೂಳೂರು ಸಿದ್ಧವೀರಣಾಚಾರ್ಯಾದಿಗಳು ವಿಶೇಷ ಉತ್ಪ್ರೇಕ್ಷಿಸಿ ಸಿದ್ಧರಾಮನಿಗೆ ಹಿತವಲ್ಲದ ರೀತಿಯಲ್ಲಿ ಚಿತ್ರಿಸಿದ್ದಾರೆ. ಇದಕ್ಕೆ ಕಾರಣ ಚಾಮರಸ, ಸಿದ್ಧವೀರಣಾಚಾರ್ಯರು ಲಕ್ಷ್ಯ ಸಂಪೂರ್ಣವಾಗಿ ಅಲ್ಲಮ ಪ್ರಭುವಿನ ಕಡೆಗಿದ್ದುದೇ ಆಗಿದೆ. ಆ ನೆಟ್ಟ ನೋಟವನ್ನು ಅವರು ಸಡಲಿಸದೆ ಸಿದ್ಧರಾಮನ ಗಮ್ಯವೇನಿರಬಹುದೆಂಬುದನ್ನು ಲಕ್ಷಿಸದೆ ಹೋಗಿದ್ದಾರೆ. ರಾಘವಾಂಕನೂ ಪ್ರಭುವಿನಲ್ಲಿ ಪರಮ ಗೌರವವುಳ್ಳವನು. ಈ ಪ್ರಕರಣ ವನ್ನು ಪ್ರಭುದೇವ, ಸಿದ್ಧರಾಮ ಇಬ್ಬರಿಗೂ ಗೌರವ ತರುವ ರೀತಿಯಲ್ಲಿ ಬಹಳ ಮಾರ್ಮಿಕವಾಗಿ ಚಿತ್ರಿಸಿದ್ದಾನೆ.

"ಲಿಂಗದ ಮಹತ್ವ ಮನದಿಂ ತನುವ ಬೇಧಿಸಲು ಮಂಗಳ ವೆನಿಪ್ಪ ಬೆಳಗಳವಟ್ಟ ಭೌತಿಕಕೆ ಹಂಗಿಗತನವನುಳಿದು ಸುಖದಿ ಮೆರೆ ಯುತ್ತ ಸದ್ಯೋವರವ ನೀಡುವಂತೆ" ಪ್ರಭು ಸೊನ್ನಲಿಗೆಗೆ ಬರುತ್ತಾನೆ. ಕೆರೆಯ ಕೆಲಸದಲ್ಲಿ ಸಿದ್ಧೇಂದ್ರನಿರೆ 'ಕರೆಯೋ ಒಡ್ಡರೆರೆಯನಂ' ಎಂದು ಕರೆಯುವಷ್ಟರಲ್ಲಿ ಜಗಜ್ಜನದ ಅಂತರ್ಯಾಮಿ ಕುರುಹುವಿಡಿದು ಜರೆವುದಂ ಸಿದ್ಧರಾಮ ಅರಿದಾನಗಳೆ, ಅಲ್ಲಮುಂಗರುಹಿಸುವೆ ಬಡವ ಮಡಗಿದ ಕಡವರದ ತೆರದ ಮಕುಟದ ಮರೆಯ ಲಿಂಗವ ಎಂದು ನಸುನಗುತ ಅಲ್ಲಮನ ಸಮಿಾಪಕ್ಕೆ ಬರುತ್ತಾನೆ. ಇಷ್ಟುಹೊತ್ತಿಗೆ ಚಾಮರಸನು ಅಲ್ಲಮನಿಗೂ ಸಿದ್ಧರಾಮನ ಕೂಲಿಯಾಳುಗಳಿಗೂ ಕದನವಾಡಿಸಿ, ಅವರನ್ನು ದಮನಿಸಿ ಅವರಿಂದ ಸಿದ್ಧರಾಮನಿಗೆ ಸುದ್ದಿ ಕಳುಹಿಸುತ್ತಾನೆ. ಅಲ್ಲಮನ ಧೂರ್ತತೆ ಯನ್ನರಿತ ಸಿದ್ಧರಾಮ

"ಆರು ನಮ್ಮನು ಜರಿದವನು ಜಂ
ಭಾರಿಯೋ ದನುಜಾರಿಯೋ ಕಾ
ಮಾರಿಯೋ ತೋರವನ ಹೆಡ ತಲೆಗುಗಿವೆ ನಾಲಗೆಯ ॥
ಬೇರು ಸಹಿತವೆ ಕೀಳುವೆನು ಕೈ
ವಾರವೇಕೆನುತೆದ್ದು ಬಂದನು
ಧೀರತನದಲಿ ಸಿದ್ಧರಾಮನು ಗಜರಿ ಗರ್ಜಿಸುತ ॥"

ರಾಘವಾಂಕನ ನಸುನಗುವ ಸಿದ್ಧರಾಮನ ಆತ್ಮಸ್ಥೈರ್ಯ, ಚಾಮರಸನ ಗಜರಿ ಗರ್ಜಿಸುವ ಸಿದ್ಧರಾಮನ ಮಲಿನತೆಗಳೆರಡೂ ಆಯಾಯ ಕವಿಗಳಿಂದ ಚಿತ್ರಿತವಾಗಿವೆ. ನಮಗೆ ಪ್ರಿಯನಾಗುವವನು ರಾಘವಾಂಕನ ಸಿದ್ಧರಾಮು.

ಸಿದ್ಧರಾಮು ಕೆಮ್ಮುಗಿಲ ಸಂಧಿಯೊಳಿಂದು ಕೋಟಿ ಪ್ರಭಾಪಟಲಮಂ ಹಿಂದುಗಳೆದೆಸೆವ ಶೈತ್ಯಪ್ರಜ್ವಲಿತ ಕಾಂತಿಯಿಂದೆಸೆವ ನಿರುಪಾಧಿಕ ಜ್ಯೋತಿ ಲಿಂಗವನ್ನು ಅಲ್ಲಮನಿಗೆ ತೋರುತ್ತಾನೆ. ಅದಕ್ಕೆ ಅಲ್ಲಮ

ಅಲ್ಲಮ: ಲೋಹದ ಸಂಗದಿಂದ ಕಿಚ್ಚು ಬಡಿಹಡೆದುದೆಂಬಂತೆ ದೇಹಸಂಗದೊಳಾತ್ಮನಾಯಸಂ ಬಡುವಂತೆ, ಬೇಹುದೊಂದಳವಟ್ಟ ಬಳಿಕ ಬಿಡಲಾಗದೆನೆ ನೆರೆಯುವರಿಗಿತ್ತು ಕಣ್ಣುಹೋಹಂದ ನಿಮಗೆ

ಸಿದ್ಧರಾಮು: ದೊರಕಿದಾತಂ ಸವಿಯ ಬೇಹುದೆ. ಮತ್ತಾರ್ಗೆ ದೊರೆಕೊಳುವುಪಾಯಕ್ಕೆ ಸೋಹೆಯುಂ ಕೊಡಲಾಗದೇ ಜಗಜ್ಜನದ ಕೃಪೆಗೆ

ಅಲ್ಲಮ: ಜಡರ ನಡುವಿರಲವರ ಸಂಗದಿಂ ಕಾಯಗುಣವಿಡಿದು ಬಳಲುವರೆ

ಸಿದ್ಧರಾಮು: ಗಾಳಿಯುಂ ಹುಡಿ ಹಿಡಿವುದೇ, ರಸನೆ ಹೆಡಸಹುದೆ, ಆಲಿಯುಂ ಜನವನೊಳಕೊಂಡಿರ್ಪುದೆ, ಪೊಡವಿಯೊಳು ಶಿವಯೋಗಿ ಸುಳಿದಡಂ ನೀರನಡುವಿಡಿದ ಕಂಜದ ತೆರದಿ ಭಕ್ತಿಯುಕ್ತನು.

ಅಲ್ಲಮ: ಲೋಕವೆಲ್ಲಂ ಬದುಕಲೆಂದು ನಾಗಾರ್ಜುನನದೇಕೆ ಹೋಗಾಡಿದಂ ತಲೆಯನಾ, ವ್ಯಾಳಿ ಬಳಿಕೇಕಾದ ಬೆಳ್ಳಿ, ಕೋರಾಂಟಕಂ ನೀರೊಳೇ ಕದ್ದನೆನಲರಿದುದಿಲ್ಲ.

ಸಿದ್ಧರಾಮು: ಏಕನದ್ವಿತಿಯನೆನಿಸುವ ಲಿಂಗವಂ ನಂಬದಾಕಾರಣ ಕೆಟ್ಟರಲ್ಲದವರಳಿವರೇ ಸಾಕಾರನಿಷ್ಠೆ ಭೂತಂಗಳೊಳನುಕಂಪೆ ತಾನೆ ಪರಬೊಮ್ಮನೆನಲು.

ಅಲ್ಲಮ: ಆಗಲಹುದದಕೇನೊಡಂಬಟ್ಟೆ ನೀಯುಗಂ ಬಾಗಿ ಬಲಗಾಲಿ ನುಂಗುಟವ ನೂರಲ್ಕಂಜಿ ಯೋಗಿಗಳು ಕದಳಿಯಂ ಮುನಿಗಳ ನಿಬರು ಮೇರುಮಂದರ ಗುಹೋದರವನು ಭೋಗಿಕುಲ ಸರ್ಪ ಲೋಕಕೆ ದಿವಿಜರು ದಿವಕೆ ಸಾಗರದ ಕಟ್ಟೆಯಂ ಕಟ್ಟೆ ರಾಕ್ಷಸರು ಭಯರಾಗಿರ್ಪರೆಂಬಾಗ ಮಾನವರ ನಡುವಿರಲು ಬೇಡ ಸಿದ್ಧೇಂದ್ರ.

ಸಿದ್ಧರಾಮ: ಅದನು ನಾ ಬಲ್ಲೆ. ಈ ಯುಗದ ಜೀವರ ಪುಣ್ಯದೊದವಿಂಗೆ ಕೈಕೊಂಡ ಮೂರ್ತಿಯಿದು ಹುಸಿಯು ಮಾಡಿದೆ ನಾದೊಡುಳಿದ ಮಾನವರ ಪರಿಯೈಸಲೇ ಅಲ್ಲಮಪ್ರಭುವೆ.

ಅಲ್ಲಮ: ಚದುರ ನಿನ್ನೀ ಸೃಷ್ಟಿಯೇ ಬೇರೆ ಅದಕೆ ಮೆಚ್ಚಿದೆನು. ನೀನಿರ್ದು ವಿಲ್ಲೆಂಬ ಬಯಲಿನ ಭ್ರಮೆಯ ಬೆದರಿ ಬಿಸುಡು

ಎಂದು ಶಿವಸುಖಗೋಷ್ಠಿಯಿಂದ ಕದಳಿಯ ದಾರಿಹಿಡಿದು ಅಲ್ಲಮ ಪ್ರಭುವು ಹೊರಟು ಹೋಗುತ್ತಾನೆ.

ಪಾತ್ರವ್ಯಕ್ತಿತ್ವವನ್ನು ಪರಿಗಣನೆಗೆ ತಂದುಕೊಂಡರೆ ಸಿದ್ಧರಾಮ ಏಕ ಮೇವಾವದ್ವಿತೀಯನಾದ ವ್ಯಕ್ತಿ. ರಾಘವಾಂಕನ ವರಕವಿತೆಯಲ್ಲಿ ಅವನು ಸಹಜಶಕ್ತಿ ಸೌಂದರ್ಯಗಳಿಂದ ಚಿತ್ರಿತನಾಗಿದ್ದಾನೆ. ಅತ್ಯುನ್ನತ ಧ್ಯೇಯ ವನ್ನಿಟ್ಟುಕೊಂಡು ಅದನ್ನು ಸಾಧಿಸಲಾಗದೆ ತೊಳಲುವ ಮಾನವನ ದುರಂತ ಜೀವನವನ್ನು ಹರಿಶ್ಚಂದ್ರನ ಪಾತ್ರದಲ್ಲಿಯೂ ಆ ಉನ್ನತ ಧ್ಯೇಯವನ್ನು ಸಾಧಿಸಿ, ಜನತೆಯನ್ನು ಉದ್ಧಾರಮಾಡಿದ ಕಾರುಣಿಕನನ್ನು ಸಿದ್ಧರಾಮ ಚರಿತ್ರ ದಲ್ಲಿಯೂ ಕವಿ ಎಳೆಎಳೆಯಾಗಿ ಚಿತ್ರಿಸಿದ್ದಾನೆ.

ಹರಿಹರನಿಗೂ ರಾಘವಾಂಕನಿಗೂ ಕನ್ನಡ ಕಾವ್ಯದೇವಿಯನ್ನು ಚಿನ್ನದ ಸಂಕೋಲೆಗಳಿಂದ ಬಿಡಿಸಿದ ಕೀರ್ತಿ ಸಲ್ಲುತ್ತದೆ.

ಪುಲಿಗೆರೆಯ ಸೋಮ: ಕನ್ನಡ ಶತಕಗಳಲ್ಲಿ ಸೋಮೇಶ್ವರ ಶತಕ ದಷ್ಟು ಪ್ರಸಾರಗೊಂಡು ಜನಪ್ರಿಯವಾದುದು ಬೇರೊಂದಿಲ್ಲ. ಇದನ್ನು ಬರೆ ದವನು ಪಾಲ್ಕುರಿಕೆ ಸೋಮನಿರಬಹುದೆಂದು ಕವಿಚರಿತ್ರೆಕಾರರು ಸಂಶಯ ಗ್ರಸ್ತರಾಗಿಯೇ ತಿಳಿಸುತ್ತಾರೆ. ಶತಕದಲ್ಲಿ ಕವಿ ಪುಲಿಗಿರಿ ನಗರಿಯ ಹೆಸರನ್ನು ಹೇಳುವುದರಿಂದಲೂ ಸುಮ್ಮನೆ 'ಸೋಮ' ಎಂದು ತನ್ನನ್ನು ಕರೆದು

ಕೊಂಡಿರುವುದರಿಂದಲೂ ಕ್ರಿ ಶ. ೧೧೯೫ರಲ್ಲಿದ್ದ ಪಾಲ್ಕುರಿಕೆ ಸೋಮನಿರಲಾರದೆಂದೂ ಕ್ರಿ. ಶ. ೧೩೦೦ರಲ್ಲಿದ್ದ ಪುಲಿಗೆರೆಯ ಸೋಮನೇ ಇದರ ಕರ್ತೃವಾಗಿರಬಹುದೆಂದು ಸೋಮೇಶ್ವರ ಶತಕದ ಸಂಪಾದಕರು (ಕ. ಸಾ. ಪರಿಷತ್ತಿನ ಮುದ್ರಣ ೧೯೨೩) ಅಭಿಪ್ರಾಯಪಡುತ್ತಾರೆ.

ನೀತಿಯನ್ನು ಕಾವ್ಯರೂಪದಲ್ಲಿ ಹೇಳುವುದರಲ್ಲಿ ಈ ಕವಿಯದು ಹಿರಿಯ ಗುಣ. ಸಹಜವಾದ ಉಪಮೆಗಳೂ, ಸ್ವಾರಸ್ಯವಾದ ಪದಗುಂಫನವೂ ನೀತಿ ವಾಕ್ಯಗಳನ್ನೂ ಬೇಸರಗೊಳಿಸದೆ ಕಾವ್ಯಪಂಕ್ತಿಗೇರಿಸುತ್ತವೆ. ಕವಿಗೆ ಜನ ಜೀವನದ ನಿಕಟ ಪರಿಚಯವಿದ್ದಹಾಗೆ ಕಾಣುತ್ತದೆ. ಅದರಿಂದಲೇ ತನ್ನ ಕಾವ್ಯಸಾಮಗ್ರಿಯನ್ನು ಅವನು ಹೆಚ್ಚಾಗಿ ಆಯ್ದುಕೊಂಡಿದ್ದಾನೆ.

ಸೃಷ್ಟಿಯ ಅವಿಚಾರಪರತೆಯನ್ನು ಕುರಿತು ಕವಿ:

"ಕೊಡಬಲ್ಲಂಗೆ ದರಿದ್ರಮಂ ಪ್ರವುಥಗಂ ಮೂಢಾಂಗನಾ ಲಾಭಮಂ
ಮುಡೆಯುಂಗುತ್ತಮ ಜಾತಿ ನಾಯಕಿಯ ಪಾಪಾತ್ಮಂಗೆ ದೀರ್ಘಾಯುವಂ ॥
ಕಡು ಲೋಭಂಗತಿ ದ್ರವ್ಯಮಂ ಸುಕೃತಿಗಲ್ಪಾಯುಷ್ಯಮಂ ನೀಡುವಂ
ಸುಡು ಪಾಪಿಷ್ಠನ ಬೊಮ್ಮನಂ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥"

ಪರಸೇವೆಯ ಕಡುತರ ಕಷ್ಟವನ್ನು ಕುರಿತು

"ಹರತಾಂ ಕುಂಟಣಿಯಾಗೆ ನಂಬಿಯೊರೆದಂ ಚಂದ್ರಾವತೀ ದೇವಿಗಂ
ಕರಕಷ್ಟಂಗಳ ಮಾಡಿದಂ ದ್ವಿಜ ವಿರಾಟಂ ಧರ್ಮಭೂಪಾಲನಂ
ಶಿವಮಂ ಚಿಟ್ಟಿಯೊಳಿಟ್ಟ ನಗ್ನಿಜೆಗೆ ಬಂದಾಪತ್ತನೇನೆಂಬೆ ನಾಂ
ಪರಸೇವಾಸ್ಥಿತಿ ಕಷ್ಟವೈ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥

ಪರರಾಯ್ಕಳ ಸೇನೆಯಂ ಗೆಲಿದು ಮತ್ತೇಭಂಗಳಂ ಸೀಳ್ದು ತ
ನ್ನರಿಯೆಂದೆಂಬರನೊಕ್ಕಲಿಕ್ಕುವ ಭಟರ್ಗಂ ಗಂಜಿ ಕೀಳ್ನಾಯ್ಗಳಂ
ನಿರುತಂ ಭೋಜ್ಯವಿಶೇಷಮಿತ್ತು ಪೊರೆವರ್ ಮಾನಂಗಳೆಲ್ಲಿರ್ಪುವೈ
ಪರಪೋಷ್ಯಕ್ಕೊಳಗಾಗಿರಲ್ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥"

ಭೀಮಕವಿ: ಭೀಮಕವಿ (೧೩೬೯) 'ಬಸವಪುರಾಣ'ವನ್ನು ಬರೆದು ಕೀರ್ತಿಕಾಯನಾಗಿದ್ದಾನೆ. ಇವನನಂತರ ಬಂದ ಅನೇಕ ಕವಿಗಳು ಇವನನ್ನು ಕೃತಜ್ಞತೆಯಿಂದ ಸ್ಮರಿಸಿದ್ದಾರೆ. ಬಸವನ ಚರಿತ್ರೆಯನ್ನು ಹೇಳುವುದೇ ಕಾವ್ಯದ ಮುಖ್ಯೋದ್ದೇಶ. ಅದರ ಜತೆಗೆ ಸಂದರ್ಭಾನುಸಾರವಾಗಿ

ಇತರ ಶಿವಶರಣರ ಕಥೆಗಳನ್ನೂ ಸೇರಿಸಿದ್ದಾನೆ. ಬಸವಪುರಾಣವನ್ನು ಬಡಮತಿಯಾದ ನಾನು ಹೇಗೆ ರಚಿಸಲಿ ಎಂದು ಶಿವಯೋಗನಿದ್ರೆಯೊಳು ಇರಲು ಪಾಲ್ಕುರಿಕೆ ಸೋಮೇಶನು ಕನಸಿನಲ್ಲಿ ಬಂದು ನಿನ್ನ ಆತ್ಮದೊಳಗಿದ್ದು ನಾವು ಬಸವಕಥೆಯನ್ನು ವಿರಚಿಸುತ್ತೇವೆ ಎಂದು ಅಭಯ ಕೊಟ್ಟಹಾಗೂ, ಅದನ್ನವಲಂಬಿಸಿ ತಾನು ಬಸವಪುರಾಣ ಬರೆದಹಾಗೂ ತಿಳಿಸುತ್ತಾನೆ. ಭೀಮ ಕವಿ, ಪಾಲ್ಕುರಿಕೆ ಸೋಮನ ಮೂಲಗ್ರಂಥವನ್ನು ಆಧಾರವಾಗಿಟ್ಟುಕೊಂಡಿದ್ದಾನೆ. ಇವನು ತನ್ನ ಪೀಠಿಕಾ ಪ್ರಕರಣದಲ್ಲಿ

"ಸರಸಮೃದುಮಧುರೂಪಮೆಗಳಂ । ಕುರಿಸೆ ವಸ್ತುಕವರ್ಣಕಂಗಳ
ನೆರಪಿ ಹರನಂ ಹರಣಗಳನ್ನೈದೆ ಕೀರ್ತಿಸಿದ ॥
ಧರೆಗುಭಯಕವಿ ಶರಭಭೇರುಂ । ಡರಸುಕವಿ ಹರಿಬುಧವರನ ತ
ದ್ವರಸುತನ ರಾಘವನ ಕೃಪೆಯಿಂ ರಚಿಸುವೆ ಕೃತಿಯಾ ॥"

ಎಂದು ಹೇಳಿರುವುದರಿಂದ ಹರಿಹರನ ಶಿವಶರಣರ ರಗಳೆಗಳೂ, ರಾಘವಾಂಕನ ಕಾವ್ಯಗಳೂ ಇವನಿಗೆ ಸುಪರಿಚಯವಾಗಿತ್ತೆಂದು ತಿಳಿದುಬರುತ್ತದೆ. ಆದರೂ ಇವನು ಹರಿಹರನನ್ನು ಅನುಸರಿಸದೆ ಪಾಲ್ಕುರಿಕೆ ಸೋಮನನ್ನು ಏತಕ್ಕನುಸರಿಸಿದನೆಂಬುದು ತಿಳಿಯದಾಗಿದೆ.

ಇವನ ಕಾಲದಲ್ಲಿ ಕನ್ನಡದಲ್ಲಿ ಕಾವ್ಯ ರಚಿಸುವುದು ಹೀನಾಯವೆಂದು ಭಾವಿಸಲ್ಪಟ್ಟ ಹಾಗೆ ಕಾಣುತ್ತದೆ.

"ಪ್ರಾಸ ಯತಿಗಣ ಗದ್ಯಪದ್ಯ ಸ । ಮಾಸಯುತ ವಸ್ತುಕದ ಮುಂದೆ ವಿ ॥
ಳಾಸಮೇ ಸಾಮಾನ್ಯ ವರ್ಣಕವೀಕವಿತೆಯೆಂದು ।
ಓಸರಿಸದಿರಿ ಬರಿಯ ಕನ್ನಡ । ಭಾಷೆಯೆಂದನಲಾಗದಿಳೆಗಿದು ।
ಲೇಸೆನಿಪ ವೇದಪ್ರಮಾಣವೆನಿಪ್ಪುದೆಂತೆನಲು ॥"

ಎಂದು ಟೀಕಾಕಾರ ವಿಷಯ ಪ್ರಸ್ತಾಪಿಸಿ ಅವರಿಗೆ

"ಆದಿಲಿಂಗ ರಹಸ್ಯ ಸಿದ್ಧಾಂ । ತಾದಿ ವೇದಪುರಾಣ ಸಂಮತವಾದ
ಬಸವಪುರಾಣ ವರಗೀತಾರ್ಥಮಾತೃಕದಿ ॥
ಕೋದಮಣಿಗಣ ಸೂತ್ರದಂತಿರೆ । ಯಾದಿಗಣಚರಿತಂಗಳೊಳು ಸಂ ।
ವೇದಿಸಲ್ಬಸವನ ಚರಿತೆಯಂ ಬಣಿಸುವೆನೊಸೆದು ॥"

ಎಂದು ಸಮಾಧಾನ ಹೇಳುತ್ತಾನೆ. ತನ್ನ ಕಾವ್ಯನಾಯಕನಾದ ಬಸವನನ್ನು ಕುರಿತು

"ಬಸವಶರಣೆನೆ ಪಾಪವಳಿವುಗು । ಬಸವಶರಣೆನೆ ಪಾಪವಳಿವುಗು ।
ಬಸವಶರಣೆನೆ ತಾಪವಾರುಗು । ಬಸವಶರಣೆನೆ ಪರಮಪಾವನ
ಭೂತಿ ಸಂಧಿಗುರು ॥ ಬಸವಶರಣೆನೆ ಭಕ್ತಿದೊರೆಕುಗು ।
ಬಸವಶರಣೆನೆ ಸಾರ್ಗಸುಸ್ಥಿತಿ । ಬಸವ ಶರಣೆನೆ ವಚನ
ರಚನಾಸಿದ್ಧಿವರ್ಧಿಸುಗು ॥"

"ಅಚ್ಚಶಿವನೊಂದಚ್ಚು ಭಕ್ತಿಯ । ನಚ್ಚು ಶರಣರ ಮಚ್ಚು ಹಿರಿಯರ
ಮೆಚ್ಚು ಸತ್ಯದ ಕೆಚ್ಚು ಪರವಾದಿಗಳೆದೆಯ ಕಿಚ್ಚು ॥
ಮುಚ್ಚರಿಸುವವರ ಬಿಚ್ಚು ಕುಜನರ । ಬೆಚ್ಚು ಶಾಂತಿಯ ಹೆಚ್ಚು ಧೂರ್ತರ
ಕೊಚ್ಚು ಕಲೆತನದಚ್ಚು ಸುಖಕಣೆ ಮುಚ್ಚುಮರೆಯಿಲ್ಲ ॥"

ಎಂದು ಸ್ತುತಿಸುತ್ತಾನೆ. ಇವನ ಬಂಧ ಪ್ರೌಢವಾಗಿಯೂ ರಮಣೀಯವಾಗಿಯೂ ಇದೆ.

ಪದ್ಮಣಾಂಕ : ಪದ್ಮಣಾಂಕನ (೧೩೮೫) "ಪದ್ಮರಾಜ ಪುರಾಣ" ಇತಿಹಾಸ ದೃಷ್ಟಿಯಿಂದ ಮಹತ್ತ್ವವಾದ ಗ್ರಂಥ. ನರಸಿಂಹ ಬಲ್ಲಾಳನ ಮಂತ್ರಿಯಾಗಿದ್ದ ಪದ್ಮರಸನು ಅರಸನಿಂದ ಹನ್ನೆರಡು ಸಾವಿರ ವರಹಗಳನ್ನು ಕೆರೆ ಕಟ್ಟಿಸುವುದಕ್ಕೆಂದು ತೆಗೆದುಕೊಂಡು ವಿಟಜಂಗಮನಿಗೆ ಕೊಟ್ಟುಬಿಡುತ್ತಾನೆ. ಧೊರೆಗೆ ಸಂಶಯಹುಟ್ಟಿ ಪ್ರಶ್ನಿಸಲು ಕೆರೆಯನ್ನು ತನ್ನ ಪವಾಡ ಬಲದಿಂದ ನಿರ್ಮಾಣಮಾಡಿ ತೋರಿಸುತ್ತಾನೆ. ಇದಕ್ಕೇ ಅವನಿಗೆ ಕೆರೆಯ ಪದ್ಮರಸ ಎಂಬ ಹೆಸರು ಬಂದುದು. ತನ್ನ ಕಾವ್ಯದ ಹೆಚ್ಚಳವನ್ನು ಈ ರೀತಿ ಹೇಳಿಕೊಂಡಿದ್ದಾನೆ

"ರಸದಾಳಿಯೆಸೆವ ಪಾಲ್ಪೊನಲೊ ಸೊಗಯಿಪ ಪೊಚ್ಚ
ಪೊಸಜೇನ ಸೋನೆಯೋ ಹುಣಿಮೆಯ ಸಸಿಯ ಬ
ಟ್ಟೊಸದರ್ಪ ಪರಿತರ್ಪ ದಿವ್ಯಾಮೃತದ ತೊರೆಯೊ ಪಾಲ್ಗಡಲುವಿನ
ಮೇರೆದಪ್ಪೇ ॥
ಒಸೆದುದಾಂಗುಡಿಯಿಟ್ಟು ಪಸರಿಸಿತೊ ಈ ಕೃತಿಯ
ರಸವೊ ಪೇಳೆಂದೆಲ್ಲ ರಸಿಕರಾನಂದಿಸಂ
ತೆಸಗುವುದು ತದ್ವಿಧಿಯೊಳೆಸಗದಿರ್ದೊಡೆ ಬಯ್ವರೇ ಬಡಿವರೇ ಜಡಿವರೇ ॥"

"ನುಡಿಬೆಡಗಂ ಬೀರೆ ರೀತಿವಿಖ್ಯಾತಿಯಂ
ನುಡಲಿಡೆ ಚಮತ್ಕಾರದ ಮಮ ಸತ್ಕಾರಮಂ
ಸಡಗರಿಸೆ ಮೋಹನಂ ಮೋಹರಿಸೆ ಗಾಡಿಪರಿದಾಡೆ ಪೊಸದೇಸಿಸೂಸೆ ॥

ಕಡುಜಾಣ್ಮೆ ಕಯ್ಗುಣ್ಮೆ ಮೃದುಪದಂ ಸಂಪದಮು
ನಡರೆ ಭಾವಂ ಸತ್ತ್ರಭಾವಮುಂ ಕಯ್ಗೆಯ್ಯೆ
ಪಡೆದುಕೃತಿಯುಂ ಶಿವಾರ್ಪಿತವನೆಸಗುವ ಸಿಂನಸ್ಸೈಪಿಂಗೆ ಸಾಟಿಯುಂಟೆ ॥"

ಎಂದು ಸಕಲ ಕಲಾಪ್ರವೀಣರಾದಖಿಳ ಬುಧವೃಂದಂ ಪೊಗಳೆ ಕಾವ್ಯವನ್ನು ರಚಿಸಿರುವುದಾಗಿ ಹೇಳುತ್ತಾನೆ. ಪದ್ಮರಾಜ ಪುರಾಣದ ಸಂಪಾದಕರಾದ ಶ್ರೀ. ಬಿ. ಮಲ್ಲಾರಾಧ್ಯರು ಕಾವ್ಯದ ಗುಣವಿಮರ್ಶೆ ಮಾಡುತ್ತಾ "ಇದರ ಕವಿತಾಗಾಂಭೀರ್ಯವೂ, ವಾಗ್ವೈಖರಿಯೂ ಅಸಾಧಾರಣವಾದುವುಗಳು. ಇದರಲ್ಲಿ ಭಕ್ತಿರಸವು ಪ್ರಧಾನವಾಗಿದ್ದರೂ ಅಲ್ಲಲ್ಲಿ ಸಮಯೋಚಿತವಾಗಿ ಇತರ ರಸಗಳೂ ಪ್ರಕಟಿತವಾಗಿವೆ. ಸರ್ವಕಾವ್ಯ ಲಕ್ಷಣಗಳೂ ಇರುವುದರಿಂದ ಇದನ್ನು ಮಹಾಕಾವ್ಯವೆಂದೇ ಹೇಳಬೇಕು. ವರ್ಣಕ ಕವಿತ್ವವಾದಾಗ್ಯೂ ಪುರಾತನ ವಸ್ತುಕ ಕವಿತ್ವಗಳಲ್ಲಿ ಇದರಷ್ಟು ಉದ್ದಾನು ಗ್ರಂಥವು ಇದುವರೆಗೆ ಯಾವುದೂ ಹೊರಟಿಲ್ಲ" ಎಂಬ ಮಾತು ಉತ್ಪ್ರೇಕ್ಷೆಯೆನಿಸದಿರಲಾರದು. ಕವಿ ಪದ್ಮರಸ, ಹರಿಹರ, ರಾಘವಾಂಕರ ಜೀವನದಮೇಲೆ ಸ್ವಲ್ಪಮಟ್ಟಿಗೆ ಬೆಳಕು ಚೆಲ್ಲುತ್ತಾನೆಂಬುದೇ ಇದರ ಮುಖ್ಯಗುಣ. ಕವಿ ಹೇಳುವಂತೆ ಬಂಧ ಪ್ರೌಢವಾಗಿ ಬುಧರ ಮೆಚ್ಚುಗೆಗೆ ಪಾತ್ರವಾಗಿದೆ.

ಪ್ರೌಢದೇವರಾಯನ ಕಾಲ : ಬಸವಣ್ಣನವರ ಕಾಲವನ್ನು ವೀರಶೈವ ಸಾಹಿತ್ಯದ ಸ್ವರ್ಣಯುಗವೆಂದು ಕರೆಯಬಹುದಾದರೆ ಪ್ರೌಢದೇವರಾಯನ ಕಾಲ (೧೪೨೯-೪೬) ವನ್ನು ವೀರಶೈವ ಸಾಹಿತ್ಯದ ಪುನರುಜ್ಜೀವನ ಯುಗವೆಂದು ಹೆಸರಿಸಬಹುದು. ಪ್ರೌಢದೇವರಾಯನಿಗೆ ಇಮ್ಮಡಿ ದೇವರಾಯನೆಂದೂ, ಪ್ರತಾಪದೇವರಾಯ, ಅಭಿನವ-ವೀರದೇವರಾಯನೆಂಬ ಹೆಸರುಗಳೂ ಗಜವೇಂಟೆಕಾರನೆಂಬ ಬಿರುದೂ ಇದ್ದವು. ಈ ರಾಯನ ಆಳಿಕೆಯ ಬಹುಭಾಗ ಶಾಂತಿಯಿಂದ ಕಳೆದುದರಿಂದ ಅವನು ಸಾಹಿತ್ಯ, ಧರ್ಮಗಳ ಕಡೆಗೆ ಹೆಚ್ಚು ಲಕ್ಷ್ಯ ಕೊಡುವಂತಾಯಿತು. ರಾಯನು ಸಮಧರ್ಮ ಸಮದರ್ಶಿಯೂ ಸುಸಂಸ್ಕೃತನೂ ಆಗಿದ್ದುದರಿಂದ ವೀರಶೈವ, ಜೈನ, ಬ್ರಾಹ್ಮಣ ಕವಿಗಳು ಅವನ ಆಶ್ರಯದಲ್ಲಿ ವಿರಾಜಿಸಿದರು. ಪರಮ ವೀರಶೈವ ಶಿರೋಮಣಿಗಳಾದ ಲಕ್ಕಣ್ಣ ದಂಡೇಶನೂ, ಜಕ್ಕಣಾರ್ಯನೂ ಇವನ ಮಂತ್ರಿ

ಗಳಾಗಿದ್ದುದರಿಂದ ವೀರಶೈವ ಸಾಹಿತ್ಯಕ್ಕೆ ಹೊಸ ಇಂಬು ದೊರಕಿತು. ಕಲ್ಲಮಠದ ಪ್ರಭುದೇವ, ಕರಸ್ಥಲದ ನಾಗಿದೇವ, ವೀರಣ್ಣೊಡೆಯ ಮೊದಲಾದ ೧೦೧ ವಿರಕ್ತರು ವರ್ಧಿಸಿ ಪ್ರಾಯಶಃ ಅನುಭವಮಂಟಪದಂತಹ ಒಂದು ಸಂಸ್ಥೆಯನ್ನು ನಡೆಸಿದರು.

೧. **ಮಹಾಲಿಂಗದೇವ** (೧೪೨೫) ನೂರೊಂದು ವಿರಕ್ತರಲ್ಲಿ ಮಹಾಲಿಂಗದೇವನು ಪ್ರಧಾನಸ್ಥಾನ ಪಡೆದಿದ್ದಂತೆ ಕಂಡುಬರುತ್ತದೆ. ಇವನ ಶಿಷ್ಯನಾದ ಕುಮಾರ ಬಂಕನಾಥ ಜಕ್ಕಣಾರ್ಯನಿಗೆ ಗುರುವಾಗಿದ್ದುದರಿಂದ ಇವನ ಪ್ರಭಾವ ಬಹಳ ಹೆಚ್ಚಿನದಾಗಿರಬೇಕು. ತನ್ನ ಷಟ್ಸ್ಥಲ ವಿವೇಕವೆಂಬ ಗ್ರಂಥಾಂತ್ಯದಲ್ಲಿ "ಮಹಾಲಿಂಗದೇವರು ತಮ್ಮ ನಿಜಶಿಷ್ಯ ಭಕ್ತಿಭಂಡಾರಿ ಜಕ್ಕಣಾರ್ಯಂಗೆ ಸತ್ತ್ರೀವ ಮಹಾನುಭಾವ ಸಂಬೋಧೆಯ ಸಂಬಂಧ ನಿರೂಪಣಕಾರಣಾರ್ಥಂ ವಿರಚಿತಮಪ್ಪ ಪ್ರಭುದೇವರ ಷಟ್ಸ್ಥಲದ ಟೀಕು" ಎಂದು ಹೇಳಿದ್ದಾನೆ. ಇವನಿಗೆ 'ಪರಮ ವೀರಶೈವಾಗಮಾಚಾರ್ಯ' 'ವಾರಣಾಂಶೀಂದ್ರ' ಮೊದಲಾದ ಬಿರುದುಗಳು ಇದ್ದುವು. ಇವನು ಏಕೋತ್ತರ ಶತಸ್ಥಲ, ಷಟ್ಸ್ಥಲ ವಿವೇಕ (ಪ್ರಭುದೇವರ ಷಟ್ಸ್ಥಲ ಜ್ಞಾನಚಾರಿತ್ರ) ಗಳನ್ನು ಬರೆದಿದ್ದಾನೆ.

೨. **ಕುಮಾರ ಬಂಕನಾಥ** (೧೪೩೦) ಇವನು ಮಹಾಲಿಂಗದೇವನ ಶಿಷ್ಯ, ಜಕ್ಕಣಾರ್ಯನ ಗುರು. 'ಷಟ್ಸ್ಥಲೋಪದೇಶ, ಪ್ರಭುದೇವರ ಟೀಕಿನ ವಚನಗಳನ್ನು ಬರೆದಿದ್ದಾನೆ.

೩. **ಕಲ್ಲಮಠದ ಪ್ರಭುದೇವ** (೧೪೩೦) ಇವನು ಲಿಂಗಲೀಲಾ ವಿಲಾಸ ಚಾರಿತ್ರ, ಪ್ರಭುದೇವರ ಮಂತ್ರಗೋಪ್ಯದ ಟೀಕೆಗಳನ್ನು ಬರೆದಿದ್ದಾನೆ.

೪. **ಕರಸ್ಥಲದ ನಾಗಿದೇವ** (೧೪೩೦) ಕರಸ್ಥಲದ ವೀರಣ್ಣೊಡೆಯನ ಶಿಷ್ಯ. ಕರಸ್ಥಲದ ನಾಗಿದೇವನ ತ್ರಿವಿಧಿಯೆಂಬ ಗ್ರಂಥವನ್ನು ಬರೆದಿದ್ದಾನೆ.

೫. **ಗುರುಬಸವ** (೧೪೩೦) ಸಪ್ತಕಾವ್ಯ ಕರ್ತೃವೆಂದು ಹೆಸರು ಪಡೆದಿದ್ದಾನೆ. ಚೆನ್ನಬಸವ ಪುರಾಣದ ಕಾಲಜ್ಞಾನ ಸಂಧಿಯಲ್ಲಿ ಇವನು ಮಾಡಿದ ಕೆಲವು ಪವಾಡಗಳ ವರ್ಣನೆಯಿದೆ. ಅಧಿಕತರ ವಾದದಿಂದ ಶಾರದೆಯ ಪೀಠವನ್ನೇರಿದನೆಂದು ವಿರೂಪಾಕ್ಷ ಪಂಡಿತ ವರ್ಣಿಸಿದ್ದಾನೆ. ಶಿವಯೋಗಾಂಗ

ಭೂಷಣ, ಸದ್ಗುರು ರಹಸ್ಯ, ಕಲ್ಯಾಣೇಶ್ವರ, ಸ್ವರೂಪಾಮೃತ, ವೃಷಭ ಗೀತೆ, ಅವಧೂತಗೀತೆ, ಮನೋವಿಜಯ ಕಾವ್ಯ ಮೊದಲಾದ ಏಳು ಗ್ರಂಥ ಗಳನ್ನು ಬರೆದಿದ್ದಾನೆ. ಆಧ್ಯಾತ್ಮಿಕ ಸಾಧನೆಗೆ ಮನೋನಿಗ್ರಹವೇ ಮೂಲ ವಾದುದರಿಂದ ಅದನ್ನೇ ಕುರಿತು ಮನೋವಿಜಯದಲ್ಲಿ ಕವಿ ಪ್ರಸ್ತಾಪಿಸಿ ದ್ದಾನೆ. ಅಧ್ಯಾತ್ಮ ಗ್ರಂಥಗಳು ಶುದ್ಧಸಾಹಿತ್ಯವಾಗುವುದಿಲ್ಲವೆಂಬ ಭಾವನೆ ಗುರುಬಸವನ ಕಾಲಕ್ಕೂ ಇದ್ದಿತೆಂದು ಕಾಣುತ್ತದೆ. ಅದಕ್ಕೇ ಕವಿ

"ರಸಭಾವಲಂಕಾರ
ದೆಸಕವಿಲ್ಲೆಂದು ಭಾ
ವಿಸಬೇಡ ಭಾವುಕರ್ ಭಾವಿಸುವೊಡೆ ॥
ರಸವೆ ಚಿದ್ರಸ ಭಾವ
ದೆಸೆ ಪೂರ್ಣ ನಿಜಭಾವ
ವೆಸೆವಲಂಕಾರವಾನಂದದಿರವು ॥"

ಎಂದು ಹೇಳಿದ್ದಾನೆ. ಯಾವ ವಿಷಯವನ್ನಾದರೂ ಒಳಹೊಕ್ಕು ನೋಡಿ ಅದರ ಸತ್ತ್ವವನ್ನರಿಯಬೇಕೆಂಬ ತತ್ತ್ವವನ್ನು ಕವಿ ಸುಂದರವಾಗಿ ಪ್ರತಿಪಾದಿಸಿದ್ದಾನೆ

"ಮೊದಲೊಮ್ಮೆ ಕೇಳ್ದೊಡರಿ
ಸಿದ ಪಾಂಗಿನಂತಿಹುದು
ಪದದೊಳ್ಪು ಬಿರ್ಚಿ ಭಾವಿಸಿದಲ್ಲದೆ ॥
ಹೃದಯ ಕಾಣಿಸದೆಂಬ
ವಿಧನರಿದು ಭಾವಜ್ಞ
ರಿದ ನೀವೆ ನಿಮ್ಮರಿವಿನಂದಿರಿವುದು ॥"

ವಿಷಯ ವಿಮರ್ಶನ ದೃಷ್ಟಿಯಿಂದಲ್ಲವೆ ಭಾಷಾದೃಷ್ಟಿಯಿಂದಲೂ ಮನೋವಿಷಯ ಉತ್ತಮ ಗ್ರಂಥ. ಅನವಶ್ಯಕವಾಗಿ ಸಂಸ್ಕೃತ ತುಂಬದೆ ಕನ್ನಡದ ನುಡಿಹಿಡಿಗಳನ್ನೇ ಅಳವಡಿಸಿಕೊಂಡು, ಹೊಸ ಶಬ್ದಗಳನ್ನು ಸೃಷ್ಟಿಸಿಕೊಂಡು, ಹಳೆಯ ಶಬ್ದಗಳಿಗೆ ಅರ್ಥವಿಸ್ತಾರವನ್ನು ಕಲ್ಪಿಸಿ ವಸ್ತುವಿ ಗನುಗುಣವಾದ ಶೈಲಿಯನ್ನು ಕವಿ ಅಳವಡಿಸಿಕೊಂಡಿದ್ದಾನೆ.

ಇದಕ್ಕೆ ವಿರಕ್ತ ತೋಂಟದಾರ್ಯನು (೧೫೬೦) "ಚಂದ್ರಿಕಾ" ಎಂಬ ವ್ಯಾಖ್ಯಾನವನ್ನು ಬರೆದಿದ್ದಾನೆ.

೬. ಲಕ್ಕಣ್ಣ ದಂಡೇಶ : (೧೪೩೦) ಪ್ರೌಢದೇವರಾಯನ ಆಪ್ತಮಿತ್ರ ಮತ್ತು ಮಹಾ ಪ್ರಧಾನಿ. ೧೪೪೩ರಲ್ಲಿ ವಿಜಯನಗರದ ಆಸ್ಥಾನಕ್ಕೆ ಪರ್ಶಿಯಾ ದೇಶದ ರಾಯಭಾರಿಯಾಗಿ ಬಂದ ಅಬ್ದುರ್ ರಜಾಕನು ಇವನನ್ನು ಮಹಾ ವೀರನೆಂದೂ ಕವಿಯೆಂದೂ ಸಂಬೋಧಿಸಿದ್ದಾನೆ. ಇವನು ಶಿವತತ್ತ್ವ ಚಿಂತಾ ಮಣಿಯೆಂಬ ಷಟ್ಪದಿ ಕಾವ್ಯವನ್ನು ಬರೆದಿದ್ದಾನೆ.

೭. ಜಕ್ಕಣಾರ್ಯ : (೧೪೩೦) ಪ್ರೌಢದೇವರಾಯನ ದಂಡನಾಯಕ ನಾಗಿದ್ದನು. ಭಕ್ತಿಭಂಡಾರಿಯೆಂಬ ಬಿರುದೂ ಇವನಿಗಿತ್ತು. ವೀರಶೈವ ಗ್ರಂಥಗಳ ರಚನೆಗೆ ಹೇರಳವಾಗಿ ಹಣ ವ್ಯಯಮಾಡಿದನೆಂದು ಗುಬ್ಬಿ ಮಲ್ಲ ಣಾರ್ಯನು ವೀರಶೈವಾಮೃತ ಪುರಾಣದಲ್ಲಿ ಹೇಳುತ್ತಾನೆ. 'ನೂರೊಂದು ಸ್ಥಲ'ವೆಂಬ ಗ್ರಂಥವನ್ನು ಬರೆದಿದ್ದಾನೆ.

೮. ಚಾಮರಸ : (೧೪೩೦) ಹರಿಹರ ರಾಘವಾಂಕರಾನಂತರ ನಮ್ಮ ಮನಸ್ಸಿನ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡುವ ಕವಿಯೆಂದರೆ ಪ್ರಭುಲಿಂಗಲೀಲೆಯ ಕರ್ತೃವಾದ ಚಾಮರಸ. ಅಭಿಮಾನಿಗಳಾದ ಕೆಲವು ಕವಿಗಳು ಚಾಮರಸ, ಕುಮಾರವ್ಯಾಸರ ಬಗ್ಗೆ ಕೆಲವು ಕಥೆಗಳನ್ನು ಕಟ್ಟಿ ಚಾಮರಸನ ಹೆಚ್ಚುಗಾರಿಕೆಯನ್ನು ಮೆರೆಸಲು ಪ್ರಯತ್ನಿಸಿದ್ದಾರೆ. ಅದಕ್ಕಾಗಿ ಕುಮಾರವ್ಯಾಸ ಚಾಮರಸನ ತಂಗಿಯ ಗಂಡನೆಂದೂ, ಅಸೂಯಾಬದ್ಧನಾಗಿ ತನ್ನ ಹೆಂಡತಿಗೆ ಹೇಳಿ ಚಾಮರಸನ ಭಾರತವನ್ನು ಸುಡಿಸಿದನೆಂದೂ ದಂತಕಥೆ ಹುಟ್ಟಿಕೊಂಡಿತು. ಚಾಮರಸನ ಕಾವ್ಯಶಕ್ತಿ ಇಂತಹ ದಂತಕಥೆಗಳ ಮೇಲೆ ನಿಲ್ಲಬೇಕಾಗಿಲ್ಲ. ಇವನು ನೂರೊಂದು ವಿರಕ್ತರಲ್ಲಿ ಒಬ್ಬನಾಗಿದ್ದನು. ಪ್ರೌಢ ರಾಯನ ಕಾವ್ಯದಲ್ಲಿ ಜಕ್ಕಣಾರ್ಯನು ಇವನಿಗೆ ಮಂತ್ರಿಪದವಿಯನ್ನು ಕೊಟ್ಟು ತಾನು ವಿಶ್ರಾಂತನಾದನೆಂದು ಹೇಳಿರುವುದಕ್ಕೆ ಸಾಕಷ್ಟು ಐತಿಹಾಸಿಕ ಆಧಾರ ದೊರೆಯುವುದಿಲ್ಲ. ಚಾಮರಸನಿಗೆ 'ಅನ್ಯಮತ ಕೋಳಾಹಳ' 'ವೀರಶೈವ ಮತ ಸಾರೋದ್ಧಾರ' ಎಂಬ ಬಿರುದುಗಳಿದ್ದ ಹಾಗೆ ತಿಳಿದುಬರುತ್ತದೆ.

ವೀರಶೈವ ಕವಿಗಳಲ್ಲಿ ಚಾಮರಸನಿಗೆ ಬಹಳ ದೊಡ್ಡ ಸ್ಥಾನವನ್ನು ಕೊಡಬೇಕಾಗುತ್ತದೆ. ವಸ್ತುವನ್ನು ಅವನು ಆರಿಸಿರುವುದೂ ಅದನ್ನು ನಿರ್ವಹಿಸಿರುವುದೂ ಅತ್ಯಾಧುನಿಕ ರೀತಿಯಲ್ಲಿದೆ. ತನ್ನ ಆರಾಧ್ಯಮೂರ್ತಿ

ಯಾದ ಅಲ್ಲಮಪ್ರಭುವಿನ ಅದ್ಭುತ ಜೀವನವನ್ನು ಒಳಗಣ್ಣಿನಿಂದ ನೋಡಿ ಸರಳವೂ ಭಕ್ತಿಪುರಸ್ಸರವೂ ಆದ ರೀತಿಯಲ್ಲಿ ನಿರೂಪಿಸಿದ್ದಾನೆ. ಒಣ ಪಾಂಡಿತ್ಯ ಪ್ರದರ್ಶನವಾಗಲಿ, ಪುರಾಣ ಕಥೆಗಳ ಕಂಥೆಯಾಗಲಿ, ಅನವಶ್ಯಕ ವರ್ಣನೆಗಳಾಗಲಿ ಇವನ ಕಾವ್ಯದಲ್ಲಿ ಕಂಡುಬರುವುದಿಲ್ಲ.

ಚೋರಬಸವ ಚರಿತ್ರಕಾರನಾದ ಶಂಕರಕವಿ (೧೭೬೩) ಪ್ರಭುಲಿಂಗ ಲೀಲೆಯ ಕಥಾವಸ್ತುವನ್ನು ಹೀಗೆ ಸಂಗ್ರಹಿಸಿದ್ದಾನೆ

"ಕಲಿವೂರ ನಿರಹಂಕಾರ ಸುಜ್ಞಾನಿಗಳಿಗೆ ನಿರ್ಮಾಯನೆಂಬ ಗಣ ನಾಥನು ಪ್ರಭುಸಾಮದಿಂದ ಮಗನಾಗಿ ಹುಟ್ಟಿ ಪದ್ಮಿನಿಯೆಂಬ ಹೆಂಡತಿ ಯೊಡನೆ ರಾಜ್ಯವಾಳುತ್ತಿದ್ದನು. ಗುರುಮಹೇಶನ ಉಪದೇಶದಿಂದ ವಿರಕ್ತ ನಾಗಿರಲು ಪಾರ್ವತಿ ಇವನನ್ನು ಅನುರಕ್ತನನ್ನಾಗಿ ಮಾಡಬೇಕೆಂದು ತಾಮಸದ ಕಳೆಯನ್ನು ಕಳುಹೆ ಅದು ಬನವಾಸೆಯ ಮಮಕಾರ ಮೋಹಿನಿ ಗಳಿಗೆ ಮಗಳಾಗಿ ಹುಟ್ಟಿತು. ಮಧುಕನಾಥನ ಆಲಯದಲ್ಲಿ ಮದ್ದಳೆಯನ್ನು ಬಾರಿಸುತ್ತಿದ್ದ ಇವನನ್ನು ನೋಡಿ ಮಾಯೆ ಮನಸೋತಳು. ಇವನು ವಶ ವಾಗದೆ ದೇಶಸಂಚಾರಮಾಡಿ ಗೊಗ್ಗಯ್ಯನಿಂದ ಸಮಾಧಿಯನ್ನು ತೆಗೆಯಿಸಿ ಅನಿಮಿಷನ ಲಿಂಗವ ತಳೆದು ಅವನಿಗೆ ಮುಕ್ತಿಯಿತ್ತು ಮುಕ್ತಾಯಕ್ಕನ ದುಃಖ ವನ್ನು ಬಿಡಿಸಿ ಸೊನ್ನಲಾಪುರದ ಸಿದ್ಧರಾಮನಿಗೆ ಉಪದೇಶಮಾಡಿ ಕಲ್ಯಾಣಕ್ಕೆ ಹೋಗಿ ಮರುಳಶಂಕರನಿಗೆ ಐಕ್ಯವನ್ನಿತ್ತು ಬಸವನ ಇಷ್ಟವಸಲಿಸಿ ಮಹಾ ದೇವಿಯ ಮುಕ್ತಳಮಾಡಿ ಗೋರಕ್ಷನಿಗೆ ಜ್ಞಾನವನರುಹಿದನು."

ಮೂಲಕಥೆ ಶಂಕರಕವಿಯ ಕೈವಾಡದಲ್ಲಿ ಅದಲು ಬದಲು ಹೊಂದಿದು ದನ್ನು ನೋಡಬಹುದು. ಪದ್ಮಿನಿ ವೃತ್ತಾಂತ ಬಂದು ಸೇರಿಕೊಂಡಿದ್ದಲ್ಲದೆ ಅಲ್ಲಮ ಮಾಯೆಯರ ಸಂಬಂಧ ಇಲ್ಲಿ ಮೂಲಕ್ಕೆ ವ್ಯತಿರೇಕವಾಗಿದೆ.

ಚಾಮರಸನ ಗುರಿಯೆಲ್ಲಾ ಅಲ್ಲಮನ ಮೇಲೆ, ಸಿದ್ಧಕುಲ ಸಾರ್ವ ಭೌಮನೂ, ಭಕ್ತಿ ಜ್ಞಾನ ವೈರಾಗ್ಯತೀತನೂ ಆದ ಈ ಮಹಾಪುರುಷ ಬಸವ, ಸಿದ್ಧರಾಮ, ಮುಕ್ತಾಯಕ್ಕ, ಗೋರಕ್ಷ ಮೊದಲಾದವರ ಮಾಯಾತೆರೆಗಳನ್ನು ಹರಿದು ಅವರನ್ನು ಆಧ್ಯಾತ್ಮ ಪಿಪಾಸುಗಳನ್ನಾಗಿ ಮಾಡಿದ 'ಪರುಷಕಲೆ'ಯ ವೃತ್ತಾಂತವೇ ಪ್ರಭುಲಿಂಗಲೀಲೆ. ಅಲ್ಲಲ್ಲಿ ಬಸವಾದಿ ಮಹಾವ್ಯಕ್ತಿಗಳನ್ನು

ತಂದುಕೊಂಡು ಪ್ರಭುವಿನ ಚಿತ್ರಕ್ಕೆ ಎಲ್ಲಿಯೂ ಕುಂದುಂಟಾಗದಂತೆ ತನ್ನ ಕಥೆಯನ್ನು ಬೆಳಸಿಕೊಂಡು ಹೋಗಿದ್ದಾನೆ. ಮಹಾಪುರುಷರ ಜೀವನಚರಿತ್ರೆಗಳನ್ನು ಬರೆಯುವವರಿಗೆ ಈ ಗ್ರಂಥ ಉತ್ತಮ ಮಾದರಿಯೆಂದಲ್ಲಿ ಅತ್ಯುಕ್ತಿಯಾಗಲಾರದು.

ಪ್ರಭುಲಿಂಗಲೀಲೆ ಶಾಂತಿರಸ ಪ್ರಧಾನವಾದದ್ದು. ಕವಿ ಅದ್ಭುತ, ಶೃಂಗಾರ ರಸಗಳನ್ನು ಸಮಯೋಚಿತವಾಗಿಯೂ, ಮಿತವಾಗಿಯೂ ಬಳಸಿಕೊಂಡಿದ್ದಾನೆ.

ಮಮಕಾರ, ಮೋಹಿನಿಯರ ಬಸುರಿನಲ್ಲಿ ರಾಜೀವಲೋಚನೆ, ಸಕಲ ಸಂಪನ್ನೆ, ಮಾಯೆ ಹುಟ್ಟಿದಳು.

"ಇತ್ತಲಿಂತೀ ಮಾಯೆ ಹುಟ್ಟಿದ
ಡತ್ತಲಖಿಳಬುಧವ್ರಜಂಗಳ
ಚಿತ್ತಗಳು ಪಲ್ಲಟಿಸಿ ಯಾಶಾಪಾಶ ವೆಗ್ಗಳಿಸಿ ‖
ಮುತ್ತು ನೆರೆತಿಹ ಜೀವಜಾಳಂ
ಗೆತ್ತಿ ಕಾಮಗ್ರಹ ವಿಕಾರತೆ
ಮುತ್ತಿ ಮುರುಟಿಸುತಿರ್ದುದೇನೆಂದೆಂಬನಚ್ಚರಿಯ ‖

ಉರ ತೊರೆದಡವಿಯೊಳಂ ಗಂಗಾ
ತೀರದೊಳು ಗಿರಿಗಹ್ವರಂಗಳ
ಘೋರತರ ಗುಹೆಗಳೊಳು ಜಲಪಂಚಾಗ್ನಿ ಮಧ್ಯದೊಳು ‖
ಧೀರಮುನಿಗಳು ದಿಟ್ಟಿಸಿದ್ಧರು
ದಾರ ಯೋಗೀಶ್ವರರು ಭಯದಲಿ
ಭೋರನೆದೆಗುಂದಿದರು ಮಾಯೆಯ ಜನನಕಾಲದಲಿ ‖

ಬಿತ್ತ ಬಿದಿರಿಡಿದಿರ್ದ ತರುಲತೆ
ಹುತ್ತ ಬೆಳೆದ ಸಮಾಧಿವಂತರು
ಚಿತ್ತ ಸಂಚಲವಾಗಿ ನೆನಹಿನ ನೇಮ ನೆಲಗೆಡಲು ‖
ಎತ್ತಲಿಂದೀ ಮಾಯೆ ಹುಟ್ಟಿತೆ
ನುತ್ತ ಚಿಂತಾಕ್ರಾಂತರಾಗಿರೆ
ಸತ್ಯಸಿಧಿ ದೂರ್ವಾಸನಾ ಪ್ರಸ್ತದಲಿ ಸುಳಿದ ‖"

ಮಹಾ ವಿರಾಗಿಗಳೂ, ಸಿದ್ಧರೂ, ಜ್ಞಾನಿಗಳೂ ಆದವರ ಚಿತ್ತ ಪಲ್ಲಟಿಸಿ ಹೋದುದನ್ನು ವರ್ಣಿಸುತ್ತಾ ಕವಿ ಅಲ್ಲಮದೇವರು ಅವಳನ್ನು ಹೇಗೆ ಗೆದ್ದನೆಂದು ತೋರಿಸಿ ಬಹಳ ಸುಂದರವಾದ ಚಿತ್ರ, ಪ್ರತಿಚಿತ್ರಗಳನ್ನು ಕೊಟ್ಟಿದ್ದಾನೆ.

ಕವಿಯ ಔಚಿತ್ಯಜ್ಞಾನಕ್ಕೆ ಅಲ್ಲಮನ ಸೌಂದರ್ಯ ವರ್ಣನೆಯೇ ಸಾಕಾಗಿದೆ. ಅದನ್ನು ಬೇಕಾದಷ್ಟು ಅವನು ಬೆಳಸುವುದಕ್ಕೆ ಅವಕಾಶ ವಿದ್ದರೂ

"ಧರಣಿಯೊಳು ಚಲುವಿಂಗೆ ತಾನೇ
ಬಿರಿದ ಕಟ್ಟಿದನೆಂಬ ಸೊಬಗಿನ
ಪುರುಷ ವೇಷದಲಲ್ಲಮ ಪ್ರಭುರಾಯ ನೆಸೆದಿರ್ದ ॥"

ಕಾವ್ಯದ ಉದ್ದಕ್ಕೂ ಕವಿ ಮಾತುಗಾರಿಕೆಯನ್ನು ಧಾರಾಳವಾಗಿ ಉಪ ಯೋಗಿಸಿಕೊಂಡಿದ್ದಾನೆ. ಇದು ಕಾವ್ಯದ ಪ್ರಲಂಬ ನಿರೂಪಣೆಯ ಬೇಸರ ವನ್ನು ಹೋಗಲಾಡಿಸುವುದಲ್ಲದೆ ಪಾತ್ರಗಳಿಗೆ ಸಜೀವತೆಯನ್ನುಂಟುಮಾಡು ತ್ತದೆ. ಮಹಾದೇವಿಯಕ್ಕನಿಗೂ ಕೌಶಿಕನಿಗೂ ಆದ ಸಂಭಾಷಣೆಯಲ್ಲಿ

"ನಮಗೆ ಶಿವಭಕ್ತಿಯೆನು ಮಾಡುವ
ಸಮಯವಳವಡದೆನಲು ನೃಪತಿಗೆ
ರಮಣಿ ನುಡಿದಳು ನಮಗೆ ನಿಮ್ಮಯ ಸಂಗವಳವಡದು ॥"

ನವೀನತೆ, ಸರಳತೆ, ಕಥಾವಿಸ್ತಾರ ರೀತಿ, ಔಚಿತ್ಯಜ್ಞಾನಗಳೆಲ್ಲ ದೃಷ್ಟಿ ಯಿಂದಲೂ ಪ್ರಭುಲಿಂಗಲೀಲೆ ಕನ್ನಡದ ಉತ್ಕೃಷ್ಟ ಕಾವ್ಯಗಳಲ್ಲೊಂದೆಂದು ನಿಸ್ಸಂದೇಹವಾಗಿ ಹೇಳಬಹುದು. ಪ್ರಭುಲಿಂಗಲೀಲೆ ಕನ್ನಡದ ಮೇಲೆ ಮಾತ್ರವಲ್ಲದೆ ತಮಿಳು, ತೆಲುಗು, ಸಂಸ್ಕೃತ, ಮರಾಟಿ ಭಾಷೆಗಳ ಮೇಲೆ ತನ್ನ ಪ್ರಭಾವಮುದ್ರೆಯನ್ನೊತ್ತಿತು. ತಿರುಮವಣ್ಣಾಮಲೆಯ ಶಿವಪ್ರಕಾಶ ಸ್ವಾಮಿ ಅದನ್ನು ತಮಿಳಿಗೂ, ಪಿಡುಪರ್ತಿ ಸೋಮನಾಥ, ಪಿಡುಪರ್ತಿ ಬಸವಕವಿಗಳು ಅದನ್ನು ತೆಲುಗಿಗೂ, ಹಂಪೆಯ ವಿರೂಪಾಕ್ಷ ಪಂಡಿತ (ಪಿಡುಪರ್ತಿ ಸೋಮನಾಥನೇ ಇರಬಹುದೆಂದು ಕೆಲವರ ಮತ) ಅದನ್ನು ಸಂಸ್ಕೃತಕ್ಕೂ, ಬ್ರಹ್ಮದಾಸ ಮರಾಟಿಗೂ ಅನುವಾದ ಮಾಡಿದ್ದಾರೆ.

ಮೊಗ್ಗೆಯ ಮಾಯಿದೇವ (೧೪೩೦) ಶತಕತ್ರಯಕಾರನೆಂದು ಪ್ರಸಿದ್ಧನಾಗಿರುವ ಮೊಗ್ಗೆಯ ಮಾಯಿದೇವನೂ ಇದೇ ಕಾಲಕ್ಕೆ ಸೇರಿದವನು. ವೀರಶೈವ ಸಿದ್ಧಾಂತಕ್ಕೆ ಖಚಿತವಾದ ಅರ್ಥ ನಿರ್ಣಯಮಾಡುವುದಕ್ಕೆ ಮಾಯಿದೇವನು ಯತ್ನಿಸಿದ ಹಾಗೆ ಕಾಣಬರುತ್ತದೆ. ಇವನ ಶತಕಗಳಲ್ಲಿ ಅಪಾರ ಅನುಭಾವವೂ ಪಾಂಡಿತ್ಯವೂ ಕಂಡುಬರುತ್ತದೆ. ಶಿವಾಧವಶತಕ, ಶಿವಾವಲ್ಲಭ ಶತಕ, ತ್ರಿಪುರೀಶ್ವರ ಶತಕಗಳನ್ನಲ್ಲದೆ ಅನುಭವಸೂತ್ರ, ಪ್ರಭುಗೀತೆ, ಏಕೋತ್ತರ ಶತಸ್ಥಲ ಷಟ್ಪದಿ, ಷಟ್ಸ್ಥಲ ಗದ್ಯ ಗ್ರಂಥಗಳನ್ನು ಬರೆದಿದ್ದಾನೆಂದು ಕವಿಚರಿತೆಕಾರರ ಮತ.

ಬೊಮ್ಮರಸ : ಕಾವ್ಯದೃಷ್ಟಿಯಿಂದ ಬೊಮ್ಮರಸನ (೧೪೫೦) 'ಸೌಂದರ ಪುರಾಣ'ಕ್ಕೆ ಬಹಳ ಮಹತ್ತ್ವ ಕೊಡಬೇಕಾಗುತ್ತದೆ. ಬೊಮ್ಮರಸ ಅರವತ್ತು ಮೂವರು ಪುರಾತನರಲ್ಲಿ ಒಬ್ಬನಾದ ಸೌಂದರ ನಂಬಿಯಣ್ಣನ ಕಥೆಯನ್ನು ವಸ್ತುವಾಗಿಟ್ಟುಕೊಂಡರೂ ತನ್ನ ಕಾವ್ಯರಸವರ್ಷಕ್ಕೆ ಹೆಚ್ಚು ಪ್ರಾಧಾನ್ಯಕೊಟ್ಟಿದ್ದಾನೆ. ಪುರಾತನರ ತ್ರಿವಿಧಿಯಲ್ಲಿ ನಿಜಗುಣ ಶಿವಯೋಗಿ ಹೇಳಿರುವಂತೆ

"ತ್ರಿಣಯನಂ ತಾನೊಲಿದ ಗಣಿಕೆಯರ ಮನೆಗೆ ಕುಂ
ಟಣಿಯಾಗಿ ನಡೆಸಿದಧಿಕ ನಂಬಿಗೆ ಮನಂ
ದಣಿವಂತೆ ನಮಿಸಿ ನಲಿಯುವೆನು ॥"

ಎಂಬ ಅಂಶದ ಕಡೆಗೇ ಕವಿ ಹೆಚ್ಚು ಲಕ್ಷ್ಯ ಕೊಟ್ಟಿದ್ದಾನೆ. ತನ್ನ ಕಾವ್ಯಲಕ್ಷಣವನ್ನು ಹೇಳಿಕೊಳ್ಳುವ ಸಂದರ್ಭದಲ್ಲಿ ಈ ಅಭಿಪ್ರಾಯವನ್ನು ಕವಿಯೇ ಸಮರ್ಥಿಸುತ್ತಾನೆ.

"ಕಣ್ಗೆ ಚೆಲ್ವಾಗಿ ನಸುಬಿರಿದ ಜಾಜಿಯ ನನೆಯ
ತಣ್ಗಂಪನುಂಡು ತಣ್ಣನೆ ತಣಿದು ಕಡುಸೊಕ್ಕಿ
ನುಣ್ಗೊರಲಿನಿಂಚರಂ ಪೊರಪೊಣ್ಮೆ ಸುಳಿವ ಮರಿದುಂಬಿಯ ವಿಲಾಸದಂತೆ ॥
ಬಿಣ್ಗೊನರ ಪೇರುದಿಂಮಾಮರದ ಪೊದರ ಮೇ
ಗಣ್ಗೆ ನೆಗೆದಳೆದಳಿರ ಕರ್ದುಕಿ ಮೆಲ್ಲುಲಿದೋರ್ಪ
ಪೆಣ್ಗೋಗಿಲೆಯ ಲೀಲೆಯಂತೆ ರಸಿಕರ್ಗೆ ನಲವೀವುದೀ ದಿವ್ಯಕಾವ್ಯಂ ॥"

ರಸಿಕ ಸಂಕುಳ ತಲೆದೂಗಲೆಂದೂ, ಸರಸಕವಿವರರ ಕಿವಿಗೆ ರಂಜಿಸುವ ಭೂಷಣವಾಗಲೆಂದೂ ಕವಿ ಈ ಕಾವ್ಯವನ್ನು ವಿರಚಿಸಿದ್ದಾನೆ. ತನ್ನ ಶೈಲಿಯ ಬಗ್ಗೆ ಕವಿ ಅಮೋಘವಾದ ಮಾತನ್ನು ಹೇಳಿದ್ದಾನೆ

"ಇಂಬುವಡೆದಿಹ ಲಚ್ಚಗನ್ನಡದ ನುಡಿ ತಪ್ಪ
ವಂ ಬಹುಳದೇಶೀಯರಸ ಭಾವವರ್ಥ ಚಿ
ತ್ರಂ ಬಗೆಯ ಬಂದಿವಿಡಿವತಿಲಲಿತ ಪದಬಂಧ ಚದುರು ಬಿನ್ನಣ ಬೆಡಂಗೂ ॥
ತುಂಬಿ ತುಳ್ಕಾಡುತಿರೆ ನಲವು ಮಿಗೆ ಕಾವ್ಯಮುಖ
ದಿಂ ಬಣ್ಣಿಸುವೆನು ಶಿವಶರಣರಾಹಾ ಎನಲು
ನಂಬಿಯನು ಮಹಿಮಾವಲಂಬಿಯನು ಸಾಕ್ಷಾತ್ತ್ರಿಯಂಬಕ ಪ್ರತಿಬಿಂಬಿಯಾ॥"

ಡೆಂಕಣಿಕೋಟೆಯ ಪುರವರಾಧೀಶನಾದ ತಿಪ್ಪಭೂಪಾಲನ ಆಜ್ಞಾನುಸಾರವಾಗಿ ಅವನ ಆಸ್ಥಾನ ಕವಿಯಾದ ಬೊಮ್ಮರಸನು ಈ ಕಾವ್ಯವನ್ನು ಬರೆದನೆಂದು ತಿಳಿಯಬರುತ್ತದೆ. ಹರಿಹರನನ್ನು ಸ್ಮರಿಸುವುದರಿಂದ ಅವನ ನಂಬಿಯಣ್ಣನ ರಗಳೆಯನ್ನು ಕವಿ ಕಂಡಿರಬಹುದೆಂದೂ ಆದರಿಂದ ಸ್ಫೂರ್ತಿಯನ್ನು ಪಡೆದಿರಬಹುದೆಂದೂ ಊಹಿಸಬಹುದು.

ಭಾರತೇಶ ವೈಭವಕಾರನಾದ ರತ್ನಾಕರವರ್ಣಿ ಹೇಳುವಂತೆ

"ಆಗಮವಧ್ಯಾತ್ಮವಳವಟ್ಟ ಶೃಂಗಾರ
ತ್ಯಾಗಭೋಗದ ಮೋಡಿ ಮೆರೆಯೆ ॥
ಭೋಗಿ ಯೋಗಿಗಳೆದೆ ಜುಮ್ಮು ಜುಮ್ಮೆನೆ ನೇಮ
ವಾಗಿ ಸೊಲ್ಲಿಸುವೆ ನಾಲಿಸಿರೊ ॥"

ಎಂಬಂತೆ ಸೌಂದರ ಪುರಾಣವೂ ರಚಿತವಾಗಿದೆ. ನಂಬಿಯಣ್ಣನ ರಗಳೆಯಲ್ಲಿ ಹರಿಹರ ಭಕ್ತಿಗೆ ಪ್ರಾಧಾನ್ಯಕೊಟ್ಟಂತೆ ಬೊಮ್ಮರಸ ಸೌಂದರ ಪುರಾಣದಲ್ಲಿ ಶೃಂಗಾರಕ್ಕೆ ಪ್ರಾಧಾನ್ಯ ಕೊಟ್ಟಿದ್ದಾನೆ. ಇವನ ವರ್ಣನೆಗಳು ಉಪಮೆಗಳು ರಸಿಕ ಹೃದಯೋಲ್ಲಾಸಿಯಾಗಿವೆ. ನವರಸಾಲಂಕಾರಮೂರ್ತಿಯಾದ ಪರಶಿವನನ್ನು

"ಗಿರಿಜೆಯಿಂ ಶೃಂಗಾರ ಭೂತಗಣದಿಂ ಹಾಸ್ಯ
ಕರುಣಾರಸಂ ನಿಜಾಪಾಂಗದಿಂ ಪಣೆಗಣ್ಣಿ
ನುರುತರಾದ್ಭುತವಾಯುಧವೆ ಧಯಂ ವಿಷಕಂಠದಿಂ ರೌದ್ರ
ಜಡೆಮುಡಿಯೊಳು ॥
ಧರಿಸಿದ ಸುಧಾಂಶುವಿಂ ಶಾಂತಂ ಗಜಾಜಿನಾಂ
ಬರಕಪಾಲಸ್ಥಿಯಿಂ ಭೀಭತ್ಸ ರುದ್ರಗಣ
ದಿರವಿನಿಂ ವೀರರಸಮೆಸೆಯೆ ನವರಸಭರಿತನಾಗಿ ಶಿವನೊಪ್ಪಿರ್ದನು ॥"

ಎಂದು ಕವಿ ಮನೋಹರವಾಗಿ ವರ್ಣಿಸುತ್ತಾನೆ. ಗಾನಕುಶಲೆಯಾದ ಮಗಳಿಗೆ ತಾಯಿ ಹೇಳುವ ಮಾತು

"ಎಲೆ ಮಗಳೆ ಸರವೆತ್ತಿ ಪಾಡದಿರು ಪಾಡಿದೊಡೆ
ಶಿಲೆಗಳೆಲ್ಲಂ ಕರಗಿದಪುದಕಾಲದೊಳು ಪೆ
ರ್ಮಳೆ ಸುರಿದಪುದು ಚಂದ್ರನಲ್ಲಿರ್ದ ಪುಲ್ಲೆ ಸೋಲ್ತಿಳಿದು ಬಂದಪುದಿಲ್ಲಿಗೆ ॥
ತಲೆಯೊಳಡಿಯಿಡುವ ಬಲ್ಲರ ಸೇರಿದಪ್ಪುದೀ
ಸ್ಥಲವನೆಂದೊರ್ವ ಸುಪ್ರೌಢೆ ಕೊಂಡಾಡುತಿ
ರ್ದಳು ತನ್ನ ಸುತೆಯ ಗಾನದ ತಾನಮಾನದ ವಿಧಾನವಂ ನೆಲೆವನೆಯೊಳು॥"

ಎಳಂದೂರ ಹರೀಶ್ವರ: ಪಂಡಿತ ಕವಿಯಾದ ಎಳಂದೂರ ಹರೀಶ್ವರನ 'ಪ್ರಭುದೇವರ ಪುರಾಣ' ವೀರಶೈವ ಮಹಾಕಾವ್ಯಗಳ ಪಂಕ್ತಿಗೆ ಸೇರುತ್ತದೆ. ೧೧೧೧ ಪದ್ಯಗಳಲ್ಲಿ ಚಾಮರಸನು ಹೇಳಿದ ಕತೆಯನ್ನು ಹರೀಶ್ವರನು ವಿಸ್ತರಿಸಿ ೧೪೭೪ ಪದ್ಯಗಳಲ್ಲಿ ಹೇಳಿದ್ದಾನೆ. ಇವನ ಕಾಲವನ್ನು ಕವಿಚರಿತೆಕಾರರು ೧೬೦೬ ಎಂದು ನಿರ್ಧರಿಸಿದ್ದರೂ ಪ್ರಭುದೇವರ ಪುರಾಣದ ಸಂಪಾದಕರಾದ ಶ್ರೀ. ಪುರಾಣಿಕ ಬುದ್ಧಯ್ಯನವರು ನಿರ್ಣಯಿಸಿರುವ ೧೪೮೬ ನಮ್ಮ ಒಪ್ಪಿಗೆಯನ್ನು ಪಡೆಯುತ್ತದೆ.

ತನ್ನ ಕಾವ್ಯದ ಹೆಸರು 'ಪ್ರಾಸರತ್ನಾಕರ' ವೆಂದು ಕವಿ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ನಾನಾ ಷಟ್ಪದಿಗಳನ್ನು ಪ್ರಯೋಗಿಸಿ ತನ್ನ ಬಹುಶ್ರುತತೆಯನ್ನು ಚೆನ್ನಾಗಿ ವ್ಯಕ್ತಪಡಿಸಿದ್ದಾನೆ. ತನ್ನ ಕಾವ್ಯಲಕ್ಷಣವನ್ನು ವಿಸ್ತರಿಸುತ್ತಾ

"ಕಕ್ಕಸ ನುಡಿಗಳ ತೊಡರ್ಚಿನಿವಾತಂ
ಧಿಕ್ಕರಿಸುತ ಬಹು ಬಿಕ್ಕಲವಾತಂ
ಚಕ್ಕನೆ ಲೇಖಿನಿಯುಳಕವ ಕೆಡಿಸುವುದಂತಲ್ಲೀ ಕಬ್ಬಂ ॥
ಸಕ್ಕದಗನ್ನಡದಿಂಪಿಂ ನವರಸ
ಮುಕ್ಕುವ ತದ್ಭವ ತತ್ಸಮ ದೇಸಿಯ
ಚೊಕ್ಕಳನೊಪ್ಪಂತುಸಿರ್ದೆಂ ಜಿಗಿಲಿಂ ಲಾಲಿಸಿ ಸದ್ಬುಧರು ॥"

ಎಂದು ಹೇಳಿಕೊಂಡಿದ್ದರೂ ಪಂಡಿತರಿಗೇ ಶಿರೋವೇಧನೆಯನ್ನುಂಟುಮಾಡುವ

"ಷಟ್ಚಕ್ರಾಂಬುಜಪೀಠನ ಪೀಯೂಷ
ದ್ವಿಟ್ಛೋಡನ ನಗರಾಟ್ಛಾಪನ ಭವ
ರುಟ್ಛಯಧಾತನ ತ್ರಿವ್ಬಿಟ್ಛರಲಿಂಗನ ವಿದ್ವಿಟ್ಛರ್ವರ್ಗಕನಾ ॥
ಭ್ರಾಟ್ಛಂದ್ರೋಚ್ಚೈಶ್ರವ ಸಿತಗಜಫಣಿ
ರಾಟ್ಛಾಗಾತ್ರನ ಖದ್ಯೋತನ ಗಣ
ರಾಟ್ಛೋಗ್ಗೆಯ ಶ್ರೀಪ್ರಭು ಚಿನ್ಮಯನಂ ಭಜಿಪೆಂ ಭರವಸದಿಂ ॥"

ಎನ್ನುವ ಸರಸ್ವತಿಯ ಗೋಣ್ಮುರಿವ ಅನೇಕ ಪದ್ಯಗಳು ಕಾವ್ಯದಲ್ಲಿ ತುಂಬಿದೆ. ಆದರೆ ಕೆಲವು ಸಲ ಕವಿ ರಸಕಳಸದ ಉನ್ನತ ಮಟ್ಟಕ್ಕೂ ಏರುತ್ತಾನೆ. ಪ್ರಭುವನ್ನು ಕಂಡ ಮಾಯೆಯ ಪರಿಸ್ಥಿತಿಯನ್ನು

"ಕಳವಳಿಸಿದಳು ಕಂಪಿಸಿದಳು ಸಂತಾಪದಿಂ
ದಳದಳನೆ ಕಣ್ಣೀರ್ಗಳುದುರುತಿರೆ ದೇಹಮುಂ
ಕಳೆಗುಂದಿ ಬಹುಜ್ವರಂ ಆವರಿಸಿ ತೊಟ್ಟೆರ್ದ ಮುತ್ತು ಛಟಛಟನೆ ಸಿಡಿಯೆ ॥
ತೊಳಪ ಜಾಂಬೂನದೊಡಗೆಯುಂ ಕರಗಿ ನೀರಾಗೆ
ಪೆಳರಿ ಸಖಿಯರು ಮಹಾಕುಳಿರ್ವನಕೆ ತಂದವಳ
ಜಲಜಪತ್ರವ ಹಾಸಿ ಹೊದಿಸುತೆಳದಳಿರ ಬಿಜ್ಜಣಿಗೆಯೊಳು ಬೀಸುತಿರಲು ॥"

ಎಂದು ಮನೋಹರವಾಗಿ ವರ್ಣಿಸುತ್ತಾನೆ.

ಹರೀಶ್ವರನಲ್ಲಿ ಹರಿಹರದೇವನ ಉಚಿತಜ್ಞಾನ, ಖಚಿತತೆಗಳು ಕಂಡು ಬರುವುದಿಲ್ಲ. ಆದರೆ ಅವನು ಇತರ ಪುರಾಣಕಾರರಂತೆ ಅನವಶ್ಯಕವಾಗಿ ಕಾವ್ಯವನ್ನು ಬೆಳಸಿಕೊಂಡೂ ಹೋಗಿಲ್ಲ. ಪುರಾಣಗಳಲ್ಲಿ ಹರೀಶ್ವರನ ಕೃತಿಯನ್ನು 'ಸುವರ್ಣ ಮಧ್ಯಮಮಾರ್ಗ'ವೆಂದು ಕರೆಯಬಹುದು. ಹರೀಶ್ವರ ಸಂದರ್ಭೋಚಿತವಾಗಿ ಶಿವಲೀಲೆಯ ಕಥೆಗಳನ್ನೂ, ಮಹಾಭಾರತದ ಕೆಲವು ಸನ್ನಿವೇಶಗಳನ್ನೂ ಚಿತ್ರಿಸಿದ್ದಾನೆ.

ಒಂದೇ ವಸ್ತುವಿನ ಮೇಲೆ ಬೇರೆ ಬೇರೆ ಕಾಲದ ಕವಿಗಳು ಕಾವ್ಯರಚನೆ ಮಾಡಿದರೆ ನಾವು ತರುವಾಯದವರಿಂದ ನಿರೀಕ್ಷಿಸುವುದು ಚರ್ವಿತ ಚರ್ವಣವಲ್ಲ. ಒಂದು ಹೊಸ ನೋಟ, ಸುಪ್ತಚೈತನ್ಯ ವಿಶ್ಲೇಷಣ, ಹೊಸ ವಿಷಯ ನಿರೂಪಣ. ಅಂತಹ ಹೆಚ್ಚುಗಾರಿಕೆ ಹರೀಶ್ವರನ ಕಾವ್ಯದಲ್ಲಿ ಕಂಡುಬರುವುದಿಲ್ಲ. ಒಮ್ಮೊಮ್ಮೆ ಕವಿ ಪ್ರಭುದೇವರ ತ್ರಿಗುಣಾತೀತವಾದ ಸ್ಥಿತಿಯನ್ನು ನರ್ಮಜ್ಞತೆ

ಯಿಂದ ವರ್ಣಿಸುವಾಗ ಅವನನ್ನು ನಾವು ಆದರಿಸಿ ಪುರಸ್ಕರಿಸುತ್ತೇವೆ. ಕರ್ಮವ್ಯಸನಿಗಳನ್ನು ಕಂಡ ಪ್ರಭುದೇವರ ಭಾವನೆಯನ್ನು

"ಊರ ಬಿಟ್ಟಡವಿಯಾಶ್ರಯಿಸಿಯುಂ ಸತಿಸುತರ
ನಾರೈದುದಂ ಕೆಡದು ಜಪತಪ ಸಮಾಧಿಯೊಳು
ಪೂರಾಯುವಾಗಿರ್ದು ಕಂದಮೂಲಂ ಪಂಪಲಾದಿಗಳ ಬರ ಹರಿಯದು ॥
ನಾರ ಸೀರೆಯುಂ ಶುಷ್ಕಪರ್ಣ ಭಕ್ಷಿತರಾಗಿ
ನೀರನೆಳಲುಂ ತಮ್ಮ ಠಾವೆಂಬುದಂ ಬಿಡದು
ಮಾರಜಿತ ಗುರು ಗುಹೇಶ್ವರ ಲಿಂಗನಿವರನ್ನು ಕಾಡಿದಪನೆನುತ ಮರುಗಿ ॥"

ಎಂದು ಕವಿ ರಮ್ಯವಾಗಿ ವರ್ಣಿಸುತ್ತಾನೆ.

ಸುರಂಗ : ಹದಿನೈದನೆಯ ಶತಮಾನದ ಅಂತ್ಯವನ್ನು ವೀರಶೈವ ಸಾಹಿತ್ಯದ ವಸಂತಕಾಲವೆಂದು ವರ್ಣಿಸಬಹುದು. ಆ ಕಾಲದಲ್ಲಿಯೇ ಸುರಂಗ, ಗೂಳೂರು ಸಿದ್ಧವೀರಣಾರ್ಯ, ಸಿಂಗಿರಾಜ, ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ ಮೊದಲಾದ ಋಷಿಕವಿಗಳು ಆಗಿಹೋದರು.

ಕರ್ಣಾಟಕ ಕವಿಚಕ್ರವರ್ತಿ, ಕರ್ಣಾಟಕ ಕವೀಂದ್ರ ಇತ್ಯಾದಿ ಬಿರುದಾಲಂಕೃತನಾದ ಸುರಂಗ ವರಕವಿ. ಪುಲಿಗೆರೆಯ ಈ ಮಹಾನುಭಾವನು 'ಮನುಜ ಸ್ತುತಿಯಂ ಬಿಟ್ಟು ಸುರಂಗಕವಿ ನಾಲಗೆಯಂ ಗಿರೀಶಂಗೆ ಮಾರಿದನು.'

ಇವನು ಅರವತ್ತುಮೂವರು ಪುರಾತನರ ಮೇಲೆ ತ್ರಿಷಷ್ಟಿ ಪುರಾತನರ ಚರಿತ್ರೆ ಎಂಬ ಚಂಪೂಕಾವ್ಯವನ್ನು ೬೩ ಅಶ್ವಾಸಗಳಲ್ಲಿ ಬರೆದಿದ್ದಾನೆ. ಹರಿಹರ, ಬೊಮ್ಮರಸಾದಿ ಕವಿಗಳು ಇವನ ಪೂರ್ವದಲ್ಲಿಯೇ ೬೩ ಪುರಾತನರ ಚರಿತ್ರೆಗಳನ್ನು ಬರೆದಿದ್ದಾರೆ. ಕವಿ

"ಪದದೊದವಿರೆ ಲೈಂಗ್ಯಪುರಾ
ಣದೊಳಿರ್ದಂತಭವನಿತ್ತ ವರಮತಿಯಿಂ ಭೂ
ವಿದಿತ ಪುರಾತನ ಚರಿತೆಯ
ನುದಿತೋತ್ಸವದಿಂ ಸುರಂಗವರದಂ ಪೇಳ್ದಂ ॥"

ಎಂದು ತನ್ನ ಆಧಾರಗ್ರಂಥ ಲೈಂಗ್ಯ ಪುರಾಣವೆಂದು ಹೇಳಿಕೊಂಡಿದ್ದರೂ ಹರಿಹರನ ಪುರಾತನರ ಕಥೆಗಳನ್ನು ಇವನು ನೋಡಿಲ್ಲವೆಂದು ಹೇಳಲು

ಬರುವಂತಿಲ್ಲ. ಆದರೂ ತನ್ನ ಕಾವ್ಯದಲ್ಲಿ ಪರಾವಲಂಬನೆಯನ್ನು ತೋರ ಗೊಡದೆ ಭಾವಬಂಧುರತೆ, ಲಲಿತಮೋಹಕ ಶೈಲಿಗಳಿಂದ ನಮ್ಮನ್ನು ಬೆರಗು ಗೊಳಿಸುತ್ತಾನೆ. ಆತ್ಮಾಭಿಮಾನದಲ್ಲಿ ಸುರಂಗ, ಪಂಪ, ರನ್ನರನ್ನು ನೆನಪಿಗೆ ತರುತ್ತಾನೆ

"ಬಿದಿ ಜಗಮಂ ನಿರ್ಮಿಸಿ ಸುಖ
ದೊದವೈದದೆ ಚೈತ್ರನಂ ಸುಧಾಕರನಂ ನೀ
ರದಮಂ ಸುರಂಗಕವಿಯಂ
ಪದಪಿಂದಂ ಪಡೆದು ಪರಮಸುಖಮಂ ಪಡೆದಂ ‖"

ಎಂದು ಹೇಳುವ ಮಾತಿನ ಕೆಚ್ಚೂ

ಅಲರ್ಗಳ ಕಂಪಿನಂತೆ ಮಿಳಿರ್ದಾಡುವ ತುಂಬಿಯ ಬಂಬಲಂತೆ ತಂ
ಬೆಲರಿನ ಪೆರ್ಮೆಯಂತೆ ತನಿವಣ್ಗಳಿನೊಪ್ಪುವ ಮಾವಿನಂತೆ ಪಂ
ಬಲಿಸುತೆ ಕಳ್ದು ನೋಡುವೆಳವೆಂಡಿರ ಕಣ್ಮಲರಂತೆ ಬಲ್ಲರಂ
ನಲವಿನೊಳೆಯ್ದೆ ಸೋಲಿಪುದು ಕಬ್ಬಿಗರಾಳ್ದನ ಕಬ್ಬದೆಳ್ತರಂ ‖

ಎನ್ನುವ ರಸಾಳ್ತಿಯೂ ಸತ್ಯಕ್ಕೆ ಹೊರಗಾಗಿಲ್ಲ. ಭಾವಪಕ್ಷಿಯಂತೆ ಕಾವ್ಯರಾಮದಲ್ಲಿ ಸ್ವಚ್ಛಂದವಾಗಿ ಹಾರಾಡುವ ಇವನ ವಿಲಾಸ, ಕನ್ನಡದ ಜೇನುಹೊಂಡವನ್ನು ಹೀರುವ ಇವನ ತೃಷ್ಣೆ ಪುರಾತನರ ಕಥೆಗಳಲ್ಲಿ ಚೆನ್ನಾಗಿ ವ್ಯಕ್ತವಾಗುತ್ತವೆ. ಇದಕ್ಕೆ ಇವನ ಶಿವಸ್ತುತಿ ಪರ ವರ್ಣನೆಗಳೇ ಸಾಕ್ಷಿ

"ಉಡುಗಿದುರಸ್ಥಲಂ ತೆರೆಗಳುಣ್ಮಿದ ಮೆಯ್ ಮಿಗೆ ಜೋಲ್ದಪುರ್ಬು ಬೆ
ಳ್ಪಿಡಿದ ಜರಜ್ಜಟಾಳಿ ನೆರೆಬಾಗಿದ ಬೆನ್ನುರೆ ತೂಗುವಾನನಂ
ಪಿಡಿದ ಕರಾಂತಯಷ್ಟಿ ಪಿರಿದೊಪ್ಪಿರೆ ಪಲ್ಬರೆಗುಟ್ಟುತಂದು ಮು
ಪ್ಪಡಿಸಿದ ತಾಪಸಾಕೃತಿಯನಾಂತು ಶಿವಂ ನಡೆತಂದ ನಳ್ತಿಯಿಂ ‖
ವರ ಮುಖಮುಂಡಸಕ್ಕೆ ಮುಡಿಗಂಪಿಗೆ ಚೆಲ್ವಿಗೆ ಭೋಗದೇಳ್ಗೆ ಗಂ
ಸರಿಪಡಿಪಾಟಿ ಪಾಸಟಿಗಳಾಗದೆ ತದ್ವಿಧು ವಾಯು ಕಂತು ಬಂ
ಧುರಮುಧು ಕಂದಿದಂ ಕರಮೆ ಚಂಚಳನಾದನನಂಗನಾದನಾ
ಸುರವನವಾಸಿಯಾದನೆನುತಂಗನೆ ಬಣ್ಣಿಸಿದಳ್ ಮಹೇಶನಂ ‖"

ಷಡಕ್ಷರಿದೇವನು ಇವನನ್ನನುಸರಿಸಿರಬಹುದೆಂದು ಡಾ॥ ನಂದೀಮಠ ರವರು ಪಡುವ ಅಭಿಪ್ರಾಯ ಗ್ರಾಹ್ಯವಾಗಿದೆ.

ಗೂಳೂರು ಸಿದ್ಧವೀರಣಾರ್ಯ : ಗೂಳೂರು ಸಿದ್ಧವೀರಣಾರ್ಯನ 'ಶೂನ್ಯ ಸಂಪಾದನೆ' ಕನ್ನಡ ಸಾಹಿತ್ಯದಲ್ಲಿಯೇ ಒಂದಪೂರ್ವವಾದ ಗ್ರಂಥ. ಶೂನ್ಯ ಸಿಂಹಾಸನಾರೋಹಣಮಾಡಿದ ಪ್ರಭುದೇವರ ನಡೆನುಡಿಗಳ ವೃತ್ತಾಂತವೇ ಅದರಲ್ಲಿ ಹೆಚ್ಚಾಗಿ ಬಂದಿದೆ.

"ಶ್ರೀಮದ್ದೇಶಿಕನಲ್ಲಮಪ್ರಭುವರಂ ಸ್ವೇಚ್ಛಾವಿಲಾಸಂಗಳಿಂ
ದಾಮೋದಂ ಶರಣರ್ಗೆಯಪ್ಪ ತೆರದಿಂದಾಶೂನ್ಯ ಪೀಠಾಗ್ರದೊಳ್
ಪ್ರೇಮಂ ಬೆತ್ತಡದ್ದೇರಿ ಮಂಡಿಸಿ ಶಿವಜ್ಞಾನಾಥಮಂ ಕೇಳಿಪೇ
ಳ್ದಾಮಹಾತ್ಮೆಯ ಸಿದ್ಧವೀರಯತಿ ಪೇಳ್ದಂ ಸರ್ವರಾನಂದಿಸಲ್ ‖"

ಕವಿ ಅವಲಂಬಿಸಿದ ರೀತಿ ವಿಶಿಷ್ಟತೆಯಿಂದ ಕೂಡಿದೆ. ಶಿವಶರಣರ ವಚನಗಳನ್ನೇ ಜೋಡಿಸಿ ಒಂದು ವಿಷಯವನ್ನು ಸಮರ್ಥಿಸಲೆತ್ನಿಸಿದ್ದಾನೆ. ಮಧ್ಯೆ ಮಧ್ಯೆ ನಿರೂಪಣೆಯ ನಿರರ್ಗಳತೆಗಾಗಿ ತನ್ನ ಒಂದೊಂದು ವಚನ ವನ್ನೂ ಸೇರಿಸಿರಬಹುದು. ಶಿವಶರಣರ ಅಧಿಕೃತ ವಚನ ಸಂಗ್ರಹಗಳಲ್ಲಿ ದೊರೆಯದಿರುವ ಕೆಲವು ವಚನಗಳು ಶೂನ್ಯಸಂಪಾದನೆಯಲ್ಲಿ ದೊರೆಯುವುದ ರಿಂದ ಸಿದ್ಧವೀರಣಾರ್ಯ ತಾನೇ ಅವರ ಹೆಸರಿನಲ್ಲಿ ಕೆಲವು ವಚನಗಳನ್ನು ಸೃಷ್ಟಿಸಿದ್ದರೂ ಸೃಷ್ಟಿಸಿರಬಹುದೆಂದು ಊಹಿಸಲವಕಾಶವಿದೆ. ಗ್ರಂಥಾರಂಭ ದಲ್ಲಿ ಬರುವ ಪ್ರಭುದೇವರ ಗದ್ಯದಲ್ಲಿ ಅಲ್ಲಮದೇವರ ಗುಣನಾಮಾವಳಿಯನ್ನು ಕವಿ ನಿರೂಪಿಸುತ್ತಾನೆ

"ಶ್ರೀಮತ್ಪರಮ ಪರಮಾನಂದ, ಪರಂಜ್ಯೋತಿ, ಪರಮೇಶ್ವರ
ಅಗಮ್ಯ ಅಗೋಚರ ಅಪ್ರಮೇಯ ಅನಾಮಯ ಅನೌಪಮ್ಯ
ಅಪ್ರತರ್ಕ್ಯ, ಮಹಾಜ್ಞಾನ ಪ್ರಭಾಮಯ, ಯಮ ನಿಯಮ,
ಆಸನ ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನಧಾರಣ
ಸಮಾಧ್ಯಷ್ಟಾಂಗಯೋಗೀಶ್ವರ ದೇಹೇಂದ್ರಿಯ ಮನಃ
ಪ್ರಾಣಾಹಂಕಾರಾದಿ ಗುಣಧರ್ಮ ಕರ್ಮ ನಿರ್ಲೇಪನ ಸಕಲ
ಭುವನಾಂತರಂಗ, ನಿತ್ಯನಿರ್ಮಲಸ್ವರೂಪ, ಶಿವಶರಣ ಹೃತ್ಕ
ಮಲ ಕರ್ಣಿಕಾವಾಸ, ಮತ್ತಮಧುಕರಾಯಮಾನ ಇಷ್ಟಲಿಂಗ,
ಪ್ರಾಣಲಿಂಗ ತೃಪ್ತಿಲಿಂಗಾಂಕಂಗಲೇಪ, ಗುರುಲಿಂಗ ಜಂಗಮ
ಪ್ರಸಾದ ಪಾದೋದಕಾದಿ ಪಂಚಾಚಾರ ಪ್ರತಿಷ್ಠಾಪನಾಚಾರ್ಯ,
ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣೈಕ್ಯಾದಿ

ಷಟ್ಸ್ಥಲ ಚಕ್ರವರ್ತಿ, ಬಸವ ಚನ್ನಬಸವರಾಜ ಪ್ರಾಣ ನಾಯಕ, ಪರಮಶ್ರೀ ವೀರಶೈವಾಚಾರ ಶಿರೋರತ್ನ, ಶ್ರೀ ವೀರ ಶೈವಾಚಾರ ಪ್ರಮಥನಾಯಕ, ಶ್ರೀ ವೀರಶೈವಾಚಾರ ದೀಕ್ಷಾಚಾರ್ಯ, ಮರ್ತ್ಯಲೋಕ ಪಾವನ ಕಾರಣಾವತಾರ, ಅನುಮಿಷ ಶ್ರೀ ಚರಣಾಂಭೋಜ ಕರ್ಣಿಕಾವಾಸ, ಗುಹೇಶ್ವರ ನಾಮಾಮೃತ ಸ್ವೀಕಾರ ಸಂತುಷ್ಟ, ಶ್ರೀಮತ್ಸಕಲ ಜಗದಾಚಾರ್ಯರುಮಪ್ಪ ಅಲ್ಲಮ ಪ್ರಭುದೇವರು . . . ."

ಇದು ಅಲ್ಲಮ ಪರವಾದ ಗ್ರಂಥವಾದರೂ ಮುಕ್ತಾಯಕ್ಕ, ಸಿದ್ಧರಾಮ ಬಸವೇಶ್ವರ, ಚೆನ್ನಬಸವ, ಮಡಿವಾಳಯ್ಯ, ಆಯ್ದಕ್ಕಿ ಮಾರಯ್ಯ, ಮೋಳಿಗೆ ಮಾರಯ್ಯ, ನುಲಿಯ ಚಂದಯ್ಯ, ಘಟ್ಟಿವಾಳಯ್ಯ, ಮಹಾದೇವಿಯಕ್ಕ ಇವರುಗಳ ಆಧ್ಯಾತ್ಮಿಕ ಚರಿತೆಗಳನ್ನೂ ಪ್ರಭುದೇವರು ಇವರಿಗೆ ಮಾಯಾ ನಿರಸನಮಾಡಿದ ಬಗೆಯನ್ನೂ ಕವಿ ಹೃದಯಂಗಮವಾಗಿ ವಿವರಿಸುತ್ತಾನೆ. ವೀರಶೈವ ಧರ್ಮತತ್ತ್ವಗಳನ್ನರಿಯುವುದಕ್ಕೂ, ವಚನ ಸಾಹಿತ್ಯದ ಜೇನು ಸವಿಯನ್ನು ಆಮೋದಿಸುವುದಕ್ಕೂ ಇದಕ್ಕಿಂತಲೂ ಉತ್ತಮ ಗ್ರಂಥವಿನ್ನೊಂದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ರಾ. ಬ. ಹಳಕಟ್ಟಿಯವರು ಇದನ್ನು 'ಪ್ಲೇಟೋನ ಸಂಭಾಷಣೆ'ಗಳಿಗೆ ಹೋಲಿಸಿದ್ದಾರೆ. ಸಾಕ್ರೆಟಿಸ್ ಮತ್ತು ಪ್ರಭುದೇವರ ಆಧ್ಯಾತ್ಮಿಕ ಮಟ್ಟಗಳನ್ನು ತುಲನೆಮಾಡಿದರೆ ಅಜಗಜಾಂತರವಾಗುತ್ತದೆ. ಸಾಕ್ರೆಟಿಸ್ ವಿಚಾರಗಳನ್ನು ಉದ್ರೇಕಿಸುತ್ತಿದ್ದ, ಸಿದ್ಧಾಂತಗಳ ಕೂಪದಿಂದ ಜಿಜ್ಞಾಸುವನ್ನು ಮುಂದಕ್ಕೊಯ್ದು ವಿವೇಚನೆ, ಪ್ರಯೋಗಗಳ ಜಗತ್ತನ್ನು ಪರಿಚಯ ಮಾಡಿಸಿಕೊಡುತ್ತಿದ್ದ. ಆದರೆ ಅವನಲ್ಲಿ ಸತ್ಯಶ್ರದ್ಧೆಯಿದ್ದಿತಲ್ಲದೆ ಸತ್ಯಸಿದ್ಧಿಯಿರಲಿಲ್ಲ. ಪ್ರಭುವು ಸತ್ಯದ ಮೂರ್ತ ಸ್ವರೂಪವನ್ನು ಇಷ್ಟಲಿಂಗವಾಗಿ ಧರಿಸಿದ್ದ ಮಹಾವ್ಯಕ್ತಿ. 'ಅದು ಏನಲ್ಲ' ಎಂದು ತೋರಿಸಿಕೊಡುವ ಶಕ್ತಿ ಪ್ರಭುದೇವರಿಗಿದ್ದುದು ಮಾತ್ರವಲ್ಲದೆ 'ಅದು ಏನು' ಎಂದು ತೋರಿಸಿಕೊಡುವ ಸಾಮರ್ಥ್ಯವೂ ಅವನಲ್ಲಿತ್ತು. ಕೇವಲ ಬಾಹ್ಯಾಕಾರದಿಂದ ಶೂನ್ಯಸಂಪಾದನೆಯನ್ನು ಪ್ಲೇಟೋನ ಸಂಭಾಷಣೆಗಳಿಗೆ ಹೋಲಿಸಬಹುದಲ್ಲದೆ ಆಂತರಂಗಿಕ ಸತ್ತ್ವದಿಂದಲ್ಲ. ಶೂನ್ಯಸಂಪಾದನೆ ಪ್ಲೇಟೋನ ಕೃತಿಗಳಿಗಿಂತ ಕೋಟಿಪಾಲು ಮಿಗಿಲಾದುದು ಬೆಲೆಯುಳ್ಳುದೂ

ಆದ ಗ್ರಂಥ. ಅದು ಅನುಭವ ರಸಾಯನ, ಆಧ್ಯಾತ್ಮಿಕ ಪರುಷಮಣಿ, ಜ್ಞಾನದ ಘನ ಬೆಳಕು.

ಸಿಂಗಿರಾಜ: ಸಿಂಗಿರಾಜನಿಂದ ವಿರಚಿತವಾದ ಮಲಬಸವರಾಜ ಚಾರಿತ್ರ ಅಥವಾ ಸಿಂಗಿರಾಜಪುರಾಣ ಬಸವಣ್ಣನವರ ಜೀವನವನ್ನು ನಿರೂಪಿಸುವ ವಿಸ್ತೃತ ಗ್ರಂಥವಾಗಿದೆ. ಇದರಲ್ಲಿ ಬಸವಣ್ಣನವರ ೮೮ ಪವಾಡಗಳನ್ನೂ ಶಿವಶರಣರು ಕೆಲವರ ಚರಿತ್ರೆಗಳನ್ನೂ ಶಿವನ ಕೆಲವು ಲೀಲೆಗಳನ್ನೂ ಕವಿ ಪ್ರೌಢಭಾಷೆಯಲ್ಲಿ ವಾರ್ಧಿಕ ಷಟ್ಪದಿಯಲ್ಲಿ ರಚಿಸಿದ್ದಾನೆ. ಕಾವ್ಯದಲ್ಲಿ ೪೮ ಸಂಧಿಗಳೂ ೧೯೦೭ ಪದ್ಯಗಳೂ ಇವೆ.

ಸಿಂಗಿರಾಜ ಪುರಾಣವನ್ನು ಕನ್ನಡ ಗದ್ಯಕ್ಕೆ ಅನುವಾದಿಸಿರುವ ಶ್ರೀ ಎಂ. ಬಸವಲಿಂಗಶಾಸ್ತ್ರಿಗಳವರು ಗ್ರಂಥ ನಿರ್ಮಾಣಕಾರಣವನ್ನು ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. 'ಸಿಂಗಿರಾಜ ಬಿಜ್ಜಳನ ಆಶ್ರಿತರಾಜ. ವೀರವೈಷ್ಣವ. ವೀರಶೈವನನ್ನು ಧೊರೆ ಮಂತ್ರಿಯನ್ನಾಗಿ ಮಾಡಿಕೊಂಡದ್ದಕ್ಕೆ ಮುನಿದು ಕಪ್ಪಕಾಣಿಕೆಗಳನ್ನು ಕೊಡಲು ತಿರಸ್ಕರಿಸುತ್ತಾನೆ. ಅರಸು ಕುಪಿತನಾಗಿ ಅವನನ್ನು ಹಿಡಿತರಿಸಿ ರಾಜವೀಥಿಯ ಚಚ್ಚೌಕದಲ್ಲಿ ಒಂದು ಕಬ್ಬಿಣದ ಪಂಜರದಲ್ಲಿ ಸೆರೆಯಿಡಿಸುತ್ತಾನೆ. ಬಸವಣ್ಣನವರ ಗುಣಕಥನ ಕೇಳಿ ಕೇಳಿ ಸಿಂಗಿರಾಜನಿಗೆ ಬೇಸರವಾಗಿ 'ಕಿವಿಗಳಾದರೂ ಹೋಗಬಾರದೇ' ಎಂದು ಬಯಸುತ್ತಾನೆ. ಆ ಪ್ರಕಾರ ಕಿವಿಗಳು ಕಿವುಡಾಗುತ್ತವೆ. ಒಂದು ದಿನ ಬಸವಣ್ಣನವರು ಎದುರು ಬರಲು ಅವರನ್ನು ನೋಡಲು ಹೇಸಿ 'ಕಣ್ಣುಗಳು ಹೋಗಬಾರದೇ' ಎಂದು ಬಯಸುತ್ತಾನೆ. ಆ ಪ್ರಕಾರ ಕಣ್ಣುಗಳೂ ಹೋಗುತ್ತವೆ. ಕೆಲವು ಕಾಲಾನಂತರ ಸಿಂಗಿರಾಜನಿಗೆ ವಿವೇಕೋದಯವಾಗುತ್ತದೆ. ತನ್ನ ಇಷ್ಟ ದೇವತೆಯಾದ ನಾರಾಯಣನಿಗೂ ಶಿವನೇ ಪ್ರಭುವೆಂಬುದನ್ನು ಗ್ರಹಿಸಿ ಬಸವೇಶ್ವರನು ನಿಜವಾಗಿಯೂ ದೇವರಾಗಿದ್ದ ಪಕ್ಷದಲ್ಲಿ ನನ್ನ ಕಿವಿ ಕಣ್ಣುಗಳು ಬರಲಿ' ಎಂದು ಮೂರು ಸಾರಿ ಬಸವನ ನಾಮವನ್ನುಚ್ಚರಿಸಲು ಅವನಿಗೆ ಕಿವಿ ಕಣ್ಣುಗಳು ಮರಳಿ ಬರುತ್ತವೆ. ಪಂಜರದಿಂದ ಹೊರಬಿದ್ದ ಸಿಂಗಿರಾಜ ಬಸವಣ್ಣನವರ ದರ್ಶನಾರ್ಥಿಯಾಗಿ ತೆರಳಲು ಶ್ರೀ ಬಸವೇಶ್ವರರು ಮಾಡತಕ್ಕ ಕಾರ್ಯಂಗಳನ್ನೆಲ್ಲಾ ಪೂರ್ತಿಯಾಗಿ ಮಾಡಿ, ಶಿವಾಜ್ಞಾನುಸಾರವಾಗಿ ಬಿಜ್ಜಳನ ವಧೆ

ಯನ್ನು ಮಾಡಿಸಿ ತಮ್ಮ ಜೊತೆಯಲ್ಲಿಯೇ ಬರತಕ್ಕ ಶಿವಶರಣರನ್ನೆಲ್ಲಾ ಕರೆದುಕೊಂಡು ಆ ಕಲ್ಯಾಣ ಪಟ್ಟಣದಿಂದ ಕೂಡಲ ಸಂಗಮೇಶ್ವರ ಕ್ಷೇತ್ರಕ್ಕೆ ದಯಮಾಡಿಸಿದ್ದರು. ಸಿಂಗಿರಾಜನು ಚಿಂತಾಕ್ರಾಂತನಾಗಲು ಅವನ ಕನಸಿನಲ್ಲಿ ಬಸವಣ್ಣನವರು ಬಂದು 'ಕಲ್ಯಾಣಪಟ್ಟಣದಲ್ಲಿಯೇ ಇರುವ ದೇಮಿ ದೇವಯ್ಯನವರ ಬಳಿಗೆ ಹೋಗು. ನಿನ್ನ ಇಷ್ಟಾರ್ಥ ಸಿದ್ಧಿಯಾಗುತ್ತದೆ' ಎಂದು ಅನುಗ್ರಹಿಸುತ್ತಾರೆ. ಅವರ ಆಜ್ಞಾನುಸಾರವಾಗಿ ಸಿಂಗಿರಾಜ ದೇಮಿ ದೇವಯ್ಯನವರ ಬಳಿಗೆ ಹೋಗಿ ವೀರಶೈವ ದೀಕ್ಷೆ ಪಡೆದು ಷಟ್ಸ್ಥಲ ಬ್ರಹ್ಮಿಯೆನಿಸುತ್ತಾನೆ.''

ಈ ಕಥೆಗೆ ಶ್ರೀ ಬಸವಲಿಂಗ ಶಾಸ್ತ್ರಿಗಳವರಿಗೆ ಆಧಾರ ಯಾವದೋ ತಿಳಿಯಬಂದಿಲ್ಲ. ಸಿಂಗಿರಾಜ ಪುರಾಣದ ಕೊನೆಯಲ್ಲಿ

"..... ಚನ್ನಬಸವಣ್ಣಂಗೆ
ಮಂತ್ರಿಮುದ್ರೆಯನ್ನಿತ್ತು ಕೈವರ್ತಿಸಲ್ಕರಸು ಕೈಪಿಡಿವುತೆನ್ನ ಭಾಗ್ಯ ॥
ಮಂತ್ರದೇವತೆ ಕೊಟ್ಟ ವರವೆ ಬಾ ನಿಮಗೆಯುವ
ರಂತೆ ಪೆಸರ್ಚಿಕ್ಕಡಣ್ಣಾಯಕರೆನುತ್ತರಸ
ಸಂತ ಪಚನುಚಿತೋಕ್ತಿಯಿಂದಪ್ಪಿಕೊಂಡನುತ್ಸಾಹ ಚಿತ್ರಚಿತ್ತದಿ ॥"

ಎಂಬಿದೆ. ಶ್ರೀ ಶಾಸ್ತ್ರಿಗಳವರ ಸಿಂಗಿರಾಜ ಪುರಾಣ ಗದ್ಯದಲ್ಲಿಯೇ

"... ಬಿಜ್ಜಳರಾಜನು ಮಹಾಮಹಿಮನಾದ ಬಸವೇಶನ ಮುಂಭಾಗದಲ್ಲಿ ಕೈಮುಗಿದುಕೊಂಡು ನಿಂತಿರಲು ಅಂತಪ್ಪ ಆ ರಾಜನನ್ನು ದ್ವಿತೀಯ ಶಂಭುವಾದ ಬಸವೇಶನು ನೋಡಿ ಎಲೈ ರಾಜನೇ, ನಿನ್ನ ಇಷ್ಟಾನುಸಾರವಾಗಿಯೇ ಇನ್ನು ನಾವು ಶಿವಾನುಭವಗೋಷ್ಠಿಯಲ್ಲಿಯೂ ಶಿವಶರಣರ ಸೇವೆಯಲ್ಲಿಯೂ ಇರುವೆವು. ಮತ್ತು ಈ ದಿವಸವೇ ನಿನ್ನ ಮುಂದೆಯೇ ಈ ನನ್ನ ಮಂತ್ರಿಯ ಮುದ್ರೆಯನ್ನು ಚೆನ್ನಬಸವೇಶ್ವರನಿಗೆ ಕೊಡುತ್ತೇನೆ, ನೋಡೆಂದು ಬಸವೇಶನು ಚೆನ್ನಬಸವೇಶಂಗೆ ಕ್ರಮವಾಗಿ ಮಂತ್ರಿಮುದ್ರೆಯನ್ನು ಕೊಡಲು ಆಗ ರಾಜನು ಅತಿ ಸಂಭ್ರಮವನ್ನು ಹೊಂದಿ ಚೆನ್ನಬಸವೇಶ್ವರರ ಕೈಯನ್ನು ಹಿಡಿದುಕೊಂಡು ಎನ್ನ ಭಾಗ್ಯ ಮಂತ್ರದೇವತೆಯು ಕೊಟ್ಟ ವರವೇ

ಬಾರಾ. ನಿಮಗೆಯು ಆ ಬಸವೇಶ್ವರರ ಹಾಗೆಯೇ ಚಿಕ್ಕದಂಡ ನಾಯಕರೆಂಬದಾಗಿಯೇ ಹೆಸರು ಎಂದು ಅತಿಮುದದಿಂದ ಚೆನ್ನಬಸ ವೇಶ್ವರರನ್ನು ಆಲಂಗಿಸಿಕೊಳ್ಳುತ್ತಾ ಹಿಗ್ಗುತ್ತಾ (ಇದ್ದನು) . . . ಬಸ ವೇಶನಿಂದ ಬೀಳ್ಕೊಂಡು ಚೆನ್ನಬಸವೇಶ್ವರರೊಡನೆ ಕೂಡಿ ಇತ್ತ ತನ್ನ ಅರಮನೆಗೆ ಬಂದು ಸುಖದಿಂದ ರಾಜ್ಯಪರಿಪಾಲನೆಯನ್ನು ಮಾಡು ತ್ತಿದ್ದನು. ಅತ್ತ ಶ್ರೀ ಬಸವೇಶ್ವರರು ಸಮಸ್ತ ಶಿವಶರಣ ಸೇವೆಯನ್ನು ಕ್ರಮವಾಗಿಯೇ ಮಾಡಿಕೊಂಡು ಶಿವಾನುಭವ ಗೋಷ್ಠಿಯಲ್ಲಿಯೇ ಸುಖಿಸಿ ಮೆರೆದಿದ್ದರು.''

ಇದರಿಂದ ಶ್ರೀ ಶಾಸ್ತ್ರಿಗಳು ಹೇಳಿರುವಂತೆ ಬಿಜ್ಜಳನ ವಧೆಯನ್ನು ಬಸ ವಣ್ಣನವರು ಮಾಡಿಸಲಿಲ್ಲವೆಂದೂ ಅವರವರ ಪರಸ್ಪರ ಸಂಬಂಧ ಕೊನೆಯ ತನಕ ಮಧುರವಾಗಿತ್ತೆಂದೂ ವ್ಯಕ್ತವಾಗುತ್ತದೆ.

ಸಿಂಗಿರಾಜನ ಶೈಲಿ ಪ್ರೌಢವಾದುದಾದರೂ ಮಧುರವಾಗಿಯೂ ಲಲಿತ ವಾಗಿಯೂ ಇದೆ. ಅವನ ಶೈಲಿಗೆ ಕವಿಚರಿತೆಕಾರರು ಅರಮನೆಯ ವರ್ಣನೆಯ ಈ ಪದ್ಯವನ್ನು ಉದಹರಿಸಿದ್ದಾರೆ

"ಭೋಗದಾಗರವೊ ಸೊಬಗಿನ ಸೀಮೆಯೊ ಸುಖದ
ಸಾಗರವೊ ಸಿರಿಯ ನೆಲೆವನೆಯೊ ಮಿಗೆ ಸೌಭಾಗ್ಯ
ದಾಗಿನೊಬ್ಬುಳಿಯೊ ಚದುರಿನ ಬೀಡೊ ಮನ್ಮಥನ ಗರುಡಿಯೊ ಸುದತಿರತ್ನ ॥
ಪೂಗ ತೀವಿದ ಕರಂಡಗೆಯೊ ವಾಗ್ದೇವಿಯನು
ರಾಗದಾಶ್ರಯವೊ ಭಾವಿಸಿ ಪೊಗಳ್ವೊಡತಿ ಚೋದ್ಯ
ಪೆಂಪೇರಿ ಸೊಂಪಂ ಬೀರುತಾ ರಾಜಸದನ ಕಣ್ಗೆಸೆದಿರ್ದುದು ॥ "

ನಿಜಗುಣ ಶಿವಯೋಗಿ : ನಿಜಗುಣ ಶಿವಯೋಗಿಯನ್ನು ಒಬ್ಬ ಕವಿ ಯೆಂದು ಹೇಳುವುದಕ್ಕಿಂತ ಒಬ್ಬ ಸೀಮಾಪುರುಷನೆಂದು ಹೇಳಬೇಕಾಗು ತ್ತದೆ. ಆತನ ಸಾಹಿತ್ಯಸೃಷ್ಟಿ ವಿಪುಲವಾದುದೂ ಕನ್ನಡ ಸಂಸ್ಕೃತಿಯ ಬೆಳವಳಿಗೆಯ ದೃಷ್ಟಿಯಿಂದ ಮಹತ್ತ್ವದ್ದೂ ಆಗಿದೆ. ನಿಜಗುಣ ಶಿವಯೋಗಿ ಕಾವ್ಯದ ತಿರೆಯ ಮೇಲೆ ನಿಂತು ಅಧ್ಯಾತ್ಮದ ಮುಗಿಲನ್ನು ಮುಟ್ಟುತ್ತಾನೆ.

ಇವನ ಕಾಲ ಸುಮಾರು ೧೫೦೦ ಎಂದು ಕವಿಚರಿತೆಕಾರರು ನಿಶ್ಚಯಿಸಿ ದ್ದಾರೆ ಶ್ರೀ. ಇ. ಪಿ. ರೈಸ್‌ರವರು ೧೭ನೆಯ ಶತಮಾನದ ಮಧ್ಯಭಾಗ

ವೆಂದು ಅಭಿಪ್ರಾಯಪಡುತ್ತಾರೆ. ಶ್ರೀ. ಬಿ. ಶಿವಮೂರ್ತಿಶಾಸ್ತ್ರಿಗಳವರು ೧೩ನೆಯ ಶತಮಾನದವನಾಗಿರಬಹುದೆಂದು ಊಹಿಸಿದ್ದಾರೆ. ಕವಿಚರಿತೆ ಕಾರರ ಕಾಲನಿರ್ಣಯವನ್ನು ತ್ಯಜಿಸುವುದಕ್ಕೆ ಸಾಕಷ್ಟು ಆಧಾರಗಳಿಲ್ಲದಿರು ವುದರಿಂದ ನಾವು ಅದನ್ನೇ ಅನುಮೋದಿಸುತ್ತೇವೆ.

ಇವನು ಶಂಭುಲಿಂಗನ ಬೆಟ್ಟದ (ಕೊಳ್ಳೇಗಾಲ ತಾಲ್ಲೂಕಿಗೆ ಸೇರಿದೆ) ಸುತ್ತಮುತ್ತಲಿನ ನಾಡಿನ ಅರಸನಾಗಿದ್ದು, ಬಳಿಕ ವಿರಕ್ತನಾಗಿ ಆ ಬೆಟ್ಟದಲ್ಲಿ ನಿಂತು ಶಿವಯೋಗತತ್ಪರನಾದನೆಂದು ಐತಿಹ್ಯವಿದೆ. ಇವನ ಗ್ರಂಥಗಳಲ್ಲಿ ಲೌಕಿಕಜ್ಞಾನದ ವಿಶೇಷ ಪರಿಚಯವು ಕಂಡುಬರುವುದರಿಂದ ಈ ಐತಿಹ್ಯವು ಸತ್ಯವಾಗಿದ್ದರೂ ಇರಬಹುದು.

ವೀರಶೈವೇತರರ ಮೇಲೆ ವಿಶೇಷ ಪ್ರಭಾವವನ್ನು ಮೂಡಿರುವ ವೀರಶೈವ ಕವಿಗಳಲ್ಲಿ ನಿಜಗುಣ ಶಿವಯೋಗಿ ಅಗ್ರಗಣ್ಯನಾಗಿದ್ದಾನೆ. ಪ್ರಾಯಶಃ ಅವನ ಅದ್ವೈತದ ಒಲ್ಮೆಯೇ ಇದಕ್ಕೆ ಕಾರಣವಾಗಿರಬಹುದು. ಈ ವಿಷಯವಾಗಿ ಶ್ರೀಮನ್ನಿರಂಜನ ಮಹಾದೇವ ಸ್ವಾಮಿಗಳವರು "ನಿಜಗುಣರಿಗೆ ಅದ್ವೈತ ಸಿದ್ಧಾಂತದಲ್ಲಿ ಪರಿಣತ ಪಾಂಡಿತ್ಯವಿತ್ತೆಂದು ಅವರ ಗ್ರಂಥಗಳಿಂದ ತಿಳಿದು ಬಂದರೂ ಶಿವಶಕ್ತಿಗಳ ಅವಿನಾಭಾವ ಸಂಬಂಧಗಳನ್ನು ಪ್ರತಿಪಾದಿಸುವ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಬಿಟ್ಟು ಅವರು ಹೊರಗೆ ಹೋಗಿಲ್ಲ. ಲಿಂಗ ಪೂಜೆ, ಜಂಗಮಾರ್ಚನೆ, ಪ್ರಸಾದಸೇವನೆ ಮುಂತಾದ ಅಷ್ಟಾವರಣ ವಿಚಾರ ಗಳಿಗೆ ಕಡೆಯಿಲ್ಲದಂತೆ ಇವರ ಗ್ರಂಥಗಳಲ್ಲಿ ಎಡೆಯಿದೆ. ಕೈವಲ್ಯಪದ್ಧತಿ ಯೋಗಪ್ರತಿಪಾದನಾ ಸ್ಥಳವು ಕೇವಲ ಲಿಂಗಾಂಗ ಸಾಮರಸ್ಯವನ್ನೇ ಬೋಧಿಸು ತ್ತದೆ. ಒಟ್ಟಿನಲ್ಲಿ ಇವರ ಕೃತಿಗಳ ಸರ್ವಸಾರವೂ, ಚರಮಧ್ಯೇಯವೂ ಶಿವಾದ್ವೈತವೆಂದು ಹೇಳಬಹುದು. ಮುಮುಕ್ಷುಗಳಿಗೆ ಸುಲಭವಾಗಿ ದಾರಿ ತೋರಿಸಿರುವ ಭಕ್ತಿಮಾರ್ಗವನ್ನು ಇವರು ಹೆಚ್ಚಾಗಿ ಪ್ರತಿಪಾದಿಸಿದ್ದಾರೆ. ಇವರ ತ್ರಿಷಷ್ಟಿಪುರಾತನ ತ್ರಿವಿಧಿಯು ಕೇವಲ ಭಕ್ತರನ್ನು ಕುರಿತು ಹಾಡಿದ ಭಕ್ತಿಗೀತೆ. ಇವರ ಗ್ರಂಥಭಂಡಾರವೂ ಬರೀ ಜ್ಞಾನದ ಗಣಿಯಷ್ಟೇ ಅಲ್ಲ; ಅದು ಭಕ್ತಿಯ ಮಧುರ ಮಧುವಿನ ಪಾತ್ರೆಯೂ ಆಹುದು" ಎಂದು ಅಭಿ ಪ್ರಾಯಪಡುತ್ತಾರೆ.

ನಿಜಗುಣನ ಹೆಚ್ಚಳವನ್ನು ಶ್ರೀ. ಶಿವಮೂರ್ತಿ ಶಾಸ್ತ್ರಿಗಳವರು ೧) ಕನ್ನಡ ಸಾಹಿತ್ಯದಲ್ಲಿ ಮೊಟ್ಟಮೊದಲು 'ಕೈವಲ್ಯ ಪದ್ಧತಿ' ಎಂಬ ಹಾಡುಗಬ್ಬವನ್ನು ಬರೆದವನು ಶ್ರೀ ನಿಜಗುಣ ಶಿವಯೋಗಿಯು ೨) ಕನ್ನಡದಲ್ಲಿ ಸಕಲಶಾಸ್ತ್ರ ಸಾರಭೂತವಾದ 'ವಿವೇಕಚಿಂತಾಮಣಿ' ಎಂಬ ವಸ್ತುಕೋಶವನ್ನು (Encyclopeadia) ಬರೆದವನು ಶ್ರೀ ನಿಜಗುಣ ಶಿವಯೋಗಿಯು ೩) ಕನ್ನಡದಲ್ಲಿ ಮೊಟ್ಟಮೊದಲು 'ಪರಮಾರ್ಥ ಪ್ರಕಾಶಿಕೆ' ಎಂಬ ಯೋಗಶಾಸ್ತ್ರವನ್ನು ಬರೆದವನು ಶ್ರೀ ನಿಜಗುಣ ಶಿವಯೋಗಿಯು ೪) ಕನ್ನಡದಲ್ಲಿ ಮೊದಮೊದಲು ಪರಮಾರ್ಥಗೀತೆ, ಅನುಭವಸಾರ, ಅನುಭವಬೋಧೆ ಎಂಬ ಶ್ರೇಷ್ಠತಮ ವೇದಾಂತ ಗ್ರಂಥಗಳನ್ನು ಬರೆದು ಲೋಕೋಪಕಾರ ಮಾಡಿದವನು ನಿಜಗುಣ ಶಿವಯೋಗಿಯು ಎಂದು ಕ್ರೋಢೀಕರಿಸಿದ್ದಾರೆ.

ಸಂಸ್ಕೃತದಲ್ಲಿ ವೇದಾಗಮೋಪನಿಷತ್ತುಗಳ ಸಾರಸಂಗ್ರಹವನ್ನು ಕನ್ನಡಕ್ಕೆ ತಂದು ನಿಜಗುಣ ಶಿವಯೋಗಿ ಕನ್ನಡ ಜನತೆಗೆ ಮಹೋಪಕಾರ ಮಾಡಿರುವುದಲ್ಲದೆ, ಗಹನ ವೇದಾಂತ ತತ್ತ್ವಗಳನ್ನು ಕನ್ನಡದಲ್ಲಿ ನಿರೂಪಿಸಲು ಸಾಧ್ಯವಿಲ್ಲವೆಂಬ ಅಪವಾದವನ್ನು ದೂರಮಾಡಿದ್ದಾನೆ. ಭಾರತೀಯ ತತ್ತ್ವಶಾಸ್ತ್ರವನ್ನು ಇವನು ಕನ್ನಡಕ್ಕಿಳಿಸಿರುವ ರೀತಿ ಇವನ ಪ್ರಗಲ್ಭಪಾಂಡಿತ್ಯ, ಆಳವಾದ ಅನುಭವ, ವಿಶಾಲದೃಷ್ಟಿಗಳ ಪ್ರತೀಕವಾಗಿದೆ. ಇವನಿಗೆ ವೇದ, ಆಗಮ, ಉಪನಿಷತ್ತು, ಸ್ಮೃತಿಗಳಲ್ಲಿ ಪಾಂಡಿತ್ಯವಲ್ಲದೆ ಪುರಾಣ, ಇತಿಹಾಸ, ಸಂಗೀತ, ವ್ಯಾಕರಣ, ತರ್ಕ, ಜ್ಯೋತಿಷ್ಯ, ಯೋಗಗಳಲ್ಲಿಯೂ ನಿಷ್ಣಾತತೆ ಇತ್ತು. ಅಧಿಕ ವಿದ್ಯಾಸಂಪನ್ನ, ಸುಜ್ಞಾನ ಚಕ್ರವರ್ತಿ, ಅನುಪಮಾನಂದಾಬ್ಧಿ ಮೊದಲಾದ ಬಿರುದುಗಳು ನಿಜಗುಣನನ್ನು ಆಶ್ರಯಿಸಿ ಗೌರವ ಪಡೆದವೆಂದರೆ ಉತ್ಪ್ರೇಕ್ಷೆಯಾಗಲಾರದು.

೧. ಕಿರಿದರೊಳು ಪಿರಿದುಮರ್ಥಮನರಿಪ ಕೌಶಲ್ಯವನ್ನು ಕವಿ ತನ್ನ 'ಪುರಾತನರ ತ್ರಿವಿಧಿ'ಯಲ್ಲಿ ತೋರಿದ್ದಾನೆ. ಅರವತ್ತುಮೂವರು ಪುರಾತನರ ಚರಿತ್ರೆಗಳನ್ನು ೭೭ ತ್ರಿವಿಧಿಗಳಲ್ಲಿ ಅಚ್ಚುಕಟ್ಟಾಗಿ ಮುಗಿಸಿದ್ದಾನೆ. ಭಾಷೆಯಲ್ಲಿ ಮಾರ್ದವವೂ, ಪ್ರಖರತೆಯೂ ಕೂಡಿದೆ.

"ಶ್ರೀ ಗುರುವೆ ನಿಜಸುಖದ ಸಾಗರವೆ ತೆರೆವುಸಗು
ತಾಗಳುಂ ಬೆಳಗುತಿಹ ನಿನ್ನ ಕಡೆಗಣ್ಗ
ಳೀಗೆ ಸಂತಸವನಖಿಳರ್ಗೆ ||

ಇಂಗಡಲೊಳಿಂಪು ಬೆಳುದಿಂಗಳೊಳು ತಂಪು ಕುಸು
ಮಂಗಳೊಳು ಕಂಪು ಬೆರೆದಂತೆ ಪರಮನೊಳು
ಪಿಂಗದಗಸುತೆಗೆ ನತನಪ್ಪೆಂ ||

ಮಿಸುನಿ ತೊಡವೆನಿಸಿ ಬಹುಪೆಸರುದಳೆದಂತೆ ಭಾ
ವಿಸಿ ನೋಡಲಭವ ನಖಿಳರೆಂದೆನಿಪ ಗಣ
ವಿಸರವೆಲ್ಲಕ್ಕೆ ನತನಪ್ಪೆಂ ||"

೨. ವಿವೇಕಚಿಂತಾಮಣಿ ಒಂದು ಅದ್ಭುತವಾದ ವಿಶ್ವಕೋಶವಾಗಿದೆ. ಫ್ರಾನ್ಸಿನಂತಹ ಸಾಂಸ್ಕೃತಿಕ ಕೇಂದ್ರದಲ್ಲಿ ವಿಶ್ವಕೋಶ ನಿರ್ಮಾಣವಾಗುವುದಕ್ಕೆ ೩೦೦ ವರ್ಷಗಳ ಮುಂಚೆ ಕರ್ನಾಟಕದಲ್ಲಿ ಒಬ್ಬನೇ ಪುಣ್ಯಾತ್ಮ ಇಂತಹ ಮಹತ್ಕಾರ್ಯವನ್ನು ಸಾಧಿಸಿರುವುದು ಆಶ್ಚರ್ಯಕರವಾಗಿದೆ. ಇದು ಗದ್ಯ ಗ್ರಂಥ. ೧೦ ಪ್ರಕರಣಗಳನ್ನೂ ೭೬೫ ವಿಷಯಗಳನ್ನೂ ಒಳಗೊಂಡಿದೆ. 'ಸ್ಮೃತಿ ಪುರಾಣೇತಿಹಾಸ ಪುರಾತನೋಕ್ತಿಗಳನುಸಾರದಿಂದನುಭವಿಗಳಹುದೆಂಬಂತೆ ಸ್ವಕಪೋಲ ಕಲ್ಪಿತಮಲ್ಲದ ಸಾರತರಮಾದ ಸತ್ಯಾರ್ಥಗಳನೆ ಸಂಗ್ರಹಿಸಿ . . . ಬೆಳುಗನ್ನಡಮಾದ ವಚನ ರಚನೆಗಳಿಂ' ರಚಿಸಿರುವುದಾಗಿ ಕವಿ ಹೇಳುತ್ತಾನೆ. ಇದಕ್ಕೆ ನಿದರ್ಶನವಾಗಿ ವಿವೇಕಚಿಂತಾಮಣಿಯಲ್ಲಿನ 'ಆನಂದೋಪಾಧಿಭೇದ' ಪ್ರಕರಣವನ್ನು ಉದಹರಿಸಬಹುದು.

"ಮತ್ತಂ ವಿಷಯಾನಂದ, ಬ್ರಹ್ಮಾನಂದ, ವಾಸನಾನಂದ, ಮುಖ್ಯಾನಂದ, ನಿಜಾನಂದ, ಆತ್ಮಾನಂದ, ಅದ್ವೈತಾನಂದ, ವಿದ್ಯಾನಂದವೆಂಬವೇ ಆನಂದದಷ್ಟ ಭೇದಂಗಳವುಗಳಲ್ಲಿ ವನಿತಾದಿ ವಿಷಯಾನುಭವದಲ್ಲಿ ತೋರ್ಪುದೇ ವಿಷಯಾನಂದವೆನಿಸುವುದು. ನಿದ್ರೆ ತಾಳಿದಾಕ್ಷಣದಲ್ಲಿ ತೋರ್ಪುದೇ ವಾಸನಾನಂದವೆನಿಸುವುದು. ದಾನೋಪಾದಾನವಿಲ್ಲದುಪೇಕ್ಷಾಬುದ್ಧಿಯಲ್ಲಿ ತೋರ್ಪುದೇ ಮುಖ್ಯಾನಂದವೆನಿಸುವುದು. ಯೋಗಾಭ್ಯಾಸಬಲದಿಂ ಮನೋಲಯಮಾದಲ್ಲಿ ತೋರ್ಪುದೇ ನಿಜಾನಂದವೆನಿಸುವುದು. ಪ್ರಿಯಮಾದ ವನಿತಾದಿ ವಿಷಯಂಗಳ ಮಧ್ಯದೊಳು ತಾನೇ ಪ್ರಿಯತಮನೆಂದು ಅರಿತಲ್ಲಿ ತೋರ್ಪುದೇ ಆತ್ಮಾನಂದಮೆನಿಸುವುದು. ನಾಮರೂಪ ಪ್ರಪಂಚವೆಲ್ಲಂ ಮಿಥ್ಯೆ, ತಾನೆ ಸತ್ಯವೆಂಬ

ವಿವೇಕದಲ್ಲಿ ತೋರ್ಪುದೇ ಅದ್ವೈತಾನಂದವೆನಿಸುವುದು. ತತ್ತ್ವಮಸ್ಯಾದಿ ಮಹಾವಾಕ್ಯಜನಿತವಾದ ಅಪರೋಕ್ಷ ಜ್ಞಾನದಲ್ಲಿ ತೋರ್ಪುದೇ ವಿದ್ಯಾನಂದ ಮಕ್ಕುಂ."

ಕನ್ನಡದಲ್ಲಿ ಸ್ವತಂತ್ರವಾದ ಗದ್ಯಶೈಲಿ ಬೆಳೆಯಲು ಈ ಗ್ರಂಥ ಬಹು ಮಟ್ಟಿಗೆ ಸಹಾಯಮಾಡಿತೆನ್ನಬಹುದು. ಇದು ಸಂಸ್ಕೃತ, ಮರಾಟಿ, ತೆಲುಗು, ತಮಿಳು ಭಾಷೆಗಳಿಗೆ ಅನುವಾದಗೊಂಡಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ.

೩. ಪರಮಾರ್ಥ ಗೀತೆ: ೧೧ ಗತಿಗಳನ್ನೊಳಗೊಂಡ ಲಲಿತ ರಗಳೆಯ ಗ್ರಂಥ. ವಶಿಷ್ಠಮಹರ್ಷಿಗಳು ಶ್ರೀರಾಮಚಂದ್ರನಿಗೆ ಹೇಳಿದ ತತ್ವಾರ್ಥ ವನ್ನೇ ಇಲ್ಲಿ ಗೀತೆಯರೂಪದಲ್ಲಿ ಹೇಳಿರುವುದಾಗಿ ಕವಿ ತಿಳಿಸುತ್ತಾನೆ. ಸೃಷ್ಟಿ, ಸ್ಥಿತಿ, ಲಯಗಳ ನಿಜವಾದ ರಹಸ್ಯವನ್ನರಿತು ಕವಿ ಬಹಳ ಉದಾರ ಮತವನ್ನು ಅವಲಂಬಿಸಿ ಸರ್ವಧರ್ಮಸಮನ್ವಯವನ್ನು ಸೂಚಿಸುತ್ತಾನೆ.

"ಸಾಕ್ಷಾನ್ನಿರ್ಲಕ್ಷಣವಹನೀನು । ಈಕ್ಷಿಸೆ ನಿರ್ಗುಣವಾಗಿಹೆ ನೀನು ॥
ಅಜೆಯಿಂ ನಾನಾಗುಣಮಯನೆನಿಸಿ । ನಿಜದಿಂ ಬಹುಲಕ್ಷಣಯುತನೆನಿಸಿ ॥
ನಾನಾಶಕ್ತಿ ಸಮನ್ವಿತನೆನಿಸಿ । ನಾನಾವಿಧ ಲೀಲಾಸ್ಪದನೆನಿಸಿ ॥
ಸತತಂ ಸರ್ವನಿಯಾಮಕನಾಗಿ । ನುತ ಸರ್ವಗ ಸರ್ವಾತ್ಮಕನಾಗಿ ॥
ಕುಂದದೆ ಸ್ವೇಚ್ಛಾಚರಣೆಯನ್ನುಳ್ಳ । ಸ್ಪಂದಾಸ್ಪಂದಾಕಾರವನ್ನುಳ್ಳ ॥
ನೀನೇ ಸಕಲ ಜಗನ್ಮಯನಪ್ಪೆ । ಆ ನಿಜದಿಂದ ಮಹೇಶನೆನಿಪ್ಪೆ ॥ ೪ ॥

ಏವಂ ವಿಧಗುಣ ಲಕ್ಷಣಮುಳ್ಳ । ಭಾವದ ಕಲ್ಪಿತ ಕಲೆಗಳನ್ನುಳ್ಳ ॥
ನಿನ್ನೊಳು ನಾನಾವಿಧ ಶಕ್ತಿಗಳು । ನಿನ್ನೊಡನಗಲದ ಚಿಚ್ಛಕ್ತಿಗಳು ॥
ಕೆಲವೀ ಬ್ರಹ್ಮಾಂಡಾವಳಿಯಾಗಿ । ಕೆಲವಿಂತೀ ಭೂತಾತ್ಮಕವಾಗಿ ॥
ಸ್ಥಾವರ ಭೇದದ ರೂಪುಗಳಾಗಿ । ತೀವಿದ ಜಂಗಮದಾಕೃತಿಯಾಗಿ ॥
ಏನುಂಟಾದೆಲ್ಲಂ ತಾವಾಗಿ । ನಾನಾವಿಧ ಭೂತಾತ್ಮಕವಾಗಿ ॥
ತೋರ್ಪವು ನಿನ್ನಿಂ ಬೇರಿಲ್ಲಾಗಿ । ತೋರ್ಪೆಯು ನೀನೇ ಜಗನ್ಮಯನಾಗಿ ॥ ೫ ॥

ಶರನಿಧಿಯಲ್ಲಿ ಜಲಂಗಳವೆಂತು । ತೆರೆಯೆನಿಸುತ್ತಾಡುತ್ತಿಹವಂತು ॥
ಆ ನಿನ್ನಲ್ಲಿಯ ಸಂವಿತ್ತುಗಳು । ಭಾನುಕಳಾನಿಭ ಚಿಚ್ಛಕ್ತಿಗಳು ॥
ಸಂಕಲ್ಪಾದಿ ಮುಖತ್ವತೆ ವಿಡಿದು । ಝೋಂಕನೆ ಕೆಲವೀಭ್ರಮವಂ ಪಡೆದು ॥

ಜೀವರೆನಿಸಿ ವ್ಯವಹರಿಸುತ್ತಿಹವು। ದೇವರೆನಿಸಿ ಮಿಕ್ಕಿ ನಲಿರುತಿಹವು ॥
ಜೀವರೊಳಾಯಿತು ಭೌತಿಕದೇಹ। ದೇವರೊಳಾಯಿತು ಮಾಯಿಕದೇಹ ॥
ಅವರಿಗುಪಾಸ್ಯೋಪಾಸಕರೆಂಬ। ವಿವರಣೆಯೆಸೆವುದು ಮಹಿಮಾಲಂಬ ॥ ೬ ॥

ಬ್ರಹ್ಮನೆನಿಸಿ ಲೋಕವ ಸೃಜಿಸುತ್ತ। ಬ್ರಹ್ಮಾಧ್ಯಯನಾದಿಯನರುಪುತ್ತ ॥
ವಿಷ್ಣುವೆನಿಸಿ ಜಗಮಂ ಪಾಲಿಸುತ। ವೈಷ್ಣವ ಜನರುಗಳಂ ಪಾಲಿಸುತ ॥
ರುದ್ರನೆನಿಸಿಯೊಲ್ಮೆಸಿಕೊಳುತ್ತ। ಕ್ಷುದ್ರದಘವಸುರೆ ಸಂಹರಿಸುತ್ತ ॥
ಈಶ್ವರನೆನಿಸಿಯೆ ಭಜಿಸಿಕೊಳುತ್ತ। ಶಾಶ್ವತ ಸೌಖ್ಯಂಗಳ ಸೀವುತ್ತ ॥
ಸಾಧು ಸದಾಶಿವನಾಗಿ ಜಗತ್ತ। ಬೋಧಿಸಿ ತನ್ನ ಪದವನೀವುತ್ತ ॥
ಮತ್ತಾಯಾದೇವರ ಪೆಸರಿಂದ। ಚಿತ್ತದೊಲವ ನೀವುತ್ತಿಹೆ ಕಂದ ॥ ೭ ॥

ಸೇವಕರಿಷ್ಟವ ನೀವಾಶಕ್ತಿ। ಭಾವಿಸೆ ನಿನ್ನೊಳು ಸಂವಿಚ್ಛಕ್ತಿ ॥
ವಾಣಿಯೆನಿಸಿ ವಾಕ್ಸಿದ್ಧಿಯನಿತ್ತು। ಮಾಣದೆ ಲಕ್ಷ್ಮಿಯೆನಿಸಿ ಶುಭಮಿತ್ತು ॥
ಗಿರಿಜೆಯೆನಿಸಿ ಸೌಭಾಗ್ಯವನಿತ್ತು। ವರವಂಬಿಕೆಯೆನಿಸುತ್ತೊಲಿದಿತ್ತು ॥
ಯೋಗವನಿತ್ತು ಮನೋನ್ಮಣಿಯೆನಿಸಿ। ಭೋಗವನಿತ್ತು ಕುಂಡಲಿಯೆನಿಸಿ ॥
ಮತ್ತೆಯು ಬಹುನಾಮಂಗಳವೆರಸಿ। ತತ್ತದಖಿಳರೂಪಿಂದವತರಿಸಿ ॥
ತಾನೇ ಭುವನೇಶ್ವರಿಯಾಗಿಹಳು। ನಾನಾಭಕ್ತಿ ಸುಖಪ್ರದೆಯಹಳು ॥ ೮ ॥

ಶಿವನ ಕಥಾಗೋಷ್ಠಿಗೆ ಕಿವಿಗೊಡುವ। ಶಿವನಂ ಪೊಗಳೆ ರಸನೆಗುಡಿಯಿಡುವ ॥
ಶಿವಮೂರ್ತಿಗಳಂ ನೆನೆವುತ್ತಿರ್ಪ। ಶಿವನೋಲಗದೊಳು ಸಲೆ ನೆಲಸಿರ್ಪ ॥
ಶಿವನಲ್ಲಿಯೆ ಪರಿಚರ್ಯವನ್ನುಳ್ಳ। ಶಿವನರ್ಚನೆಯೊಳಗಭಿರತಿಯುಳ್ಳ ॥
ಶಿವನಸಿಪದದೊಳಗೆರಕತೆಯುಳ್ಳ। ಶಿವಸಂಪದದೊಳು ಸುಸ್ಥಿತಿಯುಳ್ಳ ॥
ಶಿವನಿಗೆ ತನುಮುಖ್ಯವನರ್ಪಿಸುತ। ನವವಿಧ ಸದ್ಭಕ್ತಿಯೊಳಿಂತಿರುತ ॥
ಭಕ್ತಿಯ ರೂಪಿಂದಾ ಸಂವಿತ್ತು। ಭಕ್ತರೊಳೈದಿಹುದೆಲ್ಲಾ ಹೊತ್ತು ॥ ೯ ॥

ಈ ನವವಿಧ ಭಕ್ತಿಯ ಪಂಥವಿಂದ। ಆ ನಿಖಿಳಗಿರೀಶ್ವರ ನೊಲವಿಂದ ॥
ಅಷ್ಟೈಶ್ವರ್ಯಂ ಗುಣವಾರೆಂಬ। ತುಷ್ಟಿ ಸದಾ ಸರ್ವಜ್ಞತೆಯೆಂಬ ॥
ನಿತ್ಯಸುಬೋಧಂ ಜೇರೊಂದೆಂಬ। ಸತ್ಯಮೆನಲ್ ಸ್ವಾತಂತ್ರ್ಯಮಿದೆಂಬ ॥
ತಾನಳಿಯದ ಶಕ್ತಿತ್ವವದೆಂಬ। ನಾನಾಶಕ್ತಿತ್ವಂ ತಾನೆಂಬ ॥
ಆರಂಗವಿುವೀಶನ ಪದವಕ್ಕು। ಮೀರಿದ ಭಕ್ತಿಗೆಯಿದೆ ಫಲವಕ್ಕು ॥
ಆ ನಿಜಭಾಗ್ಯಂ ಸಿದ್ಧಿಸಿದವರು। ಸೂನು ತಿಳಿಯೆ ಮುಕ್ತನೋಡವರು ॥ ೧೦ ॥

೪. ಪರಮಾನುಭವಬೋಧೆ: ಇದು ಬೃಹದಾರಣ್ಯಕೋಪನಿಷತ್ತಿನ ಸಾರಸಂಗ್ರಹದಂತಿದೆ. 'ವಿರಚಿಸುವೆನು ಯಾಜ್ಞವಲ್ಕ್ಯ ಮೈತ್ರೇಯಿಯ ವರ

ಸಂವಾದವನೆ ಕನ್ನಡವಾಗಿ ಪರಮಾರ್ಥವಿದು ಪರತರವೆಂದು ಪೊಗಳೆ ವಿಸ್ತಾರವಾಗಿ ಸಾಧಕರರಿವಂತೆ' ಎಂದು ಕವಿ ಹೇಳುತ್ತಾನೆ. ಸಾಂಗತ್ಯ ರೂಪದಲ್ಲಿದೆ. ಸಂಧಿ ೬, ಸೂತ್ರ ೧೨೨, ಪದ ೯೮೫. ಪದಾರಂಭದಲ್ಲಿ ಸೂತ್ರರೂಪವಾಗಿ ತಾತ್ಪರ್ಯವನ್ನು ಕಾಣಿಸಿದ್ದಾನೆ. ಇದು ಅಭ್ಯಾಸಿಗಳಿಗೂ ಜಿಜ್ಞಾಸುಗಳಿಗೆ ಬಹಳ ಉಪಕಾರಿಯಾಗಿದೆ.

"ಸಕಲಹಂಕ್ರಿಯೆಯಿಂದೆ ಭವಬಂಧದದು ಪ್ರವ
ರ್ತಕ ಕರ್ಮವಳಿಪುದಂಗನೆ ಕೇಳು ॥
ಸಕಲಹಂಕ್ರಿಯೆಯಂ ನಿವಾರಿಸಿ ನಿಲೆ ನಿವ
ರ್ತಕ ಕರ್ಮವದರಿಂದೆ ನಿಜಮುಕ್ತಿ ॥
ಕರಣಂಗಳಲ್ಲಿ ತೋರಿದ ದುಃಖನಿಕರವಾ
ಕರಣರಹಿತ ಸುಖಾತ್ಮನೊಳುಂಟೆ ॥
ಕನಸು ತಾನಿದಿರೆಂದು ಪುಸಿದೋರಿದಂತೆ ನೋ
ಡನಿಮಿತ್ತವಾಯ್ತು ವಿಶ್ವಭ್ರಾಂತಿ ॥
ನಿನ್ನ ಚಿದ್ಭ್ರಮೆ ನಿನ್ನ ಮರವೆಗರಿವಿಗೆ ಬೀ
ಜಂ ನೀನೆ ಪರಮಾತ್ಮನದರಿಂದೆ ॥
ಇದು ಸತ್ಯಾನುಭವವಿದು ಮಿಥ್ಯಾನುಭವವೆಂ
ದೊದವಿ ಬೋಧಿಪನೆ ಸದ್ಗುರುವಕ್ಕು ॥
ಶಿವನೆ ತಾನೆಂದು ಮಾನಸದೊಳು ಪೂಜಿಸ
ದವನಿಗೆ ಭವಬಂಧವಳಿವುವೆ ॥
ಭೇದವಳಿದು ನಿಂದ ನಿಲವೆ ಸಮಾಧಿಯೆಂ
ದಾದರದಿಂದೆ ಭಾವಿಸು ನೀರೆ ॥
ಭೇದವಭೇದವೆಂದೆರಡವರಲ್ಲಿಯು
ಭೇದಭಾವನೆಯೊಳೊಂದಿರೆ ಮುಕ್ತಿ ॥
ಊಟಕ್ಕೆ ವಿಷಯಕ್ಕೆ ಮರುಗುತಿಪ್ಪಾತಂಗೆ
ಕೂಟವಪ್ಪುದೆ ಶಿವಪದದೊಳು ॥"

೫. ಪರಮಾರ್ಥ ಪ್ರಕಾಶಿಕೆ. ೫ ಪರಿಚ್ಛೇದಗಳುಳ್ಳ ಗದ್ಯಗ್ರಂಥ. 'ಚೆನ್ನಸದಾಶಿವಯೋಗಿ ಕೃತ ಶಿವಯೋಗ ಪ್ರದೀಪಿಕೆಗೆ ಕನ್ನಡ ವ್ಯಾಖ್ಯಾನ'

ನಿಜಗುಣನ ಗದ್ಯಶೈಲಿಯ ಮಾದರಿಗಾಗಿ ಈ ಭಾಗವನ್ನು ಉದಹರಿಸ ಲಾಗಿದೆ.

"ನಾದಬ್ರಹ್ಮ ಸ್ವರೂಪ: ನಾಲ್ಕು ಪ್ರಕಾರವಾಗಿ ಸಾಧಿಸುವ ನಾದಬ್ರಹ್ಮವು ಘೋಷವೆಂದು, ರವವೆಂದು, ಸ್ವನವೆಂದು, ಶಬ್ದವೆಂದು, ಸ್ಫೋಟವೆಂದು, ಧ್ವನಿಯೆಂದು, ಝೇಂಕಾರವೆಂದು, ಧ್ವಂಕೃತಿಯೆಂದು ಕ್ರಮದಿಂದೆಂಟು ಪ್ರಕಾರವಾಗಿಹುದರಲ್ಲಿ ಶ್ರೋತ್ರಂಗಳ ಸಂಗುಷ್ಠದಿಂದೊತ್ತಿ ಕೇಳ್ವ ನಾದವೇ ಘೋಷವೆನಿಸುವುದು. ಮನದಲ್ಲಿ ಒಡೆದ ಕಂಚಿನ ಧ್ವನಿಯಂತೆ ಕೇಳಲದೇ ರವವೆನಿಸುವುದು. ಉಪಾಂಗದ ಧ್ವನಿಯಂತೆ ಕೇಳಲದೇ ಸ್ವನವೆನಿಸುವುದು. ನುಡಿವಕ್ಷರಂಗಳಲ್ಲಿ ಯನುಸ್ಯೂತವಾದುದೇ ಶಬ್ದವೆನಿಸುವುದು. ಮನದಲ್ಲಿ ಸಂಕಲ್ಪರೂಪದಿ ವರ್ತಿಪುದೇ ಸ್ಫೋಟವೆನಿಸುವುದು. ಮೃದು ವೀಣಾನಾದ ದಂತೆ ಘಂಟಾಧ್ವನಿಯಂತೆ ಕೇಳಲದೇ ಧ್ವನಿಯೆನಿಸುವುದು. ಕುಸುಮಾ ಮೋದಕ್ಕೆರಗಿದ ತುಂಬಿಯ ಧ್ವನಿಯಂತೆ ಕೇಳಲದೇ ಝೇಂಕಾರವೆನಿಸುವುದು. ಶಂಖ ಕಹಳಾ ಧ್ಯಾನದಂತೆ ಕೇಳಲವೇ ಧ್ವಂಕೃತಿಯೆನಿಸುವುದೀ ಧ್ವಂಕೃತವೇ ಸಕಲ ನಾದಲಯ ಸ್ಥಾನವಪ್ಪುವದರಿಂದವೇ ಪ್ರಣವವೆನಿಸುವುದು. ಆ ಪ್ರಣ ವವೇ ಶಿವತತ್ವವೆನಿಸುವುದು. ಆ ಅಖಂಡಿತಾನಂದ ಸ್ವರೂಪವಾದ ಶಿವ ತತ್ವವೇ ಆಧಾರವಾಗುಳ್ಳ ಪರಿಪೂರ್ಣವಾದ ಪರಮ ಶಿವಭಾವವೆನಿಸುವುದು. ಮಹಾಶಿವಶಕ್ತಿಯಲ್ಲಿ ಜೀವನ್ಮುಕ್ತನ ನವಚ್ಛಿನ್ನ ಚೈತನ್ಯವು ತದಾಕಾರದಿಂ ಕ್ಷೀರದೊಳ್ ಕ್ಷೀರಂ, ಘೃತದೊಳ್ ಘೃತಂ ಬೆರದಂತೆ ಬೆರಸಿ ಸರ್ವಸಾಕ್ಷಿ ತ್ವದಿಂ ನಿಸ್ತರಂಗವಾಗಿ ಇಂದ ನಿಲವೇ ಅಮನಸ್ಕರಾಜಯೋಗವದೇ ಪರಮ ಕೈವಲ್ಯ ಸ್ವರೂಪಮುಕ್ಕುಂ"

೬. ಅನುಭವಸಾರ: ಆಕಾರದಲ್ಲಿ ಸಣ್ಣದಾದರೂ ಅನೇಕ ವಿಷಯ ಗಳನ್ನೊಳಗೊಂಡ ಮಹತ್ತ್ವದ ಗ್ರಂಥ. ಸಕಲ ವೇದಾಂತ ಸಾರವನ್ನು ಸಾಧಕರಿಗೆ ತಿಳಿವಂತೆ ಕವಿ ಬರೆದಿದ್ದಾನೆ. ರನ್ನಗನ್ನಡಿಯಲ್ಲಿ ತನ್ನ ಮೊಗ ದಂದ ಕಾಣುವಂತೆ ನಿಜವಿದರೊಳು ಕಾಣುತ್ತದೆ ಎಂದು ಹೇಳುತ್ತಾನೆ.

"ಇದರೊಳರ್ಥವೆ ಲೇಸು ಪದಬಂಧವೊಳ್ಳಾಸು
ಮೊದಲಾದವಿಲ್ಲದಿರೆ ತೊಡವನುಳಿದು ಕೂ
ಡಿದ ಕಾಂತೆಯಂತೆ ಸೊಗಸಕ್ಕು ॥
ಮುನ್ನಿನಾ ತ್ರಿವಿಧಿ ಸೊಗಸಂ ನೀಡುತರಲಿವೇ
ನೆನ್ನವಾಲಿಪುದು ಸಂಜೆಯೊಳು ಶಶಿಯ ಬೆಳು
ಜೊನ್ನವಿರೆ ಸೊಡರಿಗೆಳಸರೆ ॥

ಎಂದು ವಿನಯದಿಂದ ಹೇಳಿಕೊಂಡಿದ್ದಾನೆ. ಗ್ರಂಥದಲ್ಲಿ ೮ ಸಂಧಿಗಳು ೪೬ ಸೂತ್ರಗಳೂ ೫೨೫ ಪದ್ಯಗಳೂ ಇವೆ. ಗಹನವಾದ ವೇದಾಂತ ತತ್ತ್ವಗಳನ್ನು ಎಷ್ಟು ಸುಲಭವಾಗಿ ಮನೋಹರವಾಗಿ ಕವಿ ಬಣ್ಣಿಸಬಲ್ಲನೆಂಬುದಕ್ಕೆ ಕೆಳಗೆ ಕಾಣಿಸಿರುವ ಪದ್ಯಗಳೇ ನಿದರ್ಶನವಾಗಿವೆ.

ಸೂತ್ರ ॥ ಲೌಕಿಕದೊಳು ಲೌಕಿಕವನೊಂದಿ ಚರಿಸುವ ಯೋಗಿ
ಗೇಕೆ ಕರ್ಮದ ಬಾಧೆ ದೊರಕೊಳ್ಳದು ॥

ತ್ರಿವಿಧಿ ॥ ಮನು ಮುನೀಶ್ವರರರಿಯದನುಪಮಾನಂದ ಚಿ
ದ್ಘನವೆ ಗುರುವರ್ಯ ಶರಣಾಗೆನುತ ಸೂನು
ವಿನಯದಿಂ ಮತ್ತೆ ಬೆಸಗೊಂಡ ॥ ೧ ॥

ಗುರುವೆ ಚಿತ್ತಯಿಸು ಸರ್ವರನು ಬಾಧಿಪ ಕರ್ಮ
ವಿರುತಿರ್ದು ಮುಕ್ತನನು ಬಾಧೆಗೊಳಿಸದಿಹ
ಪರಿಯಾವುದೆನಗೆ ಕರುಣಿಪುದು ॥ ೨ ॥

ಎಂದ ವಿಜ್ಞಾಪನವನಂದು ಗುರುಕೇಳಿ ಮುದ
ದಿಂದಾತ್ಮಜಂಗೆ ತಿಳಿಯಲೊರೆದಂ ಮನದ
ಸಂದೇಹವೈದೆ ಬಿಡುವಂತೆ ॥ ೩ ॥

ಗರುಡಮಂತ್ರಿ ಸರ್ಪನಿರದೆ ಭೀತಿಸುವಂತೆ
ಪರಮಾರ್ಥ ಯೋಗಸಿದ್ಧನಂ ಕರ್ಮವಾ
ವರಿಸದೇ ತಾನೆ ಕೆಲಸಾರ್ಗು ॥ ೪ ॥

ಮತ್ತೆ ತನುಕರಣಾದಿ ಮೊತ್ತದೊಡನಿರ್ದೊಡಾ
ಪತ್ತು ಬಂದರಸದತ್ಯಾಶ್ರಮಿಗೆ ಜಲಂ
ಪತ್ರದಿಹ ಕಮಲ ದಳದಂತೆ ॥ ೫ ॥

ಮರದೊಳಿಹುದಗ್ನಿಯೊ ಮರನಿಲ್ಲವದರೊಳಂ
ತಿರೆ ಯೋಗಿ ಸಂಸರಣದೊಳಿರುತಿಹನು ಸಂ
ಸರಣವಾ ಯೋಗಿಯೊಳಗಿಲ್ಲ ॥ ೬ ॥

ಬೆಳಕು ಕತ್ತಲೆಗಳಂ ತಳೆದೊಡಾಗಸದ ನಿ
ರ್ಮಳವಳಿಯದಂತೆ ತಿಳಿ ಪುಣ್ಯಪಾಪಂಗ
ಳೊಳು ಲೇಪವಿಲ್ಲ ಮರಿದಂಗೆ ॥ ೭ ॥

ದಾವನಡಸಿದ ನಗವನಾವ ಮೃಗಪಕ್ಷಿ ಪುಗ
ನಾ ವಿಧಿಯೊಳಾತ್ಮ ನಿಜನಿಷ್ಠನಂ ಕರ್ಮ
ನಾವರಿಸಲರಿಯುದಿದು ಸತ್ಯ ॥ ೮ ॥

ಪೊಲಗೇರಿಯೊಳು ಕಾಶಿಯೊಳು ಮರನೆಯುರಿವಿನೊಳು
ತಿಳಿದೇಹವಳಿಯು ಊಚನೀಚತೆಗಳಂ
ಡಲೆಯಿಲ್ಲ ವಾತ್ಮವಿದನಲ್ಲಿ ॥ ೯ ॥

ಭೇದಿಸಾ ವಿಧಿ ನಿಷೇಧಾರಿಯುಂ ಸಮವೆ ನಿಜ
ನಾದ ಯೋಗೀಂದ್ರನೊಳಗೆ ವಾರಣಾಸಿಯೊ
ಳಾದ ಕರ್ಮದ್ವಯುದಪಾಂಗ ॥ ೧೦ ॥

ಮರದ ಕೊನೆ ಮುರಿದೊಡಲ್ಲಿರುತಿರ್ಪವಂ ಬೀಳ್ವ
ವಿರಸಕ್ಕೆ ಬಯುಸದಿರಲೆಂತು ಬೀಳ್ವನಾ
ಪರಿ ತತ್ವದರ್ಶಿ ಗಹಮುಕ್ತಿ ॥ ೧೧ ॥

ವಿದಿತ ಧೂಮಾದಿ ಮಾರ್ಗದೊಳರ್ಚಿರಾದಿ ಮಾ
ರ್ಗದೊಳೈದಿ ಮರಳಲಿಲ್ಲವಾತಂ ಪೂರ್ಣ
ಪದನೆ ತಾನಾದ ಕತದಿಂದೆ ॥ ೧೨ ॥

ಇಂತಪ್ಪವಂಗಣಿಮ ಮುಂತಾದ ವಿಲ್ಲದಿಹು
ದೆಂತೆದೊಡಾತನವನೆಲ್ಲನುಂ ಜಡ
ಭ್ರಾಂತಿಯೆಂದೆಳಸದಿಹನೈಸೆ ॥ ೧೩ ॥

ಆ ಸರ್ವಸಿದ್ಧಿಗಳಿಗಾಸೆ ಮಾಡಿದೊಡೆ ತಾ
ನಾ ಸಾಧನಂಗಳನು ಮಂತ್ರಮುಖದೊಳ
ಭ್ಯಾಸವುಂ ಮಾಡೆ ದೊರೆಕೊಳ್ಗು ॥ ೧೪ ॥

ಹಿಡಿವ ಮೋಹಕವಿಲ್ಲ ಬಿಡುವ ಬಾಧಕವಿಲ್ಲ
ಪಡೆವ ಗತಿಯಾಸೆ ಮೊದಲಿಲ್ಲ ಯೋಗಿಗವು
ಜಡದೃಶ್ಯ ಮಿಥ್ಯೆಯುಹವಾಗಿ ॥ ೧೫ ॥

ಹಾನಾದಿ ಯತ್ನಂಗಳೇನು ಮಿಲ್ಲದ ಯೋಗಿ
ಗೀ ನಿಖಿಳಭೋಗವಹವು ತಾವೇ ಶರಧಿ
ಗಾನದಿಗಳೈದೆ ಬೆರೆವಂತೆ ॥ ೧೬ ॥

ಮಾನವಿಲ್ಲದ ಯೋಗಿಗಾ ನಿಖಿಳಭೋಗ ಸಂ
ಧಾನದೊಡನಸತಿ ನಿಜಪತಿಯೊಳೆಂತುದಾ
ಸೀನವಂತೆರಕ ವಣುವಿಲ್ಲ ॥ ೧೭ ॥

ವೇದವರಿದಂಗಾವ ಬಾಧೆಯಿಲ್ಲೆಂದು ತಾ
ನೋದಿ ಪೇಳುವದು ಜ್ಞಾತ್ವಾದಿ ವಾಕ್ಯದೊಳ
ಗಾದರಿಸಿ ನೀನು ತಿಳಿ ಬೋಧ್ಯ ॥ ೧೮ ॥

ಏಳು ಸೂತ್ರಂ ತ್ರಿವಿಧಿಯೊಳರೊಡನೆನೆಂಭತ್ತು
ಮೇಳವೆನಿಸುತ್ತೆ ಮುಕ್ತರುಗಳಿರವನಿದು
ಪೇಳುತಿಹುದೇಳನೆಯ ಸಂಧಿ ॥ ೧೯ ॥

೭. ಕೈವಲ್ಯ ಪದ್ಧತಿ: ಇದನ್ನು ನಿಜಗುಣ ಶಿವಯೋಗಿ ತನ್ನ ಉತ್ತರ ವಯಸ್ಸಿನಲ್ಲಿ ಪ್ರಬುದ್ಧಾವಸ್ಥೆಯಲ್ಲಿ ಬರದಿರಬೇಕೆಂದು ನಮಗೆ ತೋರುತ್ತದೆ. ಹಿಂದಿನ ಗ್ರಂಥಗಳಲ್ಲಿ ಕಾಣುವ ಪಾಂಡಿತ್ಯ ಪ್ರೇಮವೂ ಪ್ರೌಢಮಾರ್ಗವೂ ಇದರಲ್ಲಿ ಕಾಣಬರುವುದಿಲ್ಲ. ಕವಿ ಅನುಭವದಿಂದ ಹಣ್ಣಾಗಿದ್ದಾನೆ, ಅವನ ಮನಸ್ಸು ಕಳಿತಿದೆ. ಅವನ ಆತ್ಮ ನಿಜಾನಂದದಲ್ಲಿ ಲೀನವಾಗಿದೆ. ಈ ಆತ್ಮಾನಂದವನ್ನೇ ಕೈವಲ್ಯ ಪದ್ಧತಿಯಲ್ಲಿ ಸಾಧಕರಿಗೂ, ಜಿಜ್ಞಾಸುಗಳಿಗೂ ಅರುಹುತ್ತಾನೆ 'ಯೋಗಿ ನಿಜಾನಂದದೊಳು ನುಡಿಸುವ ವೀಣೆ ರಾಗರಸದ ತರಂಗಿಣಿ' ಎಂದು ಕವಿ ಹೇಳುವ ಮಾತು ಅವನ ಈ ಕೃತಿಗೇ ಅನ್ವಯಿಸುತ್ತದೆ. ಭಾವಗಳ ಉಕ್ಕಂದವೂ, ರಸಗಳ ವರ್ಷ ವೈಭವವೂ ಕೈವಲ್ಯ ಪದ್ಧತಿಯಲ್ಲಿ ಮೈವೆತ್ತು ಬಂದಂತಿದೆ. ಕೈವಲ್ಯಸಾಧನೆ ಒಂದು ಅದೃಶ್ಯಭೂತನೊಡನಾಟವೆಂಬ ಭೀತಿಭಾವನೆ ತೆರಳಿ ಅದು ನಲ್ಲಳ ಚೆಂದುಟಿಗಳಿಂದ ಚೆಲ್ಲುವ ಮುತ್ತಿನ ಮಾತುಗಳೆಂಬ ನಂಬಿಕೆಯುಂಟಾಗುತ್ತದೆ. ನಿಜಗುಣನಾನಂತರ ಬಂದ ಮುಪ್ಪಿನ ಷಡಕ್ಷರಿ, ಸಪ್ಪಣ್ಣಸ್ವಾಮಿ, ಶಾಲ್ಯದ ಅರಸರು, ವೇದಾಂತಿ ಶಿವರಾಮಶಾಸ್ತ್ರಿ, ಆರ್ಕಾಪುರದ ಕೃಷ್ಣಯೋಗಿ ಮೊದಲಾದ ಹಾಡುಗಬ್ಬಕಾರರೆಲ್ಲರ ಕೃತಿಗಳ ಮೇಲೂ ಕೈವಲ್ಯ ಪದ್ಧತಿ ಸ್ಥಿರವಾದ ಪ್ರಭಾವಮುದ್ರೆಯನ್ನೊತ್ತಿದೆ.

ಕೈವಲ್ಯ ಪದ್ಧತಿಯನ್ನು ೫ ಸ್ಥಲಗಳ ೬೪೮ ಪದ್ಯಗಳಲ್ಲಿ ಕವಿ ಬರೆದಿದ್ದಾನೆ.

ನಿಂದಾಸ್ತುತಿ ಪದ್ಧತಿಯಲ್ಲಿ ಶಿವನನ್ನು ಕವಿ ಬಣ್ಣಿಸುವ ಬಗೆ ಆಕರ್ಷಕ ವಾಗಿದೆ.

"ಸಾರವಸ್ತುವಲ್ಲದನ್ಯವನೊಲಿವೆ ಸುವಿ। ಚಾರವಿಲ್ಲವೇಕೆ ನಿನ್ನೊಳು ದೇವರೆ ॥ ಪ ॥

ಕೂಡೆ ಕಂಪುವೆತ್ತ ಗಂಧವನುಳಿದು ಸುಡು। ಗಾಡಬೂದಿಯು ತಾಳ್ದೆ ಮೈಯೊಳು ದೇವರೆ ॥
ಮಾಡಿದಲಂಕಾರವೆಲ್ಲವ ನೊಲ್ಲದೆ ಕೊಂ। ಡಾಡಿ ತೊಟ್ಟೆ ಪನ್ನಗಂಗಳ ದೇವರೆ ॥ ೧ ॥

ಪಿಂಗಿ ತೋರಹಾರವಂ ಮಿಗೆ ಮುಂಡ ಮಾಲೆ। ಹಂಗವಿತ್ತೆ ಸಂತಸದಿಂದೆ ದೇವರೆ ॥
ಪಿಂಗಳದುಕೂಲವನೊಮ್ಮೆ ಪೊದೆಯದೆ ಮಾ। ತಂಗ ಚರ್ಮವಾಂತೆ ಭಾವಿಸೆ ದೇವರೆ ॥ ೨ ॥

ವಾರಣಾದಿ ವಾಹನಂಗಳನಗಲಿ ನೀನು। ಸಾರಿ ಬಿಡದೆತ್ತನೇರಿದೆ ದೇವರೆ ॥
ಭೂರಿವಿಶ್ವವಲ್ಲಭನಾಗಿ ಮತ್ತೆ ಮನ। ವಾರೆ ತಿರಿದುಂಡು ಬಾಳುವೆ ದೇವರೆ ॥ ೩ ॥

ಗಾಡಿಯುಳ್ಳ ನಿರ್ಜರಾಳಿಯು ನೆಳಸದೊಂದು। ಗೂಡಿದೆ ಪೈಶಾಚವೃಂದವ ದೇವರೆ ॥
ನೋಡದೆ ಹೇಮಾದ್ರಿವಾಸವನೊಪ್ಪಿ ಮನೆ। ಮಾಡಿಕೊಂಡೆ ಪ್ರೇತ ಭೂಮಿಯ ದೇವರೆ ॥ ೪ ॥

ಮೋಹವಿಲ್ಲದೊಂದರೊಳಿಂತು ನೀನು ಸುರಸ। ಮೂಹ ದಿಷ್ಟಸಿದ್ಧಿ ಮಾಳ್ಪುದು ದೇವರೆ ॥
ಊಹಿಸಲಾತ್ಮಾನುಭವಿಗೆ ಭೋಗದೊಳು ನಿ। ರ್ಮೋಹವೈಸೆ ಶಂಭುಲಿಂಗವೆ ದೇವರೆ ॥ ೫ ॥"

ಪರಮ ಶ್ರೇಯಸ್ಪ್ರದವಾದ ವಿರಕ್ತಿ ಮಾರ್ಗವಿರುವಾಗ ಅದನ್ನು ನಿರಾಕರಿಸಿ ವಿಷಯಾಸಕ್ತಿಯ ಹೀನ ಮಾರ್ಗವನ್ನೇ ಮನಸ್ಸು ಏತಕ್ಕೆ ಅನುಸರಿಸುವುದು? ಎಲ್ಲ ಆಧ್ಯಾತ್ಮಿಕ ಸಾಧನೆಗೂ ಮುಖ್ಯವಾದುದು ಮನಸ್ಸು. ಅದನ್ನು ಕೈಯಲ್ಲಿ ಹಿಡಿದ ಹೊರತೂ ಯಾವ ಸಿದ್ಧಿಯೂ ಸಾಧ್ಯವಿಲ್ಲ, ಎಲ್ಲ ಕ್ರಿಯೆಯೂ ನಿಷ್ಫಲವಾಗುವುದು.

"ಯಾಕೆ ವಿರತಿಯುನುಳಿದು ಹೀನ ವಿಷಯವನೊಲಿವೆ
ಕಾಕು ಮಾನಸವೆ ನಿನಗದರೊಳೇನುಂಟು ॥ ಪ ॥

ಚಲುಪಾಲ ಚೆಲ್ಲಿ ಸುರೆಗುಡಿವಂತೆ ಮಧುರಾನ್ನ
ದೊಲವರತು ಪಳಿ ಮಾಂಸವನು ಭಕ್ಷಿಪಂತೆ ॥

ಗೆಲುವು ಬರಲೊಲ್ಲದೆ ಮಹಾರುಜೆಯು ನುಂಬಂತೆ
ಸಲೆ ತತ್ವ ಮತಿಗೆಡಿಸಿ ಮರೆವೆಯೊಳು ಸುಳಿವೆ ॥ ೧ ॥

ದಾರಕ್ಕೆ ಹಾರ ಮಣಿಗಳನು ತೆಗೆದಿಡುವಂತೆ
ಸಾರ ಕತ್ತುರಿದೊಳೆದು ಕೆಸರದೊಡೆವಂತೆ ॥
ಮೇರುವನು ಬಿಟ್ಟು ಗದುಗನು ಪಿಡಿದು ಬಾಳ್ವಂತೆ
ಚಾರುಪರಮಾರ್ಥವನು ಪಿಂಗಿ ಪುಸಿವಿಡಿವೆ ॥ ೨ ॥

ಶ್ರುತಿಯು ಸುವಿಚಾರವನು ಜರಿದು ತರ್ಕಿಸುವಂತೆ
ವ್ರತನಿಷ್ಠೆಗೆಟ್ಟ ಸೊಣನಗಿದು ತಿಂಬಂತೆ ॥
ಗತಿಯೊಳುತ್ತಮ ಶಂಭುಲಿಂಗವಾಗಿಹ ಮುಕ್ತಿ
ಯತಿಶಯವನುಳಿದು ಲೌಕಿಕದೊಳೊಡವೆರವೆ ॥ ೩ ॥

ನಿಜವಾದ ಅಧ್ಯಾತ್ಮ ಊರುಬಿಟ್ಟು ಕಾಡುಸೇರಿ ಕಾವಿ ಕಪನಿ ಹಾಕಿಕೊಂಡು ಮೂಗುಹಿಡಿದು ಕುಳ್ಳಿರೆಂದು ಹೇಳುವುದಿಲ್ಲ. ಪ್ರಪಂಚದಲ್ಲಿದ್ದರೂ ಪ್ರಾಪಂಚಿಕನಾಗಿರಕೂಡದು. ಪ್ರಪಂಚದಲ್ಲಿದ್ದೂ ಪ್ರಾಪಂಚಿಕ ವಿರತಿಯನ್ನು ಹೊಂದಿದವನೇ ಹಿರಿಯನು ಎಂಬುದೇ ನಿಜಗುಣನ ಮತ. ಲೌಕಿಕ ಪಾರಮಾರ್ಥ, ವಿದ್ಯಾವಿದ್ಯೆ, ನಿಜಸುಳ್ಳುಗಳಿಗಿರುವ ಅಂತರ ಬಹಳ ಸೂಕ್ಷ್ಮವಾದುದು. ಅವು ಎರಡೂ ಒಂದೇ ಗುಣದ ಎರಡು ಮುಖಗಳು. ಇತ್ತ ಒಲಿದರೆ ಪರಮಾರ್ಥ, ವಿದ್ಯೆ, ನಿಜ; ಅತ್ತ ಒಲಿದರೆ ಲೌಕಿಕ, ಅವಿದ್ಯೆ, ಸುಳ್ಳು. ಜಾಣನಾದವನು ಎರಡನ್ನೂ ಅರಿತಿರಬೇಕು. ಎರಡರ ಮೇಲೆ ಹಾಯ್ದು ಅವಿನಾಶಿಯಾದ ಅನಂತದಲ್ಲಿನ ಏಕಸ್ಥಿತಿಯನ್ನು ಅರಿಯಲೆತ್ನಿಸಬೇಕು.

"ಜಾಣನು ಲೌಕಿಕ ಪರಮಾರ್ಥವೆರಡನು
ಮಾಣದೆ ಕೂಡಿ ನಡಿಸುತಿಹನಿಂತು ॥ ಪ ॥

ತರುಣಿಯು ಮೊಲೆಯೊಂದ ನುಣುತಲಣುಗ ನನ್ಯ
ಕರದೊಳುಳಿವ ಕುಚಾಗ್ರವ ನೋವುವಂತೆ ॥
ನರಜನ್ಮವಿಡಿದಿಹ ಭೋಗಾನುಭವದೊಳು
ಪರಲೋಕಗತಿಯು ಸಾಧನದೊಳೊಂದಿಹನು ॥ ೧ ॥
ಕೊಳನ ಹೊಕ್ಕಡೆಯೊಡಲಿನ ತಂಪು ಬಿಸಿಲಿನ
ಜಳವನು ಮಿಕ್ಕಮೈಯೊಳು ಕಾಣ್ಬನಂತೆ ॥

ತಿಳಿವಿನ ಸುಖವನು ವಿಷಯ ಬಾಧೆಯನು ಸಂ
ಗೊಳಿಸುತೆ ಸಮಯವೊಂದರೊಳೈದುತಿಹನು ॥ ೨ ॥
ಪರನ ಸಂಗನ ಸೊಗಸನು ಮರೆಯದೆ ನಿಜ
ಪುರುಷನೊಳೊಂದುವ ಪುಂಶ್ಚಲಿಯಂತೆ
ಗುರು ಶಂಭುಲಿಂಗದ ನೆನಹು ನೆಲಸಿಹ ಬಾಹ್ಯ
ಪರಿಕರದಭಿರತಿಯನು ಪಿಂಗದಿಹನು ॥ ೩ ॥

ಸಾಧನಯೋಗದಲ್ಲಿ 'ಶರಣಸತಿ ಲಿಂಗಪತಿ' ಎನ್ನುವ ಲಿಂಗಾಂಗ ಸಾಮರಸ್ಯ ಭಾವ ಶಿವಶರಣರಿಗೆ ಅತ್ಯಂತ ಪ್ರಿಯವಾದ ವಿಷಯ. ನಿಜಗುಣನೂ ಅದರ ಬಗ್ಗೆ ಬಹಳ ಸ್ವಾರಸ್ಯವಾಗಿ ಹೇಳಿದ್ದಾನೆ.

"ಶರಣ ಸತಿಯ ಮದುವೆಯ ಸಂಭ್ರಮವನು । ನೋಡಿರಮ್ಮ
ಪರಮಾನಂದ ಪಯೋನಿಧಿಯೊಳಗೋ । ಲಾಡಿರಮ್ಮ ॥ ಪ ॥

ಸಿಂಗರಿಸಿದ ಶುಭ ಮಂದಿರವಂದದ । ಹಂದರವಮ್ಮ
ಮಂಗಳಚೌಕದ ಹಸೆಯುಜಗುಲಿ ಹಸ । ನಾದುದಮ್ಮ ॥
ಕಂಗೊಳಿಸುವ ಕಲಶಗಳಿಂದೈರಣೆ । ತುಂಬಿತಮ್ಮ
ಪಿಂಗದವರೊಳೊಪ್ಪುವ ತಳಿರೆಡೆವರ । ವೆನಿಸಿತಮ್ಮ ॥ ೧ ॥

ಕಲಶೋದಕದೊಳು ಮಿಂದು ಶುಚಿತೆಯುಳ । ವಟ್ಟುದಮ್ಮ
ತಿಳಿವಿನ ಬೆಳುವಟ್ಟೆಯನೊಲಿದುಡೆ ಚಲು । ವೆತ್ತುದಮ್ಮ ॥
ತಿಲಕ ಭಸಿತ ರುದ್ರಾಕ್ಷಿಯ ಮಣಿದೊಡವಾದುಪಮ್ಮ
ವಿಳಸಿತ ಶಿವ ಹಸ್ತಾಬ್ಜದ ತೊಂಡಿಲು । ಗಟ್ಟಿತಮ್ಮ ॥ ೨ ॥

ನೆರೆದ ಗಣಂಗಳೊಸಗೆಯ ಸುವಾಸಿನಿ । ಯರುಗಳಮ್ಮ
ಪರಿವಿಡಿದೊರೆವಾಗಮ ವಿಧಿವಾದ್ಯದ ರಭಸವಮ್ಮ ॥
ಪರಮಂತ್ರದ ಶೋಭಾನವಿಂಬಾಗಿರೆ । ಪಾಡಿತಮ್ಮ
ಸರಿದುದು ಮಾಯಾಮಲ ಕರ್ಮದತೆರೆ । ಯಾಗಳಮ್ಮ ॥ ೩ ॥

ಭಜನೆ ಭಕುತಿಗಳಿವೆ ಜೀರಿಗೆ ಬೆಲ್ಲ । ವಾದವಮ್ಮ
ನಿಜದೀಕ್ಷಾಸಮಯದ ಸುಮುಹೂರ್ತ ಸ । ಮನಿಸಿತಮ್ಮ ॥
ಸುಜನಜನದ ಕೈವಾರವೆ ಮಂಗಳ । ಪಾಠವಮ್ಮ
ತ್ರಿಜಗನ್ನುತ ಗುರುಕರುಣ ರಸದ ಕೈ । ಧಾರೆಯಮ್ಮ ॥ ೪ ॥

ಮೆರೆವ ಸಿರದರಮನೆಯ ನಿಬ್ಬಣವೈ । ತಂದುದಮ್ಮ
ಕೊರತೆ ರಹಿತ ಶಂಭುಲಿಂಗನೇ ಮದ । ವಳಿಗ ನಮ್ಮ ॥

ಮೆರೆದಿನಿಸಗಲದೆನೇಹವೆರಸಿ ಕೈ। ವಿಡಿದನಮ್ಮ
ನೆರೆದಿಹ ಮುತ್ತೈದೆ ಶರಣವಧು ನಿಜ। ಕಾಣಿರಮ್ಮ ॥ ೫ ॥

ಇಂತು ವಿವಾಹವಾದ ತರುಣ ತರುಣಿಯರ ದಾಂಪತ್ಯ ಜೀವನವನ್ನು ಕವಿ ಹೃದಯಂಗಮವಾಗಿ ವರ್ಣಿಸುತ್ತಾನೆ

"ಸತಿಪತಿಗಳಿವರ ಸಮರತಿ ಸುಖದ ಬಾಳುವೆಗೆ
ಪ್ರತಿಯುಂಟೆ ಲೋಕದೊಳು ನೋಡೆ ಲಲಿತಾಂಗಿ ॥ ಪ ॥

ಕಂಗಳೊಳಿನ ಸೋಮಸೂರ್ಯರ ನಡುವೆ
ಸಿಂಗರದ ನೀಲದರಮನೆಯ ಮಧ್ಯದೊಳು ॥
ರಂಗುವೆಳಗೆಸೆವ ಸಜ್ಜೆಯು ಶಕುನಿಮಂಚದೆಡೆ
ಗಂಗವಿಸಿ ಬಂದು ಭರದೊಳು ಜವಳಿಗೊಂಡು ॥ ೧ ॥

ನಿಳಿಸಡಿಲುತಿರೆ ತಾನೆ ತೊಟ್ಟ ಕಂಚುಕಗಳೆಯೆ
ನೆರೆ ತವಕವದರಿಂದೆ ಮುಂದುವರಿಯೆ ॥
ಮುರಿದೊಡೆ ಲಜ್ಜೆ ಗಾಢಾಲಿಂಗನದ ಸೊಗಸು
ಧರೆಯೊಳಾಳುತ್ತ ಸವಿಗಲೆಯೊಳೇಳುತ್ತೆ ॥ ೨ ॥

ಬೆರಸಿ ಬೇರೆನಿಸದೆರಡಾಲಿ ಕಲ್ಲುಗಳೇಕ
ಸುರಸವಾದಂತೆ ಪತಿ ಶಂಭುಲಿಂಗ ॥
ಶರಣ ಸತಿಯು ಕೂಡಿ ಪರತರಾನಂದದೊಳು
ಪರವಶನೈದಿಹುದನುಪಮಿಸಲು ಬಹುದೆ ॥ ೩ ॥

ಯೋಗಿಗೆ ಸಕಲ ಸಂಸಾರ ಸಂಗವದಿಲ್ಲ; ಆದರೆ ಸಂಸಾರ ಸಂಗವಿದೆ. ಅದು ಲೋಕದ ಸಂಸಾರವಲ್ಲ. ಜನನ ಮರಣಾದಿಗಳಿಗೀಡಾಗುವ ಮಾತಾ ಪಿತ, ಬಂಧುಮಿತ್ರ, ಅಧಿಕಾರ ಐಶ್ವರ್ಯಗಳಿಂದ ಬಂಧಿತವಾಗಿಲ್ಲ. ಅವನ ಸಂಸಾರ ಅವನನ್ನು ಕರ್ಮದ ಕುಂಭೀಪಾಕಕ್ಕೆ ಎಳೆಯುವುದಿಲ್ಲ, ಅಧ್ಯಾತ್ಮದ ಉತ್ತರೋತ್ತರ ಸ್ಥಿತಿಯನ್ನು ತೋರಿಸುತ್ತದೆ

"ಯೋಗಿಗೆ ಸಕಲ ಸಂಸಾರ ಸಂಗವದಿಲ್ಲ
ವಾಗಿ ತಿಳಿವರದು ಪುಸಿ ನೋಡು ರಮಣಿ ॥ ಪ ॥

ಪರವಿದ್ಯೆ ಕುಲವನಿತೆಯುಂಟಗಲದ
ಪರಿತೋಷವೆಂಬ ಮೋಹದಣುಗನುಂಟು ॥

ವಿರತಿಯೆಂಬನುಕೂಲ ಜನಮುಂಟು ಕ್ಷಮೆಯೆಂಬ
ಚರನುಂಟು ಶಾಂತಿಯೆಂಬ ಸಖನ ಸರಸಮುಂಟು ॥ ೧ ॥

ಮತಭಕ್ತಿಯೆಂಬ ಮಾತೆಯುಂಟು ಸುಚರಿತ್ರವೆಂಬ
ಪಿತನುಂಟು ಸತ್ಯವೆಂಬ ಕುವರಿಯುಂಟು ॥
ಹಿತವಾದ ನಂಬುಗೆಯೆಂಬಾಪ್ತಜನರ ಸೇವೆಯುಂಟು
ಮತಿಯೆಂಬ ಗೇಹಮುಂಟು ವಿಚಾರವೆಂಬ ಕ್ಷೇತ್ರಮುಂಟು ॥ ೨ ॥

ದಾಸಿಯುಂಟಹಿಂಸೆಯೆಂಬ ದಾಸನುಂಟಸ್ತೇಯನೆಂಬ
ಲೇಸನೀವ ಧರ್ಮವೆಂಬ ವಾಹನಮುಂಟು ॥
ಭಾಸುರ ಮೈತ್ರ್ಯಾದಿಯೆಂಬ ಪೌತ್ರರುಂಟು ಮುಕ್ತಿಯೆಂಬ
ದೇಶಮುಂಟು ಶಂಭುಲಿಂಗವೆಂಬ ಗುರುತನಮುಂಟು ॥ ೩ ॥"

ನಿಜಗುಣ ಶಿವಯೋಗಿ ಸಂಸ್ಕೃತದಲ್ಲಿ 'ದರ್ಶನಸಾರ', 'ತರ್ಕಚಿಂತಾಮಣಿ' ಎಂಬೆರಡು ಗ್ರಂಥಗಳನ್ನು ಬರೆದಿದ್ದಾನೆಂದು ವಿದ್ವಾಂಸರ ಮತ. ಆದರೆ ಆ ಗ್ರಂಥಗಳು ಉಪಲಬ್ಧವಿಲ್ಲ.

ಮುಪ್ಪಿನ ಷಡಕ್ಷರಿ : ಮುಪ್ಪಿನ ಷಡಕ್ಷರಿಯನ್ನು ನಿಜಗುಣನ ಸಮಕಾಲೀನನೆಂದು ಕೆಲವರು ಅಭಿಪ್ರಾಯಪಡುತ್ತಾರೆ. ನಿಜಗುಣನ ತಪೋಭೂಮಿಯಾದ ಶಂಭುಲಿಂಗನ ಬೆಟ್ಟದಮೇಲೆ ಷಡಕ್ಷರಿ ಗವಿಯೂ ಇದೆ. ಇವರಿಬ್ಬರೂ ಕೂಡಿ ಇದ್ದು ತಪೋನಿರತರಾಗಿದ್ದರೆಂದು ಊಹಿಸಬಹುದು. ಕವಿಚರಿತೆಕಾರರೂ, ಶ್ರೀ. ಇ. ಪಿ. ರೈಸ್‌ರವರೂ ಇವನ ಹೆಸರನ್ನೆತ್ತದಿರುವುದು ಆಶ್ಚರ್ಯಕರವಾಗಿದೆ.

ನಿಜಗುಣನ ಹಾಡುಗಬ್ಬದ ಪರಂಪರೆಯನ್ನು ಬೆಳಸಿದ ಕೀರ್ತಿ ಮುಪ್ಪಿನ ಷಡಕ್ಷರಿಗೆ ಸಲ್ಲುತ್ತದೆ ಇವನ ಗೀತೆಗಳು ಭಾವಬಂಧುರವಾಗಿಯೂ, ರಸವತ್ತಾಗಿಯೂ ಇವೆ.

ಆಧ್ಯಾತ್ಮೋನ್ನತಿಯ ಮೇಲ್ಪಟ್ಟದಲ್ಲಿ ಯಾವ ಕವಿಗಾಗಲಿ ಭಕ್ತನಿಗಾಗಲಿ ಸಣ್ಣಪುಟ್ಟ ಭೇದಭಾವನೆಗಳೂ, 'ನನ್ನ ದೇವರು ಹೆಚ್ಚು ನಿನ್ನ ದೇವರು ಕಡಿಮೆ', 'ನನ್ನ ಧರ್ಮ ದೊಡ್ಡದು ನಿನ್ನ ಧರ್ಮ ಚಿಕ್ಕದು' ಎನ್ನುವ ಕೀಳು ಭಾವನೆಗಳೂ ಇರುವುದಿಲ್ಲ. ಮುಪ್ಪಿನಾರ್ಯ ಧಾರ್ಮಿಕ ಜಗತ್ತಿಗೇ ಒಂದು ಘನ ಸಂದೇಶವನ್ನಿತ್ತಿದ್ದಾನೆ

"ಸಕಲಕೆಲ್ಲಕೆ ನೀನೆ
ಅಕಳಂಕ ಗುರುವೆಂದು
ನಿಖಿಳ ಶಾಸ್ತ್ರವು ಪೇಳುತಿರಲರಿದೆನು ॥ ಪ ॥

ಎರಗಂಬಳಿಯ ಸಿದ್ಧ
ವರಲಿಂಗ ನಾಮದಿಂ
ಹರನೆ! ನೀನೆನಗೆ ದೀಕ್ಷೆಯ ಮಾಡಿದೆ ॥
ವರ ಷಡಕ್ಷರಿಯದೇ
ವರ ನಾಮದಿಂದೆನಗೆ
ಅರುಹಿದಿರಿ ಶಿವಶಾಸ್ತ್ರದನುಭವವನು ॥ ೧ ॥

ಅವರವರ ದರುಶನಕೆ
ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ ॥
ಅವರವರ ಭಾವಕ್ಕೆ
ಅವರವರ ಪೂಜೆಗಂ
ಅವರವರಿಗೆಲ್ಲ ದೇವ ನೀನೊಬ್ಬನೆ ॥ ೨ ॥

ಹೋರಾಟವಿಕ್ಕಿಸಲು
ಬೇರಾದೆಯಲ್ಲದೆ
ಬೇರುಂಟೆ ಜಗದೊಳಗೆ ಎಲೆ ದೇವನೆ ॥
ಆರು ಅರಿಯರು ನೀನು
ಬೇರಾದ ಪರಿಗಳನು
ಮಾರಾರಿ ಶಿವ ಷಡಕ್ಷರಿ ಲಿಂಗವೆ ॥ ೩ ॥

ಭಕ್ತನ ನಿಷ್ಠೆಯನ್ನು ಖಂಡಿತನಾದ ಮಾತುಗಳಿಂದ ಸುಂದರ ಉಪಮೆಗಳನ್ನುಡಿಸಿ ನುಡಿದಿದ್ದಾನೆ

"ಇಂದ್ರಿಯಂಗಳಿಗಿಚ್ಛೆಗಳಿಗೆ
ಮುಂದುವರಿದು ಮನವು ಕೆಟ್ಟು
ಇಂದುಧರನ ಕಡೆಗೆ ಮುಖವದಾಗಲೀಯದು ॥ ಪ ॥

ಪಿಕನ ಚೆಲ್ವ ಗಾನ ಧ್ವನಿಯ
ಶುಕನ ಶಿಶುವಿನಂತೆ ನುಡಿವ
ಸಖಿಯರುಗಳ ನುಡಿಗೆ ಕಿವಿಯು ಕಿವುಡು ಬೀಳಲ್ಲೆ॥

ಸಕಲ ಶಿವನ ಶಾಸ್ತ್ರಗಳನು
ಪ್ರಕಟವಾಗಿ ಕೇಳಿ ಕೇಳಿ
ಸುಖಿಸುವುದಕೆ ಎನ್ನ ಶ್ರೋತ್ರ ವಿಕಸವಾಗಲ್ಲೆ ॥ ೧ ॥
ತೊಳಪಗಣ್ಣ ಕಳಶ ಕುಚದ
ಎಳೆಯ ಪೆಣ್ಣ ನೋಡುವುದಕೆ
ಹೊಳೆವ ನಯನವೆರಡು ಎನಗೆ ಕುರುಡು ಬೀಳಲ್ಲೆ॥
ಎಳೆಯ ಚಂದ್ರಧರನ ಚಲುವ
ನಲಸದೊಲಿದು ನೋಡುವುದಕೆ
ಕಳೆಗಳಾಗಿಯೆನ್ನ ನಯನ ವಿಕಸವಾಗಲ್ಲೆ ॥ ೩ ॥
ಅಂಬುಜಾಕ್ಷಿಯರುಗಳಧರ
ಚುಂಬನಕ್ಕೆ ಎನ್ನ ಜಿಹ್ವೆ
ಹಂಬಲಿಸಿದ ಹಾಗೆ ಸೀಳಿ ಪುಗಳವೇಳಲ್ಲೆ ॥
ನಂಬಿ ಶಿವನ ಶರಣರುಗಳ
ತಂಬುಲವನು ಸವಿವುದಕ್ಕೆ
ಅಂಬುರುಹದ ತೆರದಿ ಜಿಹ್ವೆ ವಿಕಸವಾಗಲ್ಲೆ ॥ ೪ ॥
ಅಂಗನೆಯರು ತೊಡೆದು ಸೂಡಿ
ದಂಗಪುಷ್ಪ ವಾಸಿಸುವೊಡೆ
ಹಿಂಗದೆನ್ನ ನಾಸಪುಟಕೆ ನೆಗಡಿಯಾಗಲಿ ॥
ಮಂಗಳಾತ್ಮ ಷಡಕ್ಷರಿಯ
ಲಿಂಗ್ರದಂಘ್ರಿಗಿತ್ತ ಕುಸುಮ
ಹಾಂಗೆ ವಾಸಿಸುವರೆ ಘ್ರಾಣ ವಿಕಸವಾಗಲ್ಲೆ ॥ ೫ ॥"

ಮಾಯಾನಿರಸನವಾದ ಹೊರತು ಜ್ಞಾನಾಂಕುರವಾಗುವುದಿಲ್ಲ. ಆದರೆ ಮಾಯೆಯ ನಿಜಸ್ವರೂಪವನ್ನು ತಿಳಿದ ಹೊರತೂ ನಿರಸನಕ್ಕೆ ಇಂಬು ದೊರೆಯುವುದಿಲ್ಲ. ಮಾಯೆ ಬಲು ಬಣ್ಣಗಾತಿ, ಇಚ್ಛಾರೂಪಿ. ಸಾಧಕನ ಮನೋದೌರ್ಬಲ್ಯವನ್ನನುಸರಿಸಿ ರೂಪು ತಳೆದು ಅವನನ್ನು ಕಾಡಿಸುತ್ತಾಳೆ. ಆಧ್ಯಾತ್ಮಿಕ ಪಥದಿಂದ ಸಾಧಕನನ್ನು ವಿಮುಖನನ್ನಾಗಿ ಮಾಡಲು ಜಗನ್ಮೋಹಕವಾದ ಆಕಾರವನ್ನು ತಳೆದು ಅವನನ್ನು ವಿಲೋಭನೆಯ ಶರಪಂಜರದಲ್ಲಿ ದೂಡುತ್ತಾಳೆ. ಮಾಯಾನಿರಸನವನ್ನು ಒತ್ತಿಯೊತ್ತಿ ಹೇಳುವ ಶಿವಶರಣರು ಸೌಂದರ್ಯ ವೈರಿಗಳೇ? ಮಾಯೆ ಸುಂದರಿ ಅಹುದು. ಆದರೆ

ಸೌಂದರ್ಯ ಮಾಯೆಯಲ್ಲ. ಸ್ವಯಂ ಶಿವನೇ ಸುಂದರಮೂರ್ತಿಯಾಗಿದ್ದಾನೆ. ಅವನ ಅರ್ಧಾಂಗವನ್ನೇ ಆಕ್ರಮಿಸಿರುವ ಪಾರ್ವತಿ ತ್ರಿಜಗನ್ಮೋಹಿನಿಯಾಗಿದ್ದಾಳೆ. ಆದರೆ ಈ ಸೌಂದರ್ಯ, ಇದರ ಉಪಾಸನೆ ಇಂದ್ರಿಯಾತೀತವಾದುದು. ಮಾಯೆಯ ಸೌಂದರ್ಯ ಮಲವನ್ನು ತಿರಸ್ಕರಿಸಿ ನಿರ್ಮಾಯೆಯ ಅಮಲಸೌಂದರ್ಯವನ್ನು ಆರಾಧಿಸುವ ನರನು ಹರನಾಗುತ್ತಾನೆ. ಮುಪ್ಪಿನಾರ್ಯನು ಈ ಸೂಕ್ಷ್ಮ ತತ್ತ್ವವನ್ನು ಬಹಳ ಸುಂದರವಾಗಿ ಕಾವ್ಯವಾಣಿಯಲ್ಲಿ ವರ್ಣಿಸುತ್ತಾನೆ

"ಒಲಿದ ಲಲನೆಯ ನಗಲುವಹುದು ತಾ
ಒಲಿದು ಲಿಂಗದಿ ಮನವನಿಟ್ಟರೆ
ಚಲಿಸದದು ಶಿವನಂಶಕನಲ್ಲದೆ ನರರಿಗೆಂತಹುದು ‖ ಪ ‖

ಮುನಿದ ನಲ್ಲಗೆ ಲಲ್ಲೆಗರದತಿ
ವಿನಯದಿಂದಲಿ ತೋರಿ ಕುಚವನು
ಇನಿಯನೆದೆಯೊಳು ಸಾರ್ಚಿಯಧರವ ಜಿಹ್ವೆಯೊಳಗಿರಿಸಿ ‖
ಮುನಿಸು ತಿಳಿಯದದೆನ್ನ ಕೊಲ್ಲೆಂ
ದೆನುತ ಮುದ್ದಿಸಿ ದೈನ್ಯಗರೆವಳ
ಮನದಿ ನೆನೆಯದೆ ಇರ್ಪುದದು ತಾ ನರರಿಗೆಂತಹುದು ‖ ೧ ‖

ಒಲಿದ ಪುರುಷನ ವಿನಯದಿಂದಲಿ
ಎಳೆದು ಮಂಚದ ಮೇಲೆ ಮಲಗಿಸಿ
ಬಲುಹಿನಿಂ ತಾಂಬೂಲ ಗುಟುಕನು ಕೊಟ್ಟು ಬಿಗಿದಪ್ಪಿ ‖
ನಲಿದು ಅವನ ಸೊಗಸಿಂ
ತಳಪುಗಳ ಮುಚ್ಚಿ ತೆರೆಗಳ
ನುಳಿವುದದು ಶಿವನಂಶಕಲ್ಲದೆ ನರರಿಗೆಂತಹುದು ‖ ೨ ‖

ಕುರುಳು ಕುಣಿವುತ ಮುತ್ತಿನೋಲೆಯು
ಮಿರುಗು ಹೊಳೆವುತ ಕೊರಳ ಮುತ್ತಿನ
ಸರವು ಕಲಕುತ ತೊಟ್ಟ ಕುಚಯುಗಪದರುತಿರೆ ಬಳಿಕಾ ‖
ಸೆರಗಿನಿಂದಲಿ ಬೆವತ ನಲ್ಲನ
ಒರಸಿ ಮುಖವನು ಮರಳಿ ನೆರೆವಳ
ತೊರೆವುದದು ಶಿವನಂಶಕಲ್ಲದೆ ನರರಿಗೆಂತಹುದು ‖ ೩ ‖

ತೊಡೆಗಳದರುತ ನಡವು ಬಳಕುತ
ಮುಡಿಯು ಕುಣಿಯುತ ಸಡಲಿ ಜೈತಲೆ
ಒಡನೆ ಗಂಟಿಕ್ಕಿರಲು ತಿಲಕವು ಬೆವರಿಸಿಂದಿಳಿಯೆ ‖
ಮಡದಿ ಮುತ್ತಿನ ಬೊಟ್ಟು ರಂಜಿಸೆ
ಮುಡಿದ ಕುಸುಮದ ಭಾವದವಳನು
ಬಿಡುವುದದು ಶಿವಸಂಶಕಲ್ಲದೆ ನರರಿಗೆಂತಹುದು ‖ ೪ ‖

ಸುರತದಂತ್ಯದಿ ಬಳಲಿದಾತನ
ನೊರಗಿಸುತ ಕುಚಯುಗದ ಮಧ್ಯದಿ
ಪರವಶದಿ ಮೆರೆದಿರುವ ಚಲುವೆಯು ಸೊಗಸನಗಲುವರೆ ‖
ಪರಕೆ ಪರತರ ಶಿವಷಡಕ್ಷರ
ಪರಮ ಲಿಂಗದಿ ಮನವು ಸಿಲ್ಕಿರೆ
ಹೊರಗೆ ಮೆರೆದಿಹ ಶರಣಗಲ್ಲದೆ ನರರಿಗೆಂತಹುದು ‖ ೫ ‖ ”

ಮುಪ್ಪಿನ ಷಡಕ್ಷರಿ ತನ್ನ ಗೀತೆಗಳಿಗೆ ಬಸವೇಶ್ವರ, ಅಲ್ಲಮಪ್ರಭು, ಚೆನ್ನಬಸವಾದಿ ಶರಣರ ವಚನಗಳನ್ನೇ ಅಸ್ತಿಭಾರಮಾಡಿಕೊಂಡು ಕಾವ್ಯಸೌಧ ವನ್ನು ಕಟ್ಟಿದ್ದಾನೆ. ಅವರ ಉಪಮಾನ ಉಪಮೇಯಗಳನ್ನು ಧಾರಾಳವಾಗಿ ಬಳಸಿಕೊಂಡಿದ್ದರೂ ತನ್ನ ವಿಚಾರ, ಅನುಭವಗಳಿಗೆ ಗೋಚರವಾದ ಅನೇಕ ವಿಷಯಗಳನ್ನು ಕೂಡಿಸಿದ್ದಾನೆ.

ಗುಬ್ಬಿ ಮಲ್ಲಣಾರ್ಯ : (೧೫೧೩) ಗಣಭಾಷ್ಯ-ರತ್ನಮಾಲೆಯನ್ನು ಬರೆದು ವಾತುಲಾಗಮಕ್ಕೆ ಟೀಕೆಯನ್ನು ಬರೆದ ಗುಬ್ಬಿಯ ಮಲ್ಲಣನು ಇವನ ಪಿತಾ ಮಹ. ಇವನ ಗುರು ಸಿದ್ಧಮಲ್ಲೇಶ. ಶಿವಗಂಗೆಯ ಮೇಗಣಗವಿಯ ಶಾಂತ ನಂಜೇಶ್ವರನೂ ಇವನ ಗುರುವಾಗಿದ್ದಂತೆ ತಿಳಿದುಬರುತ್ತದೆ. ಗುಬ್ಬಿಯ ಮಲ್ಲಣಾರ್ಯ 'ಬಸವ ಪುರಾಣ'ಕ್ಕೆ ಅರ್ಥಹೇಳುವುದರಲ್ಲಿ ಪ್ರಸಿದ್ಧನಾಗಿದ್ದಂತೆ ತಿಳಿಯುತ್ತದೆ. ದರ್ಶನ, ಶಾಸ್ತ್ರ, ಲೌಕಿಕಜ್ಞಾನಗಳಲ್ಲಿಯೂ, ಸಂಸ್ಕೃತ ದಲ್ಲಿಯೂ ಇವನಿಗೆ ಪೂರ್ಣಪಾಂಡಿತ್ಯವಿತ್ತು. ಇವನು 'ಭಾವಚಿಂತಾರತ್ನ' (೧೫೧೩) 'ವೀರಶೈವಾಮೃತ ಪುರಾಣ' (೧೫೩೦) ಗಳನ್ನು ಬರೆದಿದ್ದಾನೆ. 'ಪುರಾತನ ರಗಳೆ'ಯೊಂದನ್ನು ಬರೆದಿದ್ದಾನೆಂದೂ ಕವಿಚರಿತೆಕಾರರೂ, 'ರಾಮಾಸ್ತವರಾಜ'ವೆಂಬ ಯೋಗಶಾಸ್ತ್ರ ಗ್ರಂಥವನ್ನು ತೆಲುಗಿನಲ್ಲಿ ಬರೆ ದಿದ್ದಾನೆಂದು ರೆ॥ ಕಿಟಲ್‌ರವರೂ ಅಭಿಪ್ರಾಯಪಡುತ್ತಾರೆ.

ಭಾವಚಿಂತಾರತ್ನ: ಸತ್ಯೇಂದ್ರಚೋಳನ ಕಥೆಯೆಂಬ ಹೆಸರುಳ್ಳ ಈ ಕಾವ್ಯ ವಾರ್ಧಕ ಷಟ್ಪದಿಯಲ್ಲಿದೆ. ೯ ಸಂಧಿಗಳೂ ೩೭೧ ಪದ್ಯಗಳು.

"ತ್ರಿಣಯನಣುಗಂ ತಿರುಜ್ಞಾನಿ ಸಂಬಂಧೀಶ*
ನಣಿಯರದಿ ಜಿನಮತ ವಿದಾರಣಂಗೈದು ಧಾ
ರಿಣಿಯಲ್ಲಿ ತಿರುಪಾಟು ಪದಿನಾರು ಸಾವಿರವನೊರೆಯುತ ಕುಲಜ್ಞರಿಯಗೆ ॥
ಪ್ರಣವ ಪಂಚಾಕ್ಷರಿಯ ಮಹಿಮೆಯಂ ತಿಳಿಪೆ ಸ
ದ್ಗುಣಿಯಪ್ಪ ಸತ್ಯೇಂದ್ರಚೋಳಭೂಪನ ಕಥಾ
ಭಣಿತೆಯಂ ದ್ರಾವಿಡದಳೊರೆದಂ ಕನ್ನಡದಿ ಪೇಳ್ದೆನಾಲಿಸೆ ಸುಜನರು ॥

ಕಥಾಗರ್ಭವನ್ನು ಕವಿ ಈ ರೀತಿ ಸಂಕ್ಷೇಪಿಸಿ ತಿಳಿಸುತ್ತಾನೆ.

"ತರುಣಿ ಪೊರೆದಣುಗನಶ್ವದ ಖುರದ ಹತಿಯಿಂದ
ಹರಭಕ್ತನರಿಯಲದ ಕೇಳ್ದು ಕೊಲೆಯುಂದವಂ
ಪರಿಕಿಸಿ ನಿಜಾತ್ಮಜಂ ಮೊದಲರ್ತಿಗೆಂದ ನುಡಿಗಾಮುದ್ದುಮಗನ ತಲೆಯು ॥

---

* ತಿರುಜ್ಞಾನ ಸಂಬಂಧಿ ಅಥವಾ ಪಿಳ್ಳೈನೈಸಾರ್ (೬೪೨) ಅರವತ್ತುಮೂವರು ಪುರಾತನರಲ್ಲಿ ಒಬ್ಬನಾಗಿದ್ದಾನೆ. ನಾಲ್ಕು ಪ್ರಧಾನ ಶಿವಾಚಾರ್ಯರಲ್ಲಿ ತಿರುಜ್ಞಾನ ಸಂಬಂಧಿ ಒಬ್ಬನಾಗಿದ್ದಾನೆ. ತಮಿಳು ನಾಡಿನಲ್ಲಿ ಶೈವಧರ್ಮ ಸಂಸ್ಥಾಪನೆಗೆ ಹೋರಾಡಿದ ಇವನು ತಮಿಳಿನಲ್ಲಿ ಉತ್ತಮ ಭಕ್ತಕವಿಯಾಗಿದ್ದಾನೆ. ಶ್ರೀ ಕಾಳಿ ನಗರಿಯ ಆರಾಧ್ಯಬ್ರಾಹ್ಮಣನ ಮಗನಾದ ಇವನು ದೊರೆಯಾದ ಇನಕುಲೋತ್ತುಂಗ ಚೋಳನನ್ನು ಶೈವಧರ್ಮಕ್ಕೆ ಮತಾಂತರಗೊಳಿಸಿ, ಜೈನ ಬುದ್ಧರೊಂದಿಗೆ ಸೆಣಸಿ ಅವರಲ್ಲಿ ಅನೇಕರನ್ನು ಶೈವಧರ್ಮಕ್ಕೆ ಪರಿವರ್ತಿಸುತ್ತಾನೆ. ಚೋಳನ ಅಕ್ಕನಾದ ಮಧುರೆಯರಸಿ ಮಾಂಗಾಯಕ್ಕನ ಆಹ್ವಾನದಂತೆ ಅಲ್ಲಿಗೆ ಹೋಗಿ ಅವಳ ಗಂಡನಾದ ಕೂಣಪಾಂಡ್ಯನನ್ನು ಭಯಂಕರ ವ್ಯಾಧಿಯಿಂದ ಉದ್ಧರಿಸುತ್ತಾನೆ. ಅಂದಿನಿಂದ ದೊರೆಗೆ ಕೂಣಪಾಂಡ್ಯನೆಂಬ ಹೆಸರು ತಪ್ಪಿ ಸೌಂದರ ಪಾಂಡ್ಯನೆಂಬ ಹೆಸರು ಬರುತ್ತದೆ. ಪಾಂಡ್ಯನ ಆಸ್ಥಾನದಲ್ಲಿ ಅನೇಕ ಜೈನ ಪಂಡಿತರನ್ನು ಗೆದ್ದು ೧೪,೦೦೦ ಜೈನರನ್ನು ಶೂಲಕ್ಕೆತ್ತಿಸುತ್ತಾನೆ. ಇವನ ಶಿಷ್ಯರಲ್ಲಿ ಮುಖ್ಯನಾದ ತಿರುವಾಗೀಶ ಜೈನ ಪಾರ್ಶ್ವ ಪಂಡಿತನಾಗಿದ್ದ. ಪಿಳ್ಳೈನೈಸಾರ್, ಸೌಂದರ ಪಾಂಡ್ಯ, ಮಂಗಾಯಕ್ಕರಸಿ ಮತ್ತು ತಿರುವಾಗೀಶ - ಇವರ ಮೇಲೆ ನಿಜಗುಣ ಶಿವಯೋಗಿ ತ್ರಿಪದಿಗಳನ್ನು ಬರೆದಿದ್ದಾನೆ.

ತಿರುಜ್ಞಾನ ಸಂಬಂಧಿ :

"ಬೆಂಬಿಡದೆ ಬತ್ತಲಿಗರಂ ಬಡಿದು ಭಸಿತವನೊ
ಡಂಬಡಲು ಧರೆಯೊಳೆಸಗಿದ ತಿರುಜ್ಞಾನ
ಸಂಬಂಧಿ ನಿಜವನರುಹೆನಗೆ ॥"

ಅರಿಸುವೆಡೆಯೊಳ್ ಮತ್ತೆ ಭಕ್ತವಧೆಯೆಂದು ನಿಜ
ಶಿರದೊಡನೆ ತರಿದೆಂಟು ತಲೆಗಳಂ ಪಡೆದು ಶಂ
ಕರನೂರ್ಗೆ ಪೋದ ಸತ್ಯೇಂದ್ರಚೋಳನ ಕಥೆಯೆನಿದ ಬೆಳಸಿ
ಕೃತಿ ಮಾಳ್ಪೆನು ॥ ”

ಭಾವಚಿಂತಾರತ್ನವನ್ನೇ ಆಧಾರವಾಗಿಟ್ಟುಕೊಂಡು ಷಡಕ್ಷರಿದೇವ (೧೬೫೦) ರಾಜಶೇಖರ ವಿಳಾಸವೆಂಬ ವರ್ಣಕಕಾವ್ಯವನ್ನು ಬರೆದಿದ್ದಾನೆ. ಷಡಕ್ಷರಿದೇವನ ಕಾವ್ಯೋನ್ನತಿಯನ್ನು ಸಾರುವವಸರದಲ್ಲಿ ಆಧುನಿಕ ಪಂಡಿತರು ಮಲ್ಲಣಾರ್ಯನ ಕೃತಿಯನ್ನು ತೆಗಳುತ್ತಾರೆ. ಷಡಕ್ಷರಿ ಕಥೆಯಲ್ಲಿ ಕೆಲವು ಉಚಿತವೂ ಮಾರ್ಮಿಕವೂ ಆದ ಮಾರ್ಪಾಟುಗಳನ್ನು ಮಾಡಿಕೊಂಡು ಸತ್ಯೇಂದ್ರಚೋಳ, ರಾಜಶೇಖರ ಇವರ ಪಾತ್ರಗಳು ಉತ್ತಮಗೊಳ್ಳುವಂತೆ ಪ್ರಯತ್ನಿಸಿದ್ದಾನೆಂಬುದು ನಿರ್ವಿವಾದ. ಆದರೆ ಮಲ್ಲಣಾರ್ಯನ ಕೃತಿಯೂ ಮೇಲ್ಮಟ್ಟದ್ದೆಂಬುದನ್ನು ನಾವು ಮರೆಯುವುದಕ್ಕಾಗುವುದಿಲ್ಲ. ಪ್ರೌಢವಾದರೂ ರಸವತ್ತಾದ ಭಾಷೆ, ಗಂಭೀರವಾದ ನಿರೂಪಣೆ, ಮನೋಜ್ಞವಾದ ಉಪಮೆಗಳು ಮಲ್ಲಣಾರ್ಯನ ಕಾವ್ಯದ ಹೆಗ್ಗುರುತುಗಳಾಗಿವೆ. ನಾಂದೀಪದ್ಯಗಳಂತಹ ಸಾಂಪ್ರದಾಯಿಕ ವಿಷಯಗಳಲ್ಲಿಯೂ ಕವಿ ತನ್ನ ರಸಾಭಿಜ್ಞತೆಯನ್ನು ತೋರಿದ್ದಾನೆ.

ಸೌಂದರ ಪಾಂಡ್ಯ:

“ಜ್ಞಾನಸಂಬಂಧದಿಂದಾನಂದ ರಸರೂಪ
ನಾನು ತಂದೆಸೆದ ಸುಗುಣಿ ಸೌಂದರ ಪಾಂಡ್ಯ
ನೀನೆನ್ನ ಪುಣ್ಯದಧಿದೇವ ॥ ”

ಮಾಂಗಾಯಕ್ಕರಸಿ :

“ಎಸೆವಿಳೆಯುನ್ನೈನಾರ ದೆಸೆಯಿಂದೆ ದೀಕ್ಷೆಗೊಂ
ಡಸಮಲಿಂಗದೊಳು ಬೆರೆದ ಮಾಂಗಾಯಕ್ಕ
ರಸಿಯುರ್ಗೆ ತನುಜನೆನಿಸುವೆನು ॥ ”

ತಿರುವಾಗೀಶ :

“ಕಲುಷರೂಪಿನ ಜೈನಕುಲ ಪಂಕಮುಂದಾಟ
ಮಲಹರನ ಚರಣವಿಡಿದ ವಾಗೀಶನೀ
ನೆಲಸು ವದನಾಂಬುಜದೊಳೆನ್ನ ॥ ”

"ತೊಡೆಯ ನೇರಿದಳಂಬಿಕಾಮಾತೆ ವ್ಯಾಜದಿಂ
ಜಡವನಿತೆ ಶಿರವನಡರಲ್ ಮಿಾಹ ತಡೆಯೆ ತಲೆ
ಜಡೆಗಟ್ಟಲುರಿಯೆ ಪಣೆಗಣ್ಣೆಡವ ಕರ್ಕಂಪೆ ಬಲಗಣ್ಣೊಳಡರೆ ಕೆಂಪು ॥
ಬಿಡದೆ ಮೆಯ್ಯೆಲುವೋರೆ ಮುಲಿನ ಕಂಠದೊಳುಣ್ಮೆ
ತಡೆಯುದಂಗದ ಸಮ್ಮೊಣಗಿತೆಮ್ಮಯ್ಯಂಗೆ
ಯೊಡೆಯುರಿಲ್ಲೆಂದು ಬಾಯಾರ್ವ ಗುಪನಂ ನೋಡಿ ನಗುವ ಶಿವ ರಕ್ಷಿಸೆಮ್ಮ ॥"

"ಗಿರಿಜೆಯ ಮೊಗಂ ನೀಲಕುಟ್ಮಲಪೊಳು ಪೊಳೆಯೆ
ಸರಸಿಯೊಳ್ ಮೆರೆವ ತಾವರೆಯೆಂದು ಕೈನೀಡೆ
ಶಿರವೆತ್ತಿ ಸಿಂಹಾಸ್ಯಗಣವರನ ಕಂಡೋಡಿವರ್ಪ ತಮ್ಮನ ನವಿಲಿಗೆ ॥
ಉರಗನಳ್ಕುತೆ ಸರಿಯೆ ಕಟ್ಟಿರಿದು ಪೊಡೆಯೊಡೆಮ
ಸರಿಯುಲುಂಡಲಿಗೆ ಬಂದಪ್ಪಿ ಹೊಟ್ಟೆಯ ಕಟ್ಟಿ
ಕರಿಮುಖನ ಮುದ್ದು ಬೇಡಲ್ಕೆ ಸುಂಡಲ ನೀಡೆ ನಗುವ ಶಿವ ರಕ್ಷಿಸೆಮ್ಮ ॥"

ನಗುವ ಶಿವ ಬಹಳ ಅಪರೂಪವ್ಯಕ್ತಿ. ಮಲ್ಲಣ ಮನದಣಿಯ ಅವನಿಂದ ನಗಿಸಿ ತನ್ನ ಕಾವ್ಯವೂ ನಗುವಿನ ಗೆಲುವಿನಿಂದ ಉಕ್ಕುವಂತೆ ಮಾಡಿದ್ದಾನೆ. ಮಲ್ಲಣನ ರಸಿಕತೆಗೆ ಸ್ತ್ರೀವರ್ಣನೆಯ ಈ ಪದ್ಯ ತಕ್ಕ ನಿದರ್ಶನ

"ಅರೆವ ಚಂದನಕೆ ನರು ಸುಯ್ಗಂಪಿಗೆರಪಳಿಗ
ಳುರವಣೆಗೆ ಸತಿ ರನ್ನದೊಡದೋಳನೆತ್ತುತಿರೆ
ಸುರಚಾಪವೆಸಿಸಿತಲ್ತೆತ್ತಿಪ ಕರವ ಬಳಸಿ ಪಿಂಛಾತ ಪತ್ರಗಳನು ॥
ಸ್ಮರಗೆ ಪಿಡಿದಂತಾಯ್ತುದಲ್ತು ನೀಲದೊಳು ಶಂ
ಬರವೈರಿ ಸಂಗ್ರಹಣಮಂ ಮಾಡಿ ಪಿಡಿಸಿದನೊ
ಗರುಡಿಯೊಳು ತರುಣಿಯುಸದಲ್ತು ಕಾಮನ ಕರಾಗ್ರದ ಚಕ್ರವೆಸಿಸಿತದರೆ! ॥"

ವೀರಶೈವಾಮೃತ ಪುರಾಣ: ಇದನ್ನು ವೀರಶೈವ ಧರ್ಮಸಾರ ಸರ್ವಸ್ವ ಎಂದು ಕರೆಯಬಹುದು. ಕಾಂಡ ೮, ಸಂಧಿ ೧೩೬, ಪದ್ಯಸಂಖ್ಯೆ ೭೦೯೯. ಶಿವನ ೨೫ ಲೀಲೆಗಳು, ನೂತನ, ಪುರಾತನ ಶಿವಶರಣರ ಕಥೆಗಳು, ವೀರಶೈವ ಧರ್ಮಜ್ಞಾನ, ಶೈವಾಗಮಗಳ ಪರಿಚಯವಷ್ಟೂ ಈ ಮಹಾಗ್ರಂಥದಲ್ಲಿ ಅಡಕನಾಗಿದೆ.

ಕಿರಾತ ಸ್ತ್ರೀರೂಪಿನಲ್ಲಿ ಬಂದ ಪಾರ್ವತಿಯನ್ನು ಕವಿ ವರ್ಣಿಸುವ ಬಗೆ:

"ನವಿಲಂತೆ ರಾಜಿಸುವ ಕೇಶದಿಂದೊಳ್ಪೆರಲೆ
ಯವೊಲಿಪ್ಪ ನಯನಂಗಳಿಂದ ಮದದಾನೆಡೆಲೆ
ಗಿವು ಸರಿಯೆನಿಪ್ಪ ಕುಚದಿಂದ ಸಿಂಗಂಬೊಲು ವಿರಾಜಿಸುವ ಚೆಲ್ವ ನಡುವಿಂ ॥
ಅವಯವದ ಕಾಂತಾರಮೃಗ ಸಮೂಹದೊಳೆಸೆವ
ಶಿವೆಯು ಬೇಟವೆ ಬೇಂಟೆಯಾಗಿ ಕಣ್ಗೋಲ್ಗದಿರ
ನವಿರತಂ ಸೈಗರೆವ ಶಾಂತ ಮಲ್ಲೇಶ ಜಯ ಶಬರ ಹರಗಣ ನಿವೇಶಾ ॥"

ಅರ್ಧನಾರೀಶ್ವರ ಮೂರ್ತಿಯನ್ನು ಮಲ್ಲಣ ತನ್ನದೇ ಆದ ರೀತಿಯಲ್ಲಿ ವರ್ಣಿಸುತ್ತಾನೆ:

"ಪಣೆಗಣ್ಣು ಕತ್ತುರಿಯ ಬೊಟ್ಟು ಶಶಿರವಿ ನಯನ
ಮಣಿಯುರದ ಚೆಲ್ಲೆಗಂಗಳು ಗೇಯ ರಸವಾಂತ
ಫಣಿಕುಂಡಲದ ರತ್ನಕಿರಣದಾಪೊನ್ನೋಲೆ ಸುಲಿಪಲ್ಲು ಕೆಂಬಲ್ಗಳು ॥
ಅಣಿಯುರದ ಕರಿಗೊರಲು ರನ್ನದಾಳಿಯ ಬೆಳ್ಪು
ಪೆಣನಾಂತ ಶೂಲಾದಿಗಳು ಬಳಿಕ ಲೀಲಾಬ್ಜ
ಗಣನಾತಿಶಯ ಸವ್ಯಗುಣಗಣನೆಯುಳವಟ್ಟ ಮೂರ್ತಿ ರಾಜಿಸುತಿರ್ದುದು ॥"

ಚೆನ್ನಬಸವಾಂಕ (೧೫೫೦) 'ಮಹಾದೇವಿಯಕ್ಕನ ಪುರಾಣ'ವನ್ನು ಬರೆದಿದ್ದಾನೆ. ಕಾವ್ಯರಚನೆಯ ಕಾರಣವನ್ನು ಈ ರೀತಿ ಹೇಳಿಕೊಂಡಿದ್ದಾನೆ

"ಪರಮಪಾವನ ಮಹಾದೇವಿಯಕ್ಕನ ಚಾರು
ಚರಿತೆಯಂ ಪೇಳ್ದ ಹಂಪೆಯ ಹರೀಶ್ವರನಿನಿದು
ಗರಿಮರಘಟಾಪ್ರಬಂಧದೊಳು ತತ್ಕಾವ್ಯಮಂನಾರಡಿಗಳಿಂದಖಿಳರೂ ॥
ಅರಿದೆನಲ್ಕೇಳೆಂದು ಪೇಳಿಸಿದ ತರುಣ ಹಿಮ
ಕಿರಣಧರನ ಪರಾವತಾರ ವ್ಯಾಘ್ರಾಜಿನಾಂ
ಬರವ ಮದ್ಗುರು ಬಸವರಾಜನಾನತ ಕಲ್ಪಭೂಜ ಭುವನಾಳಿನ ರಾಜಾ ॥"

ಕಥೆಯನ್ನು ಹರಿಹರನ ಮಹಾದೇವಿಯಕ್ಕನ ರಗಳೆಯ ಮಾದರಿಯಲ್ಲಿಯೇ ನಡಸಿಕೊಂಡು ಹೋಗಿದ್ದಾನೆ.* ಮಹಾದೇವಿ, ಕೌಶಿಕರ ರೂಪವರ್ಣನೆ, ಅವರ ದಾಂಪತ್ಯಜೀವನ, ಅನುಭವಮಂಟಪದಲ್ಲಿ ನಿಂತ ಮಹಾ

---

* ಹರಿಹರನ ಪ್ರಭಾವ ಹಿಂದೂ ಕವಿಗಳ ಮೇಲೆ ಬಿದ್ದುದು ಮಾತ್ರವಲ್ಲದೆ ಮುಸಲ್ಮಾನ ಕವಿಗಳ ಮೇಲೂ ಬಿದ್ದಿತೆಂದು ಕಾಣಬರುತ್ತದೆ. ೧೪೯೬ರಲ್ಲಿ ವಿಜಾಪುರ

ದೇವಿಯಕ್ಕನ ವ್ಯಕ್ತಿತ್ವಗಳನ್ನು ಬೆಳಸಿ ಹೇಳಿದ್ದಾನೆ. ಪುರಾಣ ಅಳತೆಗೆಟ್ಟು ವಿಸ್ತಾರವಾಗಿದೆ. ೩೩ ಸ್ಥಲಗಳೂ, ೧೬೦೪ ಪದ್ಯಗಳೂ ಇವೆ. ನಾನಾ ಷಟ್ಪದಿಗಳನ್ನೂ ಸಾಂಗತ್ಯವನ್ನೂ ಕವಿ ಅವಲಂಬಿಸಿದ್ದಾನೆ.

ಪೀಠಿಕಾ ಪ್ರಕರಣವಾದನಂತರ ಎರಡನೆಯ ಸ್ಥಲದಲ್ಲಿ ಉಡುತಡಿ, ನಿರ್ಮಳ ಸುಮತಿಯರ ಪರಿಚಯಮಾಡಿಕೊಟ್ಟು ಹದಿನೈದನೆಯ ಸ್ಥಲದವರೆಗೆ ಮಹಾದೇವಿಯಕ್ಕನನ್ನು ಸಂಪೂರ್ಣವಾಗಿ ಮರೆತುಬಿಡುತ್ತಾನೆ. ಹದಿನೈದನೆಯ ಸ್ಥಲದ ಕೊನೆಗೆ 'ನಿರ್ಮಳನ ಭಾಮಿನಿಯ ಪುಣ್ಯಗರ್ಭದೊಳಂದು ಜನಿಸಲನುವಾದಳು.' ಹದಿನಾಲ್ಕು ಸ್ಥಲಗಳಲ್ಲಿ ಶಿವನ ಪೆರ್ಮೆ, ಶಿವಭಕ್ತರ ಹಿರಿಮೆಗಳನ್ನು ಕವಿ ಸಾರಿದ್ದಾನೆ.

ಮಹಾದೇವಿಯಕ್ಕನ ಚರಿತ್ರೆಯನ್ನು ಕವಿ ಬೆಳಸಿರುವ ರೀತಿ ಕನ್ನಡ ಕವಿಗಳಿಗೆ ನೈಯಂಟಿದ ವಿಸ್ತೃತ ವರ್ಣನೆಗಳಿಂದ ಕೂಡಿದ್ದರೂ ಕವಿಚರಿತೆಕಾರರು ಹೇಳುವಂತೆ ಹೃದಯಂಗಮವಾಗಿದೆ. ಕನ್ನಡ ಸಂಸ್ಕೃತವೆರಡು

ದಲ್ಲಿದ್ದ ಷಾ ಮಿರಾನ್‌ಜೀ ಎಂಬ ಸಂತಕವಿ "ಕುಷ್-ನಾಮಾ" ಮತ್ತು "ಕುಷ್-ನಗಜ್" ಎಂಬೆರಡು ಕಾವ್ಯಗಳನ್ನು ಉರ್ದುಭಾಷೆಯಲ್ಲಿ ಬರೆದಿದ್ದಾನೆ. ಕುಷ್-ನಾಮದಲ್ಲಿ ಹದಿನೇಳು ವರ್ಷದ ಕನ್ಯೆ ಪ್ರಾಪಂಚಿಕ ಸೌಖ್ಯವನ್ನು ತೊರೆದು ಆಧ್ಯಾತ್ಮಿಕ ಬೋಧೆಯನ್ನು ಮಿರಾನ್‌ಜೀಯಿಂದ ಪಡೆದಂತಿದೆ. ಕುಷ್-ನಗಜ್‌ನಲ್ಲಿ ಮಿರಾನ್‌ಜೀಗೂ ಕುಷ್ (ಕುಷ್‌ನುದಿ)ಗೂ ಆದ ಸಂಭಾಷಣೆಯಿದೆ. ವಿಜಾಪುರದತ್ತ ೧೫ನೆಯ ಶತಮಾನದ ವೇಳೆಗೆ ಹರಿಹರನ ಕಾವ್ಯಗಳೂ, ಕೆಂಚವೀರಣ್ಣೊಡೆಯಾದಿಗಳ ಶೂನ್ಯಸಂಪಾದನಾ ಗ್ರಂಥಗಳೂ ಪ್ರಸಾರದಲ್ಲಿದ್ದವು. ಇವುಗಳ ಪರಿಚಯವುಳ್ಳ ಮಿರಾನ್‌ಜೀ ಮಹಾದೇವಿಯ ಕಥೆಯನ್ನು ಒಂದರಲ್ಲಿಯೂ, ಮಹಾದೇವಿ, ಪ್ರಭುದೇವರಿಗಾದ ಸಂಭಾಷಣೆಯನ್ನು ಎರಡನೆಯದರಲ್ಲಿಯೂ ಪ್ರಾಯಶಃ ಇಸ್ಲಾಮಿ ಸಂಸ್ಕೃತಿಗನುಗುಣವಾಗಿ ಪರಿವರ್ತಿಸಿಕೊಂಡು ಬರೆದಿರಬಹುದು. ಹೀಗೇ ಇನ್ನೂ ಅನೇಕ ಮುಸಲ್ಮಾನ ಕವಿಗಳು ಹಿಂದೂ ವಸ್ತುಗಳನ್ನು ತೆಗೆದುಕೊಂಡು ಬರೆದಿದ್ದಾರೆ. ಕುತುಬ್‌ಷಾಹಿಗಳ ಕಾಲದಲ್ಲಿದ್ದ ವಾಜ್ಹಿ (೧೬೦೯) ಎಂಬ ಕವಿ ಉಷಾ ಸ್ವಯಂವರವನ್ನು "ಕುತುಬ್ ಮುಷ್ತರಿ" ಎಂಬ ಕಾವ್ಯವಾಗಿ ಬರೆದಿದ್ದಾನೆ. ಮಹಮುದ್ ಫಯಾಜ್ ವಾಲಿಯ (೧೬೯೦–೧೭೦೭) "ಕಿಸ ಏ ರತನ್ ಓ ಪದಮ್" ಎಂಬ ಕಾವ್ಯ ಮಹಮುದ್ ಜಯಾಸಿಯ 'ರಾಣಿ ಪದ್ಮಾವತಿ' ಕಾವ್ಯದ ಆಧಾರದ ಮೇಲೆ ಬರೆದುದಾಗಿದೆ.

ಭಾಷೆಗಳಲ್ಲಿಯೂ ತನಗಿರುವ ಪ್ರಾವೀಣ್ಯತೆಯನ್ನು ಕವಿ ತನ್ನ ಶೈಲಿಯಲ್ಲಿ ತೋರಿಸಿದ್ದಾನೆ. ಕಾವ್ಯದ ಉತ್ಕೃಷ್ಟತೆಯನ್ನು

"ಶಿವ ಮಹತ್ವದ ಹೆಚ್ಚು । ಶಿವನ ನಿಷ್ಠೆಯ ಕೆಚ್ಚು
ಶಿವನ ಸದ್ಭಕ್ತಿ ಸಾರಾಯದಚ್ಚು ॥
ಶಿವರೂಪ್ಯರೆದೆಗಿಚ್ಚು । ಶಿವಯೋಗಿಗಳ ನಚ್ಚು ।
ದೇವಕಾವ್ಯವಿದು ಶರಣಜನದ ಮಚ್ಚು ॥"

ಎಂದು ಹೇಳಿದ್ದಾನೆ. ಮಹಾದೇವಿಯ ನಾಮಕರಣಕಾಲದಲ್ಲಿ ನಿರ್ಮಳನ ಮನೆಗೆ ಬಂದ ಹೆಂಗಸರು

"ಸಣ್ಣನಡುವಿನ ಸಸಿನಮುಡುಪಿನ
ಯೆಣ್ಣೆಗಂಪಿನಯೆಸೆವ ಮಿಂಚಿನ
ಕಣ್ಣಗಪ್ಪಿನ ಕದಪಿನೊಪ್ಪಿನ ಕೊರಲನುಣ್ಣುರುಲಾ ॥
ಅಣ್ಣೆದಳಿಕದಲಿಸಿಯ ತಿಳುಕದ
ಬಣ್ಣದುಡುಗೆಯ ಬಹಳ ತೊಡಿಗೆಯ
ಹೆಣ್ಣುಗಳು ಸಂದಣಿಸಿ ಬಂದರು ನಿರ್ಮಳನ ಮನೆಗೆ ॥"

ಇವರು

"ಪಂಚಬಾಣನ ಬಲೆಗೆ ಸಿಲ್ಕದೆ
ಪಂಚತತ್ವದ ಗುಣವನೇಳಿಸಿ
ಪಂಚವರ್ಣವನರಿದು ಪಂಚಾಚಾರದೊಳ್ಸಂದೂ ॥
ಪಂಚಮುಖನಮಲಾತ್ಮವನ್ನು ಪ್ರ
ಪಂಚವಿಲ್ಲದೆ ಬೆರೆವ ಶಿಶುವನೆ
ಪಂಚ ಮುತ್ತೈದೆಯರು ಪಂಚಮಸ್ವರದಿ ಪಾಡಿದರೂ ॥"

ಮಹಾದೇವಿಯಕ್ಕನ ಸೌಂದರ್ಯವನ್ನು ವಿಸ್ತಾರವಾಗಿ ಕವಿ ವರ್ಣಿಸಿರುವುದರಲ್ಲಿ ಔಚಿತ್ಯವೂ ಇದೆ. ಕೌಶಿಕನನ್ನು ಸೆರೆಹಿಡಿದು ಮುಂದಿನ ವೈರಾಗ್ಯಕ್ಕೆ ಹಾದಿ ತೋರಿದುದು ಮಹಾದೇವಿಯ ಅನುಪಮವಾದ ಸೌಂದರ್ಯ. ಅರಮನೆಯ ಸರಸವೂ ಅಪರಿಮಿತವೂ ಆದ ಶೃಂಗಾರದಲ್ಲಿ ನಿಷ್ಣಾತನಾಗಿದ್ದ ದೊರೆ ಒಬ್ಬ ಸಾಮಾನ್ಯ ಪ್ರಜೆಯ ಮಗಳ ಚೆಲುವನ್ನು ಕಂಡು ಮಾರುಹೋಗಬೇಕಾದರೆ ಸಾಕಷ್ಟು ಕಾರಣಗಳಿರಬೇಕು. ಅಂತಹ

ಕಾರಣಗಳು ಮಹಾದೇವಿಯಲ್ಲಿದ್ದವೆಂಬುದನ್ನು ತೋರುವುದೇ ಕವಿಯ ಉದ್ದೇಶ, ಉಚಿತವಾಗಿ ತೋರಿರುವುದೇ ಅವನ ಕೌಶಲ್ಯ.

"ನವಕಾಂತಿರಸ ಮಂದಹಾಸ ಬೆಳ್ನೊರೆಲ ಸ
ತ್ರಿವಳಿ ಕಲ್ಲೋಲ ಸುಳಿನಾಭಿ ಕಂಧರ ಕಂಬು
ಜವಳಿ ಮೊಲೆಗಳ್ ಸಲಿಲ ಕುಂಭಿಕುಂಭಗಳು ಚಿಮ್ಮಳಲ್‌ದಿಂಟಿ
ಘನ ಜಘನವಾ ॥

ಕುವಲಯಾಂಬಕಿಯೆಂಬ ಕಣ್ಗಳಿಳೆ ಮಿನ್ನಿರುಪ
ಪವಳಚೆಂದುಟಿ ಚರಣಕೂರ್ಮರದನಂ ರತ್ನ
ನಿವಹವೆಂದೆನೆ ಮಹಾದೇವಿ ರಾಜಿಸಿದಳತಿ ಶೃಂಗಾರ ಶರಧಿಯಂತೆ ॥

ಇಂದೀವರಾಕ್ಷಿ ಚಂಪಕನಾಸಿಕದ ಚದುರೆ
ಕುಂದಕುಟ್ಮಳರದನೆ ಕುಮುದಕೋರಕ ಸುಕುಚೆ
ಮಾಂದಳಿರ್ದುಟಿಯಮಾನಿನಿ ಮಲ್ಲಿಕಾಸ್ಮಿತೆ ಸಿರೀಷ ಸ್ರಗ್ಬಾಹುಯುಗಳೆ ॥
ಅಂದವಟ್ಟಹಕೆಡಕಿ ನಖಮುಯೂಖಿಯರ
ವಿಂದಮುಖಿ ಮಹಾದೇವಿಯೊಪ್ಪಿದಳ್ಧಾತ್ರಿಯೊ
ಳ್ಕಂದರ್ಪನಂಬುಗಳಿಗಂಬುರುಹಭವ ಚೆಲ್ವಪೆಣ್ಗೈದನೆಂಬಂದದಿ ॥"

ಮೋಹದ ಪ್ರಖರತಾಪದಲ್ಲಿ ಮೂರ್ಛೆಗೊಂಡ ಕೌಶಿಕನನ್ನು 'ಹೆಂಗಳರಸಿ ಮಹಾದೇವಿಯಕ್ಕನ ಬಹಿರಂಗದೊಳ್ಕಾಣೆನೆಂದನುಗೈದನೆಂಬಂತೆ ಕಂಗಳ ಮು ದ ಮೂರ್ಛೆಯಲಿ' ಎಂದು ಕವಿ ವರ್ಣಿಸುವುದು ಮನೋಹರವಾಗಿದೆ.

ಕವಿ ವಚನಗಳನ್ನು ಕಾವ್ಯದಲ್ಲಿ ಹಾಸುಹೊಕ್ಕಾಗಿ ಬಳಸಿಕೊಂಡಿದ್ದಾನೆ.

"ನೆಲನ ಮರೆಯೊಳಗಿರ್ದ ನಿಧಾನದಂತೆ ಘನ
ಶಿಲೆಯ ಮರೆಯೊಳಗಿರ್ದ ಪೊಸಮಿಸುನಿಯಂತೆ ಸಲೆ
ತಿಲದ ಮರೆಯೊಳಗಿರ್ದ ತೈಲದಂತಾರವೆಯ ಮರೆಯೊಳಿರ್ದನಿಲಸಂತೆ ॥
ಮಳರಸದ ಮರೆಯೊಳಿರ್ದಿನಿದಿನಂತಂಗದೊ
ಳ್ನೆಲೆದೊರದಿಹ ಪರಬ್ರಹ್ಮಮಂ ಸುಜ್ಞಾನ
ಬಲದಿನರಿದಕ್ಕ ಮಹಾದೇವಿಯೊಪ್ಪಿದಳು ಸರ್ವಾಂಗಮಯಲಿಂಗಿಯೆನಿಸೀ॥"

"ಗಂಡನ್ನುಳ್ಳ ಪೆಣ್ಣನಾವ
ಗಂಡು ಬಯಸಿ ಕೇಳ್ದಡವನ
ತುಂಡುಗಡಿಯದಿಹನೆಯುವಳ ಗಂಡನೆನ್ನಯಾ ॥

ಗಂಡ ನೀನಿರಲ್ಕೆ ಕೇಳ್ದೊ
ಡಂಡುಗೊಂಡು ಸುಮ್ಮನೆ ಹೇಸಿ
ಖಂಡಿಯೆಂಬನಾವು ಸಾಮ್ಯವಾದುದಿಂದಿಲಿ ॥"

"ಕೇಳಿದೊಡೆ ಕೇಳ್ಮಾಣು ಮೇಣಾಂ
ಕೇಳಿಸದೆ ನಿಲಲಾರೆ ಗೀತವ
ನೆಳಲಂ ಗೈಯೊಪ್ಪ ಪೂಜಿಸದಿರೆಸು ನಿಮ್ಮಡಿಯಾ ॥
ತಾಳಲಾರೆನು ತಕ್ಕಗೊಳ್ಳದೆ
ಭಾಳನೇತ್ರಂ ಮುಚ್ಚುಮೆಚ್ಚದೆ
ಯಾಳವಾಡಿಟ್ಟಿಸದಿರೆಂ ನೀನೋಡು ನೋಡದಿರೂ ॥"

ಮದುವಣಿಗಿತ್ತಿಯನ್ನು ಅಲಂಕರಿಸುತ್ತಿದ್ದಾರೆ. ನಾರಿಯರ ಸಂಭ್ರಮವೇ ಸಂಭ್ರಮ. ಅವರಿಗೆ ಅಕ್ಕಮಹಾದೇವಿ ಹೇಳುತ್ತಾಳೆ

"ಮಾಂಗಲ್ಯವೆನಗೆ ಮಜ್ಜನವರಿಸಿನಂ ಕಾವ
ನಂಗದಹನದ ಭಸಿತ ದುಗಿಲವೆ ದಿಗಂಬರ ಮ
ಲಾಂಗಲೇಪನ ಮಹೇಶ್ವರರ ಪದರೇಣು ರುದ್ರಾಕ್ಷೆಗಳ್ಮೈದೊಡಿಗೆಯಾ ॥
ಅಂಗಜವಿಭಂಗ ನಡಿದಾವರೆಗಳುತ್ತ
ಮಾಂಗಕಮುರಿದ ದಂಡೆತೊಂಡಿಲುಗಳಿನ್ನೇಕೆ
ಶೃಂಗಾರ ಚೆನ್ನಮಲ್ಲೇಶನಿರಿದಲರನ ಮದುವಳಿಗೆ ಮಗಳೆಂದಳೂ ॥"

ಮೊದಲೇ ಮಹಾದೇವಿ ಸುಂದರಿ, ಜತೆಗೆ ಸೌಂದರ್ಯ ಸಾರೋದಯನಾದ ಪರಶಿವನ ನಚ್ಚಿನ ಮೆಚ್ಚಿನ ಮಡದಿ, ಈಗ ರಾಜಸದನದಲ್ಲಿದ್ದಾಳೆ. ಬೇಡ ಬೇಡವೆಂದರೂ ರಾಜೋಪಭೋಗದ ಸಾಮಗ್ರಿಯಗಳು ಅವಳನ್ನು ಆವರಿಸಿವೆ. ಇಂತು ಭೌತಿಕ ಪಾರಮಾರ್ಥಿಕ ಸೌಂದರ್ಯಗಳೆರಡರ ಬಿತ್ತಾಗಿದ್ದ ಮಹಾದೇವಿಯನ್ನು ಕವಿ

"ಎಸಳುಗಣ್ಣಿಂದೆಸೆವ ಕಜ್ಜಳದ ಮಣಿಮಯದ
ಮಿಸುನಿಯಾಭರಣದನುಲೇಪನದ ಚೆಂದುಟಿಯ
ಕುಸುಮಂಗಳಿಡಿಕಿರಿದ ಸೋರ್ಮುಡಿಯ ಕುಂಕುಮಾಂಕಿತ
ಪಯೋಧರದ ಪೂರ್ಣಾ॥
ಶಶಿವದನದೆಳೆನಗೆಯ ನಳಿತೋಳ ಸುಳ್ಳೊಡೆಯ
ಮಿಸುಪ ಘನಜಘನದಸಿ ನಡುವೆನೆಳೆದಳಿರಡಿಯ
ಕುಸುಮಗಂಧದ ಮಹಾದೇವಿಯುರು ಶೃಂಗಾರರಸ ನೃಪನನಾವರಿಸಿತೂ ॥"

ಮಹಾದೇವಿಯಕ್ಕನ ಸಂದೇಶವೆಂದು ಕವಿ ಈ ಪದ್ಯವನ್ನು ವಿರಚಿಸಿದ್ದಾನೆ

"ಅನುಭವವೆ ಭವಬಂಧಮೋಚನ
ವನುಭವವೆ ದುರಿತಾಚಲಾಚ ನೀ
ಯನುಭವವೆ ತನುಗುಣಗಣಾಭ್ರಪ್ರಕರಪವಮಾನಾ ॥
ಅನುಭವವೆ ಭಕ್ತಿಯ ಸುಧಾನಿಧಿ
ಯನುಭವವೆ ಸುಜ್ಞಾನದರ್ಪಣ
ವನುಭವವೆ ಮುಕ್ತಿಯ ತವರ್ಮನೆ ಶರಣ ಸಂತತಿಯಾ ॥"

ಸಿದ್ಧಾದೃಶ್ಯ (೧೫೮೦) ಇವನಿಗೆ ಅದೃಶ್ಯಕವಿ, ಅದ್ರೀಶ, ಅದ್ರೀಶಪ್ಪ ಮೊದಲಾದ ಹೆಸರುಗಳೂ ಇದ್ದವು. "ಪ್ರೌಢರಾಯನ ಕಾವ್ಯ"ದಲ್ಲಿ ಕವಿ ತನ್ನ ವಿಷಯವಾಗಿ ಹೇಳಿಕೊಂಡಿದ್ದಾನೆ.

"ವರಮಳೆಯ ಮಲ್ಲೇಶ* ನುರು ಶಿಷ್ಯ ತೊರೆಸಾಲ
ಪರಗಣೆಯ ಕೊಲ್ಲಾಪುರಕೆ ದೇಶಾಯಿನಾ
ಡೆರೆಯನಾಹಕ್ಕರಿಯ ಕುಲದಗ್ರ ಗೃಹವೆನಿಪ ಹರಭಕ್ತ ಶಂಕರಂಗೆ ॥

---

* ಈ ಮಳೆಯ ಮಲ್ಲೇಶ ಮಲ್ಲಣಾರ್ಯನಿಗೆ ಸ್ವಲ್ಪ ಹಿಂದೆ ಇದ್ದ ಹಾಗೆ ತಿಳಿಯುತ್ತದೆ ಎಂದು ಕವಿಚರಿತೆಕಾರರು ಅಭಿಪ್ರಾಯಪಡುತ್ತಾರೆ. ಇದರಿಂದ ಅವನೊಬ್ಬ ಪ್ರತ್ಯೇಕ ವ್ಯಕ್ತಿಯಾಗಿರಬಹುದೆಂದು ಭಾಸವಾಗುತ್ತದೆ. ಅದೃಶ್ಯ ಚೆನ್ನಬಸವೇಶ್ವರನನ್ನು ತನ್ನ ಗುರುವೆಂದು ತಿಳಿಯುತ್ತಿದ್ದನೆಂದು ನಮ್ಮ ಅಭಿಪ್ರಾಯ. ಚೆನ್ನಬಸವ ಪುರಾಣದಲ್ಲಿ

"ವರಖಲಿಂದರೇಳು ನೂರ್ವರ್ಗೆ ಗುರುವಾಗಿ
ಹರುಷದಿಂ ಮುಖ್ಯಕ್ಕೆ ಪೋಗಿ ಮಹಿಮೆಯಂ ತೋರಿ
ತುರುಕಾಣ್ಯದೊಳಗನಾವೃಷ್ಟಿದೋಷಂ ಬಂದು ಪಸರಿಸೆ ಪವಾಡದಿಂದೆ ॥
ವರುಷಮಂ ಸುರಿಸಿ ಸುರಿತಾಳನಿಂ ಪೂಜೆಯಂ
ಪಿರಿದಾಗಿ ಕೈಕೊಂಡು ಘನತರದ ಕೀರ್ತಿಯಂ
ಧರಿಸಲಂದಂದಿತ್ತ ಮಳೆಯಮಲ್ಲೇಶನೆಂದೆಂಬ ನಾಮುಪನಾಂತನು ॥"

ಮಳೆಯನ್ನು ಸುರಿಸಿದುದರಿಂದ ಶಿವನಿಗೇ ಮಳೆಯ ಮಲ್ಲೇಶನೆಂಬ ಹೆಸರು ಬಂತು. ಚೆನ್ನಬಸವಣ್ಣನನ್ನು ಶಿವನವತಾರಿಯೆಂದು ವೀರಶೈವ ಕಾವ್ಯಗಳೂ ಪುರಾಣಗಳೂ ಸಾರಿ ಹೇಳುತ್ತಿವೆ. ಆದುದರಿಂದ ಕವಿ ತನ್ನ ಗುರುಪರಂಪರೆಯನ್ನು ಚೆನ್ನಬಸವಣ್ಣನಿಂದ ಹೇಳಿಕೊಂಡಿದ್ದಾನೆಂದು ಊಹಿಸಬಹುದು.

ಉರುಪುತ್ರನಣ್ಣೇಂದ್ರನಾತ್ಮಜನದೃಶ್ಯಾಖ್ಯ
ವಿರಚಿಸಿದ ಗುರುಬಲದಿ ಪ್ರೌಢರಾಯ ಕಾವ್ಯ
ವಿರೆ ತಪ್ಪು ತಿದ್ದುವುದು ನಿಮ್ಮ ಕಿಂಕರನೆಂದು ಶಿವಭಕ್ತನೊಲಿದು ಬೇಗ ॥"

ಇದು ವಾರ್ಧಕ ಷಟ್ಪದಿಯಲ್ಲಿದೆ. ಸಂಧಿ ೨೧, ಪದ್ಯ ೧೧೧೩. ಗ್ರಂಥ ಹುಟ್ಟುವುದಕ್ಕೆ ಕಾರಣವೆಂದು ಒಂದು ಸ್ವಾರಸ್ಯವಾದ ಕಥೆಯನ್ನು ಕವಿ ಹೇಳುತ್ತಾನೆ. ಆನೇಗೊಂದಿ ಅರಸನಾದ ಪ್ರೌಢರಾಯನಿಗೆ ಕಂದಾಳ ದೊಡ್ಡಯಾಚಾರ್ಯ (ಮುಕುಂದ ಪೆದ್ದಿ) ಯೆಂಬ ವೈಷ್ಣವ ಗುರುವಿದ್ದನು. ಆಚಾರ್ಯನು ದೊರೆಗೆ ೯ ತಿಂಗಳು ಭಾರತ ಪುರಾಣ ಹೇಳಿ ಮಂಗಳ ಮಾಡಿ ಪುಸ್ತಕವನ್ನು ಮೆರವಣಿಗೆ ಮಾಡಿಸಿದನು. ಅದೇ ಸಮಯಕ್ಕೆ ಮಂತ್ರಿ ಜಕ್ಕಣಾರ್ಯನು ಬಂಕನಾಥ ಗುರುವಿನ ಪಾದವನ್ನು ಧ್ಯಾನಿಸುತ್ತ ಪ್ರಭುಲಿಂಗ ದೇವರ ನೂರೊಂದು ಸ್ಥಲದ ಸೂತ್ರ ವಚನಗಳಿಗೆ ವ್ಯಾಖ್ಯಾನವನ್ನು ಬರೆದು ಶಿವ ಸರ್ವೋತ್ತಮತ್ವವನ್ನು ಸ್ಥಾಪಿಸಿ ವ್ಯಾಖ್ಯಾನ ಗ್ರಂಥಗಳನ್ನು ವೈಭವದಿಂದ ರಾತ್ರಿ ಮೆರವಣಿಗೆ ಮಾಡಿಸಿದನು. ಅಸೂಯಾಪರನಾದ ವೈಷ್ಣವ ಗುರುವು ಮಾರನೆಯ ದಿನ ಮಂತ್ರಿಯನ್ನು ಕಂಡಾಗ "ರಾತ್ರಿ ಅದೇನು ಗದ್ದಲ. ಸತ್ತವರ ಮೆರವಣಿಗೆಯೊ" ಎಂದು ಮೂದಲಿಸಿ ಕೇಳಲು ಅದಕ್ಕೆ ಮಂತ್ರಿ "ನಿಮ್ಮ ಭಾರತದ ಮೆರವಣಿಗೆಯೇ ಸತ್ತ ಹೆಣವ ಮೆರವಣಿಗೆ, ನಮ್ಮದು. ಹುಟ್ಟಿದ ಹಬ್ಬ" ಎಂದು ಪ್ರತ್ಯುತ್ತರ ಕೊಡುತ್ತಾನೆ. ಶಿವಶರಣರ ವಚನಗಳಲ್ಲಿ ಒಂದನ್ನು ಕೇಳಬೇಕೆಂದು ಗುರು ಬಯಸಲು ಮಂತ್ರಿ ಸಂಗೀತಗಾರರ ಕಡೆ ಯಿಂದ ಹಾಡಿಸುತ್ತಾನೆ. ಅದಕ್ಕೆ ಅರ್ಥವೇನೆಂದು ಗುರು ಕೇಳಲು ಅದಕ್ಕೆ ಅರ್ಥ ಹೇಳಲು ನಾವು ತಕ್ಕವರಲ್ಲ, ನಿಮಗೆ ತಿಳಿದಿದ್ದರೆ ಹೇಳಿ ಎಂದು ಮಂತ್ರಿ ನುಡಿಯಲು ದೊಡ್ಡಯಾಚಾರ್ಯ ಅಲ್ಲಮನೆಂಬ ಮದ್ದಳೆಗಾರ ಕಾಮಲತೆಯೆಂಬ ನಟಿಯನ್ನು ಮೋಹಿಸಿದ್ದನು. ಅವಳು ಸಾಯಲು ಭ್ರಾಂತಿಯಿಂದ ಅವನು ಮಾಡಿದ ಒಗಟಿ ಪದ್ಯವೆಂದು ತಿರಸ್ಕಾರದಿಂದ ನುಡಿಯುತ್ತಾನೆ. ಮಂತ್ರಿಯು ವ್ಯಸನದಿಂದ ಕಿವಿಗಳನ್ನು ಮುಚ್ಚಿಕೊಳ್ಳುತ್ತಾನೆ. ಏಕೆಂದು ಪ್ರೌಢರಾಯನು ಕೇಳಲು ಮಾಯಾತೀತನಾದ ಪ್ರಭುವಿನ ನಿಂದೆಯನ್ನು ಕೇಳಬೇಕಾಗುತ್ತ ದೆಂದು ಮಂತ್ರಿ ಹೇಳಲು ರಾಯನು ಪ್ರಭುವಚನಕ್ಕೆ ಸರಿಯಾದ ಅರ್ಥವನ್ನು ನೀನೇ ಹೇಳು ಎಂದು ಪ್ರಾರ್ಥಿಸುತ್ತಾನೆ. ಮಂತ್ರಿ ಸಭೆಯಲ್ಲಿ ಎಲ್ಲರೂ

ಮೆಚ್ಚುವಂತೆ ವ್ಯಾಖ್ಯಾನಮಾಡಿ ಹೇಳಲು ಧೊರೆ ಸಂತೋಷದಿಂದ ಅವನಿಗೆ ತ್ರಿಸರ ಪದಕವನ್ನೂ ರುದ್ರಕಂಕಣವನ್ನೂ ಸನ್ಮಾನಿಸಬೇಕೆಂದು ಉದ್ಯೋಗಿಸಲು ವೈಷ್ಣವ ಗುರುವು ಧೊರೆಯನ್ನು ಕುರಿತು "ಯೋಚಿಸಿ, ಶಿವಶರಣರು ಮಹಾ ಮೋಹಕ್ಕೊಳಪಟ್ಟವರಲ್ಲವೆಂಬುದು ನಿರ್ಣಯವಾದ ಬಳಿಕ ವಿದ್ವತ್ಸಂಭಾವನೆಯನ್ನು ಕೊಡಬಹುದೆಂ"ದು ಜಕ್ಕಣಾರ್ಯನ ಮುಖವನ್ನು ನೋಡಲಾಗಿ ಸಮೀಪದಲ್ಲಿದ್ದ ಚಾಮರಸನು ಹದಿನೈದು ದಿನದೊಳಗಾಗಿ ವೈಷ್ಣವ ನಿಗುತ್ತರ ತರುತ್ತೇನೆಂದು ಹೇಳಿ ಹೊರಟು ಹೋಗುತ್ತಾನೆ. ಅವನು ಬರುವ ತನಕ ಶಿವಶರಣರ ಕಥೆಗಳನ್ನು ಹೇಳುತ್ತಿರಬೇಕೆಂದು ಮಂತ್ರಿಯನ್ನು ಬೇಡಿಕೊಳ್ಳಲಾಗಿ ಅವನು ಈ ಕಾವ್ಯವನ್ನುಸುರುತ್ತಾನೆ. ಚಾಮರಸನು ಮನೆಗೆ ಹೋಗಿ ಪ್ರಭುಲಿಂಗ ಲೀಲಾಮೃತ ಗ್ರಂಥವ ರಚಿಸಿ ಕಾಲಾವಧಿಯೊಳಗೆ ತಂದು ರಾಜನಿಗೆ ಸಮರ್ಪಿಸುತ್ತಾನೆ. ರಾಯನು ಕಾವ್ಯವನ್ನು ಮುಕುಂದ ಪೆದ್ದಿ ಮೊದಲಾದ ಕವಿಗಳಿಗಿತ್ತು ಅರ್ಥ ಹೇಳಿರೆಂದು ಆಜ್ಞಾಪಿಸಲು ಅವರು ಮೌನದಿಂದಿರುತ್ತಾರೆ. ಅರಸನು ಪರವಾದಿಗಳನ್ನು ಪುರದಿಂದ ಹೊರಡಿಸಿ ಜಕ್ಕಣಾರ್ಯನಿಗೂ ಚಾಮರಸನಿಗೂ ಸನ್ಮಾನ ಮಾಡುತ್ತಾನೆ."

ಪ್ರೌಢರಾಯನ ಕಾವ್ಯವೂ ಇತರ ವೀರಶೈವ ಪುರಾಣಗಳಂತೆ ನೂತನ ಪುರಾತನ ಶಿವಶರಣ ಕಥೆಗಳಿಂದಲೂ, ಶಿವಲೀಲಾ ಕಥೆಗಳಿಂದಲೂ ತುಂಬಿದೆ. ಕಥೆಗಳು ಯಾವವೂ ಸಾಕಷ್ಟು ಬೆಳವಳಿಗೆಯನ್ನು ಪಡೆಯದೆ ನೀಳ್ಕತೆಗಳ ಸಂಕ್ಷಿಪ್ತ ಭಾಗದಂತೆ ಕಂಡು ಬರುತ್ತವೆ. ಪ್ರೌಢರಾಯನ ಕಾಲದ ಕೆಲವು ಸಂಗತಿಗಳು, ನೂರೊಂದು ವಿರಕ್ತರ ವಿಚಾರ ಇದರಿಂದ ತಿಳಿದು ಬರುವುದರಿಂದ ಪ್ರಾಶಸ್ತ್ಯವೇ ವಿನಾ ಕಾವ್ಯ ದೃಷ್ಟಿಯಿಂದ ಇದರಲ್ಲಿ ಹೆಚ್ಚು ಮಹತ್ತ್ವವಿಲ್ಲ. ಇವನ ಶೈಲಿಗೆ ಕೆಲವು ಪದ್ಯಗಳನ್ನು ಉದಹರಿಸುತ್ತೇವೆ.

ಅಲ್ಲಮ ಪ್ರಭು

"ರೂಪಿಂಗೆ ರೂಪಾಗಿ ರೂಢಿಯೊಳು ಚರಿಸಿನೀ
ರೂಪಿಂಗೆ ನಿಶ್ಶೂನ್ಯ ನಿರ್ಮಯನಾಗುತ್ತ
ಪಾಪಸಂಸೃತಿ ತಾಪಶರಧಿ ಕುಂಭಜನೆನಿಸಿ ನಿಲಿಸಿ ನಿಜಪುಣ್ಯದಯದಿ ॥

ಆ ಪರಮ ಕಲ್ಯಾಣಪುರದ ಬಸವೇಶ ಶಿವ
ರೂಪ ಲಕ್ಷದ ತೊಂಭತ್ತಾರು ಸಾವಿರಕೆ ಸ
ಲ್ಲಾಪದಿಂ ಪಾಕಗೈದುದನ್ನೆಲ್ಲ ಸಲಿಸಿ ಬಸವಂಗೊಲಿದ ಪ್ರಭುವೆ ಸಲಹು ॥

ಗೊಲ್ಲತಿ ಗೋಪಿದೇವಿಯ ಕಥೆ:

"ಕೇಳಿಲೆ ನೃಪಾಲಕುಲತಿಲಕ ಶಿವಭಕ್ತ ಸಂ
ಮೇಳ ಸೀಮಂತಮಣಿ ಬಸವ ದಂಡೇಶ್ವರನು
ಖೂಳ ಪರವಾದಿಗಳ ಸದೆಯಲೋಸುಗ ತೋರಿದಗಣಿತ ಪವಾಡದೊಳಗೆ ॥
ಪೇಳುವೆನುವೊಂದೆರಡು ಬಿಜ್ಜಳನ ಸಭೆಯಲ್ಲಿ
ಭಾಳಲೋಚನಭಕ್ತ ಬಸವೇಶ ಕುಳಿತಿರ್ದು
ಬೀಳದಿರೆ ಪಿಡಿವೆಸಂಜದಿರೆಂದು ಕೈಯೆತ್ತಲರಸ ಕಂಡತಿನಗುತ್ತಲಿ ॥
ಅಕಟ ಬಸವಯ್ಯ ಭಕ್ತಿಯ ಮರುಳು ತಲೆಗೇರಿ
ವಿಕಳಗೊಂಡಿತೊ ಪೇಳು ಸುಮ್ಮನಿರದೇತಕೆ
ಸಕಲ ಜನ ನೋಡುತಿರೆ ಕರವೆತ್ತಿ ಪಿಡಿದೆನೆಂದೆಂಬುದೇನಚ್ಚರಿಯೆನೆ ॥
ಪ್ರಕಟಿಸುವೆ ಕೇಳರಸೆಯಿಲ್ಲಿಗರೆ ಗಾವುದದಿ
ಶಿಖಿನಯನಯನ ಕಪಿಲೇಶಲಿಂಗದಭಿಷೇಕಕ್ಕೆ
ಭಕುತಿಯಿಂದೋರ್ವ ಹನ್ನೊಂದು ಸಾಸಿರ ಕುಂಭಕ್ಷೀರಮನ್ನೆರೆಯಲಾಗ ॥
ವಸುಧೆಯೊಳು ಪರಿದು ಪಂಕಮದಾಗೆ ಗೊಲ್ಲತಿಯು
ಪಸನಪ್ಪದಧಿಘಟವಪೊತ್ತು ಕೊಂಡೊಯ್ಯುತಿರೆ
ಕೆಸರಲ್ಲಿ ಜಾರಿಬೀಳುತ ಬಸವಯೆಂದು ಮೊರೆಯಿಟ್ಟಡಾಂ ಪಿಡಿದೆನೆಂದು ॥
ಬೆಸಸೆ ಚರಗಾಗಿಯುವಳಿರುತಿರ್ಪ ಗೃಹಕೇರಿ
ಪೆಸರಾವುದೆನೆ ಕುರುಪಕೇಳುತ್ತ ಚರರ ಕಳು
ಹಿಸಿ ಕರಿಸಿ ತಿಳಿಯಲಿದು ಸಹಜ ಮತ್ತೊಂದು ಚೋದ್ಯವನು
ನೀ ಕೇಳ್ಭೂವರ ॥"

ವಿರೂಪಾಕ್ಷ ಪಂಡಿತ : (೧೫೮೪) ಇವನ ಚೆನ್ನಬಸವ ಪುರಾಣವನ್ನು ಒಂದು ಕಾವ್ಯವೆನ್ನುವದಕ್ಕಿಂತಲೂ ಶಿವಪರವಾದ ಒಂದು ವಿಶ್ವಕೋಶವೆಂದು ಕರೆಯಬಹುದು. ಈ ಗ್ರಂಥವಲ್ಲಿ ೬೩ ಸಂಧಿಗಳೂ ೫೯೦೬ ವಾರ್ಧಿಕ ಷಟ್ಪದಿ ಪದ್ಯಗಳೂ ಇವೆ. ಕವಿಯ ಪಾಂಡಿತ್ಯ, ತಾಳ್ಮೆ, ಉತ್ಸಾಹಗಳು ಸ್ತುತ್ಯಾರ್ಹವಾಗಿವೆ.

ವಿರೂಪಾಕ್ಷ ಪಂಡಿತ ವಿಜಯನಗರದ ಹಿರಿಯಮಠಕ್ಕೆ ಸೇರಿದವನು. ತನ್ನ ಗುರುಪರಂಪರೆಯನ್ನು ಮಳೆಯಮಲ್ಲೇಶನಿಂದ ಆರಂಭಿಸುತ್ತಾನೆ. ಇವನು ಸಂಸಾರಿಕನಾಗಿರದೆ ಪಟ್ಟಾಧಿಕಾರಿಯಾಗಿದ್ದನೆಂದೂ ಪ್ರೊ. ಬಸವನಾಳರವರು ಅಭಿಪ್ರಾಯಪಡುತ್ತಾರೆ. ಅದಕ್ಕೆ ಕವಿಯ ಒಂದು ಪದ್ಯ ಪುಷ್ಟಿಯನ್ನು ಕೊಡುತ್ತದೆ

"ಬಿಡದೆ ಶಿವಲಿಂಗಮಂ ಪೂಜಿಸುವ ಚಿತ್ತಮೆಡೆ
ವಿಡದೆ ಸನ್ನುತಿಗಳಿಂದಾತ್ಮ ಸುಖಕೊಲಿದು ಸವಿ
ವಡೆದು ಪಾಡುವ ಗಾನ ಮೆರೆವರಂತರವನರಿದೀವ ವಿತರಣವೊಪ್ಪುವ ॥
ಕಡುಜಾಣರಂ ಮೆಚ್ಚಿಸುವ ವಾಗ್ವಿಲಾಸಮಾ
ನ್ಪೃಡನನೊಲಿಸುವ ಷಟ್ಸ್ಥಲ ಬ್ರಹ್ಮದಾಚರಣೆ
ಪೊಡವಿಯೊಳ್ ಪಂಡಿತ ವಿರೂಪಾಕ್ಷ ನಿನಗಲ್ಲದಾರ್ಗುಂಟು ಬಣ್ಣಿಸುವೊಡೆ॥"

'ಕವಿತೆಯೇ ಸಕಲ ವಿದ್ಯೆಕ್ಕಧಿಕ'ವೆಂದು ನಂಬಿದ್ದ ಕವಿ ವರಲಕ್ಷಣಂ, ಸುಛಂದಸ್ಸು, ನುತಶಬ್ದ, ಉರುತರ ರಸಾಲಂಕಾರ, ಅತಿಶಯಾರ್ಥಗಳಿಂದ ಕೂಡಿ ತಪ್ಪಿಲ್ಲದ ರೀತಿಯಲ್ಲಿ ಕಾವ್ಯವನ್ನು ವಿರಚಿಸಿರುವುದಾಗಿ ತಿಳಿಸುತ್ತಾನೆ. ಇತರ ಕವಿಗಳ ಕೃತಿಗಳ ಹಾಗೆ ಇದು ಕುಳಿತು ಪ್ರಯಾಸದಿಂದ ಬರೆದುದಲ್ಲ ವೆಂದೂ 'ಗುಡಿಯೆ ಮಾತಾಡುವಂದದೊಳೋರ್ವನೊಳಗಿರ್ದು ನುಡಿದನ್ಯರ ಕಿವಿಗೆ ಪ್ರತಿಶಬ್ದದಿಂದಾಗಲೊಡನೆ ತಾಂ ಕೇಳಬಂದಂತೆ ಹೃತ್ಕಮಲ ಕರ್ಣಿಕಾ ಮಧ್ಯದಲ್ಲಿ ಎಡೆವಿಡಿದೊಲಾವಾಗ ಮಿರ್ಪ ಪಂಪಾಕ್ಷೇತ್ರದೊಡೆಯಂ ವಿರೂ ಪಾಕ್ಷನೆ ಪೇಳಿಸಿದೊಡೆ ಸವಿನುಡಿಗಳಿಂದೀ ಚೆನ್ನಬಸವ ಪುರಾಣಮಂ ಪೇಳ್ದೆ ನಧಿಕೋತ್ಸವದೊಳು' ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಇತರ ಶಿವಶರಣರ ಕಥೆಗಳನ್ನು ಹಿಂದಿನ ಕವಿಗಳು ಬರೆದಿದ್ದಾರೆ, ಚೆನ್ನಬಸವನ ಕಥೆ ಯನ್ನು ಯಾರೂ ಬರೆದಿಲ್ಲ ನೀನು ಬರೆಯಬೇಕು ಎಂದು ಸಕಲ ಶಿವಭಕ್ತ ಸಂಕುಲವು ತನ್ನನ್ನು ಕೇಳಿಕೊಂಡದ್ದರಿಂದ ಚೆನ್ನಬಸವ ಪುರಾಣವನ್ನು ಬರೆದೆ ನೆಂದು ಹೇಳುತ್ತಾನೆ.

ಗುರು ಚೆನ್ನಬಸವೇಶ ಸಿದ್ಧರಾಮುನಿಗೊರೆದ ಶಿವತತ್ತ್ವವನ್ನು ಹೇಳು ವುದೇ ಕವಿಯ ಉದ್ದೇಶ. ಇದರ ಜತೆಯಲ್ಲಿ ಈಶ್ವರನ ಪಂಚವಿಂಶತಿ ಲೀಲೆಗಳು, ವೀರಶೈವ ಮತತತ್ತ್ವ, ಷಟ್ಸ್ಥಲಜ್ಞಾನ, ೧೦೧ ವಿರಕ್ತರ ವಿಷಯ, ೬೩ ಪುರಾತನರ ಕಥೆಗಳು, ಬಿಜ್ಜಳರಾಯ, ಆನೆಗೊಂದಿ ಅರಸರು

ವಿಜಯನಗರ ರಾಜ್ಯದ ಬಗ್ಗೆ ಐತಿಹಾಸಿಕ ಸಂಗತಿಗಳನ್ನೂ ಸೇರಿಸಿಕೊಂಡಿದ್ದಾನೆ.

ಕರ್ನಾಟಕದಲ್ಲಿ ವೀರಶೈವ ಸಂಸ್ಕೃತಿಯನ್ನು ರೂಪಗೊಳಿಸುವುದರಲ್ಲಿ ಈ ಗ್ರಂಥ ಅಪಾರವಾದ ಕೆಲಸವನ್ನು ಮಾಡಿದೆ. ಇದು ಅಭ್ಯಾಸ, ಅಧ್ಯಯನ, ಪಾರಾಯಣಗಳಿಗೆ ಅನಿವಾರ್ಯವಾದ ಗ್ರಂಥವೆಂದು ವೀರಶೈವರಿಂದ ಪರಿಗಣಿಸಲ್ಪಟ್ಟಿದೆ.

ಸಂಸ್ಕೃತವನ್ನು ಸ್ವಲ್ಪ ಅಳತೆಮೀರಿ ಕವಿ ಉಪಯೋಗಿಸಿದ್ದರೂ 'ಲಲಿತವಹ ಕನ್ನಡ ನುಡಿ'ಯನ್ನೂ 'ಜಗದೊಳ್ ಸನ್ನಿದವಾದ ನಾಳ್ನುಡಿಗಳಂ ಛಂದಕ್ಕೆ ಬರ್ಪಂತೆ ನೆಟ್ಟಗೆ ಮಾತಾಡುವ ಬಲ್ಮೆ'ಯನ್ನೂ ಧಾರಾಳವಾಗಿ ತೋರಿದ್ದಾನೆ. ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಈ ಕಾವ್ಯದ ಛಾಯೆ ಕಂಡುಬರುತ್ತದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಕವಿಯ ಶೈಲಿಗೂ, ರಸಜ್ಞತೆಗೂ ನಿದರ್ಶನಗಳಾದ ಕೆಲವು ಪದ್ಯಗಳನ್ನು ಉದಹರಿಸುತ್ತೇವೆ.

"ಆಲವಣ್ಣಿಂದಧರಮುಂ ಗಿಳಿ ಕರ್ದುಂಕಿದುದು
ಸೀಳಿದುದು ತೋಳ್ಗಳಂ ಕಳಹಂಸ ಸಾರಸಮ್ಮ
ಣಾಳಮೆಂದುಂ ಚಂಚುವಿಂ ನಿನ್ನ ವಿರಹದಿಂ ಪೊರಳುತಿರೆ ನಿರಿಗುರುಳ್ಗಳಂ ॥
ಸಾಲು ಕೆದರ್ದುದು ಹಾರಮೊಸರಿಸಿತೆಂದೊರ್ವ
ಬಾಲೆ ಪ್ರಾಣೇಶನಂ ನೆರೆದಂತೆ ಕಳುಪಿ ತತ್
ಕಾಲರತಿ ಚಿಹ್ನಮುಂ ಮತ್ತೊರ್ವನೊಳ್ ಪುಸಿದು ಪಾಳಿಯೊಲಿದಿಂತೆಂದಳು ॥

ತಂಗಾಳಿ ತೀಡೆ ತಿಂಗಳ್‌ಮೂಡೆ ಮನಸಿಜಂ
ಸಿಂಗಾಡಿವಿಡಿಯೆ ಕೋಕಿಲೆ ನುಡಿಯೆ ವಿರಹದಿಂ
ದಂಗನೆ ಬಳಲ್ದಹಿಗಳಂ ದ್ವಿಜರಂ ರುದ್ರನಂ ಕೂಡೆ ಕರಟಂಗಳ ॥
ನುಂಗಿಯುರಿಮೆಲ್ದು ಸುಟ್ಟಳಿಪಿ ರಕ್ಷಿಸಿದಿರೀ
ಪೆಂಗೊಲೆಯುರಿವರೆಂದು ಶಪಿಸಿಯುಂ ತಣಿಯದೆ
ಹಂಗಪತಿಪಬ್ಧಿ ಪರಶಿವ ಬ್ರಹ್ಮರಂ ಬೈದಳೀನೆಂಬೆನಚ್ಚರಿಯನು ॥

ಗಂಧಮುಂ ಮುಡಿಸು ಪೂವಂ ಪೂಸು ಮಂಚಮುಂ
ತಂದು ತಳಿ ಪನ್ನೀರ್ಗಳಂ ಪಾಸು ವೀಣೆಯಂ
ನಿಂದು ಕತ್ತರಿಸಡಕೆಯುಂ ನುಡಿಸು ಬೆಕ್ಕನೋಡಿಸು ಗಿಳಿಯನತ್ತ ಹೊಡಿಸು ॥

ಅಂದುಗೆಯು ಕೊರಳೊಳಿಡು ಕಾಲ್ಗಂಜನಮನೆಚ್ಚು
ಪಿಂಡೆ ಮುಡಿಯಂ ಬೆಳಗು ದೀಪಮಂ ಕಟ್ಟು ನೀ
ನೆಂದೊರ್ವ ನಾರಿ ನಲ್ಲನನಗಲ್ದ ವಿರಹವಿಕಳದೊಳು ನುಡಿದಳ್ ಸಖಿಯೊಳು ॥
ಕೇಳಬಲೆ ನೀಂ ಪೆಣ್ಣ ಜವ್ವನಂ ನೋಡೆ ಬಿರು
ಗಾಳಿಗೊಡ್ಡಿದ ಸೊಡರ್ ಸುರರ ಚಾಪಂ ಕುಸುಮ
ದೇಳಿಗೆ ತಟಚ್ಚೋಬೆಯೆಂದರಿದು ಮೆಳೆಯುರೆಯುದೊಳಗೆ ಧನಮಂ ಗಳಿಸದ ॥
ಸೂಳೆತನದಂಗದಿಂದೇಂ ಫಲಂ ಮನೆಯೊಳಗೆ
ಹಾಲುಳ್ಳ ಕಾಲದೊಳ್ ಹಬ್ಬಮಂ ಮಾಡಲೆಂದು
ಪೇಳುವೀ ಗಾದೆ ಪುಸಿಯಲ್ಲನೆಂದೊರ್ವಳತಿಬಾಲೆಯಂ ಬೋಧಿಸಿದಳು ॥"

ತನ್ನ ಕಾವ್ಯಪತಿಯಾದ ಚೆನ್ನಬಸವೇಶ್ವರನನ್ನೂ ಅವನ ಅಗಾಧ ಮಹಿಮೆಯನ್ನೂ ಕವಿ ಮುಕ್ತಕಂಠದಿಂದ ಹೊಗಳಿದ್ದಾನೆ.

"ಚೆನ್ನಬಸವನೆ ಶಿವಂ ಬಸವನೇ ವೃಷಭನಾಂ
ಕನ್ನೇಶ ಬಿಜ್ಜಳರೆ ಶಿವಪುರ ದ್ವಾರಮಂ
ಚೆನ್ನಾಗಿ ಕಾದಿಪ್ಪ ದ್ರವಿಡಕೇಸರಿಗಳೆಂದೆಂಬರಾ ಕಲ್ಯಾಣವೇ ॥
ನನ್ನಿಯಿಂ ಕೈಲಾಸಮಲ್ಲಿರ್ಪ ಶಿವಭಕ್ತ
ರುನ್ನೋಡೆ ಪ್ರಮಥಗಣನಿಕರಮಲ್ಲಿಯ ಜನಂ
ಸನ್ನುತ ಸದಾಚಾರ ಸಂಪನ್ನರೆನಿಪರವರಿರವನಭಿವರ್ಣಿಸುವೆನು ॥
ಪುಸಿ ಕಳವು ಪಾದರಂ ದುರ್ನೀತಿ ವೈರಮಳಿ
ಜಸಮಾರ್ಗಮುಂ ಠಕ್ಕು ಪಳಿವು ಬೆಳಗುವತೆ ದು
ರ್ವ್ಯಸನಂ ದುರಾಚಾರಮನ್ಯಾಯಮಾರಡಿ ಕೃತಘ್ನತೆ ವಿರೋಧಭಾವಂ ॥
ಗಸಣಿ ದುರ್ಜನಮವಿಶ್ವಾಸಂ ಪರಾಭವಂ
ಕಿಸುರು ಗಾವಳಿ ಬಂದಿ ಗಳಹತನಮವಿವೇಕ
ಮುಸಿರಲೇನಾ ಚೆನ್ನಬಸವನಿಹ ರಾಜ್ಯದೊಳ್ ಮಿಸುಕವೇವಣ್ಣಿಸುವೆನು ॥"

ತಾನು 'ಸಕಲಾಗಮ ಕೋವಿದ' ನೆಂದೂ 'ಸರಸ ಕರ್ಣಾಟಾದಿ ಭಾಷಾ ವಿಶಾರದ'ನೆಂದೂ 'ವರಕವಿ ಪ್ರಕರಮಾನಸ ರಾಜಹಂಸ'ನೆಂದೂ ಕವಿ ಹೇಳಿಕೊಂಡಿದ್ದಾನೆ. ಪ್ರೊ. ಬಸವನಾಳರವರು ಹೇಳುವಂತೆ 'ಈ ಕವಿಯು ಪಂಪ, ರನ್ನ, ಷಡಕ್ಷರದೇವರೊಡನೆ ಪ್ರಥಮ ಶ್ರೇಣಿಯ ಕವಿಮಾಲಿಕೆಯಲ್ಲಿ ಸೇರಲು ತಕ್ಕವನಲ್ಲವೆಂದರೂ ಲಕ್ಷ್ಮೀಶ, ಕುಮಾರವ್ಯಾಸರ ಮಾಲಿಕೆಯಲ್ಲಿ ಸೇರಲಿಕ್ಕೆ ಆವ ಸಂದೇಹವೂ ಇಲ್ಲೆನ್ನಬಹುದು. ಕನ್ನಡ ಷಟ್ಪದಿ ಕಾವ್ಯಗಳಿಗೆ ಆದರ

ವಿರುವ ತನಕ ಈ ಕೃತಿಯು ಜನರ ಆದರಣೆಗೆ ಪಾತ್ರವಾಗಿಯೇ ಇರುವು ದೆಂದು ಹೇಳಿದರೆ ಸಾಕು."

ಸರ್ವಜ್ಞ (೧೬೦೦) ಕನ್ನಡ ಜಾನಪದ ಕಾವ್ಯಾಚಾರ್ಯನಾದ ಸರ್ವಜ್ಞಮೂರ್ತಿಯನ್ನು ೧೬ನೆಯ ಶತಮಾನಕ್ಕೆ ಉತ್ತಂಗಿ ಚನ್ನಪ್ಪನವರೂ ೧೮ನೆಯ ಶತಮಾನಕ್ಕೆ (೧೭೦೦) ರೈಸ್‌ಸಾಹೇಬರೂ ಸೇರಿಸಿದ್ದಾರೆ. ಕನ್ನಡ ನಾಡಿನಲ್ಲೆಲ್ಲಾ ಗುಡುಗಾಡಿ ತನ್ನ ಪ್ರಭಾವ ಮುದ್ರೆಯನ್ನು ಕನ್ನಡಿಗರ ಆಚಾರ, ವಿಚಾರ, ನೀತಿ, ನಡೆವಳಿಕೆಗಳ ಮೇಲೆ ಒತ್ತಿರುವುದಲ್ಲದೆ ಲಲಿತವೂ, ಅತಿ ಸುಲಭವೂ ಆದ ತ್ರಿಪದಿ ಛಂದಸ್ಸನ್ನು ಸಾರ್ವತ್ರಿಕವಾಗಿ ಸರ್ವಜ್ಞಮೂರ್ತಿ ಹಬ್ಬಿಸಿದನು. ಕಂಡದ್ದನ್ನು ಕಂಡಂತೆ ಆಡುವ 'ಗಂಡುಕವಿ' ಎನ್ನುವ ಕೀರ್ತಿಗೆ ಸರ್ವಜ್ಞನಿಗಿಂತ ಹೆಚ್ಚು ಬಾಧ್ಯರು ಸಿಕ್ಕುವುದು ದುರ್ಲಭ. ಇವನ ಲೋಕಾನು ಭವ, ಸೂಕ್ಷ್ಮವಿಚಾರ ಶಕ್ತಿ, ಅಮಾನುಷವಾದ ಗಂಡೆದೆ ಬೆರಗುಗೊಳಿಸು ತ್ತವೆ. ಆದರೂ ತನ್ನ ವಿಷಯದಲ್ಲಿ,

"ಸರ್ವಜ್ಞನೆಂಬವನು ಗರ್ವದಿಂದಾದವನೆ?
ಸರ್ವರೊಳೊಂದೊಂದು ನುಡಿಗಲಿತು ವಿದ್ಯದ
ಪರ್ವತವೆ ಆದ ಸರ್ವಜ್ಞ ॥
ಹೇಳಲರಿಯೆನು ನಾನು ಹೇಳೆನಲು ಹೇಳಿದೆನು
ಬಾಳಲೋಚನನ ಶರಣರ ಆಳಾಗಿ
ಹೇಳಿದೆನು ನೋಡ ಸರ್ವಜ್ಞ ॥"

ಎಂದು ಅತ್ಯಂತ ವಿನಯದಿಂದ ಹೇಳಿಕೊಂಡಿದ್ದಾನೆ. ಕನ್ನಡ ದೇಶ ದಲ್ಲಿ ಸರ್ವಜ್ಞನ ಹೆಸರನ್ನು ಕೇಳದವರಿಲ್ಲ, ಅವನ ತ್ರಿಪದಿಗಳನ್ನು ಹಾಡದವ ರಿಲ್ಲ, ತಾವೂ ತ್ರಿಪದಿಗಳನ್ನು ಕಟ್ಟಿ ಸರ್ವಜ್ಞನ ಅಂಕಿತಹಾಕಿ ಹಾಡದವರಿಲ್ಲ. ತಿಳಿದವರ ತಿಳಿವು, ಕಲಿತವರ ಕಲಿಕೆ, ಭವ್ಯವಾದ ಬಾಳ್ವೆಗಾರರ ಬಾಳ್ವೆ ಇವುಗಳ ಪ್ರಭಾವ, ಸಂದೇಶ ಜನಸಾಮಾನ್ಯಕ್ಕೆ ಮುಟ್ಟಬೇಕೆಂಬ ಬಸವೇ ಶ್ವರ, ಹರಿಹರರ ಆಶೆಯನ್ನು ಸಾರ್ಥಕಗೊಳಿಸಿದ ಕೀರ್ತಿ ಸರ್ವಜ್ಞನಿಗೆ ಸಲ್ಲುತ್ತದೆ.

ಸಿದ್ಧನಂಜೇಶ (೧೬೫೦) : ಇವನು 'ರಾಘವಾಂಕ ಚಾರಿತ್ರ' 'ಗುರು ಚಾರಿತ್ರ'ಗಳನ್ನು ಬರೆದಿದ್ದಾನೆ. 'ಅನ್ನದಾನೇಶ್ವರನ ಕರಸ್ಫುರಿತ ಕುರುವತ್ತಿ

ಪುರದ ಸಿಹ್ಮಾಸನಾಧಿಪ ಸಿದ್ಧನಂಜೇಶ ಚರಣಶತಪತ್ರ ಮಧುಕರ ಚಿಕ್ಕ ನಂಜೇಶ'' ಎಂದು ತನ್ನನ್ನು ಕರೆದುಕೊಂಡಿದ್ದಾನೆ. ಗುಬ್ಬಿ ಮಲ್ಲಣಾರ್ಯನ 'ವೀರಶೈವಾಮೃತ ಪುರಾಣ'ದಿಂದ ವಿಷಯಗಳನ್ನು ತನ್ನ ಗುರುರಾಜ ಚಾರಿತ್ರಕ್ಕೆ ತೆಗೆದುಕೊಂಡಿದ್ದಾನೆಂದು ಕವಿಚರಿತೆಕಾರರು ಅಭಿಪ್ರಾಯ ಪಡುತ್ತಾರೆ.

ವೀರಶೈವ ಕವಿಚರಿತ್ರೆ ಕೂಡ ವೀರಶೈವ ಶರಣಚಾರಿತ್ರದಂತೆ ಪವಾಡ ಗಳಿಂದ ತುಂಬಿದೆ. ಐತಿಹಾಸಿಕ ಸಂಗತಿಗಳು ಕಾಲಾನುಕ್ರಮದಲ್ಲಿ ಬಾಯಿಂದ ಬಾಯಿಗೆ ಬಿದ್ದು ಅನುಯಾಯಿಗಳ ಅಭಿಮಾನಾತಿರೇಕದಿಂದ ಪವಾಡ ಸ್ವರೂಪವನ್ನು ತಳೆಯುತ್ತದೆ. ಇದು ಸತ್ಯಸೂರ್ಯನನ್ನು ಚಿನ್ನದ ಮುಚ್ಚಳ ದಿಂದ ಮುಚ್ಚುವ ಒಂದು ಬಗೆ. ಆದರೆ ಅವುಗಳನ್ನು ಕೇವಲ ಕಾಲ್ಪನಿಕ ವೆಂದು ತಿರಸ್ಕರಿಸಲೂ ಸಾಧ್ಯವಿಲ್ಲ. ಪವಾಡಗಳ ಕಲ್ಪನೆಯ ಹಿಂದೆ ಇತಿಹಾಸ ಕೂಡಿರುತ್ತದೆ. ಸಿದ್ಧನಂಜೇಶನೂ ಈ ಸಂಪ್ರದಾಯಕ್ಕೇ ಸೇರಿದವನು. ಇವನ 'ರಾಘವಾಂಕ ಚಾರಿತ್ರ' ಹರಿಹರ, ರಾಘವಾಂಕ ಇವರ ಬಗ್ಗೆ ಮತ್ತು 'ಗುರುರಾಜ ಚಾರಿತ್ರ' ಇತರ ಶಿವಶರಣರ ಬಗ್ಗೆ ಅನೇಕ ಉಪಯುಕ್ತ ವಿಷಯ ಗಳನ್ನು ತಿಳಿಸುತ್ತದೆ. ರಾಘವಾಂಕ ಚಾರಿತ್ರದಲ್ಲಿ ಕವಿ ಕಾವ್ಯ, ಕಾವ್ಯ ನಾಯಕರ ವಿಷಯವಾಗಿ ಹೀಗೆ ಹೇಳಿದ್ದಾನೆ

"ಅಣ್ಣೆವಾಲರಸಂಚೆಯುಣ್ಬಂತೆ ಕೊತ್ತಳಿಗ
ಳುಣ್ಣಬಲ್ಲುವೆ ವಸಂತದೊಳು ರಾಜಿಸುತಿರ್ಪ
ಪುಣ್ಣಿಮೆಯ ಜೊನ್ನಮಂ ಚಕೋರಿಗಳುಂಬವೋಲ್ಬಕಂಗಳು ಕುಡಿಗುಮೆ ‖
ಮಣ್ಣ ತಿಂಬೇಡಿ ತವರಾಜಮಂ ಬಲ್ಲುದೇ
ಪುಣ್ಯರ ಸುಜಿಹ್ವೆಯೊಳು ಶಿವಕಥಾಮೃತರಸವ
ಡೊಣ್ಣಿಗರ್ಕಪಟಾಂಧನರರರಿವರೇ ಪರಮ ಸತ್ಕವಿಗಳರಿವಂದದಿಂ ‖
ಇದುವೆ ರಸಿಕರ ರಸಾಯನ ಕಬ್ಬಿಗರ ಕಬ್ಬ
ವಿದು ಪ್ರೇಮದಿಂ ಕೇಳ್ವ ಜನದ ಕರ್ಣಾಭರಣ
ವಿದುವೆ ಸೊಬಗರ ಸೊಬಗು ಕೋವಿದರ ಕೊರಲಹಾರಂ ಗಮಕಿಗಳ
ಗಮಕವು ‖
ಇದುವೆ ಭಾವದ ಪಕ್ಕೆಯಿದುವೆ ನವರಸದಿಕ್ಕೆ
ಯಿದು ಸದಾಚಾರ ಸುಖಸದನ ಮೋಹನದ ಧನ
ವಿದನೋದಿ ಕೇಳಿ ಲಾಲಿಸದರಾರ್ ಧರೆಯೊಳಗೆ ದಿವ್ಯಕಾವ್ಯಾಮೃತವನು ‖"

"ಕವಿಹೃದಯ ಶತಪತ್ರ ವಿಷ್ಣುಪದಮಣಿಯತುಳ
ಕವಿಭಾವ ರಸಶರಧಿ ವರ್ಧನ ಸುಧಾಕರಂ
ಕವಿರಾಜ ಕವಿ ಪಟಲ ವಾಗ್ವನ ವಸಂತನುಂ ಪ್ರಚುರ ಕವಿಚೂಡಾಮಣಿ ॥
ಕವಿ ಕುಲಾಭರಣ ಶಿವಕವಿ ವಾದಮುನನುಭಯ
ಕವಿ ಶರಭಭೇರುಂಡನೆನಿಪ ಹಂಪೆಯ ಮಹಾ
ಕವಿ ರಾಘವಾಂಕನ ಸುಚಾರಿತ್ರಮಂ ಪೊಗಳಿ ಕವಿತಾನುಭವವಡೆವೆನು ॥"

"ರಾಘವಾಂಕ ಚಾರಿತ್ರ"ದಲ್ಲಿ ೧೯ ಸಂಧಿಗಳೂ, ೧೫೨೧ ಪದ್ಯಗಳೂ ಇವೆ. ರಾಘವಾಂಕನ ಚರಿತ್ರೆಯ ಜತೆಗೆ ಅವನ ಕಾವ್ಯಗಳ ಸಂಗ್ರಹಗಳನ್ನು ಕವಿ ಕೊಟ್ಟು ಉಪಕರಿಸಿದ್ದಾನೆ. ಸೋಮನಾಥನ ಕಥೆಯನ್ನು ೭೭ ಪದ್ಯಗಳಲ್ಲಿಯೂ, ಸಿದ್ಧರಾಮ ಚಾರಿತ್ರವನ್ನು ೮೫ ಪದ್ಯಗಳಲ್ಲಿಯೂ, ಹರಿಶ್ಚಂದ್ರ ಕಾವ್ಯವನ್ನು ೧೫ ಪದ್ಯಗಳಲ್ಲಿಯೂ ಕವಿ ಸಂಗ್ರಹಿಸಿದ್ದಾನೆ. ರಾಘವಾಂಕನಿಗೆ ಸಂಬಂಧಪಡದ ೮ ಸಂಧಿಗಳನ್ನು (ಸುಮಾರು ೫೮೩ ಪದ್ಯಗಳು) ತೆಗೆದು ಹಾಕಿದರೆ ಉಳಿಯುವ ೧೧ ಸಂಧಿಗಳು (ಸುಮಾರು ೯೭೮ ಪದ್ಯಗಳು) ಖಚಿತವಾದ ಚರಿತ್ರಸ್ವರೂಪವನ್ನು ಪಡೆಯುತ್ತವೆ.

ಇವನ ಸಂಗ್ರಾಹಕ ಶಕ್ತಿ, ಕಾವ್ಯರೀತಿಗಳಿಗೆ ದೃಷ್ಟಾಂತವಾಗಿ 'ಹರಿಶ್ಚಂದ್ರ ಕಾವ್ಯ' ಭಾಗವನ್ನು ಉದ್ಧರಿಸಿದ್ದೇವೆ.

"ಎಲೆ ನೃಪತಿ ಕೇಳು ಸ್ವರ್ಗದೊಳಿಂದ್ರ ಸಭೆಯಲ್ಲಿ
ನಲಿದು ಕಶ್ಯಪ ಭೃಗು ದಧೀಚಿ ಕಪಿಲಂ ಶುಕಂ
ಪುಲಹಂ ಪುಲಸ್ತ್ಯ ಮಾರ್ಕಂಡೇಯ ಗಾರ್ಗ್ಯ ಕೌಶಿಕ ವಸಿಷ್ಠಾದಿಯಾವ ॥
ಬರುವನ್ಮುನೀಂದ್ರರಿರಮರೇಂದ್ರ ಕೈಮುಗಿವು
ತಿಳಿಯಲ್ಲಿ ಸ್ವರ್ಗದೊಳು ಪಾತಾಳದೊಳು ನನ್ನಿ
ನೆಲೆಗೆಯ್ದು ಮೆರೆವುದಾವನೊಳು ಕೇಳ್ದಪೆನು ನೀವೆನಗುಸುರಿರೈ
ಯೆಂದನು ॥ ೧ ॥
ಮರುಮಾತುಗೊಡದೆಲ್ಲ ರುಷಿಗಳುಂ ಸುಮ್ಮನಿರೆ
ವರಮುನಿ ವಶಿಷ್ಠನುಂಟೆನಲಾರು ಸತ್ಯವಂ
ತರ ನರುಪಿ ನೀವೆನೆ ತ್ರಿಜಗದೊಳು ಹರಿಶ್ಚಂದ್ರನೇ ನನ್ನಿಕಾರನೆನಲು ॥
ನೆರೆಪುಸಿಗನೀ ಸಭೆಯೊಳವನ ಪೆಸರ್ಗೊಳಬಹುದೆ
ಧರೆಯಲ್ಲಿ ಕ್ಷತ್ರಿಯರು ಸತ್ಯಯುತರೇ ನಿನ್ನ
ವರಶಿಷ್ಯನೆಂದು ಕೊಂಡಾಡುತಿಹೆ ಪುಸಿಯೆಂದು ನುಡಿದ ವಿಶ್ವಾಮಿತ್ರನು ॥ ೨ ॥

ಮೊದಲಾ ವಸಿಷ್ಠನೊಳು ಕೌಶಿಕಂಗುಂಟು ಹೃದ
ಯದಲಿ ಕಿನಿಸೆಂತಲು ಮುನಿವರಂ ವಸಿಷ್ಠನಿರೆ
ಮುದದಿ ವಿಶ್ವಾಮಿತ್ರನಾಶ್ರಮಕೆ ಪೋಗಲುಪಚಾರಗೆಯ್ದುವರ್ಗೆ ಮತ್ತೆ ॥
ಸದು ವಿನಯದಿಂದಾರು ವರ್ಷ ಪಂಚಾಗ್ನಿ ಮ
ಧ್ಯದಿ ಸೂಜಿಗಳ್ಮಿಡಿಯ ಕೊಂದು ತಪಗೆ
ಯ್ದುದಕ್ಕೊದಗಿದ ಫಲವನಿತ್ತು ಕಳುಹಿದಂತಾಂ ಮಗುಳ್ದುಂ
ವಸಿಷ್ಠಾಶ್ರಮಕ್ಕೆ ॥ ೩ ॥

ಬರೆ ಕೌಶಿಕಂ ಸೋಮವಾರದಮಾವಾಸೆಯೊಳು
ಹರನ ಸಾಂಗಾರ್ಚನೆಯ ಮಾಡಿದ ಫಲಂಗಳೊಳ
ಗಿರದೆ ಮೂವತ್ತುದಿವಸದ ಫಲವನೀಯಲಾನಿತ್ತುದಕ್ಕಿದು ಕಿರಿದೆನೆ ॥
ಎರಡು ಚೀಟನೊಳೀರ್ವರಿತ್ತ ಫಲಮುಂ ಬರೆದು
ಸರಿಮಾಡಿ ತೂಗಲ್ವಸಿಷ್ಠ ಬರೆಸಿದ ಚೀಟು
ಧರೆಯ ಬಿಟ್ಟೇಳದಿರೆ ಕೌಶಿಕಂ ಮುನಿದನಾಮುನಿಯ ಮೇಲೆಲೆ
ಭೂಭುಜಾ ॥ ೪ ॥

ಮನದೊಳಂದಿಂದ ವೈರವ ತಳೆದನಾ ವಸಿ
ಷ್ಠನ ಮೇಲೆ ಕೌಶಿಕಂ ಸಾರಸಭೆಯೊಳವನ ಮಾ
ತನೆ ಪುಸಿಯಮಾಡಿ ಮುಖಭಂಗಂ ಮಾಳ್ಪೆನೆನುತಂ ನುಡಿಯೆ ನುಡಿದನಿಂದ್ರಂ॥
ಘನ ರುಷಿಗಳೊಳಗೆ ನೀವೀರ್ವರೆಂದುದೆ ಜಗ
ಕ್ಕನುಮತ ಪರಸ್ಪರ ವಿರೋಧವಂ ನುಡಿದಿರೇ
ಕೆನೆ ನುಡಿದೆಲಾ ಹರಿಶ್ಚಂದ್ರನಸತ್ಯನಂ ಮಾಳ್ಪೆನೆಂದಂ ಕೌಶಿಕಂ ॥ ೫ ॥

ಪೊಗವನ ಪುಶಿಸಲಾರದೊಡೆ ನೀನೆನಪ್ಪೆ
ಯಿಾಗುಸುರು ಪುಶಿಸಿದೊಡೆ ನಿನಗೇಂ ಪ್ರತಿಜ್ಞೆಯೆನ
ಲಾಗ ಬ್ರಹ್ಮರ್ಷಿ ಕೌಶಿಕನೊಡನೆ ನುಡಿದನಾ ಸಭೆಯೆಲ್ಲ ತಲ್ಲಣಿಸಲು ॥
ನೀಗುವೆಂಬ್ರಾಹ್ಮ್ಯಮುಂ ಸುರೆಯ ಗಡಿಗೆಯ ಪೊತ್ತು
ಪೋಗುವೆಂ ದಕ್ಷಿಣಾಮುಖನಾಗಿ ಮುನಿ ದಿವಿಜ
ರೀಗಿವಕೆ ಸಾಕ್ಷಿಗಳೆನುತ್ತೆ ಮಗುಳ್ದಂ ಮಗಳ್ದು ಘರ್ಜಿಸುತ್ತಂ ನುಡಿದನು ॥ ೬ ॥

'ತೋರುವೆನಸತ್ಯಮಂ ನೀನೆಂದುದಂ ನಿನಗೆ
ಸೇರಿಸುವೆ ನಾದದೊಡೆಯೆನ್ನಯ ತಪಃಫಲವ
ನೀರುಷಿಗಳಮರರರಿಯಲು ಕೊಡುವೆನೆಂದು ನುಡಿದಾಶ್ರಮಕೆ ಬಂದನಿತ್ತಂ॥

ಸ್ವಾರಸ್ಯದ ಸುವರ್ಣಯಾಗವನಯೋಧ್ಯೆಯೊಳು
ಧಾರುಣೀಪತಿ ಹರಿಶ್ಚಂದ್ರನೆಸಗುತ್ತಿರಲ್
ಕ್ರೂರಹೃದಯಂ ಕೌಶಿಕಂ ಬಂದನೆಂದುದಂ ದೇವಸಭೆಯೊಳು ಭಾವಿಸೆ ॥ ೭ ॥

ಅಂದಿದಿರ್ವಂದು ನಲವಿಂದ ಪರಕೆಯಗೊಂಡು
ವಂದಿಸಿ ವಿನಯ ವಚನದಿಂದೆ ನುಡಿದಂ ನಿಮಗೆ
ತಂದೆ ಬೇಹಸಿತು ಧನವಂ ಕೊಡುವೆನೆನೆ ಗಜವನೇರಿ ಕವಡೆಯನು ಮಿಡಿಯೆ ॥
ತಾಂದಿವಕ್ಕೆನಿತುದ್ದ ಹಾರಿದಪುದನಿತುದ್ದ
ಮಂ ಧನವನೀಯೆನೆ ಹಸಾದವೆನುತೀಯೆ ಮನ
ಬಂದಂದಿಗೊಯ್ವೆನಿದು ನನ್ನ ಧನವೆನುತೆ ಮುನಿಸರಿದ ತನ್ನಾಶ್ರಮಕ್ಕೇ ॥ ೮ ॥

ಅಖಿಳರಿಗೆ ದಾನಮಂ ಕೊಟ್ಟಿತ್ತ ಭೂವರಂ
ಪ್ರಕಟದಿಂದೋಲಗಂಗೊಟ್ಟಿರಲ್ಕೊರ್ವ ಲು
ಬ್ಧಕ ಬಂದು ಮೆಯ್ಯಿಕ್ಕಿ ಯೆಲೆದೇವ ಚಿತ್ತೈಸುಯಿಗೆಮ್ಮ ರಾಜ್ಯದೊಳಗೆ ॥
ಸಕಲ ಮೃಗಗಳ್ ಪ್ರಜೆಗಳಂ ಬಾಧಿಸುತ್ತಿಹವಿ
ವಕೆ ಕೇಡನಾಗಿ ಚತುರಂಗ ಸೇನೆಗಳ
ನಿಕರಮುಮನೊಡಗೊಂಡು ಬೇಂಟೆಯಾಡುತ್ತೆ ಬಂದನು
ಹೇಮಕೂಟದೆಡೆಗೆ ॥ ೯ ॥

ಪೋಗಿ ತತ್ಕ್ಷೇತ್ರದೊಳು ವಾಸಿಷ್ಠನೆಂದೆನಿಪ
ಶ್ರೀಗುರುವಕಂಡು ಸಾಷ್ಟಾಂಗ ಪ್ರಣತನಾಗಿ
ರಾಗವಿ ವಿರೂಪಾಕ್ಷಲಿಂಗಮಂ ಕಂಡಷ್ಟವಿಧದಿಂದ ಪೂಜೆಗೆಯ್ದು ॥
ಕೈಗಳಂ ಮುಗಿದು ಗುರುವರನಿಂದ ಬೀಳ್ಕೊಂಡು
ಬೇಗದಿಂ ಮೃಗಬೇಂಟೆಯಾತುರದಿ ನಡೆವನುರೆ
ಕೂಗುತಂ ಬೊಬ್ಬಿಡುತ ಕುಕಿಲಿರಿದು ಕುಣಿವುತ್ತ ಪಡೆಯುಡವಿಯುಲ್ಲಿ
ತೀವೆ ॥ ೧೦ ॥

ಗಿರಿಗಳೊಳು ತರುಗಳೊಳು ಪೊಕ್ಕು ಸೇನಾನಿವಹ
ಕರಿಗಳಂ ಪುಲಿಕರಡಿ ಮೊದಲಾದವಂ ಕೊಲುತೆ
ಬರುತಿರಲು ಕೌಶಿಕಂ ನಿರ್ಮಿಸಿ ಪೋತ್ರಿಯಂ ಕಂಡು ಭಟಮದೆತೆರಳುತೆ ॥
ಇರಿಕೊಲ್ಲು ಕಡಿಯೆನುತೆ ಬಹದನುರೆ ಕೊಂದು ಭೂ
ವರನಿಗಿದಿರಾಗೆ ಹಯುವಡರ್ದಟ್ಟಿಲೋಡಲದ
ನಿರದೆ ಬೆಂಬತ್ತೆ ಸಿಕ್ಕದೆ ಬಂದು ಮುನಿಯ ಮರೆಬಿದ್ದು ವಾಹಂದಿ ನೃಪತೀ ॥೧೧॥

ಪೊಡವಿಯಾಣ್ಮಂ ಬಳಲ್ದು ಬನದೊಳಿಳಿಯೆ ಮುನಿ
ಯೆಡೆಯಾಗೆ ಕೋಪಕ್ಕೆ ಹದಿರಿನಿಂ ಪರಕುಲದ

ಮಡದಿಯರು ಜನಿಸೆ ಬೆಸನಿತ್ತೆನರಸನ ಮೆಚ್ಚಿಸೀಯ ಬಾರದುದ ಬೇಡಿ ॥
ಕುಡದಿರೆ ಜಗಳವಾಡಿ ಬಹುದೆನಲವರ್ಬಂದು
ಕಡುಜಾಣೆನೊಲಿಸಿ ಮೆಚ್ಚಂ ಬೇಡೆ ಕುಡದೆ ಕೊಂ
ದೊಡೆ ನೊರೆಯಿಡನ್ನುನಿಪನೆಡೆಗೆಯ್ದಿ ನಮಿಸಲೊದೆದುಗ್ರದಿಂದಿಂ
ತೆಂದನು ॥ ೧೨ ॥

ಖುಲ್ಲಮಕ್ಕಳ ಕೊಲುವೆ ಸೊಕ್ಕೇಕೆ ನೀನಿವರ್ಗೆ
ಸಲ್ಲನಾದೊಡೆ ತಪ್ಪಮನ್ನಿಸುವೆನೆಲು ಸೊಗ
ಸಲ್ಲದೀಮಾತು ಪೊಲತಿಯು ನೆರೆವೆನೇ ರಾಜ್ಯವಾದೊಡಂ ಕೊಡುವೆನೆನಲು ॥
ಎಲ್ಲಿ ಚಾಗಿಗಳರಸ ಕೊಟ್ಟೆ ಪುಸಿವಾತನೀ
ನಲ್ಲಧಾರೆಯು ನೆರೆಯೆಸಲ್ಬೆರಗುವಟ್ಟು ಭೂ
ವಲ್ಲಭನದಕ್ಕೊಡಂಬಟ್ಟುತ್ತನಾಷಡಂಗಂ ಸಹಿತ ಧರೆಯುಸಿರಿಯಾ ॥ ೧೩ ॥

ಅರಸನೊಪ್ಪಿಸಿ ಕಳುಹೆ ಸಚಿವಸುತ ಪತ್ನಿಯರು
ವೆರಸಿಪೋಗಲುಮುಗುಳೆ ಕರೆದು ಬಲುಹಿಂ ತರುಬಿ
ಪಿರಿಯು ಧನರುಣವನುತ್ತರಿಸೆನಲು ಕಾಶಿಯೊಳಗೀವೆನೆಂದಾಡೆ ತನಗೆ ॥
ತರಕಾರನಂ ಕುಡಲು ಬಹು ದುಃಖವಟ್ಟು ನಿಜ
ತರುಣಿಯುಂ ಸುತನ ವಿಕ್ರಯಿಸಿ ರುಣವಿಲ್ಲೆನಿಸಿ
ನೆರೆವೀರಬಾಹುಕನ ತೊತ್ತುಕೆಲಸಂಗೆಯ್ದು ಸುಡುಗಾಡ ಕಾಹುವಡೆದಂ ॥೧೪॥

ಮಡಿಸಿ ಪಾವಿಂಮಗನ ಕಳವಿಸ ನೆವದಿಂ ಮುನಿಪ
ಮಡದಿಯು ತನ್ನಕೈಯಿಂ ಕಡಿಸಿ ಸತ್ಯಮಂ
ಬಿಡದಿರಲ್ ಮೃಡಮೆಚ್ಚಿ ಸುತನ ಬದುಕಿಸಿ ಮುನ್ನಿನಂತಿತ್ತ ಸಂಪದವನು ॥
ತಡೆಯುದಿತ್ತಂ ತಪಃಫಲವನಾ ಕೌಶಿಕಂ
ಪೊಡವಿಯೆಲ್ಲರಿಯಲು ಹರಿಶ್ಚಂದ್ರ ಕಥೆಯೆಂದು
ಕಡುರಮ್ಯಮಾಗಿ ರಾಘವನಾ ನೃಪಂಗೆ ಪೇಳಿದನು ನವರಸವೆಸೆಯಲು ॥ ೧೫ ॥

ಷಡಕ್ಷರಿದೇವ : (೧೬೫೦) ಕನ್ನಡ ಮಹಾಕವಿಗಳ ವರ್ಗಕ್ಕೆ ಸೇರುವ ಷಡಕ್ಷರಿದೇವನು 'ಶಬರಶಂಕರ ವಿಳಾಸಂ' 'ರಾಜಶೇಖರ ವಿಳಾಸಂ' 'ವೃಷಭೇಂದ್ರವಿಜಯ'ವೆಂಬ ಚಂಪೂ ಕಾವ್ಯಗಳನ್ನೂ 'ಶಿವಾಧಿಕ್ಯ ರತ್ನಾವಳಿ' ಭಕ್ತಾಧಿಕ್ಯ ರತ್ನಾವಳಿ' ಎಂಬ ಸಂಸ್ಕೃತವೃತ್ತ ಗ್ರಂಥಗಳನ್ನೂ, 'ಕವಿಕರ್ಣ ರಸಾಯನ'ವೆಂಬ ಸಂಸ್ಕೃತ ಕಾವ್ಯವನ್ನೂ, ಹಲವು ಸ್ತೋತ್ರಗಳನ್ನೂ ಬರೆದಿದ್ದಾನೆ.

ತನ್ನ ಗುರುಪರಂಪರೆಯನ್ನು ರೇವಣಸಿದ್ಧ ಅವನ ಮಗ ರುದ್ರಮುನಿ ಮತ್ತು ಅವರ ಶಿಷ್ಯಪರಂಪರೆಗೆ ಸೇರಿದ ಉದ್ದಾನ, ಅನ್ನದಾನೀಶ, ರೇವಣ ಸಿದ್ಧ, ಚಿಕ್ಕವೀರದೇಶಿಕರೆಂದು ಹೇಳಿಕೊಂಡಿದ್ದಾನೆ.

ಷಡಕ್ಷರಿದೇವನು ಹುಟ್ಟಿದ ಊರು ದನುಗೂರಾದರೂ ಅವನು ಎಳಂ ದೂರ ಷಡಕ್ಷರಿದೇವನೆಂದೇ ಹೆಸರಾಗಿದ್ದಾನೆ. ವಿಜಯನಗರದ ಮಾಂಡಲಿಕ ನಾದ ಹದಿನಾಡಿನ ಮುದ್ದುಭೂಮಿಪನು ಇವನನ್ನು ದನುಗೂರಿನಿಂದ ಕರೆಯಿಸಿ ತನ್ನ ಹೆಂಡತಿಯ ತೌರುಮನೆಯಾದ ಎಳಂದೂರಿನಲ್ಲಿ ಮಠಮಾನ್ಯ ಗಳನ್ನು ಮಾಡಿಕೊಟ್ಟು ನಿಲ್ಲಿಸಿದನು. ಶಿವಾಧಿಕ್ಯ ರತ್ನಾವಳಿಯ ಕೊನೆಯಲ್ಲಿ

> "ಶ್ರೀಮನ್ನಿಖಿಲ ನಿಗಮಾಗಮ ಪುರಾಣಾದಿ ಪ್ರಸಿದ್ಧ ವೀರಶೈವಮತ
> ಸ್ಥಾಪನಾಚಾರ್ಯವರ್ಯ ಜಗದ್ಗುರು ಶ್ರೀರೇಣುಕಾಚಾರ್ಯ
> ಗೋತ್ರಾಮೃತಾರ್ಣವ ರಾಕಾಸುಧಾಕರಾಯಮಾನ ಪರವಾದಿ ಮದಗಜ
> ಕಣ್ಠೀರವ ಗೀರ್ವಾಣ ಕರ್ನಾಟಕಭಾಷಾಮಯ ಸರಸಪ್ರಬನ್ಧರಚನಾ
> ಚಾತುರೀಧುರೀಣ ಶ್ರೀಬಾಲೇನ್ದುಪುರವರಾಧೀಶ ಮುದ್ದುಭೂಮಿಪಕುಲ
> ಗುರು ಶ್ರೀ ಷಡಕ್ಷರಿ ಸ್ವಾಮಿ"

ಎಂದಿರುವ ವಾಕ್ಯ ಇದನ್ನು ಸಮರ್ಥಿಸುತ್ತದೆ. ಇದೇ ಕಾಲದವನಾದ ಮೈಸೂರಿನ ಚಿಕ್ಕದೇವರಾಯನೂ ಷಡಕ್ಷರಿಯಲ್ಲಿ ತುಂಬ ಭಕ್ತಿಗೌರವಗಳ ನ್ನಿಟ್ಟುಕೊಂಡಿದ್ದನು.

ಷಡಕ್ಷರಿದೇವನು 'ಇಳಾಪತಿ ಪೂಜಿತ ಪಾದಪಂಕಜ'ನಾದರೂ ಅವರ ಆಶ್ರಯದಲ್ಲಿ ನಿಲ್ಲಲಿಲ್ಲ. ಪ್ರಾಯಶಃ ಇವನು ಒಂದು ಮಠದ ಪಟ್ಟಾಧಿ ಕಾರಿಯಾಗಿದ್ದುದರಿಂದಲೂ, ಅರಸರಿಂದ ಸಂಸೇವಿತನಾಗಿದ್ದುದರಿಂದಲೂ ಬಿರು ದಾವಳಿಗಳನ್ನೂ, ಕನಕಕಂಕಣ, ರತ್ನಪೆಂಡೆಗಳನ್ನು ಪಡೆಯುವುದಕ್ಕೆ ಹೋಗ ಲಿಲ್ಲವೆಂದು ಕಾಣುತ್ತದೆ.

ಶೃಂಗಾರ ರಸಪೂರ್ಣವಾದ ರಾಜಶೇಖರ ವಿಳಾಸವನ್ನು ಷಡಕ್ಷರಿ ಎಳೆಪ್ರಾಯದಲ್ಲಿ ಬರೆದನೆಂದೂ, ಇದು ಅವನ ಮೊದಲನೆಯ ಕೃತಿ ಯೆಂದೂ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಶೈಲಿಯ ಪಕ್ವತೆಯನ್ನು ನೋಡಿದರೆ 'ಶಬರಶಂಕರ ವಿಳಾಸ'ದಾನಂತರ ಇದನ್ನು ಕವಿ ಬರೆದಿರಬೇಕೆಂದು ನಮ್ಮ ಅಭಿಪ್ರಾಯ. ಗುಬ್ಬಿ ಮಲ್ಲಣಾರ್ಯನು ಬರೆದ 'ಭಾವಚಿಂತಾರತ್ನ'

ಕಾವ್ಯವನ್ನೇ ಆಧಾರವಾಗಿಟ್ಟುಕೊಂಡರೂ ಕವಿ ಸ್ವತಂತ್ರವಾಗಿ ಅನೇಕ ಸುಂದರ ಮಾರ್ಪಾಟುಗಳನ್ನು ಮಾಡಿ ಸಣ್ಣ ಕಥೆಯನ್ನು ೧೪ ಅಶ್ವಾಸಗಳ ಕಾದಂಬರಿ ರೂಪದಲ್ಲಿ ಬರೆದಿದ್ದಾನೆ.

ಷಡಕ್ಷರಿ ಗಂಡುಕವಿ. ಅವನ ಶೈಲಿ, ಧೋರಣೆ, ಪ್ರೌಢನಿರೂಪಣೆ, ಕೆಚ್ಚು ಎಲ್ಲವೂ ಈ ಮಾತನ್ನು ಪೋಷಿಸುತ್ತವೆ. ಕಾವ್ಯಲಕ್ಷಣವನ್ನು ಇವನಷ್ಟು ವಿಪುಳವಾಗಿ ಬೇರೆ ಯಾವ ಕವಿಯೂ ಚರ್ಚಿಸಿಲ್ಲ. ಕಾವ್ಯರಚನೆ ಕಲಿತರೆ ಬರುವ ವಿದ್ಯೆಯಲ್ಲ. ಅದಕ್ಕೆ ಸ್ಫೂರ್ತಿ ಬೇಕು, ಜತೆಗೆ ಈಶ್ವರನ ಕೃಪಾಬಲವಿರಬೇಕು.

“ಕಲಿಸಿದೊಡೆ ಬರ್ಕುಮೆ ಸ
ಲ್ಲಲಿತ ಕವಿತ್ವಂ ನಿಸರ್ಗಸುಭಗಮುಂ ರಮಣೀ ॥
ವಿಲಸಿತ ರತಿರಸ ರಸಿಕತೆ
ತಲೆದೋರ್ಪುದು ತಾನೆ ಕಲಿಸಲೇಂ ಬಂದಪುದೇ ॥

ಆರಾರೇರ ಶಾಸ್ತ್ರ
ಶ್ರೀರೋಹಣ ಗಿರಿಯನಲ್ಲಿ ನವಕವಿತಾ ಚಿಂ ॥
ತಾರತ್ನಂ ದೊರಗುಮೆ ಮಾ
ರಾರಿಯ ಕೃಪೆಯಿಲ್ಲದಂಗೆ ಧರಣೀತಳದೋಳ್ ॥”

ರಸಕವಿತೆಯ ಮಾರ್ಗವನ್ನರಿಯುವುದಕ್ಕೆ ರಸಿಕತೆ, ವಿಚಕ್ಷಣತೆಗಳಿರಬೇಕು ಓದುಗನಲ್ಲಿ

“ಮಿಸುನಿಯದೊಂದಾದೊಡದೇಂ
ಪೊಸತೊಡವೆನಿಸುತ್ತೆ ಬೇರೆಬೇರೆನಿಸುವವೋಲ್ ॥
ರಸವತ್ಕವಿತಾಮಾರ್ಗಂ
ರಸೆಯಲ್ಲಿ ವಿಚಕ್ಷಣರ್ಕಳಿಂ ಪೊಸತೆನಿಕುಂ ॥”

ಕವಿತೆ ಹೇಗಿರಬೇಕು?

“ಕವಿ ವಿಬುಧರ ಕಿವಿಯೊಳ್ಸೂ
ಸೂಸುವ ನವರಸಮಿಳಿದು ತೀವಿ ತನುವಂ ಮನವಂ ॥
ಕವಿದು ಹೊರಸೂಸಿತೆನೆ ಪೊ
ಣ್ಮುವ ಸುಖಭಾಷ್ಯಂ ತುಳುಂಕೆ ಪೇಳ್ವುದು ಕೃತಿಯುಂ ॥”

ಆದರೇನು ಹೀಗೆ ಬರೆದ ಕಾವ್ಯವನ್ನು ಜರಿಯುವವರೇ ಹೆಚ್ಚು. ಜಗತ್ತಿನಲ್ಲಿ ಹೊನ್ನಕಂಕಣಕ್ಕಿಂತ ಹಿತ್ತಾಳೆ ಕಡಗಕ್ಕೆ ಪುರಸ್ಕಾರ ಹೆಚ್ಚು. ಸತ್ಕೃತಿಗಳನ್ನು ಜರಿಯುವವರನ್ನು ಖಂಡಿಸಿ ಷಡಕ್ಷರಿ ಪ್ರತಿಭಾವಂತರಾದ ಕವಿಗಳಿಗೆ ಧೈರ್ಯ ಉತ್ಸಾಹಗಳನ್ನು ನೀಡಿದ್ದಾನೆ

"ಕೃತಿ ಕೃತಕೃತಿಯಂ ಕ್ಷಿತಿಯೊ
ಳ್ಮತಿರಹಿತರ್ತ್ತಳಿಯುರೆಂದು ಪಳಿಯೆಂ ಮುಳಿಯೆಂ ॥
ರತಿಲಾಲಸ ರಮಣೀ ಸಮು
ರತಿಯಂ ಕ್ಲೀಬರ್ಕ್ಕಳೆಂತು ಮೋಣರಿದಪರೇ ॥"

ತನ್ನ ಕಾವ್ಯದ ಹೆಚ್ಚಳವನ್ನು ಷಡಕ್ಷರಿ ಇತರ ಕವಿಗಳಂತೆ ಹೇಳಿಕೊಂಡಿದ್ದಾನೆ. ಇದು ಕನ್ನಡ ಕಾವ್ಯಲಕ್ಷಣಗಳಲ್ಲಿ ಒಂದು ಸಂಪ್ರದಾಯವಾಗಿಬಿಟ್ಟಿದೆ. ಇತರ ಕವಿಗಳಲ್ಲಿ ಕೇವಲ ಸಂಪ್ರದಾಯ ಶರಣತೆ ಕಂಡುಬಂದರೆ ಷಡಕ್ಷರಿಯಲ್ಲಿ ಸತ್ಯವಾಣಿ ಝೇಂಕರಿಸುತ್ತದೆ.

"ಅತಿರಸವೃತ್ತ್ಯಲಂಕೃತಿ ಸಮನ್ವಿತ ಪದ್ಧತಿ ಸಾರವಿಜ್ಞ ಮ
ತ್ಕೃತಿಕರ ಭಾವಸಂಗತಿ ನವೀನಗುಣೋನ್ನತಿ ಸತ್ಕವೀಂದ್ರ ಸಂ ॥
ತತಿ ಸರಸೋಕ್ತಿ ಸನ್ನುತಿ ಬುಧವ್ರಜ ಸಂಮತಿ ಮಂಜುಳಾರ್ಥ ಸು
ಸ್ಥಿತಿ ನವರೀತಿ ಸದ್ರತಿಯೊಡಚ್ಚ್ರಪುದೀಕೃತಿ ಸದ್ಗುಣಾಂಕನಾ ॥
ತಂಬೆಲರಂತೆ ತುಂಬುವರೆಯಂ ಪೊರೆಪುಣ್ಮ್ರವ ಜೊನ್ನದಂತೆ ಪೆ
ಣ್ದುಂಬಿಯ ಗಾನದಂತೆ ಪೊಸಸುಗ್ಗಿಯ ನಂದನದಂತೆ ನಲ್ಮೆಯಿಂ ॥
ದಂ ಬಿಗಿದಪ್ಪಿದಂಗನೆಯ ಪೆರ್ಮ್ಮೊಲೆಸೋಂಕಿನ ಸೌಖ್ಯದಂತೆ ಚಿ
ತ್ತಂ ಬಿಡಿದಪ್ಪುದೀಕೃತಿ ಷಡಕ್ಷರದೇವಕೃತಂ ರಸಜ್ಞರಾ ॥
ನುತರಸ ಸಂಪದಂ ಪದಮುದರ್ಥ ಸಮನ್ವಿತಮರ್ಥಮಾರ್ಥ್ಯ ಸಂ
ಮತಗುಣರಂಜಿತಂ ಗುಣಮುದಾತ್ತ ನವಸ್ಥಿತಿ ವೃತ್ತಿ ವೃತ್ತಿ ನಿ ॥
ರ್ಮಿತ ಸರಸಾನುಭಾವ ಮುರುಭಾವ ಮುದಂಚಿತ ರೀತಿರೀತಿ ವಿ
ಸ್ತೃತ ಸದಲಂಕೃತಿ ಸ್ಫುರದಲಂಕೃತಿ ರಂಜಿಪುದೀ ಪ್ರಬಂಧದೊಳ್ ॥"

ವಿತತಪುರಾತನ ಕವಿಕೃತ
ಕೃತಿ ಭೂಷಣಭೂಷಿತಾಂಗಿ ಭಾರತಿ ಭುವನ ॥
ಸ್ತುತ ಕಾಂತಿ ಗುಣಮಿಳಿತ ಮ
ತ್ಕೃತಿ ನವಸೀಮಂತರತ್ನಮಂ ತಳೆದೆಸೆವಳ್ ॥

ಷಡಕ್ಷರಿದೇವ ತನ್ನ ಮಾರ್ಗದರ್ಶಿಯಾಗಿ "ಮೃದುಮಧುರ ಪದ ವಿಲಾಸಾಸ್ಪದ ರಸವಿಸರ ಪ್ರಕಾಶ ಕರ್ಣಾಟ ಕವಿತ್ವದೊಳೊರ್ವನೆ ಪೆಸರ್ವಡೆದಗ್ಗದ ಹರಿಹರ''ನನ್ನಿಟ್ಟುಕೊಂಡು ಅವನ ಮಾರ್ಗದಲ್ಲಿಯೇ ಕಾವ್ಯವನೊರೆವೆಂ ಎಂದು ಹೇಳಿದರೂ ಅವನ ಮಾರ್ಗ ಅವನದು, ಇವನ ಮಾರ್ಗ ಇವನದು. ಹರಿಹರನದು ಭಕ್ತವಾಣಿ, ಷಡಕ್ಷರಿಯದು ಪಂಡಿತವಾಣಿ. ಹರಿಹರನ ಹೃದಯದಿಂದ ರಸಬುಗ್ಗೆ ನಿರರ್ಗಳವಾಗಿ ನೈಸರ್ಗಿಕವಾಗಿ ಹರಿಯುತ್ತದೆ; ಷಡಕ್ಷರಿಯ ಹೃದಯದಿಂದ ವಿದ್ವದ್ವಿಭೂಷಿತವಾಗಿ ಮಂದಗಮನದಲ್ಲಿ ಹೊರಬರುತ್ತದೆ. ಕಾವ್ಯಕನ್ಯೆ ಹರಿಹರನ ಕೈಹಿಡಿದಿದ್ದಾಳೆ ತನ್ನ ಆತ್ಮಕಲ್ಯಾಣಕ್ಕಾಗಿ; ಷಡಕ್ಷರಿ ಕಾವ್ಯಕನ್ಯೆಯ ಕೈಹಿಡಿದಿದ್ದಾನೆ ತನ್ನ ಆತ್ಮಕಲ್ಯಾಣಕ್ಕಾಗಿ.

ಷಡಕ್ಷರಿದೇವನ ಕಾಲಕ್ಕೆ ಹರಿಹರನ ಕಾವ್ಯಾದರ್ಶ ಸಡಿಲವಾಗುತ್ತ ಬಂದಿದೆ. ಮಹಾಕಾವ್ಯವನ್ನು ಬರೆಯಬೇಕು, ಪಂಡಿತರ ಮೆಚ್ಚುಗೆಯನ್ನು ಪಡೆಯಬೇಕು ಎಂಬ ತತ್ತ್ವ ಮತ್ತೆ ತಲೆಯೆತ್ತಿ ನಿಂತಿದೆ. ಆದರೆ ಷಡಕ್ಷರಿದೇವ ಕೇವಲ ಪಂಡಿತವಕ್ಕಿಯಾಗದೆ ಸಿದ್ಧಕವಿಯೂ ಆದ್ದರಿಂದ ಅವನ ಕೃತಿಗಳು ಅಳಿಯದೆ ಉಳಿದಿವೆ.

ರಾಜಶೇಖರ ವಿಳಾಸಂ: ರಾಜಶೇಖರ ವಿಳಾಸದಲ್ಲಿ ಶೃಂಗಾರವೇ ಆದಿರಸ. ಇತರ ರಸಗಳನ್ನು ಮಿತವಾಗಿ ಕವಿ ಅಲ್ಲಲ್ಲಿ ಅಳವಡಿಸಿಕೊಂಡಿದ್ದಾನೆ. ಶೃಂಗಾರರಸ ನಿರೂಪಣೆಗೆ ಒಂದು ದೃಷ್ಟಾಂತವನ್ನು ಕೊಡಬಹುದು

> "ಸಿಂಹಳೇಂದ್ರಂ ಸಾಂದ್ರಹರ್ಷವಸಾಂತು ನಡೆದಿದಿರ್ಗೊಂಡು ರಾಜಶೇಖರ ರಾಜೇಂದ್ರನಂ ರಾಜವೀಧಿಯೊಳೋಜೆ ಮಿಗೆ ತರ್ಪಾಗಳ್ . . ನೀರೆಯರ್ ನೆರೆನೆರೆದು ನೆಲೆವಾಡಂಗಳ ನೆಲೆನೆಲೆಯೊಳ್ ನೋಡುತ್ತಮಿರೆಯಿರೆ, ಸಿಂಹಳೇಂದ್ರನಂತಃಪುರ ಸರೋವರ ಬಾಲಹಂಸಿ ಸರ್ವಮಂಗಳಾವರದಿಂದುದಯಿಸಿದ ಸರ್ವಮಂಗಳೆಯೆಂಬ ತದ್ರಾಜಪುತ್ರಿ ವನಲಕ್ಷ್ಮಿ ವಸಂತನಂ ನೋಡಲೆಳಸುವಂತೆ ಸುಜನವನ ವಸಂತನಂ ಭೂಕಾಂತನಂ ನೋಡಲೆಳಸಿಗಳಿಲೆನಳ್ತಂದು . . . ಈಕ್ಷಿಸಿದಳ್. ಇಂತನಿಮಿಷದೃಷ್ಟಿಯಿಂ ನಿಂದು ನಿರೀಕ್ಷಿಪ ಸಖೀಜನ ಮಧ್ಯದೊಳ್ ತನ್ನನನೂನ ಸ್ನೇಹರಸಭರಭರಿತ ಕಟಾಕ್ಷದಿನಭೀಕ್ಷಿಸುತ್ತುಮಿರ್ಪ ಕಾಮಿನಿಯುಂ . . ಕಂಡತಿ ವಿತತ ಕೌತುಕ ರಸ ಪ್ರವಾಹದೊಳ್ ಮುಳುಂಗಿ ಮೋಹಿಸಿ . . . ನೃಪಕುಮಾರನೀಕ್ಷಿಸುತೆಂದಂ

"ತಾವರೆಯಲ್ಲಿ ತಾರೆ ಜನನಂಬಡೆದಂದು ನಗೇಂದ್ರಮೂಲದೊಳ್
ಭಾವಿಸೆ ಬಾಳೆಗಂಬಮೊಗೆದಂದು ಲತಾಗ್ರದೊಳದ್ರಿ ಪುಟ್ಟಿದಂ ॥
ದಾ ವಿಧುಬಿಂಬ ಬಿಂಬವಳಮಂ ಪಡೆದಂದು ತದಗ್ರದಲ್ಲಿ ಭೃಂ
ಗಾವಳಿ ಮೂಡಿದಂದು ಸತಿಯಂಗಮನಾಂ ಪೊಗಳಲ್ಕೆ ಸಾಲ್ದಪಂ ॥

ಅಂದುಗೆಯ ಕಳನಿನಾದದೊ
ಳೊಂದಿದ ಸುಂದರಿಯ ಮಂದಗತಿಯತಿಶಯಮಂ ॥
ಕುಂದದೆ ಮಾಡೆಂದಜನಂ
ಬಂದೀಗಳ್ ಪೊತ್ತು ಸೇವಿಪುದು ಕಳಹಂಸಂ ॥

ಲಲನೆಯ ನುಣ್ದೊಡೆ ತನ್ಮಂ
ಗಲೆ ಸೋಲ್ತೊಡನೆಯ್ದಿ ಪೊಕ್ಕು ಭಯಭರದಿಂದಂ
ತಲೆವಾಗಿ ನೀರೊಳಿನ್ನುಂ
ನೆಲಸಿರ್ದಪುವಲ್ತೆ ಬಾಳೆಗಳ್ ಬನದೆಡೆಯೊಳ್ ॥

ತರಳೆಯ ತ್ರಿವಳಿಯ ಪೋಲ್ವೆಯ
ತರಂಗಮಂ ಪಡೆವೆನೆಂದುಂ ಸುರನದಿ ಪಲವುಂ
ತೆರೆಗಳನೆ ಪಡೆದು ಪಡೆಯದೆ
ಸರಿದೆರೆಯಂ ಮಾಂಜಿ ಮಗುಳ್ದು ಪಡೆದಪುದಿನ್ನುಂ ॥

ಎಳೆಯಳ ನಳಿತೋಳಂದಂ
ದಳೆವೆನೆನುತ್ತೆಳಸಿ ತಳೆಯದಳಲಿಂ ಜಲದೊಳ್
ಮುಳುಗಿತು ಮೃಣಾಳಮಿಷ್ಟಮ
ನಿಳೆಯೊಳ್ ತಿಳಿ ದೀರ್ಘಸೂತ್ರನೇಂ ಪಡೆದಪನೇ ॥

ಸೊಗಯಿಪ ಸಂಪಗೆ ಮುಗುಳದು
ಮುಗುದೆಯ ಮೂಗಿಂ ಪರಾಭವಂಬಡೆದಳಲಿಂ
ಮೃಗನಯನೆಯ ಕುರುಳೊಡನಾ
ಡಿಗಳೆನಿಪಳಿಗಳನೆ ತಗುಳ್ವುದಿನ್ನುಂ ಮುನ್ನುಂ ॥

ಕಿವಿದೊಡವಿನ ಮುಕ್ತಾತತಿ
ನವೋಡುಗಣಮೆನಿಸಿ ಕರೆಯೆ ಮುಕರಿಯೆನೆ ತ
ದ್ಯುವತಿಯ ನಯನೋತ್ಪಳದಂ
ದವನೀಕ್ಷಿಸಲೆಯ್ದಿದಿಂದುವೆನೆ ಕದಪೆಸೆಗುಂ ॥

ಇದು ಕುಸುಮಾಸ್ತ್ರನಸ್ತ್ರವಿದು ದರ್ಪಕನಾರ್ಪು ಮನೋಜನೋಜೆ ನೋ
ಡಿದು ನನೆವಿಲ್ಲ ಬಲ್ಲಹನ ಬಿಲ್ವಿದು ಕಾಮನ ಜೀವರತ್ನಮಿಂ
ತಿದು ರತಿಕಾಂತನಾಂತ ಪೊಸಕೂರಸಿ, ತಾನಿದು ಮಾರವೀರನ
ಗ್ಗದ ಸಡಳಂಕೃತಿಧ್ವಜಮಿದೆಂದೆಸಿಸಿರ್ದುದು ರೂಪು ಸೀರೆಯಾ ॥
ಕರೆದಳೆಯದಿಂದು ಕಳೆ
ದೊರೆಯದ ಚಂದ್ರಿಕೆ ಪಗಲ್ಪಗಲ್ಮುಗಿದು ಮುದಂ
ಮುರಿಯದ ಕೋಮಳೆ ಕೋಮಳೆ
ಬರೆಯದ ಸಿಂಗರದ ಪೊಳೆ ಪೊಳೆಯುತ್ತಿಸೆದಿರ್ದಳ್ ॥

ಇಂತು ನಿರತಿಶಯ ಸೌಂದರ್ಯಮಾಧುರ್ಯಮಂ ಬೀರಿ ಕಿರಿಂತೆ ಕಾಂತಿವೆತ್ತು ಕಂಗೊಳಿಸುತ್ತುಮಿರೆಯಿರೆ

ಗಡಿಗೆಟ್ಟುದು ಕಣ್ಬೇಟಂ
ನಡೆಗೆಟ್ಟದು ಚಿತ್ತವೃತ್ತಿ ಧೃತಿವಲ್ಲಿ ವಲಂ
ಕುಡಿಗೆಟ್ಟುದು ನವವಿರಹಂ
ತಡೆಗೆಟ್ಟುದು ತನ್ನೃಪಾತ್ಮಜಂಗಾ ಕ್ಷಣದೊಳ್ ॥

ಆಗಳರಸಂ

ಈ ಲಲನೆಯ ಸೌಂದರ್ಯಂ
ಸೋಲಸಿದುದು ಗಡಮುದೀಯ ಮನವಸದಾರ್ಗಂ
ಸೋಲದುದಂ ಶಿವಶಿವ ಶಶಿ
ಮೌಳಿಯ ಮಾಯೆಯನದಾರೊ ಮಾರಲ್ ಬಲ್ಲರ್ ॥"

ಎಂದು ವಿಸ್ಮಯಂಬಡೆದು ಚೆಲ್ಲಿದ ಕರಣಂಗಳಂ ಮೆಲ್ಲನೆ ಸಂತೈಸಿಕೊಂಡು, ಧೀರೋದಾತ್ತ ಸಾರ್ವಭೌಮಂ ಮುಂದಣ್ಗೆ ನಡೆತರುತ್ತಂ ನಿಜನಯನಪಥಮಂ ಮಾರಲೊಡನೆ

ಪಡಿದೆರೆದಂತೆ ಪಾರಿತೆರ್ದ ಜುಂಮನೆ ಮೆಯ್ಯನಿರುರ್ಪಿ ಮೂಡಿದ
ತ್ತಿಡಿಕಿರಿದಿರ್ದ ಬಲ್ಮೊಲೆಗಳಿಟ್ಟೆಡೆಯೊಳ್ ಬೆಮರುಣ್ಮಿದತ್ತು ಮೇಣ್
ಡಡಡಡಿಸಿತ್ತು ನುಣ್ದೊಡೆ ರದಚ್ಛದಮಿರ್ಪುದುಗಿತ್ತು ಮಯ್ಗೆ ಕಾ
ಯ್ಪಡರ್ದುದೊಡಲ್ಗೆ ಮೆಲ್ಲನಡಿಯಿಟ್ಟುದು ಮೂರ್ಛೆಮೃಗಾಯತಾಕ್ಷಿಯಾ ॥"

ಕವಿಚರಿತೆಕಾರರು "ಈತನು ಆಧುನಿಕ ಕವಿಯಾದರೂ ಇವನ ಶೈಲಿ ನಿರರ್ಗಳವಾಗಿಯೂ ಮನೋಹರವಾಗಿಯೂ ಇರುವುದಲ್ಲದೆ ಇವನ ವರ್ಣನೆ

ಗಳು ಚಮತ್ಕಾರವಾಗಿಯೂ ಇವೆ. ಮುಖ್ಯ ಇವನ ಕಂದಗಳು ಬಹಳ ರಮಣೀಯವಾಗಿವೆ'' ಎಂದು ಹೇಳುವ ಮಾತು ಅಕ್ಷರಶಃ ರಾಜಶೇಖರ ವಿಳಾಸಕ್ಕೆ ಅನ್ವಯಿಸುತ್ತದೆ.

ವೃಷಭೇಂದ್ರ ವಿಜಯ: ''ಶಂಕರನಡಿಗಳ್ಗೆ ಸರ್ವರರಿಯುತ್ತಿರೆ ಜಿಹ್ವೆಯ ನೊಲ್ದುಮಾರಿ'' ಈ ಗ್ರಂಥವನ್ನು ಬರೆದಿರುವುದಾಗಿ ಕವಿ ತಿಳಿಸುತ್ತಾನೆ. ಇದರಲ್ಲಿ ೪೨ ಆಶ್ವಾಸಗಳಿವೆ. ಸುಮಾರು ೩೫೦೦ ಪದ್ಯಗಳಿವೆ. ಚಂಪೂ ಗ್ರಂಥ. ಕವಿ ಹರಿಹರನ ಬಸವರಾಜದೇವರ ರಗಳೆಯನ್ನು ಪಾಲ್ಕುರಿಕೆ ಸೋಮನಾಥನ ಬಸವಪುರಾಣವನ್ನೂ ಭೀಮಕವಿಯ ಬಸವಪುರಾಣವನ್ನೂ ಆಧಾರವಾಗಿಟ್ಟುಕೊಂಡಿದ್ದಾನೆ. ವೀರಶೈವ ಪುರಾಣಪದ್ಧತಿಯಲ್ಲಿ ಬಸವಣ್ಣ ನವರ ಜೀವನ ಚರಿತ್ರೆಯೊಂದಿಗೆ ಶಿವಶರಣರ ಕಥೆಗಳನ್ನೂ ಸೇರಿಸಿ ಕಾವ್ಯ ವನ್ನು ವಿಸ್ತರಿಸಿದ್ದಾನೆ. ವೀರಶೈವತ್ವದ ನಿಷ್ಠೆ ಇವನೀ ಕಾವ್ಯದಲ್ಲಿ ಚೆನ್ನಾಗಿ ಮೂಡಿದೆ

"ನಡೆವುದೆ ಸತ್ಪಥಂ ನುಡಿವುದೆ ಶಿವಮಂತ್ರ ಮೊರಲ್ದು ದರ್ಶನಂ
ಬಡೆವನೆ ಮುಕ್ತನಿರ್ದನೆಲೆಯೇ ಘನಕಾಶಿಯೊಡರ್ಚುದುಜ್ಜುಗಂ ‖
ಮೃಡಪದಸೇವೆ ಹೊಕ್ಕರಡುಮುಗ್ಗದ ತೀರ್ಥಮೆನಿಪ್ಪವೆರ್ಮೆ ಸಂ
ಗಡಿಸಿದ ಸತ್ಪುರಾತನರ ಮೆಲ್ಲಡಿನಿಲ್ಕೆ ಮದಂತರಂಗದೊಳ್ ‖
ಶಿವಕೃತಿಯಲ್ಲದನ್ಯಕೃತಿಯಂ ಸಲೆಕೇಳದಕೂರ್ಮೆ ಯುಕ್ತಿಯಿಂ
ಶಿವನುತಿಯಲ್ಲದನ್ಯನುತಿಯಂ ಮಿಗೆಮಾಡದ ಪೆರ್ಮೆಯೊಚ್ಚತಂ ‖
ಶಿವಪಥಮಲ್ಲದನ್ಯಪಥದೊಳ್ಸದವಿಕ್ಕದನಲ್ಮೆ ನೈಜಮಾ
ದ ವಿಕಲ ವೀರಶೈವ ಗಣದೊಳ್ಮೆಯ ನಾಂಪುವನೇಂ ಕೃತಾರ್ಥನೋ ‖"

ತನ್ನ ಕಾವ್ಯನಾಯಕನಾದ ಬಸವೇಶ್ವರನನ್ನು ಕವಿ ವರ್ಣಿಸುವಾಗ ಬಹಳ ಮಟ್ಟಿಗೆ ಹರಿಹರನನ್ನೇ ಅನುಸರಿಸುತ್ತಾನೆ. ಹರಿಹರನ ರಗಳೆ ಷಡಕ್ಷರಿದೇವನ ಕೈಗೆ ಬಿದ್ದಿರಲಿಲ್ಲವೆಂದೂ, ಹರಿಹರನ ರಗಳೆಯಲ್ಲಿ ಪಡಿ ಮೂಡಿದ ಬಸವೇಶ್ವರನ ಚರಿತ್ರೆಗಿಂತಲೂ ಬಸವಪುರಾಣದಲ್ಲಿ ನಿರೂಪಿತವಾದ ಚರಿತ್ರೆಯು ಹೆಚ್ಚು ಉದಾತ್ತವಾಗಿದೆ ಎಂದು ಕವಿಯು ಭಾವಿಸಿರಬೇಕೆಂಬ ಕಾರಣವನ್ನು ಹೇಳಬಹುದು ಎಂದು ಅಭಿಪ್ರಾಯಪಡುವ ವಿದ್ವಾಂಸರ ಮತ ವನ್ನು ಒಪ್ಪುವುದಕ್ಕಾಗುವುದಿಲ್ಲ. ಹರಿಹರನ ರಗಳೆಯ ಪರಿಚಯ ಷಡಕ್ಷರಿ

ದೇವನಿಗೆ ಸಂಪೂರ್ಣವಾಗಿದೆ. ಕಾವ್ಯವಿಸ್ತಾರಕ್ಕಾಗಿ ಅವನು ಬಸವಪುರಾಣ ವನ್ನು ಹೆಚ್ಚು ಅನುಸರಿಸಿದ್ದಾನೆಂಬುದು ನಮ್ಮ ಅಭಿಪ್ರಾಯ. ಬಸವಣ್ಣ ನವರ ಗುಣಶೀಲಗಳನ್ನು ವರ್ಣಿಸುವ ಈ ಭಾಗವನ್ನು ನೋಡಬಹುದು.*

"ಪರಶಿವಧರ್ಮಂ ವಿಭುದೋ
ತ್ಕರನುತಪದಪದ್ಮನಾತ್ಮಲೈಂಗಂ ಶ್ರುತಿ ಪು
ಷ್ಕರಜಾದಿತ್ಯಂ ಶೈವಾ
ತಿರುಚಿರ ವೃಷಭನೆ ಪುರಾಣಪುರುಷಂ ಧರೆಯೊಳ್ ॥"

ವ॥ ಎಂಬ ಪೊಗಳ್ತೆಗಡರ್ಪಾಗಿ ಪೆಂಪುವಡೆದು ಮತ್ತಂ ಜಗತ್ಕರ್ತಂ ಪೆರ ನೋರ್ವನುಂಟೆಂಬದನ ಧಿಃಕರಿಸಿ ಶಿವನೋರ್ವನೆ ಕರ್ತನೆಂಬುದಂ ಪ್ರತಿಷ್ಠಿಸಿಯುಂ, ಕರ್ಮದ್ವಯಮನಲೆಗಳೆದು ಚಿತ್ಕ್ರಿಯದ್ವಯಮ ನಂಗೀಕರಿಸಿಯುಂ, ತನುತ್ರಯವೃತ್ತಿಯಂ ಪರಿದು ಲಿಂಗತ್ರಯ ಮನಂಗಂಗೊಳಿಸಿಯುಂ, ಚತುಷ್ಕರಣವ್ಯಾಪಾರಮಂತೊಳ್ದು ಚತುರ್ವಿಧ ವಾಗ್ವೃತ್ತಿಯಂ ಪ್ರಣವಾತ್ಮಗಂ ಮಾಡಿಯುಂ, ಪಂಚಕ್ಲೇಶಮಂ ದೂರೀಕ ರಿಸಿ ಪಂಚಾಚಾರಮನವಲಂಬಿಸಿಯುಂ, ಷಡಿಂದ್ರಿಯವರ್ತನಮ ನಳಿದು ಷಡಕ್ಷರಮನಕ್ಷ ಚಕ್ರಾದಿಗಳೊಳಮರ್ಚಿಯುಂ, ಸಪ್ತವ್ಯಸನ ಮನಪೋಹಿಸಿ ಸಪ್ತಸೋಪಾನಕ್ರಮದೊಳಾಚರಿಸಿಯುಂ, ಅಷ್ಟಮದ ಮನಪಹರಿಸುತಷ್ಟಾವರಣಮನುಪಸೇವಿಸಿಯುಂ ನವಜೀವಗುಣ ಮಂ ವಿಸಾರಿ ನವಲಿಂಗಾನುಸಂಧಾನಮನಿಂಬುಗೊಳಿಸಿಯುಂ, ದಶಪವನಧರ್ಮಮಂತಮರ್ದು ದಶನಾದ ವಿನೋದದೊಳ್ ಮನಮಂ ಮೇಳೈಸಿಯುಂ, ಅನನ್ಯಸಾಮಾನ್ಯ ಮಹಿಮೆಯಂ ತಾಳ್ದು ಮತ್ತಂ ನಿತ್ಯಶಿವರಾತ್ರಿಗೆಯ್ವುದುಮಂ, ಶಿವಭಕ್ತರ್ಶಿವನೆಂದಿರ್ಪುದುಮಂ, ಶರಣರೊಳ್ಪಿರಿದು ಕಿರಿದನಾಡದುದುಮಂ, ಜಂಗಮಕ್ಕೇನುಮಂ ವಂಚನೆಯಮಾಡದುದುಮಂ, ಹರಭಕ್ತರ ಸಲ್ಲೆಯಂ ಸಲಿಪುದುಮಂ, ಪರಸಮಯಗರ್ವಮಂ ನಿಲಿಪುದುಮಂ, ಶರಣರೇನೊಂದಡಂ ಮರು ಮಾತುಗೊಡದರ್ಪುಗೆಯ್ದುದುಮಂ, ಚರಣಲಿಂಗಮೇ ಪ್ರಾಣಲಿಂಗ ಮೆಂದಿರ್ಪುದುಮಂ, ಪರವಾದಿ ಜನಮಂ ಸೋಲಿಪುದುಮಂ, ಮೃಡಂಗೆ

* ಇದರೊಂದಿಗೆ ಹರಿಹರನ ಬಸವರಾಜದೇವರ ರಗಳೆ ಪುಟ ೫೦–೫೧ — (ಶ್ರೀ. ಟಿ. ಎಸ್. ವೆಂಕಣ್ಣಯ್ಯನವರಿಂದ ಸಂಪಾದಿತ. ಮೊದಲನೆಯ ಮುದ್ರಣ) ಹೋಲಿಸಿ ನೋಡಬಹುದು.

ಜಯುಂಗೊಡದೆ ವೃಷಭಕ್ತರ್ಗೆಗೆಲಂಗೊಟ್ಟು ಮಣಿಯುದುಮಂ, ಶರಣ ನಿಂದೆಗೇಳುದುದುಮಂ, ಶಿವೈಕಭಕ್ತಿಯುಸಲರ್ಚುವುದುಮಂ, ಸರ್ವೋರ್ವಿಯೊಳ್ ಶಿವಾಚಾರಮಂ ಬಳಯಿಸುದುಮಂ, ಪರಮತಮಾರ್ಗಮಂ ಗಣನೆಗೊಳ್ಳದುದುಮಂ, ಸುಡಿದು ತಪ್ಪದುದುಮಂ, ನಡೆದುಪೆಡಂಮೆಟ್ಟದುದುಮಂ, ನಿತ್ಯವ್ರತಮೆನಿಸಿ ಪೂಣ್ದು ಕೈಕೊಂಡು ಪರಪುರುಷಾರ್ಥನಿಧಿ ಪರಮ ಪುರುಷಂ ಬಸವರಸಂಪ್ರೊಪ್ಪುತ್ತಮಿರೆ . . . ''

ಕಾವ್ಯನಾಯಕನ ಗೌರವಕ್ಕೊಪ್ಪುವ ರೀತಿಯಲ್ಲಿ ಕವಿ ಗದ್ಯಪದ್ಯಗಳೆರಡರಲ್ಲಿಯೂ ಒಂದೇ ಬಗೆಯ ನಿಷ್ಣಾತತೆಯನ್ನು ತೋರಿ ಪಂಡಿತ ಪಾಮರ ರಂಜಕವಾಗಿ ಈ ಕಾವ್ಯವನ್ನು ಬರೆದಿದ್ದಾನೆಂದು ನಿಸ್ಸಂದೇಹವಾಗಿ ಹೇಳಬಹುದು. ''ವೃಷಭೇಂದ್ರ ವಿಜಯವು ಷಡಕ್ಷರದೇವನ ಕೃತಿಗಳಲ್ಲೆಲ್ಲಾ ಶ್ರೇಷ್ಠವಾದುದೆಂದು ನಿರ್ಣಯಿಸಬಹುದಲ್ಲದೆ ಕನ್ನಡ ಸಾಹಿತ್ಯದಲ್ಲಿಯ ಶ್ರೇಷ್ಠ ವರ್ಗದ ಕಾವ್ಯಗಳಲ್ಲಿಯೂ ಇದೊಂದು ಎಂದು ಪರಿಗಣಿಸಬಹುದು'' ಎಂದು ಪ್ರೊ. ಬಸವನಾಳರು ಹೇಳುವ ಮಾತು ಸತ್ಯವಾಗಿದೆ.

ಶಬರಶಂಕರ ವಿಳಾಸ: ಕಿರಾತರುದ್ರಲೀಲೆಯೆಂದೂ ಕರೆಸಿಕೊಂಡಿರುವ ಈ ಕಾವ್ಯದಲ್ಲಿ ೫ ಅಶ್ವಾಸಗಳೂ ೪೬೭ ಪದ್ಯಗಳೂ ಇವೆ. ಚಿಕ್ಕಕಥೆಯನ್ನು ಆಯ್ದುಕೊಂಡು ಷಡಕ್ಷರದೇವ ಮನೋಹರವಾದ ವರ್ಣನೆಗಳಿಂದ ಅದನ್ನು ವಿಸ್ತರಿಸಿದ್ದಾನೆ. ಇವನ ಕಥಾಸರಣಿ ಬಹುಮಟ್ಟಿಗೆ ಕುಮಾರವ್ಯಾಸನನ್ನು ಅನುಸರಿಸುತ್ತದೆ. ಶಬರಶಂಕರ ವಿಳಾಸದಲ್ಲಿ ಶಬ್ದ ಚಿತ್ರಗಳು, ಚಮತ್ಕಾರವಾದ ಶ್ಲೇಷೆಗಳು ತುಂಬಿವೆ. ಪಾರ್ಥ ಪರಮೇಶ್ವರರ ಕದನವನ್ನು ಕವಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ. ಷಡಕ್ಷರಿಯ ಲಕ್ಷ್ಯ ಹೆಚ್ಚಾಗಿ ವರ್ಣನೆಗಳ ಕಡೆಗಿರುವುದರಿಂದ ಅವನು 'ನಾಟಕೀಯ'ವಾದ ಸಂಭಾಷಣಾರೀತಿಯನ್ನು ಹೆಚ್ಚಾಗಿ ಉಪಯೋಗಿಸಿಕೊಂಡಿಲ್ಲ.

ಪರಶಿವನ ವರ್ಣನೆಯ ಕೆಲವು ಪದ್ಯಗಳನ್ನು ಇಲ್ಲಿ ಇವನ ಶೈಲಿಯ ದ್ಯೋತಕವಾಗಿ ಕೊಟ್ಟಿದೆ

"ಪೊಗೆಯುಳಿದಗ್ನಿಯಂತೆ ಮುಗಿಲೋಡಿದ ಭಾಸ್ಕರನಂತೆ ಮಾಯೆ ಪೆಯರ್
ದೆಗೆದ ನಿಜಾತ್ಮನಂತೆ ಮೊರೆಯುಚ್ಚಿದ ಕೂರಸಿಯಂತೆ ಕಾಂತಿಕೆಯ್ವ್

ಮಿಗೆ ಶಬರಾಂಗಮಂ ತೊರೆದು ಪೂರ್ವನಿಜಾಕೃತಿವೆತ್ತಲಂಪಿನಿಂ
ಸೊಗಯಿಸುತಿರ್ದನಾಗಮಶಿರಂ ಪೊಗಳುತ್ತಿರೆ ಚಂದ್ರಶೇಖರಂ ॥"

"ಎಳವೆಳಕಿನ ಬೆಳ್ಪೆಳಗಂ
ಬಳಲ್ಚಿ ಶಶಿರುಚಿಯೊಳೆರಕವಿಟ್ಟಂದದಿನೇಂ
ತೊಳಗಿದುದೊ ಧವಳ ಕಿರಣೋ
ಜ್ವಳ ಸದ್ಯೋಜಾತವದನಮುದು ಪರಶಿವನಾ ॥

ಎಳನೇಸರ ಬಿಂಬದ ಕೆಂ
ಬೆಳಗಂ ತೆಗಳ್ದಲರ್ದ ದಾಸಳದ ಪೊಸಗೆಂಪಂ
ಪಳಿಕೆಯ್ದು ವಾಮದೇವೋ
ಜ್ಜ್ವಳವದನಂ ಸೊಗಯಿಸಿರ್ದುದಗಜಾಧವನಾ ॥

ಭ್ರಮರಾಂಜನಾಭ್ರರುಚಿ ವಿ
ಭ್ರಮಮಂ ತಿಸಿತ ಕುಟಿಲದಂಷ್ಟ್ರಮಕ್ಷಿತ್ರಯ ಸಂ
ಕ್ರಮಿತಂ ಕರೆಮೆಸೆದುದ ಘೋ
ರಮುಖಂ ಫಣಿಕುಂಡಲೋಜ್ಜ್ವಲಂ ಪುರಹರನಾ ॥

ಅಲರ್ದ ಪೊಸಕರ್ಣಿಕಾರದ
ಸುಲಲಿತ ನವಕನಕ ಕಂಜಕಿಂಜಲ್ಕದ ನಂ
ಜುಲರುಚಿಯುಂ ಪಳಿದೆಸೆದುದು
ವಿಲಸಿತ ತತ್ಪುರುಷ ವಕ್ತ್ರಮಹಿಕುಂಡಲನಾ ॥

ಎಳಮುತ್ತಿನ ಶಂಖದ ಬೆ
ಳ್ವೆಳಗಂ ಮುಕ್ಕುಳಿಸಿದಂತೆ ತೊಳತೊಳಗುವ ಸೈ
ಪಳವಡೆ ನಯನತ್ರಯ ಮಂ
ಜುಳಮೀಶಾನಾಸ್ಯವೊಪ್ಪಿದುದು ಶಶಿಧರನಾ ॥"

ಷಡಕ್ಷರಿದೇವ ತನ್ನ ಪ್ರೌಢಪಾಂಡಿತ್ಯ, ಪ್ರತಿಭಾಮಯವಾದ ಕಾವ್ಯ ವೈಖರಿಯಿಂದ ಕನ್ನಡ ನುಡಿಯೊಡತಿಯನ್ನು ಬಗೆಬಗೆಯಾಗಿ ಸಿಂಗರಿಸಿದ್ದಾನೆ. ಇವನು ಈಚಿನವನಾದರೂ ಇವನ ಕೃತಿಗಳಲ್ಲಿ ಪ್ರಾಚೀನ ಕವಿಗಳ ಧೋರಣೆ, ಬಿಕ್ಕಟ್ಟು, ರಸಪುಷ್ಟಿಗಳು ಮೂಡಿವೆ. ವೀರಶೈವ ಮಹಾಕವಿಗಳಲ್ಲಿ ಷಡಕ್ಷರಿಯನ್ನು ಕೊನೆಯವನೆಂದು ಪರಿಗಣಿಸಬಹುದು.

ಇತರ ವೀರಶೈವ ಕವಿಗಳು* : ವೀರಶೈವ ಸಾಹಿತ್ಯದ ವಿಸ್ತಾರ, ವೈವಿಧ್ಯತೆಗಳನ್ನು ತೋರುವುದಕ್ಕಾಗಿ ಇತರ ವೀರಶೈವ ಕವಿಗಳು ಮತ್ತು ಅವರ ಕೃತಿಗಳನ್ನು ಕೆಳಗೆ ಕಾಣಿಸಿದ್ದೇವೆ. ‡

೧. **ಕುಮಾರ ಪದ್ಮರಸ** (೧೧೮೦) ಸಾನಂದಚರಿತ್ರ
೨. **ಸೋಮರಾಜ** (೧೨೨೨) ಶೃಂಗಾರಸಾರ ಅಥವಾ. ಉದ್ಭಟ ಕಾವ್ಯ
೩. **ಮಲ್ಲಣ್ಣ** (೧೪೧೩) ರೇವಣ ಸಿದ್ಧೇಶ್ವರ ಕಾವ್ಯ
೪. **ಕರಸ್ಥಲದ ನಾಗಿದೇವ** (೧೪೩೦) ಕರಸ್ಥಲದ ನಾಗಿದೇವನ ತ್ರಿವಿಧಿ
೫. **ಚಂದ್ರಕವಿ** (೧೪೩೦) ವಿರೂಪಾಕ್ಷಸ್ಥಾನ, ಗುರುಮೂರ್ತಿಶಂಕರ ಶತಕ
೬. **ಕಲ್ಲರಸ** (೧೪೫೦) ಜನವಶ್ಯ ಅಥವಾ ಮದನತಿಲಕ
೭. **ತೋಂಟದ ಸಿದ್ದೇಶ್ವರ** (೧೪೭೦) ಷಟ್ಸ್ಥಲಜ್ಞಾನ ಸಾರಾಮೃತ
೮. **ಗುಬ್ಬಿಯ ಮಲ್ಲಣ್ಣ** (೧೪೭೫) ಗಣಭಾಷ್ಯರತ್ನಮಾಲೆ, ವಾತುಲತಂತ್ರ ಟೀಕೆ
೯. **ನೀಲಕಂಠಾಚಾರ್ಯ** (೧೪೮೫) ಆರಾಧ್ಯಚರಿತ್ರ
೧೦. **ಚತುರ್ಮುಖ ಬೊಮ್ಮರಸ** (೧೫೦೦) ರೇವಣ ಸಿದ್ಧೇಶ್ವರ ಪುರಾಣ
೧೧. **ಆನಂದ ಬಸವಲಿಂಗ ಶಿವಯೋಗಿ** (೧೫೦೦) ಮಾಚಿದೇವ ಮನೋವಿಲಾಸ
೧೨. **ವಿರತ ಮಹಲಿಂಗದೇವ** (೧೫೦೦) ಗುರುಬೋಧಾಮೃತ
೧೩. **ವಿರುಪರಾಜ** (೧೫೧೯) ತ್ರಿಭುವನತಿಲಕ
೧೪. **ನಂಜುಂಡ** (೧೫೨೫) ಕುಮಾರರಾಮನ ಕಥೆ
೧೫. **ಓದುವ ಗಿರಿಯ** (೧೫೨೫) ಸಾನಂದ ಗಣೇಶ ಸಾಂಗತ್ಯ, ಹರಿಶ್ಚಂದ್ರ ಸಾಂಗತ್ಯ
೧೬. **ಚೇರಮಾಂಕ** (೧೫೨೬) ಚೇರಮಕಾವ್ಯ
೧೭. **ಮುರಿಗೆಯ ಶಾಂತವೀರ** (೧೫೩೦) ಪ್ರಭುಲಿಂಗ ಕಂದ, ವೈರಾಗ್ಯ ಷಟ್ಪದಿ, ಏಕೋನ ವಿಂಶತಿ ಪ್ರಬಂಧ.
೧೮. **ಲಿಂಗಮಂತ್ರಿ** (೧೫೩೦) ಕಬ್ಬಿಗರ ಕೈಪಿಡಿ.
೧೯. **ವೀರಭದ್ರರಾಜ** (೧೫೩೦) ವೀರಭದ್ರವಿಜಯ, ಪಾರ್ವತಿವಲ್ಲಭ ಶತಕ, ಉಮಾ ಮಹೇಶ್ವರ ಶತಕ, ಪ್ರಾಣನಾಥ ಶತಕ, ಶ್ರೀಕಂಠ ಸೋಮೇಶ್ವರ ಶತಕ, ಕಂದಶತಕ.

---

*ಇವನ್ನು ಬಹುಮಟ್ಟಿಗೆ ರಾ॥ ಬ॥ ಆರ್. ನರಸಿಂಹಾಚಾರ್ಯರವರ ಮತ್ತು ರೆ॥ ಕಿಟೆಲ್‌ರವರ ಗ್ರಂಥಗಳಿಂದ ಸಂಗ್ರಹಿಸಿದ್ದೇವೆ.

‡ ವಚನಕಾರರನ್ನು ನಾವು ನಿರ್ದೇಶಿಸಿಲ್ಲ. ಎಲ್ಲ ವಚನಕಾರರ ಕೃತಿ ವಿಮರ್ಶೆಯನ್ನು ನಮ್ಮ "ವಚನ ಸಾಹಿತ್ಯ ಕೈಪಿಡಿ" ಎಂಬ ಗ್ರಂಥದಲ್ಲಿ ಮಾಡಿದ್ದೇವೆ.

೨೦. **ಬೊಂಬೆಯ ಲಕ್ಕ** (೧೫೩೮) ಹರಿಶ್ಚಂದ್ರ ಸಾಂಗತ್ಯ.

೨೧. **ಕುಮಾರ ಚೆನ್ನಬಸವ** (೧೫೫೦) ಬಸವಪುರಾಣದ ಪುರಾತನರ ಚರಿತೆ, ಸಾಸಲ ಭೈರವೇಂದ್ರ ಚರಿತೆ, ಶಂಭುಪೂಜಾವಿಧಿ, ವಿಭೂತಿಮಹಿಮೆ.

೨೨. **ಲಿಂಗ** (೧೫೫೦) ಚೋಳರಾಜ ಸಾಂಗತ್ಯ.

೨೩. **ಸಿರಿನಾಮಧೇಯ** (೧೫೫೦) ಮಲ್ಲೇಶ್ವರ ಸಾಂಗತ್ಯ.

೨೪. **ಬಸವಾಂಕ** (೧೫೫೦) ಉದ್ಭಟದೇವ ಚರಿತೆ.

೨೫. **ಗುರುಲಿಂಗ ವಿಭು** (೧೫೫೦) ಭಿಕ್ಷಾಟನ ಚರಿತೆ

೨೬. **ಕಿಕ್ಕೇರಿಯಾರಾಧ್ಯ ನಂಜುಂಡ** (೧೫೫೦) ಭೈರವೇಶ್ವರ ಕಾವ್ಯ.

೨೭. **ಬಸವ** (೧೫೫೦) ಚಿಕ್ಕಯ್ಯನ ಸಾಂಗತ್ಯ ಅಥವಾ ಭಕ್ತಿಮೋಹನಸಾರ.

೨೮. **ಸದಾಶಿವಯೋಗಿ** (೧೫೫೮) ರಾಮನಾಥ ವಿಲಾಸ.

೨೯. **ವಿರಕ್ತ ತೋಂಟದಾರ್ಯ** (೧೫೬೦) ಸಿದ್ಧೇಶ್ವರ ಪುರಾಣ, ಪಾಲ್ಕುರಿಕೆ ಸೋಮೇಶ್ವರ ಪುರಾಣ, ಕರ್ಣಾಟಕ ಶಬ್ದಮಂಜರಿ, ಮನೋವಿಜಯ ತಾತ್ಪರ್ಯ, ಮೊಗ್ಗೆಯ ಮಾಯಿದೇವ ಶತಕತ್ರಯ ಟೀಕೆ.

೩೦. **ಮುರಿಗೆ ದೇಶಿಕೇಂದ್ರ** (೧೫೬೦) ರಾಜೇಂದ್ರ ವಿಜಯ

೩೧. **ಶಾಂತೇಶ** (೧೫೬೧) ತೋಂಟದ ಸಿದ್ಧೇಶ್ವರ ಪುರಾಣ.

೩೨. **ಪರ್ವತದೇವ** (೧೫೭೮) ನನ್ನಯ್ಯಗಳ ಚಾರಿತ್ರ.

೩೩. **ಸಿದ್ಧಶಿವಲಿಂಗಯೋಗಿ** (೧೬೦೦) ಭೈರವೇಶ್ವರ ಪುರಾಣ

೩೪. **ಅಣ್ಣಾಜಿ** (೧೬೦೦) ಸೌಂದರ ವಿಳಾಸ

೩೫. **ಬಸವೇಶ** (೧೬೦೦) ಪದ್ಮೈಕೋತ್ತರ ಶತಸ್ಥಲ, ಸುಜ್ಞಾನ ಚಿಂತಾಮಣಿ.

೩೬. **ಬಸವಲಿಂಗ** (೧೬೧೧) ಶಿವಾಧಿಕ್ಯ ಪುರಾಣ

೩೭. **ಶಂಕರದೇವ** (೧೬೨೦) ಶಂಕರಶತಕ, ಶಂಕರದೇವರ ಕಂದ, ಷಡಕ್ಷರ ರಗಳೆ, ಭಕ್ತಿಬಿನ್ನಹದ ರಗಳೆ, ವೀರಶೈವ ರಗಳೆ.

೩೮. **ಶಾಂತವೀರದೇಶಿಕ** (೧೬೫೦) ಶಿವಲಿಂಗ ಚಾರಿತ್ರ, ಶಿವಗಣ ಚಾರಿತ್ರ.

೩೯. **ಮರಿರಾಚವಟ್ಟೇಶ** (೧೬೫೦) ಪ್ರಭುನಟನ ತಾರಾವಳಿ.

೪೦. **ರುದ್ರ** (೧೬೫೦) ಕರಸ್ಥಲದ ನಾಗಯ್ಯನ ಚರಿತೆ.

೪೧. **ಪೆಮ್ಮಿಶೆಟ್ಟಿ** (೧೬೫೦) ಗುರುಭಕ್ತಾಂಡರ ಚರಿತ್ರೆ

೪೨. **ಹಲಗ** (೧೬೫೦) ಹರಿಶ್ಚಂದ್ರ ಸಾಂಗತ್ಯ.

೪೩. **ಮಲ್ಲು** (೧೬೫೦) ಪ್ರಸಾದ ಸಾಂಗತ್ಯ.

೪೪. **ಕವಿ ಮಾದಣ್ಣ** (೧೬೫೦) ನನ್ನಯ್ಯಗಳ ಚಾರಿತ್ರ.

೪೫. **ಮಹಾದೇವ** (೧೬೫೦) ಹೇರೂರು ಹೆಣ್ಣಿನ ಸಾಂಗತ್ಯ.

೪೬. **ಸಿದ್ಧಮಲ್ಲೇಶ** (೧೬೫೦) ವೀರಸಂಗಯ್ಯನ ಚರಿತೆ.

೪೭. ನಂಜಣಾರ್ಯ (೧೬೫೦) ನೀತಿರತ್ನಾಭರಣ.
೪೮. ಮುರುಘ ಸಿದ್ದೇಶ (೧೬೫೦) ಗುರುಲಿಂಗ ಜಂಗಮ ಚಾರಿತ್ರ ಅಥವಾ ಮಹತ್ತಿನ ಕಾವ್ಯ.
೪೯. ಮಂಚಯ್ಯ (೧೬೫೦) ಭಕ್ತಿರಸಸೋನೆ.
೫೦. ನಿಜಗುಣಾರ್ಯ (೧೬೫೦) ಅದ್ವೈತ ರಾಮಾಯಣ.
೫೧. ಮುಖಬೋಳು ಸಿದ್ದರಾಮಯೋಗಿ (೧೬೫೬) ಷಟ್ಸ್ಥಲ ತಿಲಕ.
೫೨. ಸೆಜ್ಜೆಯ ಸಿದ್ದಲಿಂಗಾರ್ಯ (೧೬೬೫) ಮಳೆಯರಾಜನ ಚರಿತ್ರೆ.
೫೩. ಮುಮ್ಮಡಿ ತಮ್ಮ (೧೬೬೫) ಶಂಕರಸಂಹಿತೆ.
೫೪. ಶಾಂತಲಿಂಗದೇಶಿಕ (೧೬೭೨) ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ.
೫೫. ಬಸವಲಿಂಗ ಕವಿ (೧೬೭೯) ಕೊಟ್ಟೂರು ಬಸವೇಶ್ವರ ಪುರಾಣ.
೫೬. ಪಂಡಿತ ಮಲ್ಲಿಕಾರ್ಜುನ (೧೬೮೭) ಶಂಕರದಾಸಿಮಯ್ಯನ ಪುರಾಣ.
೫೭. ಸಂಪಾದನೆಯ ಪರ್ವತೇಶ್ವರ (೧೬೯೮) ಚತುರಾಚಾರ್ಯ ಪುರಾಣ.
೫೮. ಮುರುಘಸಿದ್ದ (೧೭೦೦) ಬಸವರಾಜನ ಪವಾಡಗಳು.
೫೯. ಸೋಮ (೧೭೦೦) ವೀರಭದ್ರ ಸಾಂಗತ್ಯ.
೬೦. ಪರಮಭಕ್ತ (೧೭೦೦) ಘೋರಾಸುರ ಯುದ್ಧ.
೬೧. ಚೆನ್ನಮಲ್ಲೇಶ (೧೭೦೦) ದೀಪದ ಕಲಿಯಾರ ಕಾವ್ಯ, ವೀರಸಂಗಯ್ಯನ ಚೌಪದ.
೬೨. ನಂಜ (೧೭೦೦) ಕಪೋತವಾಕ್ಯ.
೬೩. ಶಾಂತವೃಷಭೇಶ (೧೭೦೦) ಅನುಭವಶತಕ.
೬೪. ಸಿದ್ದಪ್ಪ (೧೭೦೦) ಸಿದ್ಧನೀತಿ.
೬೫. ಬಸವ (೧೭೦೦) ರೇಣುಕಾರ್ಯ ಚರಿತ್ರೆ.
೬೬. ಸಪ್ಪಣ್ಣಸ್ವಾಮಿ (೧೭೦೦) ಕೈವಲ್ಯ ಕಲ್ಪವಲ್ಲರಿ
೬೭. ಹಾರುವ (೧೭೦೦) ಬಸವಶಿಖಾಮಣಿ.
೬೮. ಹುಬ್ಬಳ್ಳಿಯ ಸಂಗಯ್ಯ (೧೭೦೦) ಶಿವಯೋಗ ರತ್ನಾಕರ.
೬೯. ಮುಮ್ಮಡಿ ಕಾರ್ಯೇಂದ್ರ (೧೭೦೦) ವೇದಸಂಜೀವಿನಿ.
೭೦. ಗುರುವ (೧೭೦೦) ಪ್ರಾಣಲಿಂಗ ಶತಕ.
೭೧. ಕಾಡಸಿದ್ದೇಶ (೧೭೨೫) ಇಷ್ಟಲಿಂಗಶತಕ.
೭೨. ಚೆಲುವ (೧೭೨೫) ಮಡಿವಾಳಯ್ಯನ ಚರಿತೆ, ವೀರಭದ್ರ ಚರಿತೆ.
೭೩. ಮಹಾದೇವ (೧೭೨೫) ಬ್ರಹ್ಮೋತ್ತರಖಂಡ.
೭೪. ಮೊದಿಯ ರುದ್ರ (೧೭೩೭) ವಿರಕ್ತರ ಕಾವ್ಯ, ಪಂಚೋದ್ಭವ ಕಾವ್ಯ.
೭೫. ನೂರೊಂದ (೧೭೪೦) ಸೌಂದರ ಕಾವ್ಯ.
೭೬. ನಂದಿನಾಥ (೧೭೪೫) ಪಲ್ಲೀಕಂಠಾಭರಣ.

೭೭. ಸಂಗನ ಬಸವಪ್ಪ (೧೭೫೦) ವೀರಶೈವ ಸುಧಾನಿಧಿ ಟೀಕೆ.
೭೮. ವಿರಕ್ತರ ಷಡಕ್ಷರಯ್ಯ (ಯಡಗಂಬಳಿ ಸಿದ್ಧಲಿಂಗ) (೧೭೫೦) ಶಿವಪೂಜಾಷ್ಟಕ, ಶಿವಯೋಗಾಷ್ಟಕ.
೭೯. ಚೆನ್ನಬಸವ ಶಿವಯೋಗಿ (೧೭೫೦) ಆಚರಣೆಯ ತ್ರಿಪದಿ.
೮೦. ಗುರುಸಿದ್ದಪ್ಪ (೧೭೫೦) ಮಾದೇಶ್ವರ ಸಾಂಗತ್ಯ.
೮೧. ಯೋಗಾನಂದ (೧೭೮೦) ವಿರೂಪಾಕ್ಷ ಶತಕ, ಬಸವ ಶತಕ.
೮೨. ನಿಶ್ಚಿಂತಾತ್ಮ (೧೭೫೦) ವೀರಭದ್ರಲೀಲಾ ವಿಜಯ.
೮೩. ಕವಿಚೆನ್ನ (೧೭೫೦) ಶಿಬಿರಾಯ ಚರಿತೆ.
೮೪. ವಿರುಪಣಯ್ಯ (೧೭೫೦) ವೀರಭದ್ರವಿಜಯ.
೮೫. ಚೆನ್ನಪ್ಪ (೧೭೫೦) ಶರಣಲೀಲಾಮೃತ.
೮೬. ಮೋನಪ್ಪ (೧೭೫೦) ಮೋನೇಶ್ವರ ಪುರಾಣ.
೮೭. ಶಂಕರಕವಿ (೧೭೬೩) ಚೋರಬಸವ ಚರಿತ್ರೆ.
೮೮. ನಿಜಲಿಂಗಾರಾಧ್ಯ (೧೮೦೦) ನಿಜಲಿಂಗ ಶತಕ.
೮೯. ಕಸ್ತೂರಿ ಸಿದ್ದ (೧೮೦೦) ಚೋರಕಥೆ.
೯೦. ಕಪ್ಪಿನಿ (೧೮೦೦) ನಂಜುಂಡ ಶತಕ.
೯೧. ಚೆನ್ನವೀರೇಗೌಡ (೧೮೦೦) ಕಾಮನಯೋಗ ಪದಗಳು.
೯೨. ಶಿವಯೋಗೀಶ್ವರ (೧೮೦೦) ವೀರಶೈವ ಷಟ್ಸ್ಥಲ ಸಿದ್ಧಾಂತಸಾರ.
೯೩. ಮೈಲಾರದ ಬಸಪ್ಪ (೧೮೦೦) ಗುರುಕರುಣ ತ್ರಿವಿಧಿ, ನಿರಾಭಾರಿ ವೀರಶೈವ ಸಿದ್ಧಾಂತ.
೯೪. ಬಾಲಲೀಲಾ ಮಹಂತ ಶಿವಯೋಗಿ (೧೮೨೦) ಕೈವಲ್ಯದರ್ಪಣ.
೯೫. ಕಡಕೊಳದ ಮಡಿವಾಳಪ್ಪ (೧೮೨೦) ತತ್ತ್ವಪದಗಳು.
೯೬. ಕುಮಾರ ನಿಭು (೧೮೨೧) ಭಿಕ್ಷುಕ ಮಹೇಶ ವಿಲಾಸ.
೯೭. ಹಂಪೆಯ ಚೆನ್ನಬಸವ (೧೮೨೬) ಶಿವಾತ್ರಗಣೇಶ ಪುರಾಣ.
೯೮. ಬಸವಲಿಂಗ (೧೮೩೦) ಶರಣಬಸವ ರಗಳೆ.
೯೯. ಮಾವನೂರು ಚೆನ್ನಬಸವ (೧೮೪೦) ಶರಣಬಸವ ಚರಿತೆ.
೧೦೦. ನರೇಗಲ್ಲ ಶಿವಬಸಪ್ಪಶಾಸ್ತ್ರಿ (೧೮೪೦) ಬಸವಪವಾಡ ಲೀಲಾಮೃತ.
೧೦೧. ದೇವಲಾಪುರದ ನಂಜುಂಡ (೧೮೪೧) ಅಪರಾಧ ಸ್ತೋತ್ರ, ತಿಬ್ಬಾಂಬಿಕಾ ಶತಕ, ಲಿಂಗಸ್ತುತಿ, ಶಂಕರಾಷ್ಟಕ, ಶೈಲಜಾಧವ ಸ್ತೋತ್ರ, ಸಮುದ್ರ ಮಥನ ಕಥೆ, ಸೌಗಂಧಿಕಾ ಪರಿಣಯ, ಕೃಷ್ಣರಾಜ ಪಟ್ಟಾಭಿಷೇಕ ವರ್ಣನೆ, ಕೃಷ್ಣರಾಜ ಭಕ್ತಿಸಾರ, ಕೃಷ್ಣರಾಜ ಭೋಗಾವಳಿ, ಕೃಷ್ಣರಾಜ ಶೃಂಗಾರ ಶತಕ, ಕೃಷ್ಣರಾಜೇಂದ್ರ ವೃತ್ತರತ್ನಾವಳಿ ಟೀಕೆ, ಕೃಷ್ಣರಾಜೇಂದ್ರ ಗೀತೆ.

ವಿಮರ್ಶೆ : ವೀರಶೈವ ಸಾಹಿತ್ಯ ಸುಮಾರು ೭೦೦ ವರ್ಷಕಾಲ ಕನ್ನಡ ಸಾಹಿತ್ಯ ಸಾಮ್ರಾಜ್ಯವನ್ನಾಳಿತು. ದೇವನೊಬ್ಬನೇ – ಶಿವ ಅವನು ಮಂಗಳ ಸ್ವರೂಪಿ, ಲಿಂಗವು ಅವನ ಸಂಕೇತ. ಜಗವೆಲ್ಲಾ ಅವನ ಸೃಷ್ಟಿ, ಸ್ಥಿತಿ, ಲಯ ಕ್ರಿಯಾಧೀನ ಎಂದು ಸಾರಿದರು. ಹಲವು ದೇವರ ಹೆಸರು ಹೇಳಿ ಹಲವು ಕ್ಷುದ್ರ ದೇವತೆಗಳಿಗೆ ತನ್ನ ಚಿತ್ತವನ್ನು ಹರಿದು ಹಂಚಿ ಜೀವನದ ಧ್ಯೇಯದಿಂದ ಮನುಷ್ಯನು ದೂರಸಾಗಿ ಅಪಗತಿಯನ್ನು ಹೊಂದಬಾರದು. ತನ್ನ ಶಕ್ತಿಯ ಸದ್ವಿನಿಯೋಗವನ್ನು ಮಾಡಿಕೊಳ್ಳದೆ ಹತ್ತೆಂಟುಕಡೆ ಅದನ್ನು ಚೆಲ್ಲಿಬಿಡಬಾರದು ಎಂಬ ಗುರಿಯನ್ನು ನಾಡಜನತೆಯ ಕಣ್ಮುಂದೆ ಇಟ್ಟರು.

ಈ ದೃಷ್ಟಿಯಿಂದ ಶಿವಶರಣ ಶರಣೆಯರ ವಚನಗಳು, ವೀರಶೈವ ಸಾಹಿತ್ಯ ಗ್ರಂಥಗಳು ಕಾವ್ಯಾಭ್ಯಾಸಿಯಾದ ಭಾವಿ ಪಂಡಿತನಿಗೆ ಮಾತ್ರವಲ್ಲದೆ ಇಡೀ ನಾಡಿಗೇ, ಇಡೀ ಜಗತ್ತಿಗೇ ಬೇಕಾದುವಾಗಿವೆ. ತನ್ನ ಪ್ರಭೆ ಪ್ರಜ್ವಲಿಸಿದ ಏಳು ಶತಮಾನಗಳಲ್ಲಿ ಇಂತಹ ಬೆಳೆಯನ್ನಿತ್ತು, ಮಾನವ ಕಲ್ಯಾಣವನ್ನೇ ಗುರಿಯಾಗಿ ಉಳ್ಳ ಸಾಹಿತ್ಯವನ್ನು ಸೃಷ್ಟಿಸಿ, ಪಸರಿಸಿದ ಕೀರ್ತಿ ವೀರಶೈವ ಕವಿಗಳದ್ದು.

ಕನ್ನಡದ ಹಿರಿಮೆಯನ್ನು ಕಾಯ್ದು ಬೆಳಸಿ ಪೋಷಿಸಿದ ಕೀರ್ತಿ ವೀರಶೈವ ಕವಿಗಳಿಗೆ ಸೇರತಕ್ಕದ್ದಾಗಿದೆ. ಕನ್ನಡ ಭಾಷೆಯನ್ನು ಸಂಸ್ಕೃತದ ಚಿನ್ನದ ಸಂಕೋಲೆಯಿಂದ ಬಿಡುಗಡೆಮಾಡಿ ಕನ್ನಡ ಛಂದಸ್ಸುಗಳಾದ ರಗಳೆ, ತ್ರಿಪದಿ, ಚೌಪದಿ, ಸಾಂಗತ್ಯ, ಷಟ್ಪದಿಗಳನ್ನವಲಂಬಿಸಿ ವೀರಶೈವರು ಕನ್ನಡ ಜನಕ್ಕೆ ನಿಜಾತ್ಮದರ್ಶನವನ್ನು ಮಾಡಿಸಿದ್ದಾರೆ. ಪ್ರತಿಯೊಂದು ನಾಡಿನ ಸಾಂಸ್ಕೃತಿಕ ವೈಭವವಿರುವುದು ಅದರ ಜನಪದ ಜೀವನ, ಸಾಹಿತ್ಯಗಳಲ್ಲೇ. ವೀರಶೈವ ಕವಿಗಳು ಜನಸಾಮಾನ್ಯರಿಂದ ಬಂದು ಜನಸಾಮಾನ್ಯಕ್ಕಾಗಿ ಕಾವ್ಯಗಳನ್ನು ಬರೆದರು. ಅವರ ಶೈಲಿಯಲ್ಲಿ ಜನಪದದ ಮಾತುಗಳು, ಗಾದೆಗಳು, ನೀತಿಗಳು, ಕತೆಗಳು ಹಾಸುಹೊಕ್ಕಾಗಿ ಬೆರೆತುಕೊಂಡವು.

ವೀರಶೈವ ಕವಿಗಳು ಸಾಮಾನ್ಯವಾಗಿ ತಾವು ಹಾಕಿಕೊಂಡ 'ಶಿವನಂ, ಶರಣವ್ರಜಮಂ' ಸ್ತುತಿಸುವುದಲ್ಲದೆ ಅನ್ಯರನ್ನು ಸ್ತುತಿಸಬಾರದೆಂಬ ಮೇರೆಯನ್ನು ಮೀರಿಲ್ಲ. ಇದರಿಂದ ಅವರ ಕಾವ್ಯಗಳಿಗೆ ಒಂದು ಅಪೂರ್ವ

ನಿಷ್ಠೆ, ಕೆಚ್ಚು, ಕಾವು ಕೂಡಿಕೊಂಡಿತು. ದೀಪದ ಕೆಳಗೆ ನೆಳಲೆಂಬಂತೆ ಈ ಏಕನಿಷ್ಠತೆಯಿಂದ ಕಾವ್ಯದ ವಿಸ್ತಾರ ಕಿರಿದಾಗಿ ಮಹಾಕವಿಗಳ ನವ ನವೋನ್ಮೇಷಶಾಲಿಯಾದ ಪ್ರತಿಭೆಗೆ ಆತಂಕವೂ ಉಂಟಾಯಿತು. ಲೌಕಿಕ ವೈದಿಕ ಕಾವ್ಯಗಳೆರಡನ್ನೂ ಅನುಲಕ್ಷಿಸಿದ ಜೈನರ ಮೇಲ್ಪಂಕ್ತಿಯನ್ನು ವೀರ ಶೈವ ಕವಿಗಳು ಅನುಸರಿಸಿದ್ದರೆ 'ಹರಿಶ್ಚಂದ್ರ ಕಾವ್ಯ' ದಂತಹ ಹಲವಾರು ಮಹಾಕಾವ್ಯಗಳನ್ನು ಓದಿ ಆನಂದಿಸುವ ಭಾಗ್ಯ ನಮ್ಮದಾಗುತ್ತಿತ್ತು. ಜೈನರು ರಾಮಾಯಣ, ಮಹಾಭಾರತ ಕಥೆಗಳನ್ನೇ ತೆಗೆದುಕೊಂಡು ಜೈನ ಧರ್ಮ ಪರಿಭಾಷೆಗನುಗುಣವಾಗಿ ವ್ಯತ್ಯಾಸಮಾಡಿಕೊಂಡಂತೆ ವೀರಶೈವರೂ ಮಾಡಿಕೊಳ್ಳಬಹುದಾಗಿತ್ತು. ಅಂತಹ ಸಾಹಸಕ್ಕೆ ವೀರಶೈವ ಕವಿಗಳು ಕೈಹಾಕದಿದ್ದುದರಿಂದ ಕನ್ನಡ ಸಾಹಿತ್ಯಕ್ಕೆ ಅಪಾರ ನಷ್ಟವಾಗಿದೆ.

ವೀರಶೈವ ಕವಿಗಳ ನಿಷ್ಠೆ 'ಚರ್ವಿತ ಚರ್ವಣ' ಕ್ಕೆ ಎಡೆಕೊಟ್ಟಿದೆ. ಇದನ್ನು ನಾವು ಷಡಕ್ಷರಿಯಂತಹ ಮಹಾಕವಿಯ ಬಗ್ಗೆ ಹೇಳುತ್ತಿಲ್ಲ. ಆದರೆ ಮಿಕ್ಕ ಅನೇಕ ವೀರಶೈವ ಕವಿಗಳು ಹರಿಹರ, ಸುರಂಗ, ಸಿಂಗಿರಾಜರ ಪಡಿ ನೆಳಲಾಗಿ ಬಾಳಿದ್ದಾರೆ. ಷಡಕ್ಷರಿ, ವಿರೂಪಾಕ್ಷಪಂಡಿತರ ಪ್ರತಿಭೆ ಅವರಲ್ಲಿ ಇಲ್ಲದಿರುವುದರಿಂದಲೂ, ಧರ್ಮನಿಷ್ಠೆಯನ್ನುಳಿದು ಬಾಕಿ ಯಾವ ಮಹತ್ವವೂ ಅವರ ಗ್ರಂಥಗಳಲ್ಲಿ ಕಾಣಬರದಿರುವುದರಿಂದರಲೂ ಕೇವಲ ಸಂಖ್ಯೆ ಬೆಳೆಯಿ ತಲ್ಲದೆ ಹೆಚ್ಚಿನ ಪ್ರಯೋಜನವಾಗಲಿಲ್ಲ. ಇಂತಹ ಅಳಿಗವಿಗಳನ್ನೂ ನರಗವಿ ಗಳನ್ನೂ ಬಿಟ್ಟರೆ ಉಳಿದ ವೀರಶೈವ ವರಕವಿಗಳು ಕನ್ನಡ ಜನತೆಗೆ ತಮ್ಮ ಓಜಸ್ವಿತೆ ದೀಧಿತಿಗಳನ್ನು ಎತ್ತಿತೋರುವ ಅನೇಕ ಮಹಾ ಕಾವ್ಯಗಳನ್ನಿತ್ತಿದ್ದಾ ರೆಂದು ಸಂತೋಷದಿಂದ ಒಪ್ಪಿಕೊಳ್ಳಬೇಕಾಗುತ್ತದೆ. ಏಳು ಶತಮಾನಗಳ ಅವಧಿಯಲ್ಲಿ ಅಲ್ಲಮ, ಬಸವ, ಮಹಾದೇವಿಯಕ್ಕ, ಚೆನ್ನಬಸವ, ನಿಜಗುಣ ಶಿವ ಯೋಗಿ ಮೊದಲಾದ ಋಷಿಕವಿಗಳೂ, ಹರಿಹರ, ರಾಘವಾಂಕ, ಚಾಮರಸ, ಸರ್ವಜ್ಞ, ಷಡಕ್ಷರಿ ಮೊದಲಾದ ರಸಋಷಿಗಳೂ ವೀರಶೈವರಲ್ಲಿ ಆಗಿಹೋಗಿ ದ್ದಾರೆಂದರೆ ಕನ್ನಡ ಜನತೆಯ ಸಂಸ್ಕೃತಿಯನ್ನೂ ಅದರಿಂದ ಇಂಬು ಗೊಳ್ಳುವ ಜಗತ್ತಿನ ಸಂಸ್ಕೃತಿಯನ್ನೂ ಈ ಸಾಹಿತ್ಯ ಪರಂಪರೆ ಪುಷ್ಟಿಗೊಳಿಸಿದೆ ಯೆಂಬುದು ನಿರ್ವಿವಾದ.

ಅನುಭವ ಮಂಟಪ

೧

ಜಗದ್ವಂದ್ಯರಾದ ಶ್ರೀ ಬಸವಣ್ಣನವರು ಅನೇಕ ಪವಾಡಗಳನ್ನು ಮೆರೆಯಿಸಿ ಕಾರಣ ಪುರುಷರೆಂದು ಹೆಸರಾದರು. ತಮ್ಮ ಶುಭ್ರವಾದ ಜೀವನದಿಂದ ಎಲ್ಲ ಧರ್ಮಗಳ ಬುನಾದಿಯಾದ ಭಕ್ತಿ, ಜ್ಞಾನ, ವೈರಾಗ್ಯಗಳನ್ನು ತಮ್ಮ ಜೀವನದಲ್ಲಿಯೇ ಸಮನ್ವಯಮಾಡಿ ತೋರಿದರು. ತತ್ತ್ವಗಳ ಹೆಸರಿನ ಹೋರಾಟದಲ್ಲಿ ವೈಮನಸ್ಯ ತಿದ್ದ 'ಮತ'ಗಳಿಗೆ ಈ ಶಾಂತಿ ಮಂತ್ರವು ನೂತನವೂ ಪವಾಡಮಯವೂ ಆಗಿ ಕಂಡಿರಬೇಕು. ವೀರಶೈವ ಸಿದ್ಧಾಂತದಲ್ಲಿ ಅಡಗಿದ್ದ ಭಕ್ತಿ, ಜ್ಞಾನ, ವೈರಾಗ್ಯಗಳ ತ್ರಿವೇಣಿ ಸಂಗಮಕ್ಕೆ ಒಂದು ಶಾಶ್ವತವಾದ ನಿಲವನ್ನು ಕೊಡಲು ಬಸವಣ್ಣನವರು ನಿಶ್ಚಯಿಸಿದರು. ಬಸವಣ್ಣನವರು ಸಾಧಿಸಿದ ಪವಾಡಗಳಲ್ಲಿ ಅತ್ಯಂತ ಮಹತ್ತ್ವವಾದುದೆಂದರೆ ಇದೇ.

'ದೇವನೊಬ್ಬ ನಾಮ ಹಲವು' ಎಂಬ ಸೂಕ್ಷ್ಮ ಆಧ್ಯಾತ್ಮಿಕ ತತ್ತ್ವವನ್ನು ಮನಗಂಡಿದ್ದ ಬಸವಣ್ಣನವರು ಆ ದೇವರನ್ನು ಸಾಧಿಸುವ ಮಾರ್ಗಗಳೂ ಹಲವೆಂಬುದನ್ನು ತಿಳಿದಿದ್ದರು. ಸಹಜವಾಗಿ ತಮ್ಮ ಒಲವು ಭಕ್ತಿ ಮಾರ್ಗವನ್ನು ಅವಲಂಬಿಸಿತೆಂದು ಎಲ್ಲರೂ ಆ ಮಾರ್ಗವನ್ನೇ ಅನುಸರಿಸಬೇಕೆಂಬ ಛಲ ಅವರಿಗಿರಲಿಲ್ಲ. ವ್ಯಕ್ತಿ ತನ್ನ ಸಂಸ್ಕಾರ ಹಾಗೂ ಮನೋಧರ್ಮವನ್ನು ಅವಲಂಬಿಸಿ ಪ್ರಗತಿ ಪಥದಲ್ಲಿ ಅಡಿಯಿಡಬೇಕೆಂದು ಬಯಸಿದರು. ಈ ಸಾಧಕ ಸ್ಥಿತಿಯಲ್ಲಿ ತಮ್ಮ ಮಾರ್ಗದಿಂದ ಭಿನ್ನವಾದರೂ ಪ್ರಗತಿಯ ಜಾಡನ್ನು ಬಿಡದಿರುವ ಪ್ರತಿಯೊಬ್ಬನೂ ಸಮಾನಧರ್ಮಿಯೆಂಬುದನ್ನು ಒಪ್ಪಿಕೊಳ್ಳುವ ಔದಾರ್ಯವನ್ನು ತೋರಿದರು. ಇಂತಹ ಸಮಾನ ಧರ್ಮಿಗಳು ಒಂದುಕಡೆ ಕಲೆತು, ವಿಚಾರ ವಿನಿಮಯಮಾಡಿ, ವಾದ ಮಥನಕ್ಕೆ ತಮ್ಮ ತತ್ತ್ವವನ್ನು ನಿವೇದಿಸಿ ನೋಡಿ ಸತ್ಯಾನ್ವೇಷಣೆಯನ್ನು ಮಾಡಬೇಕಾಗಿದ್ದುದರ ಆವಶ್ಯಕತೆ ಬಹಳವಾಗಿತ್ತು.

ವೀರಶೈವ ಧರ್ಮ ಕೇವಲ ವ್ಯಕ್ತಿ ವೈಶಿಷ್ಟ್ಯವನ್ನು ಸಾರುವುದಕ್ಕಾಗಲಿ, ವ್ಯಕ್ತಿಯ ವಿಮುಕ್ತಿಯನ್ನು ಸಾಧಿಸುವುದಕ್ಕಾಗಲಿ ಜನ್ಮ ತಾಳಲಿಲ್ಲ.

ಪಾಂಡಿತ್ಯದ ಕೆಚ್ಚಿನಿಂದ ಒಂದು ಗಹನ ತತ್ತ್ವವನ್ನು ಪ್ರತಿಪಾದಿಸಿ ಜನತೆಯನ್ನು ದಂಗುಗೊಳಿಸುವುದಕ್ಕೂ ಪ್ರಯತ್ನಿಸಲಿಲ್ಲ. ಬಸವಣ್ಣನವರೇ ಆದಿಯಾಗಿ ವೀರಶೈವ ಧರ್ಮ ಪ್ರತಿಪಾದಕರು ಜನತೆಯಿಂದ ಬಹಳ ಎತ್ತರದಲ್ಲಿ ನಿಂತು ಜನಸಾಮಾನ್ಯರನ್ನು ಕಡೆಗಣ್ಣಿನಿಂದ ಕಾಣುವ 'ಮಹಾನುಭಾವತ್ವ'ವನ್ನೂ ಮೆರೆಸಲಿಲ್ಲ. ತಮ್ಮ ಆಧ್ಯಾತ್ಮಿಕ ಸಾಧನೆಯಿಂದ ಯಾವ ಆನಂದ, ಶಾಂತಿ, ನೈರ್ಮಲ್ಯಗಳನ್ನು ದೊರಕಿಸಿಕೊಂಡಿದ್ದರೋ ಅದರ ಲಾಭ ಎಲ್ಲರಿಗೂ ದೊರೆಯಬೇಕೆಂದು ಬಯಸಿದರು. ತಮ್ಮ ಜೀವನ ಹಸನಾದಂತೆ ನಾಡವರೆಲ್ಲರ ಜೀವನವೂ ಹಸನಾಗಬೇಕು; ಲೋಕವೆಲ್ಲಾ ಒಂದು ಧರ್ಮದ ಶ್ವೇತಚ್ಛತ್ರದ ಕೆಳಗೆ ಕೆಳೆಯರಂತೆ, ಸೋದರರಂತೆ ಬಾಳಬೇಕೆಂಬುದು ಅವರ ಹಿರಿಯಾಸೆಯಾಗಿತ್ತು.

ವಿಶ್ವ ಧರ್ಮವನ್ನು ಗುರಿಯನ್ನಾಗಿಟ್ಟುಕೊಂಡ ಶಿವಶರಣರು ಇಂದಿನ-ಇಲ್ಲಿನ ಬಾಳುವೆಯನ್ನು ಮರೆತು ಸದಾ ಪರಲೋಕದ ಚಿಂತೆಯಲ್ಲಿರುವುದು ನಿರರ್ಥಕವಾದುದೆಂದು ಬಗೆದರು. ಇಹ-ಪರಲೋಕಗಳನ್ನು ಎರಡು ಜಗತ್ತುಗಳನ್ನಾಗಿ ವಿಭಾಗಿಸದೆ ಒಂದು ಮತ್ತೊಂದರ ಪೂರಕವೆಂದು ಭಾವಿಸಿದರು. ಮುಂದಿನ ಲೋಕಕ್ಕೆ ಹೋಗಿ ಬಾಳುವೆ ಮಾಡುವುದೆಂದರೆ ಈ ಲೋಕದ ಜೀವನವನ್ನು ಮುಂದುವರಿಸಿದಂತಲ್ಲದೆ ಬೇರೆಯಲ್ಲವೆಂಬದನ್ನು ಸಾರಿದರು. ಇಹಲೋಕದ ಕುಂದು ಕೊರತೆಗಳನ್ನೂ ಅಪೂರ್ಣವಾದ ಆಶೆಗಳನ್ನೂ ಪೂರೈಸುವುದಕ್ಕೇ ಮುಂದಿನ ಲೋಕವೊಂದಿದೆ ಎಂದು ಭಾವಿಸುವ ಮಾಯೆಯ ನಿರಸನವನ್ನು ಮಾಡಲೆತ್ನಿಸಿದರು. ಎಲ್ಲದಕ್ಕೂ ಕೈಲಾಸ ಕೈಲಾಸವೆಂದು ಕೈ ತೋರಿಸುವವರಿಗೆ—

> "ಕೈಲಾಸ ಕೈಲಾಸವೆಂದು' ಬಡಿದಾಡುವ ಅಣ್ಣಗಳಿರಾ, ಕೇಳಿರಯ್ಯ. ಕೈಲಾಸವೆಂಬುದೊಂದು ಭೂಮಿಯೊಳಿರುವ ಹಾಳು ಬೆಟ್ಟ. ಅಲ್ಲಿರುವ ಮುನಿಗಳೆಲ್ಲರು ಜೀವಗಳ್ಳರು. ಅಲ್ಲಿರುವ ಚಂದ್ರಶೇಖರನು ಬಹು ಎಡ್ಡ. ಇದರಾಡಂಬರವೇಕಯ್ಯ ? ಎಮ್ಮ ಪುರಾತನರಿಗೆ ಸದಾಚಾರದಿಂದ ವರ್ತಿಸಿ, ಲಿಂಗಾಂಗ ಸಮರಸವ ತಿಳಿದು, ನಿಮ್ಮ ಪಾದಪದ್ಮದೊಳು ಬಯಲಾದ ಪದವಿಯೇ ಕೈಲಾಸವಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ"

ಎಂದು ವಿವೇಕ ಹೇಳಿದರು. ಪ್ರಗತಿಪಥಗಾಮಿಯಾಗುವ ವ್ಯಕ್ತಿ ನನಗೆ ಶಿವಸಾಯುಜ್ಯ ದೊರೆಯುವುದೇ ? - ದೇವಲೋಕದ ಸುಧೆ, ಅಪ್ಸರೆಯರು

ಸಿಕ್ಕುವರೇ ? ಎಂದು ಬಯುಸಕೂಡದು. ಅವನ ಭಕ್ತಿ ನಿರ್ವ್ಯಾಜವಾಗಿರಬೇಕು, ಕರ್ಮ ನಿಷ್ಕಾಮಪೂರಿತವಾಗಿರಬೇಕು, ಜ್ಞಾನ ಸಾಂತಃಕರಣದ್ದಾಗಿರಬೇಕು. ಇದಕ್ಕೆ ಶರಣರ ಸಂಗ, ಶರಣರ ಮಹೋನ್ನತ ಜೀವನದ ಮೇಲ್ಪಂಕ್ತಿಯವಶ್ಯಕವೆಂದರಿತರು.

ವೀರಶೈವ ಧರ್ಮದ ಉನ್ನತ ತತ್ತ್ವಗಳಿಗೆ ಸಾರ್ವತ್ರಿಕ ಸ್ವರೂಪ ಕೊಡುವುದಕ್ಕೆ ಒಂದು 'ಅನುಭವ ಮಂಟಪ'ವನ್ನು ಸ್ಥಾಪಿಸಿ ಅದನ್ನು ಆಧ್ಯಾತ್ಮಿಕ ಪರಮಹಂಸಗಳ ತಿಳಿಗೊಳವನ್ನಾಗಿ ಮಾಡಬೇಕೆಂದು ನಿಶ್ಚಯಿಸಿದರು. ತಮ್ಮ ಮಂಟಪ ಶಿವಜ್ಞಾನದ ಒಂದು ವಿಶ್ವವಿದ್ಯಾನಿಲಯವಾಗಬೇಕೆಂಬುದೇ ಬಸವಣ್ಣನವರ ಹೆಬ್ಬಯಕೆಯಾಗಿತ್ತು.

೨

ವೀರಶೈವ ಧರ್ಮ ಸಜೀವ ಧರ್ಮವಾಗುವುದಕ್ಕೆ ಅದರ ಪ್ರತ್ಯೇಕ ರೂಪವೇ ಮೂಲ ಕಾರಣವೆನ್ನಬಹುದು. ಆತ್ಮನ ಕಲ್ಯಾಣಯಾತ್ರೆಗೆ ಆರು ಹಂತಗಳನ್ನೇರ್ಪಡಿಸಿದ ಶಿವಶರಣರು ಸಾಧಕನಿಗೆ ದೊಡ್ಡ ಪ್ರವೇಶ ಪರೀಕ್ಷೆಯನ್ನೇರ್ಪಡಿಸಿದರು. ಸಾಧಕನು ವಸ್ತುವಿನೊಂದಿಗೆ ತದೇಕಚಿತ್ತನಾಗಿ ಅದರ ಜೀವ ತಂತಿಗೆ ತನ್ನ ಜೀವ ತಂತಿಯನ್ನು ಶೃತಿಯಾಗಿ ಹಚ್ಚುತ್ತಾನೆಯೇ ? ಇಲ್ಲ ಹೊರಗೇ ನಿಂತು ಆಗಂತುಕ ಪ್ರವೃತ್ತಿಯನ್ನು ಅವಲಂಬಿಸುತ್ತಾನೆಯೇ? ಎಂಬುದನ್ನು ಮೊದಲು ದೃಢಪಡಿಸಿಕೊಳ್ಳಬೇಕಾಯಿತು. ಅನುಭಾವದ ಬೆಲೆಯನ್ನು ವಿವರಿಸುತ್ತಾ ಬಸವಣ್ಣನವರು—

"ಅನುಭಾವವಿಲ್ಲದ ಭಕ್ತಿ ಅರಿವಿಂಗೆ ಬಾರದು.
ಅನುಭಾವವಿಲ್ಲದ ಸಂಗವು ಸಮರಸಕ್ಕೆ ನಿಲುಕದು.
ಅನುಭಾವವಿಲ್ಲದ ಪ್ರಸಾದ ಪರಿಣಾಮವ ಕೊಡದು.
ಅನುಭಾವವಿಲ್ಲದೆ ಏನೇನೂ ಅರಿಯಬಾರದು.
ತನ್ನಲ್ಲಿ ಸನ್ನಿಹಿತ ಉಳ್ಳೊಡೆ ಶಿವಶರಣರ ಸಂಗವೇತಕ್ಕೆನಲುಂಟೇ ?
ಕೂಡಲ ಸಂಗಮದೇವಯ್ಯ ನಿಮ್ಮ ಅನುಭಾವ ಮಾತಿನ ಮಥನವೆಂದು
ನುಡಿಯಬಹುದೇ ಪ್ರಭುವೇ ?"

ಎಂದು ಹೇಳಿದ್ದಾರೆ. ಅಲ್ಲಮ ಪ್ರಭುಗಳು –

"ಅನುಭಾವದಿಂದ ಹುಟ್ಟಿತ್ತು ಲಿಂಗ.
ಅನುಭಾವದಿಂದ ಹುಟ್ಟಿತ್ತು ಜಂಗಮ.

ಅನುಭಾವದಿಂದ ಹುಟ್ಟಿತ್ತು ಪ್ರಸಾದ.
ಅನುಭಾವದನುವಿನಲ್ಲಿ ಗುಹೇಶ್ವರಾ ನಿಮ್ಮ ಶರಣ ಅನುಪಮ ಸುಖಿ"

ಎಂದು ಹೇಳಿದ್ದಾರೆ. ಅನುಭಾವದ ಪ್ರಭುಶಕ್ತಿಯನ್ನು ವರ್ಣಿಸುತ್ತಾ ಚೆನ್ನಬಸವಣ್ಣನವರು—

"ಅರುಹಿನ ತೃಪ್ತಿಗೆ ಅನುಭಾವದಾಶ್ರಯ, ಲಿಂಗದ ಅನುಭಾವದಿಂದ ನಿಮ್ಮ ಕಂಡೆನು, ನಿಮ್ಮ ಕಂಡೆನ್ನ ಮರೆದೆ ಕಾಣಾ ಪ್ರಭುವೇ ಕೂಡಲ ಚೆನ್ನಸಂಗಮ ದೇವಾ"

ಎಂದು ಹೇಳುತ್ತಾ ಅನುಭಾವವಿಲ್ಲದ ಗೋಷ್ಠಿಯ ಪರಿಣಾಮವನ್ನು ಚಿತ್ರವತ್ತಾಗಿ ವರ್ಣಿಸುತ್ತಾರೆ.

"ನಾನೊಂದ ನುಡಿದರೆ ತಾವೊಂದ ನುಡಿವರು.
ತಾವೊಂದ ನುಡಿದರೆ ನಾನೊಂದ ನುಡಿವೆನು.
ಇದುಕಾರಣ ಅವರಿಗೆ ನಮಗೆ ಮೇಳವಿಲ್ಲ.
ಮೇಳವಿಲ್ಲದ ಬಳಿಕ ಅನುಭವಗೋಷ್ಠಿ ಇಲ್ಲ.
ಅನುಭವಗೋಷ್ಠಿ ಇಲ್ಲದ ಬಳಿಕ ಗುಹೇಶ್ವರನು ಇಲ್ಲಿಲ್ಲ ಕೇಳಾ ಚೆನ್ನಬಸವ"

ಅನುಭಾವಕ್ಕೆ ನೈದ್ಯವಾಗುವ ಜ್ಞಾನ ಭಕ್ತಿಗಳೇ ಚಿರಸ್ಥಾಯಿಯಾಗಿ ಉಳಿಯತಕ್ಕವು. ಹೃದಯಮಂದಿರದಲ್ಲಿ ಅದು ತನ್ನ ಮಹತ್ವವನ್ನು ತೋರದೆ ಇರುವುದಿಲ್ಲ. ಅನುಭಾವದ ಕಸಿಗೆ ಸಿಕ್ಕಿದ ಮನುಷ್ಯ ಹಣ್ಣಾಗುತ್ತಾನೆ, ಅವನ ಜೀವ ಪಕ್ವವಾಗುತ್ತದೆ. ಅವನ ಆಚಾರ, ವಿಚಾರಗಳೆಲ್ಲವೂ ಪವಿತ್ರವಾಗುತ್ತವೆ. ತಮ್ಮ ಸಂಸ್ಥೆ ಇದನ್ನು ಸಾಧಿಸಬೇಕೆಂದು ಬಸವಣ್ಣನವರು ಬಯಸಿ ಈ ಆಧ್ಯಾತ್ಮಿಕ ಪ್ರಯೋಗಕ್ಷೇತ್ರಕ್ಕೆ 'ಅನುಭವ ಮಂಟಪ'ವೆಂದು ಹೆಸರಿಟ್ಟರು.

೩

ಅನುಭವ ಮಂಟಪ ಯಾವ ಆಕಾರವನ್ನು ತೆಗೆದುಕೊಂಡಿತು, ಅದರ ಪ್ರಧಾನ ಪೀಠವಾದ ಶೂನ್ಯ ಸಿಂಹಾಸನವನ್ನು ಬಸವಣ್ಣನವರು ಯಾವ ರೀತಿ ನಿರ್ಮಿಸಿದರೆಂಬುದನ್ನು ಚಾಮರಸಾದಿ ಕವಿಗಳು ಮನೋಹರವಾಗಿ ವರ್ಣಿಸಿದ್ದಾರೆ. ನೀಲಾಂಬಿಕೆಯ ಮಾತಿನಲ್ಲಿ ಹೇಳಬೇಕಾದರೆ—

"ಅಷ್ಟದಳ ಕಮಲದ ಹೂಗಲ್ಲವಿಡಿದು ಶೂನ್ಯಸಿಂಹಾಸನಕೆ ಧವಳಾಲಯ ವೆತ್ತಿತ್ತು। ಚಂದ್ರಕಾಂತದ ಶಿಲೆಯಲ್ಲಿ ಪಶ್ಚಿಮ ದ್ವಾರಮಂ ತೆಗೆದು ನೋಡು ವರೆ ವಿಪರೀತ। ಏಕೋಭಾವವೆಂಬುದೊಂದು ಕಂಭ। ಅದಕ್ಕೆ ಅನೇಕ ಚಿತ್ರಂ ಗಳಡಗಿದ ಪ್ರಭೆಯೊಳಗೆ ಬ್ರಹ್ಮರಂಧ್ರವೆಂಬ ಮಸ್ತಕದ ಮೇಲೆ ಪವಳಹಾರದ ಪಂಚರಮಂ ಕಟ್ಟಿ, ಪಂಚ ಮೌಕ್ತಿಕದ ಮಾಲೆಯ ನಿಳಿಯಬಿಟ್ಟು, ಮುಲಕು ಮುಲಕಿನ ನಡುವೆ ಕಟ್ಟಿದುವು ನವರತ್ನದ ಗೊಂಡೆಯಂಗಳು। ಕಾಳಿಕೆಯ ಕಪ್ಪಡವದಕೆ ಮೇಲು ಹೊದಕೆ। ಉಲುಹಿನರಳೆಲೆಯ ಬಳಸುದೋರಣವ ಕಟ್ಟಿ, ದಶವಾಯುಗಳನೊಂದು ಮಾಡಿ, ಲಿಂಗ ಸುಖವಾಯುವ ಸಂತೈಸಿ ಆಲ ವಟ್ಟವಂ ಮಾಡಿ, ಲಂಬಿಸಿದ ಮಂದಾನಿಲನಂಮಲಗಂ ಮಾಡಿ, ಹರುಷಸೀವ ವಸಂತನ ಚಾಕವಟ್ಟಿಗೆಯ ಆಸನವಂ ಮಾಡಿ, ನವನಾಳ ಸುನಾಳದೊಳು ಮೊರೆವ ಶಬ್ದಮಂ ಶುಕಪಿಕ ಭ್ರಮರಾಮೋದಮಂ ಮಾಡಿ, ಪರಮ ಶಾಂತಿ ಯೆಂಬ ಶೈತ್ಯಾಕಾರ ಸೋಂಕಿನ ಚೂತ ಫಲಂಗಳಂ ಹಾಕಿ, ಉತ್ತರ ದ್ವಾರ ವೆಂಬ ಸುಶುಳು ಗಂಡಿಯಂ ರಚಿಸಿ, ಪೂರ್ವ ಯೋಗಂಗಳೆಂಬ ಸೋಪಾನಮಂ ಮಾಡಿ, ಪಶ್ಚಿಮ ದ್ವಾರವೆಂಬ ನಿಜದ್ವಾರಮಂ ಮಾಡಿ, ಸಪ್ತವ್ಯಸನ ಪಂಚೇಂ ದ್ರಿಯಂಗಳೆಂಬ ಗವಾಕ್ಷಿಯನಿಕ್ಕಿ, ಅಶೆಯಾಮಿಷಮಂ ಕೆಡಿಸಿ, ಊರ್ಧ್ವ ಚಕ್ರ ವೆಂಬ ಮೇಲುಪ್ಪರಿಗೆಯಂ ಮಾಡಿ, ಚಂದ್ರ ಸೂರ್ಯರೆಂಬ ದೀಪಗಳಂ ಬೆಳಗಿ, ಶಿವೋಹವೆಂಬ ಶಿಖರಿಯ ಮೇಲೆ ಮಹಾಜ್ಞಾನ ಪ್ರಕಾಶವೆಂಬ ಹೊನ್ನ ಕಳ ಸವ ಸಿಂಗಾರವಂ ಮಾಡಿ, ನಿಃಶೂನ್ಯ ನಿರಾಳವೆಂಬ ಶೂನ್ಯಸಿಂಹಾನಮಂ ಮಾಡಿದ ಬಸವ ಪ್ರಿಯ ಕೂಡಲ ಚೆನ್ನ ಸಂಗನಲ್ಲಿ ಎನ್ನ ಪರಮಗುರು ಸಂಗನ ಬಸವಣ್ಣ"

ಕನಕ, ಮಕರತ ಮೊದಲಾದ ಮಣಿಗಳಿಂದ ಮಿನುಮಿನುಗುವಂತೆ ಪೀಠವನ್ನು ರಚಿಸಿ, ಇಂದುಕಾಂತದ ಶಿಲೆಯಿಂದ ಸಪ್ತಸೋಪಾನಗಳನ್ನು ನಿರ್ಮಿಸಿ, ಹೊರವಳಯದಲ್ಲಿ ಒಂಬತ್ತು ಬಾಗಿಲು, ಮಧ್ಯದಲ್ಲಿ ನಾಲ್ಕು ಬಾಗಿಲು, ಗರ್ಭವಳಯದಲ್ಲಿ ಎರಡು ಬಾಗಿಲುಗಳನ್ನು ರಚಿಸಿ ಶಿಖರದಲ್ಲಿ 'ಅರಿವಿನಂಬರ ಪೀಠ'ವನ್ನು ಏರ್ಪಡಿಸಿದರು. ಪೀಠವು ಎಲ್ಲ ವಿಧದಲ್ಲಿಯೂ ವೀರಶೈವಧರ್ಮದ ಪ್ರತೀಕವಾಗಿತ್ತೆಂದು ಹೇಳುವುದಕ್ಕೆ ಈ ವರ್ಣನೆಯನ್ನು ಕವಿಗಳು ಕೊಟ್ಟ ಹಾಗೆ ಕಾಣುತ್ತದೆ. ಪ್ರಭುಲಿಂಗ ಪುರಾಣಕಾರನು ಹರಿತ ವಾದ ಅಲಗುಗಳಿಂದ ಶೂನ್ಯಸಿಂಹಾಸನವನ್ನು ರಚಿಸಿದ್ದರೆಂದು ಸಾಂಕೇತಿಕ ವಾಗಿ ಹೇಳುತ್ತಾನೆ. ಸ್ಥಾನದ ಗುರುತರವಾದ ಮಹತ್ತ್ವ ಅಲಗುಗಳ ಮೇಲೆ

ಕುಳಿತುಕೊಳ್ಳುವಷ್ಟು ಕಠಿಣ ಸಾಧ್ಯವಾಗಿತ್ತು. ಸಿಕ್ಕಿದವರು ಬಂದು ಅಧಿಕಾರಲಾಲಸೆಯಿಂದಲೂ ಕೀರ್ತಿಕಾಮನೆಯಿಂದಲೂ ಶೂನ್ಯಪೀಠವನ್ನೇರ ಲಾಗುತ್ತಿರಲಿಲ್ಲ. ಷಟ್ಸ್ಥಲ, ಅಷ್ಟಾವರಣ, ಪಂಚಾಚಾರಗಳಿಗತೀತನಾದ ಮಹಾವ್ಯಕ್ತಿಗಾಗಿ ಆ ಪೀಠವು ಕಾಯ್ದಿಡಲಾಯಿತು. ಪೀಠವನ್ನೇನೋ ಬಸವಣ್ಣನವರು ರಚಿಸಿಬಿಟ್ಟರು. ಗುರುವಿನ ಬರವನ್ನು ಕಾಯುತ್ತ ಕುಳಿತರು. ಆ ಕಾಲದ ತಮ್ಮ ಸ್ಥಿತಿಯನ್ನು ಹೀಗೆ ವರ್ಣಿಸುತ್ತಾರೆ—

> "ಎನ್ನ ಗಂಡ ಬರಬೇಕೆಂದು ಆನು ಅಂತರಂಗವೆಂಬ ಮನೆಯ ತೆರಹುಮಾಡಿ, ಅಷ್ಟದಳವೆಂಬ ಒವರಿಯೊಳಗೆ ನಿಜನಿವಾಸವೆಂಬ ಹಾಸುಗೆಯ ಹಾಸಿ, ಧ್ಯಾನವೆಂಬ ಮೇಲುಕಟ್ಟ ಕಟ್ಟಿ, ಜ್ಞಾನವೆಂಬ ದೀಪವಂ ಬೆಳಗಿಸಿ, ಕ್ರಿಯವೆಂಬ ಉಪಚಾರಂಗಳ ಹರಹಿಕೊಂಡು, ಪಶ್ಚಿಮದ್ವಾರವೆಂಬ ಬಾಗಿಲು ತೆರೆದು, ಕಂಗಳೇ ಪ್ರಾಣವಾಗಿ ಬರವ ಹಾರೈಸುತ್ತಿರ್ದೆನಯ್ಯ! ನಾನು ಬಾರೆನೆಂದು ಉನ್ಮಳಿಸಿಹೆಳೆಂದು ತಾನೆ ಬಂದು ಎನ್ನ ಹೃದಯ ಸಿಂಹಾಸನದ ಮೇಲೆ ಮೂರ್ತಿಗೊಂಡರೆನ್ನ ಮನದ ಬಯಕೆ ಸ್ವಯವಾಗಿತ್ತು. ಹಿಂದೆ ಹನ್ನೆರಡು ವರ್ಷದಲ್ಲಿರ್ದ ಚಿಂತೆ ಇಂದು ನಿಶ್ಚಿಂತವಾಯಿತ್ತು. ಕೂಡಲ ಸಂಗಮದೇವರು ಕೃಪಾಮೂರ್ತಿಯಾದ ಕಾರಣ ನಾನು ಬದುಕಿದೆನು."

ಭಕ್ತನ ಹೆಬ್ಬಕೆಯಕೆಯನ್ನು ಪೂರೈಸುವುದಕ್ಕೆ ಪರಮ ಗುರುವಾದ ಅಲ್ಲಮಪ್ರಭುವು ಪೌಳಿಯ ಉತ್ತರ ಬಾಗಿಲಲ್ಲಿ ತಲೆವಾಗಿ ಹೊಕ್ಕು 'ಗತಿಯ ಪವಣದಲಿ ದವಳಾರನುಪ್ಪ ಪಶ್ಚಿಮ ದ್ವಾರದಿಂ ತ್ರಿವಿಧಗತಿಯ ಶೂನ್ಯ ಸಿಂಹಾಸನದ ಮೇಲೆ ಮುಕ್ತಕೇಶ'ನಾಗಿ ಕುಳಿತುಕೊಳ್ಳುತ್ತಾನೆ. ನೆರೆದಿದ್ದ ಜಂಗಮ ತಂಡಕ್ಕೆ ಮನಸ್ಸು ಕಲುಷಿತವಾಗುತ್ತದೆ. 'ಅವನಲ್ಲಿ ಏನು ಲೇಸ ಕಂಡನೋ? ನಮ್ಮಲ್ಲಿ ಏನು ಹೊಲ್ಲೆಯವ ಕಂಡನೋ? ಕಂಚನೊಲ್ಲದೆ ಹಂಚ ಹಿಡಿದನು. ಆ ಅನಾಚಾರಿ ಅವನೊಬ್ಬ, ವ್ರತಗೇಡಿ ಬಸವನೊಬ್ಬ. ಇವರಿಬ್ಬರು ದೇವ, ಮರ್ತ್ಯ ಲೋಕಕ್ಕೆ ಹೊರಗು. ಇವದಿರ ಮುಖವ ನೋಡಲಾಗದೆನುತ' ಹೊರಟು ಹೋಗುತ್ತಾರೆ. ಬಸವಣ್ಣನವರು ಒಂದೇ ಸಮನೆ ಮರುಗುತ್ತಾರೆ. ಒಂದು ಕಡೆ ಗುರು, ಮತ್ತೊಂದು ಕಡೆ ಜಂಗಮ ಯಾವುದಕ್ಕೆ ಅಪಚಾರವಾದರೂ ತಮ್ಮ ಉದ್ದೇಶ ನಿಷ್ಫಲವಾದಂತೆ. ಆಗ ಪ್ರಭುದೇವರು ಬಸವಣ್ಣನವರನ್ನು ಸಂತೈಸಿ, ತಾವು ಆರೋಗಣೆಯನ್ನೊಪ್ಪಿಸಿ

ಕೊಂಡು 'ಬಸುರ ಹೆಂಗಸಿನೂಟ ಹೊಟ್ಟೆಯ ಶಿಶುವ ದಣಿಸುವವೊಲು' ಜಂಗಮದ ತೃಪ್ತಿಯನ್ನುಂಟುಮಾಡುತ್ತಾರೆ.

೪

ಕಲ್ಯಾಣದಲ್ಲಿಯೇ ಇದ್ದ ಶಿವಗಣರಲ್ಲದೆ ಯೋಗಿ ಶ್ರೇಷ್ಠರಾದ ಸಿದ್ಧರಾಮಣ್ಣನವನು 'ಕರಸ್ಥಲದ ನಿಜವ' ಬಸವರಾಜ ದೇವನಿಂದ ಅರಿಯಲು ಪ್ರಭುದೇವರೊಂದಿಗೆ ಬಂದು ನೆಲೆಸಿದ್ದರು. ಅನುಭವ ಮಂಟಪದ ಕೀರ್ತಿ ದಶದಿಕ್ಕಗಳಿಗೂ ಹರಡಲಾರಂಭಿಸಿತು. ತಂಡ ತಂಡವಾಗಿ ಜನರು ಬಂದು ಸೇರಲಾರಂಭಿಸಿದರು. ಕಲ್ಯಾಣ, ಶಿವಭಕ್ತ-ಭಕ್ತೆಯರಿಂದ ತುಂಬಿ ಕೈಲಾಸದಂತೆ ಮೆರೆಯತೊಡಗಿತು. ಈ ನಂದನವನದಲ್ಲಿ ಚಂದ್ರಕಳೆ ಮೂಡಿದಂತೆ ಮತ್ತೊಂದು ಮಹಾ ವ್ಯಕ್ತಿಯ ಆಗಮನವಾಯಿತು. 'ಭವಿಯ ಸೋಂಕದೆ, ಅಂಗ ಸಂಗಮಂ ತೊರೆದು, ಲಿಂಗಸಂಗದೊಳು ಅವಿರಳ ಸಂಗಿಯಾಗಿ, ತನ್ನ ದಿವ್ಯ ರೂಪ ಲಾವಣ್ಯವನೆಡೆಗೊಂಡು, ಷೋಡಶ ಪ್ರಾಯದ ಯೌವನದ ಸುಖದ ಸುಗ್ಗಿ, ಶಿವನೊಳ್ಪರವಶವನ್ನೈದಿ, ಸರ್ವಕರಣಂಗಳ ಅರುವಿಂಗಾಹುತಿಯನಿಕ್ಕಿ, ದಿಗಂಬರದುಡಿಗೆಯನ್ನುಟ್ಟು, ತನ್ನ ಕೇಶವೆಂಬ ಅಂಬರವ ಮುಸುಕಿಟ್ಟು ಲೌಕಿಕ ಲಜ್ಜಾಭಾವಂ ತೊರೆದು, ಚೆನ್ನಮಲ್ಲಿಕಾರ್ಜುನನ ವಿಕಳಾವಸ್ಥೆಯೊಳ್ ತನ್ನ ಮರೆದು' ಬರುತ್ತಿದ್ದ ಉಡುತಡಿಯ ಮಹಾದೇವಿಯಕ್ಕನ ಮಹತ್ತ್ವವನ್ನು ಸಕಲ ಪ್ರಥರಿಗೆ ತೋರಬೇಕೆಂದು ಅವಳನ್ನು ಕರೆತರಲು ಕಿನ್ನರಯ್ಯಗಳನ್ನು ಕಳುಹಿಸುತ್ತಾರೆ. ಕಿನ್ನರಯ್ಯಗಳ ಜತೆಯಲ್ಲಿ ಬಂದ ಮಹಾದೇವಿಯಕ್ಕನನ್ನು ಬಹು ವಿಧವಾಗಿ ಪರೀಕ್ಷಿಸಿ—

"ಭಾವ ಶುದ್ಧವಾದಲ್ಲಿ ಸೀರೆಯುನಳಿದು ಕೂದಲ ಮರೆಮಾಡಲೇತಕ್ಕೆ"

ಎಂದು ಆಕೆಯ ನಗ್ನತೆಯನ್ನು ಕುರಿತು ಪ್ರಶ್ನಿಸಲು ಮಹಾದೇವಿಯಕ್ಕ—

"ಫಲ ಪಕ್ವವಾದಲ್ಲದೆ ಹೊರಗಣ ಸಿಪ್ಪೆ ಒಪ್ಪ ಕೆಡದು. ಕಾಮನ ಮುದ್ರೆಯ ಕಂಡು ನಿಮಗೆ ನೋವಾದಿತ್ತೆಂದು—ಆ ಭಾವದಿಂದ ಮುಚ್ಚಿದೆ"

ಎಂದು ಸಮಾಂಜಸವಾಗಿ ಉತ್ತರ ಹೇಳುತ್ತಾಳೆ. ಮಹಾದೇವಿಯಕ್ಕನ ದೃಢತೆ, ವೀರ ವೈರಾಗ್ಯ, ಜ್ಞಾನದ ಪರಿಪಕ್ವತೆ, ಭಕ್ತಿಯ ಆತ್ಮರತಿಗಳನ್ನು ಕಂಡು ಎಲ್ಲರೂ ತಲೆದೂಗುತ್ತಾರೆ. ಬಸವಣ್ಣನವರೇ ಆದಿಯಾಗಿ ಎಲ್ಲ

ಪ್ರಮಥರೂ ಅಕ್ಕಮಹಾದೇವಿಗೆ ಸ್ವಾಗತ ಬಯಸಿ, ಆಕೆಗೆ ಮಂಟಪದಲ್ಲಿ ಹಿರಿಯ ಸ್ಥಾನವನ್ನು ಕೊಡುತ್ತಾರೆ. ಆಕೆಯ ವಚನಗಳ ಹಿರಿಮೆಯನ್ನು ಕುರಿತು ಚೆನ್ನಬಸವಣ್ಣನವರು.

"ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ.
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ.
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಅಯ್ದು ವಚನ.
ಅಜಗಣ್ಣನ ಅಯ್ದು ವಚನಕ್ಕೆ ಮಹಾದೇವಿಯಕ್ಕನ ಒಂದು ವಚನ"

ಎಂದು ಕೊಂಡಾಡಿದ್ದಾರೆ. ಸಾಕ್ಷಾತ್ ಅಲ್ಲಮ ಪ್ರಭುಗಳೇ—

"ತನುಗುಣ ನಾಸ್ತಿಯಾಗಿ ಲಿಂಗ ಸಂಗಿಯಾದಳು.
ಮನಗುಣ ನಾಸ್ತಿಯಾಗಿ ಅರಿವು ಸಂಗಿಯಾದಳು.
ಭಾವಗುಣ ನಾಸ್ತಿಯಾಗಿ ಮಹಾಪ್ರಭೆ ತಾನಾದಳು.
ತಾನಿದಿರೆಂಬೆರಡಳಿದು ನಮ್ಮ ಗುಹೇಶ್ವರ ಲಿಂಗದಲ್ಲಿ ಸ್ವಯಲಿಂಗವಾದ ಮಹಾ ದೇವಿಯಕ್ಕಳ ನಿಲವಿಂಗೆ ಶರಣೆನುತಿರ್ದೆನು"

ಎಂದು ತಮ್ಮ ಭಕ್ತಿ ಕಾಣಿಕೆಯನ್ನರ್ಪಿಸಿದ್ದಾರೆ.

ಅನುಭವ ಮಂಟಪವು ವಿವಿಧ ವೃತ್ತಿಯ, ವಿವಿಧ ಜಾತಿ ಮತಗಳಿಗೆ ಸೇರಿದ ಎಲ್ಲರಿಗೂ ಆಶ್ರಯ ಸ್ಥಾನವಾಗಿತ್ತು. ಅಲ್ಲಿ ವ್ಯಕ್ತಿಯ ಸಾಮಾಜಿಕ ಸ್ಥಿತಿಗೆ ಬೆಲೆಯಿರಲಿಲ್ಲ. ಅವನ ಶಿವಾನುಭವ ಮಹತ್ತ್ವವಷ್ಟನ್ನೇ ಎಣಿಕೆಗೆ ತೆಗೆದುಕೊಳ್ಳಲಾಗುತ್ತಿತ್ತು. ಈ ಉದಾರ ದೃಷ್ಟಿಯಿಂದ ಅನುಭವ ಮಂಟಪವು ಸಾಮ್ಯತೆಯ ಭದ್ರವಾದ ತಳಪಾಯವನ್ನು ಹಾಕಿತು. ರಾಜ್ಯಭೋಗವನ್ನು ತೊರೆದು ಬಂದಿದ್ದ ಕಲ್ಲುಕುರಿಕೆಯ ಅರಸು ಸಕಲೇಶ ಮಾದರಸ, ರಾಜ್ಯತ್ಯಾಗ ಮಾಡಿ ಕಟ್ಟಿಗೆ ಹೊರೆಯನ್ನು ಮಾರಿ ಜೀವನವನ್ನು ಸಾಗಿಸುತ್ತಿದ್ದ ಕಾಶ್ಮೀರದ ಅರಸು ಮೋಳಿಗೆಯ ಮಾರಯ್ಯ, ಅಂಬಿಗ ಚೌಡಯ್ಯ, ಕ್ಷೌರಿಕ ಹಡಪದ ಅಪ್ಪಣ್ಣ, ನೇಕಾರ ಜೇಡರ ದಾಸಿಮಯ್ಯ, ಶಿಂಪಿಗ ಶಂಕರ ದಾಸಿಮಯ್ಯ, ಅಗಸ ಮಡಿವಾಳ ಮಾಚಯ್ಯ, ದನಕಾಯುವ ರಾಮಣ್ಣ, ಸುಂಕದ ಬಂಕಣ್ಣ, ಅಕ್ಕಸಾಲಿಗ ಬೊಮ್ಮಣ್ಣ, ಸಿಪಾಯಿ ಮಾದಣ್ಣ, ತೊಗಲಗಾರ ಡೋಹರ ಕಕ್ಕಯ್ಯ, ತಳವಾರ ರಾಮಿದೇವ, ಮೊಚ್ಚೆಗಾರ ಮಾದರ ಚೆನ್ನಯ್ಯ, ವೈದ್ಯ ಸಂಗಣ್ಣ, ಹಗ್ಗ ಮಾಡುವ ನುಲಿಯ ಚಂದಯ್ಯ,

ಬೇಡ ರಂಗಯ್ಯ, ಸೂಜಿಕಾರ ರಾಮಿತಂದೆ, ಹಳೆಯ ಕಂಚು ಹಿತ್ತಾಳೆ ಸಾಮಾನು ಮಾರುವ ಚಿಕ್ಕದೇವ, ಕನ್ನಡಿಕಾರ ಅಮ್ಮಿದೇವ, ಮೇದರ ಕೇತಯ್ಯ, ಡೋಲುಗಾರ ಬೊಮ್ಮಣ್ಣ, ಶ್ರೀಮಂತ ಆದಯ್ಯ, ಆಯದಕ್ಕಿಯ ಮಾರಯ್ಯ ಮೊದಲಾದವರಿದ್ದರು. ಇವರಲ್ಲದೆ ಮಹಾದೇವಿ, ಸತ್ಯಕ್ಕ, ಮುಕ್ತಾಯಕ್ಕ, ರೆಮ್ಮವ್ವೆ, ಸೋಮವ್ವೆ, ಸುವರ್ಣದೇವಿ, ನೀಲಲೋಚನೆ, ಲಕ್ಷ್ಮಮ್ಮ ಲಿಂಗಮ್ಮ, ರಾಯಮ್ಮ, ಕಾಳವ್ವೆ, ರೇಚವ್ವೆ, ಗಂಗಾಂಬಿಕೆ, ಗಂಗಮ್ಮ, ವೀರಮ್ಮ, ಗೊಗ್ಗವ್ವೆ, ಮಸಣಮ್ಮ, ಕಾಯಮ್ಮ, ಗುಡ್ಡವ್ವೆ, ನೀಲಾಂಬಿಕೆ, ಅಕ್ಕನಾಗಾಯಿ, ಬೊಂತಾದೇವಿ, ರೇಕಮ್ಮ ಮೊದಲಾದ ವಿವಿಧ ಕಾಯಕದ ಶಿವಶರಣೆಯರೂ ಇದ್ದರು. ಇವರಲ್ಲಿ ಸಮಾರು ೨೬ ಮಂದಿ ಶಿವಶರಣೆಯರು ಉತ್ತಮವಾದ ವಚನಗಳನ್ನು ನುಡಿದಿದ್ದಾರೆ.

ಆಧುನಿಕ ನಾಗರಿಕತೆಯ ಯಾವ ಬಗೆಯ ಪ್ರಯಾಣ ಸೌಕರ್ಯಗಳೂ ವಾರ್ತಾ ವಾಹನಗಳೂ ಇಲ್ಲದ ಕಾಲದಲ್ಲಿ ಅನುಭವ ಮಂಟಪದ ಕೀರ್ತಿ ಹಿಂದುಸ್ಥಾನದ ಎಂಟು ಮೂಲೆಗಳಿಗೂ ಹರಡಿ ಕಾಶ್ಮೀರ, ಸೌರಾಷ್ಟ್ರ, ಕಳಿಂಗ, ಆಂಧ್ರ, ತಮಿಳುನಾಡು ಮತ್ತು ಕರ್ನಾಟಕದ ವಿವಿಧ ಭಾಗಗಳಿಂದ ಶಿವಶರಣ-ಶರಣೆಯರು ಬರುವಂತಾದುದು ಅದರ ಹೆಚ್ಚಳವನ್ನು ಎತ್ತಿ ಸಾರುತ್ತದೆ.

೫

ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿ ಸಂಘಶಕ್ತಿಯಿಂದ ಆದ ಅನೇಕ ಮಹತ್ತ್ವದ ಕೆಲಸಗಳ ಉಲ್ಲೇಖಗಳು ದೊರೆಯುತ್ತವೆ. ಪ್ಲೇಟೋ ಸಂಗ್ರಹಿಸಿರುವ ಸೊಕ್ರೇಟಿಸನ ಸಂಭಾಷಣೆಗಳು, ತಮಿಳುನಾಡಿನ ಸಂಘಸಾಹಿತ್ಯ, ಮಧ್ಯಕಾಲದ ಪರ್ಶಿಯಾ ದೇಶದ ಸೂಫಿ ಸಾಹಿತ್ಯಗಳನ್ನು ಅನುಭವ ಮಂಟಪದ ಸಾಹಿತ್ಯಸೃಷ್ಟಿಗೆ ಹೋಲಿಸಬಹುದು. ಆದರೆ ಒಬ್ಬ ವ್ಯಕ್ತಿಯನ್ನೇ ಅವಲಂಬಿಸದೆ ತತ್ತ್ವಗಳ ಬುನಾದಿಯ ಮೇಲೆ ನಿಂತು ಸಮಾಜ, ಧರ್ಮ, ವ್ಯಕ್ತಿ ಪ್ರಗತಿಗಳೆಲ್ಲವನ್ನೂ ಸಮಾನ ದೃಷ್ಟಿಯಿಂದ ಅನುಲಕ್ಷಿಸಿ, ಜನಜೀವನದ ಎಲ್ಲ ಅಂಗಗಳ ಮೇಲೂ ತನ್ನ ಪ್ರಭಾವ ಮುದ್ರೆಯನ್ನೊತ್ತಿದ ಕೀರ್ತಿ ಅನುಭವ ಮಂಟಪಕ್ಕೆ ಸೇರುತ್ತದೆ. ಅನುಭವ ಮಂಟಪದ ಶರಣರ ಜಿಜ್ಞಾಸು ಲಕ್ಷಣ, ವಿಚಾರ ಧೋರಣ ಹಾಗೂ ಸತ್ಯದ ಸ್ಪಷ್ಟ ಆವಿಷ್ಕರಣ-ಇವು ಅವರ

ಬೋಧೆಗೆ ಹಿರಿಯ ಸ್ಥಾನವನ್ನು ಕಲ್ಪಿಸಿಕೊಟ್ಟಿವೆ. ಹದಿನೈದನೆಯ ಶತಮಾನದಲ್ಲಿ ಆಗಿಹೋದ ಗೂಳೂರ ಸಿದ್ಧವೀರಣಾಚಾರ್ಯನು ರಚಿಸಿರುವ "ಶೂನ್ಯ ಸಂಪಾದನೆ"ಯನ್ನು ಅನುಭವ ಮಂಟಪದ ಕೈಪಿಡಿಯನ್ನಾಗಿ ಸ್ವೀಕರಿಸಬಹುದು. ಶಿವಶರಣ ಶರಣೆಯರ ವಚನಗಳಿಂದಲೇ ಮಂಟಪದ ವಿಚಾರ ವಿನಿಯಮ ಸರಣಿಯನ್ನು ಜೋಡಿಸಿ ಸಿದ್ಧವೀರಣಾಚಾರ್ಯನು ಅಪೂರ್ವವಾದ ಗ್ರಂಥವನ್ನು ರಚಿಸಿದ್ದಾನೆ. ರೀತಿ ಮತ್ತು ನೀತಿ ಎರಡು ದೃಷ್ಟಿಯಿಂದಲೂ ಇದಕ್ಕೆ ಸಮಾನವಾದ ಈ ಬಗೆಯ ಗ್ರಂಥ ಕನ್ನಡದಲ್ಲಿ ಬೇರೊಂದಿಲ್ಲ.

ಸತ್ಯದ ಹಾದಿ ಹೊರಗಣ್ಣಿಗೆ ಎಷ್ಟು ನೇರವಾಗಿ ಕಾಣುವುದೋ ಒಳಗಣ್ಣಿಗೆ ಅಷ್ಟು ಸುಗಮವಾಗಿ ಕಾಣುವುದಿಲ್ಲ. ಹಾದಿಯಲ್ಲಿ ಅನೇಕ ಮುಳ್ಳುಗಿಡಗಳು, ಕಲ್ಲು ಕಸರೆಗಳು ತುಂಬಿಕೊಂಡು ಪಥಿಕನನ್ನು ಹಲವು ರೀತಿಯಲ್ಲಿ ಆಯಾಸಗೊಳಿಸುತ್ತವೆ. ಹಿಂದೂ ಧರ್ಮದ ಹಾದಿಯಂತೂ ಒಂದಲ್ಲ ಒಂದು ರೀತಿಯಲ್ಲಿ ಅಭೇದ್ಯವಾಗಿಬಿಟ್ಟಿದೆ. ಒಂದು ಕಡೆ ವಿಚಾರವಿಲ್ಲದ ಆಚಾರ, ಮತ್ತೊಂದು ಕಡೆ ಗುರಿಯನ್ನರಿಯದ ವಿಚಾರದ ವಿಶ್ಲೇಷಣೆ, ಮಗದೊಂದು ಕಡೆ ಹದಗೆಟ್ಟ ಭಾವಲೀಲೆ. ಈ ಅತಿರೇಕಗಳಲ್ಲಿ ಧರ್ಮದ ಸೂಕ್ಷ್ಮ ಜ್ಯೋತಿಯು ನಂದಿಹೋಗಿ ಬಿಡುತ್ತದೆ. ಸಾಧಕನು ತನ್ನ ಅಂತರಾತ್ಮನನ್ನು ಪರಿಶುದ್ಧಗೊಳಿಸಿಕೊಂಡು, ಧರ್ಮದ ಬೆಳಕು ಬಿತ್ತರಿಸಲು ಬೇಕಾದ ಭೂಮಿಕೆಯನ್ನು ಸಿದ್ಧಗೊಳಿಸಿಕೊಳ್ಳುವ ಘನ ಆವಶ್ಯಕತೆಯನ್ನು ಅನುಭವ ಮಂಟಪದ ಶರಣರು ಎತ್ತಿ ಸಾರಿದರು. ಶೀಲಕ್ಕೆ ಸಲ್ಲಬೇಕಾದ ಗೌರವವನ್ನಿತ್ತು ಅದರ ಮಹತ್ತ್ವವನ್ನು ಕೊಂಡಾಡಿದರು.

"ಶೀಲವಂತನಾದರೆ ತಾಸವೆದು ಶೀಲವ ಮಾಡಬೇಕಯ್ಯ.
ತಾನಿರ್ದೆಡೆಯಲ್ಲಿ ಸುಳಿದು ಮಾಡುವ ಶೀಲ ಕೊಟ್ಟು ಪೂಜಿಸುವ ಕೈಕೂಲಿತನವಲ್ಲ.
ಪೂಜೆಯ ಫಲ ಕೊಡವಾಲ ಕರೆವ ಸುರಭಿಯಂತೆ.
ಅಟ್ಟಿದವರಟ್ಟುವ, ಬೇಡಿ ಮರಗುವ ದಾಸಿಯ ಪಪದಂತೆ, ತನ್ನುದರ ನಿಮಿತ್ತ
ವಿಡಿದು ಶೀಲಬೇಕೆಂಬ ದುಶ್ಶೀಲರ ಮೆಚ್ಚುವನೇ ಸಕಳೇಶ್ವರ."

ಶೀಲದಾಚರಣೆ ನೋಡುವುದಕ್ಕೆ ಮತ್ತು ಹೇಳುವುದಕ್ಕೆ ಎಷ್ಟು ಸುಲಭವೋ ಆಚರಿಸುವುದಕ್ಕೆ ಅಷ್ಟು ಸುಲಭವಲ್ಲವೆಂಬುದನ್ನು ಚೆನ್ನಬಸವಣ್ಣನವರು ದೃಢಪಡಿಸುತ್ತಾರೆ.

"ಶೀಲವಂತನಾದೊಡೆ ಪ್ರಪಂಚ ನಾಸ್ತಿಯಾಗಿರಬೇಕು.
ಸೀಮೆಯಾದೊಡೆ ಪಂಚೇಂದ್ರಿಯಂಗಳು ನಾಸ್ತಿಯಾಗಿರಬೇಕು.
ತನ್ನ ಕರ್ತುವಿನಲ್ಲಿ ಸಕಲ ಸಂಶಯು ನಾಸ್ತಿಯಾದ ಶೀಲಕ್ಕೆ ಭವಂ ನಾಸ್ತಿ.
ಭ್ರಮೆ ನಾಸ್ತಿಯಾದಲ್ಲದೆ ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ
ಶೀಲವಂತನೆನಿಸಬಾರದು.
ಈ ವಂಚನೆಯ ಡಂಭಕ ಅಪಸ್ಮಾರಿಗಳಿಗೆಂತಯ್ಯ"

ಶೀಲವೆಂದರೆ ಗರ್ವಿಸಿ ನುಡಿಯುವುದಲ್ಲ. ಹೊರಗಣ ಆಚಾರದಿಂದ ಜನಗಳನ್ನು ಮರುಳು ಮಾಡುವುದೂ ಅಲ್ಲ.

"....ಅಂತರಂಗದ ವಿಚಾರವನರಿಯದೆ ಹಾಳ ಸಂಕಲ್ಪದಿಂದ ಬಹಿರಂಗದ ಪದಾರ್ಥಗಳ ಬಿಟ್ಟು, ಮುಕ್ತಿಯ ಪಡೆವೆವೆಂಬ ಯುಕ್ತಿಗೇಡಿಗಳಿಗೆ ಭವ ಬಂಧನಗಳು ಹಿಂಗಲಿಲ್ಲ. ಜನನ ಮರಣಂಗಳು ಜಾರಲಿಲ್ಲ. ಸಂಸಾರ ಮಾಯಾ ಮೋಹವು ನೀಗಲಿಲ್ಲ. ಇಂತಪ್ಪ ಅಜ್ಞಾನಿಗಳ ವಿಧಿ ಎಂತಾಯಿತೆಂದರೆ ಹುತ್ತದೊಳಗಣ ಹಾವು ಕೊಲ್ಲುವೆನೆಂದು ಮೇಲೆ ಹುತ್ತವ ಬಡಿವ ಮರುಳನಂತಾಯಿತ್ತು ನೋಡಾ ಅಖಂಡೇಶ್ವರಾ"

"ಶೀಲವಾವುದೆಂದರಿಯರೇ ?
ಇದ್ದುದ ವಂಚನೆಯ ಮಾಡದಿಪ್ಪುದೇ ಶೀಲ,
ಇಲ್ಲದುದಕ್ಕೆ ಕಡನ ಮಾಡದಿಪ್ಪುದೇ ಶೀಲ.
ಪರಧನ ಪರಸ್ತ್ರೀಯರ ಮುಟ್ಟದಿಪ್ಪುದೇ ಶೀಲ.
ಪರದೈವ ಪರಸಮಯಕ್ಕೆ ಅಳಿಪದಿರ್ಪುದೇ ಶೀಲ.
ನಮ್ಮ ಕೂಡಲ ಚೆನ್ನಸಂಗನ ಶರಣರ ಬರವಿಂಗೆ ಮಯ್ಯಾಂತುದೇ ಅಚ್ಚ ಶೀಲ."

ಎಂದು ಸ್ಪಷ್ಟಪಡಿಸಿದ್ದಾರೆ.

ಸಾಧಕನಿಗೆ ಆರಂಭದ ದೆಸೆಯಲ್ಲಿ ಒದಗುವ ಎರಡು ಕಂಟಕಗಳೆಂದರೆ ವಿಲೋಭನೆ ಮತ್ತು ಬುದ್ಧಿಭ್ರಂಶತೆ. ಸಾಧಕ ಸ್ಥಿತಿಯ ಬಾಲ್ಯದಲ್ಲಿಯೇ ಕರಗತವಾಗುವ ಸಣ್ಣಪುಟ್ಟ ಶಕ್ತಿಗಳನ್ನೇ ಅಪಾರವೆಂದು ಬಗೆದು ಅವನು ಯೋಗಭ್ರಷ್ಟನಾಗುತ್ತಾನೆ. ಇಲ್ಲದಿದ್ದರೆ ಈ ದೇವ, ಆ ದೇವ ಎಂದುಕೊಂಡು ನಿರ್ದಿಷ್ಟ ಗುರಿಯ ಲಕ್ಷ್ಯವನ್ನು ಕಳೆದುಕೊಳ್ಳುತ್ತಾನೆ. ಇದೂ ಒಂದು ಬಗೆಯ ಯೋಗಭ್ರಷ್ಟತೆಯೇ ಆಗಿ ಸಾಧಕವನ್ನು ಹಾಳುಮಾಡಿ

ಬಿಡುತ್ತದೆ. ತಾಮಸ ವಸ್ತುಗಳನ್ನು ದೇವರೆಂದು ಭ್ರಮಿಸಿ ಪೂಜಿಸುವುದನ್ನೂ ಹಲವು ದೇವರುಗಳನ್ನು ಉಪಾಸಿಸುವ ವ್ಯಕ್ತಿಯನ್ನೂ ಕುರಿತು—

"ಕಲ್ಲು ದೇವರು ದೇವರಲ್ಲ. ಮಣ್ಣು ದೇವರು ದೇವರಲ್ಲ. ಮರ ದೇವರಲ್ಲ.
ಪಂಚ ಲೋಹದಲ್ಲಿ ಮಾಡುವ ದೇವರು ದೇವರಲ್ಲ.
ಸೇತುಬಂಧ, ರಾಮೇಶ್ವರ, ಗೋಕರ್ಣ, ಕಾಶಿ, ಕೇದಾರ ಮೊದಲಾದ ಅಷ್ಟಾಷಷ್ಠಿ ಪುಣ್ಯ ತೀರ್ಥಗಳಲ್ಲಿಹ ದೇವರು ದೇವರಲ್ಲ.
ತನ್ನ ತಾನರಿದು ತಾನಾರೆಂದು ತಿಳಿದೆಡೆ ತಾನೇ ದೇವ ನೋಡ ಅಪ್ರಮಾಣ ಕೂಡಲ ಸಂಗಮದೇವಾ."

ಎಂದು ಹೇಳಿದ್ದಾರೆ. ಇಂತಹ ದೇವರ ಪೂಜೆಯನ್ನು ಬಹಿರಾಡಂಬರಕ್ಕೆ ಆಚರಿಸುವುದನ್ನೂ ತೀರ್ಥಯಾತ್ರಾದಿಗಳನ್ನು ಮಾಡಿ ಮುಕ್ತರಾದೆವೆಂದು ಭಾವಿಸುವುದನ್ನೂ ಖಂಡಿಸುತ್ತಾರೆ.

"ಮಜ್ಜನಕ್ಕೆರೆದು ಫಲವ ಬೇಡುವರಯ್ಯ—ತಮಗೆಲ್ಲಿಯದೋ ಆ ಫಲವು ಸೀತಾಳಕ್ಕಲ್ಲದೆ.
ಪತ್ರೆ ಪುಷ್ಪವ ಪೂಜಿಸಿ ಫಲವ ಬೇಡುವರು—ತಮಗೆಲ್ಲಿಯದೋ ಆ ಫಲವು ಗಿಡಗಳಿಗಲ್ಲದೆ.
ಸುಯಿಧಾನವ ಅರ್ಪಿಸಿ ಪ್ರಸಾದದ ಫಲವ ಬೇಡುವರು—ತಮಗೆಲ್ಲಿಯದೋ ಆ ಫಲವು ಹದಿನೆಂಟು ಧಾನ್ಯಕ್ಕಲ್ಲದೆ.
ಲಿಂಗದೊಡವೆಯ ಲಿಂಗಕ್ಕೇ ಕೊಟ್ಟು, ಫಲವ ಬೇಡುವ ಸರ್ವ ಅನ್ಯಾಯಿಗಳನೇನೆಂಬೆ ಗುಹೇಶ್ವರಾ ?"

"ಒಬ್ಬರ ಮನವ ನೋಯಿಸಿ, ಒಬ್ಬರ ಮನೆಯ ಘಾತವ ಮಾಡಿ, ಗಂಗೆಯಲ್ಲಿ ಮುಳುಗಿದರೆ ಆಗುವದೇನಯ್ಯ? ಚಂದ್ರನು ಗಂಗೆಯ ತಡಿಯಲ್ಲದ್ದರೇನು? ಕಲಂಕ ಬಿಡದಾಯಿತಯ್ಯ. ಅದು ಕಾರಣ-ಮನವ ನೋಯಿಸದವನೇ, ಘಾತವ ಮಾಡದವನೇ ಪರಮ ಪಾವನ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ"

ಈ ಬಗೆಯ ಉಪಾಧಿಗಳನ್ನು ನಿರಾಕರಿಸಿದ ಸಾಧಕನು ನಿಶ್ಚಲ ಚಿತ್ತದಿಂದ ಒಬ್ಬ ದೇವರ ಕಡೆಗೆ ಲಕ್ಷ್ಯವಿಡಬೇಕಾಗುತ್ತದೆ.

"ದೇವನೊಬ್ಬ ನಾಮ ಹಲವು.
ಪರಮ ಪತಿವ್ರತೆಗೆ ಗಂಡನೊಬ್ಬ.
ಮತ್ತೊಂದಕ್ಕೆರಗಿದಡೆ ಕಿವಿಮೂಗ ಕೊಯ್ವನು.
ಹಲವು ದೇವರ ಎಂಜಲ ತಿಂಬವರನೇನೆಂಬೆನಯ್ಯ ಕೂಡಲ ಸಂಗಮದೇವಾ"

"ಕುಂಭ ಸಹಸ್ರ ಉದಕದೊಳಗೆ ಬಿಂಬಿಸಿ ತೋರುವ ಸೂರ್ಯನೊಬ್ಬನಲ್ಲದೆ ಮತ್ತೆ ಹಲಬರುಂಟೇನಯ್ಯ? ಸಕಲ ದೇಹಗಳೊಳಗೆ ಭ್ರಮಿಸಿ ತುಂಬಿಪ್ಪ ಪರ ವಸ್ತು ನೀನೊಬ್ಬನಲ್ಲದೆ ಮತ್ತಾರನೂ ಕಾಣೆ ಅಖಂಡೇಶ್ವರಾ."

"ಎಲ್ಲಿ ನೋಡಿದಡಲ್ಲಿ ನೀನೇ ದೇವಾ.
ಎಲ್ಲಿ ಮುಟ್ಟಿದಲ್ಲಿ ನೀನೇ ದೇವಾ.
ಎಲ್ಲಿ ಭಾವಿಸಿದಲ್ಲಿ ನೀನೇ ದೇವಾ.
ಎಲ್ಲೆಡೆಯಲ್ಲಿ ನಿಮ್ಮ ಮಹಾಪ್ರಭೆಯೇ ಮುಸುಕಿತ್ತಾಗಿ,
ಅಖಂಡೇಶ ನಾನು ನೀನೆಂಬುದಕ್ಕೆ ತೆರಹಿಲ್ಲ ದೇವಾ."

ಈಶ್ವರನ ಈ ಸರ್ವವ್ಯಾಪಕತೆಯ ಅರಿವಾಗಬೇಕಾದರೆ ಮನಸ್ಸಿನ ಕೆಲವು ಮೋಡಗಳು ಹರಿಯಬೇಕಾಗುತ್ತದೆ. ಸಾಧಕ ಮೊದಲು 'ತನ್ನ ತನ'ದ ಸುವರ್ಣ ಪಂಜರದಿಂದ ಹೊರಗೆ ಬರಬೇಕಾಗುತ್ತದೆ. ತಾನು ಹಿರಿಯ, ತನ್ನ ಜಾತಿ ಹಿರಿದು ಎಂಬ ಮೋಹವನ್ನು ಸೀಳಿ 'ಎನಗಿಂತ ಕಿರಿಯರಿಲ್ಲ ಶಿವ ಭಕ್ತರಿಗಿಂತ ಹಿರಿಯರಿಲ್ಲ' ಎಂಬ ತತ್ತ್ವವನ್ನು ಸಾಕ್ಷಾತ್ಕಾರ ಮಾಡಿಕೊಳ್ಳ ಬೇಕಾಗುತ್ತದೆ.

"ಜಾತಿವಿಡಿದು ಸೂತಕನನರಸುವರೆ ?
ಜ್ಯೋತಿವಿಡಿದು ಕತ್ತಲೆಯನರಸುವರೆ ?
ಇದೇತಕೊ ಮರುಳ ಮಾನವಾ ?
ಜಾತಿಯಲ್ಲಿ ಅಧಿಕನೆಂಬೆನೆ, ವಿಪ್ರ ಶತಕೋಟಿಗಳಿರ್ದು ಫಲವೇನು, ಭಕ್ತ ಶಿಖಾಮಣಿ ಎಂದುದು ವಚನ.
ನಮ್ಮ ಕೂಡಲ ಸಂಗನ ಶರಣರ ಪಾದಪರುಷವ ನಂಬು ಕೆಡಬೇಡ ಮನುಜಾ."

"ಸೆಟ್ಟಿ ಎಂಬೆನೆ ಸಿರಿಯಾಳನ.
ಮಡಿವಾಳನೆಂಬೆನೆ ಮಾಚಯ್ಯನ.
ಡೋಹರನೆಂಬೆನೆ ಕಕ್ಕಯ್ಯನ.
ಮಾದರನೆಂಬೆನೆ ಚೆನ್ನಯ್ಯನ.
ಆನು ಹಾರುವನೆಂದಡೆ, ಕೂಡಲ ಸಂಗಯ್ಯ ನಗುವನಯ್ಯ."

ಜಾತಿಯಿಂದ ಹಿರಿತನ ಬರುವುದಿಲ್ಲವೆಂದೂ, ವ್ಯಕ್ತಿಯಿಂದ, ಆಚಾರ ದಿಂದ, ಚಿತ್ತಶುದ್ಧಿಯಿಂದ ಹೀನ-ಉತ್ತಮ ಜಾತಿಗಳ ನಿರ್ಣಯವಾಗುತ್ತ ದೆಂದೂ ತಿಳಿಸಿ, ಹೊಲೆಯರೆಂದು ಒಂದು ಪಂಗಡದವರಿಗೆ ಹೆಸರಿಟ್ಟು

ಅವರನ್ನು ವ್ಯವಹಾರಬಾಹಿರರನ್ನಾಗಿ ಮಾಡುವ ಕಾರ್ಯವನ್ನು ಖಂಡಿಸಿದ್ದಾರೆ.

"ಹೊಲೆಯು ಹೊಲೆಯು ಎಂದಡೆ ಹೊಲೆಯುರೆಂತಪ್ಪರಯ್ಯ.
ಹೊಲೆಯು ಹೊರಕೇರಿಯಲ್ಲಿರುವರು; ಊರೊಳಗಿಲ್ಲವೇನಯ್ಯ ಹೊಲೆಯುರು.
ತಾಯಿಗೆ ಬೈದವನೆ ಹೊಲೆಯು.
ತಂದೆಗೆ ಉತ್ತರ ಕೊಟ್ಟವನೆ ಹೊಲೆಯು.
ಕೊಡುವ ಹಣಕ್ಕೆ ಅಡ್ಡ ಬಂದವನೆ ಹೊಲೆಯು.
ನಡುದಾರಿಗೆ ಮುಳ್ಳು ಹಚ್ಚಿದವನೆ ಹೊಲೆಯು.
ಬ್ರಾಹ್ಮಣನ ಕುತ್ತಿಗೆಯು ಕುಯ್ದವನೆ ಹೊಲೆಯು.
ಹತ್ತು ಆಡಿದರೆ ಒಂದು ನಿಜವಿಲ್ಲದವನೆ ಹೊಲೆಯು.
ಅರ್ಥಕ್ಕೆ ಪ್ರಾಣಹತ್ಯವ ಮಾಡುವವನೆ ಹೊಲೆಯು.
ಚಿತ್ತದಲ್ಲಿ ಪರಸತಿಯು ಬಯಸಿದವನೆ ಹೊಲೆಯು.
ಲಿಂಗ ಮುದ್ರೆಯು ಕಿತ್ತಿದವನೆ, ಲಿಂಗ ಬಿಟ್ಟು ತಿರುಗುವವನೆ ಹೊಲೆಯು.
ನಿಂದೆಯು ಮಾಡುವವನೆ ಹೊಲೆಯು.
ಧರ್ಮವ ಮಾಡದವನೆ ಹೊಲೆಯು.
ಬಸವನ ಕೊಂದವನೆ ಹೊಲೆಯು. ಬಸವನ ಇರಿದವನೆ ಹೊಲೆಯು.
ಲಿಂಗ ಪೂಜೆಯು ಮಾಡದವನೆ ಹೊಲೆಯು.
ಇಂತಪ್ಪ ಹೊಲೆಯುರು ಊರ ತುಂಬ ಇರಲಾಗಿ ಹೊರಕೇರಿಯುವರಿಗೆ
ಹೊಲೆಯುರೆನಬಹುದೇ ?"

'ಸಕಲ ಜೀವಾತ್ಮರಿಗೆ ಲೇಸ ಬಯಸುವವರೆಲ್ಲ ಕುಲಜರು' ಎಂಬ ಘನ ತತ್ತ್ವವನ್ನು ಸಾರಿ ವಿಶ್ವಬಂಧುತ್ವವನ್ನು ಬಂಧುರಗೊಳಿಸಿದರು. ಋಜುವಾದ ಮಾನವ ಗುಣವನ್ನು ಎತ್ತಿಹಿಡಿದು ಹಿರಿದು ಕಿರಿದು, ದೊಡ್ಡವನು ಚಿಕ್ಕವನು, ಉತ್ತಮ ಕುಲಜ, ಹೀನಕುಲಜ ಎನ್ನುವ ಘೋರ ಅಪಶಬ್ದಗಳನ್ನು ತೊಡೆದುಹಾಕಲೆತ್ನಿಸಿದರು.

"ನಾನು ಘನ ತಾನು ಘನವೆಂಬ ಹಿರಿಯುರುಂಟೆ ಜಗದೊಳಗೆ ?
ಹಿರಿಯುರ ಹಿರಿತನದಿಂದೇನಾಯಿತ್ತು ?
ಹಿರಿದು ಕಿರಿದೆಂಬ ಶಬ್ದವಡಗಿದರೆ ಆತನೇ ಶರಣ ಗುಹೇಶ್ವರಾ."

"ನಾನು ಹಿರಿಯು ತಾನು ಹಿರಿಯುರೆಂದವರೆಲ್ಲ ಹಿರಿಯುರೇ ?
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೊಳಗಿಪ್ಪವರೆಲ್ಲ ಹಿರಿಯುರೇ ?

ಅಟಮಟ ಕುಟಿಲ ಕುಹಕ ಪಿಸುಣತನದಲ್ಲಿಪ್ಪವರೆಲ್ಲ ಹಿರಿಯರೇ ?
ಸರ್ಪ ಸಾವಿರಕಾಲವಿದ್ದರೇನು ವಿಷಬಿಡುವದೇ ?
ಹಾವುಮೆಕ್ಕೆಯ ಹಣ್ಣಾದರೇನು, ಮಧುರವಪ್ಪುದೇ ?
ಅರಿಷಡ್ವರ್ಗದುರುವಣೆಯೊಳಗಾದಾತ ಹಿರಿಯನೇ ?
ಸಮತೆ ಸಮಾಧಾನ ತುಂಬಿ ಸುಜ್ಞಾನಭರಿತವಾದಡಾತ ಹಿರಿಯನು.
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮನರಿಯದ ಬರುಮಾತಿನಲ್ಲಿ
ಹಿರಿಯನೆಂದಡೆ ನಾಚಿತೆನ್ನ ಮನವು."

ಹಿರಿಯ-ಕಿರಿಯತನದ ದೃಷ್ಟಿಯನ್ನು ಬದಲಾಯಿಸಿದಂತೆ ಸ್ತ್ರೀಯರ ಬಗ್ಗೆ ಇದ್ದ ಕಲ್ಪನೆಯನ್ನೂ ಬದಲಾಯಿಸಿದರು. ಸ್ತ್ರೀ, ಸ್ವಾತಂತ್ರ್ಯಕ್ಕೆ ಅನರ್ಹಳೆಂದೂ, ವಿಚಾರ ಹೀನಳೆಂದೂ, ಸದಾ ಕಾಲವೂ ಯಾರೊಬ್ಬರ ಆಶ್ರಿತಳೆಂದೂ ಪರಿಗಣಿಸಲ್ಪಟ್ಟಿದ್ದಳು. ಅನುಭವ ಮಂಟಪದಲ್ಲಿ ಹಿರಿಯ ಶಿವಶರಣರಿಗೆ ಸಮಾನವಾದ ಪೀಠವು ಸ್ತ್ರೀಯರಿಗೆ ಏರ್ಪಟ್ಟದ್ದಲ್ಲದೆ ಅಕ್ಕ ಮಹಾದೇವಿಯಂತಹ ಜೀವನ್ಮುಕ್ತೆಗೆ ಮಹತ್ತರವಾದ ಅಗ್ರಸ್ಥಾನವು ಕೊಡಲ್ಪಟ್ಟಿತು. ಹತ್ತೊಂಬತ್ತನೆಯ ಶತಮಾನಾಂತ್ಯದಲ್ಲಿ ಪ್ಯಾಂಕ್‌ಹರ್ಸ್ಟ್ (Pankhurst), ಆನಿ ಬೆಸೆಂಟ, ಮಾರಿ ಸ್ಟೋಪ್ಸ ಮೊದಲಾದ ಮಾನಿನಿಯರು ನಡಸಿದ ಸ್ತ್ರೀಮುಕ್ತಿ ಚಳವಳಿಯನ್ನು ಅನುಭವ ಮಂಟಪದ ಪ್ರಮುಖರು ಹದಿಮೂರನೆಯ ಶತಮಾನದಲ್ಲಿಯೇ ನಡಸಿದರು. ಲೈಂಗಿಕ ಸುಖಾನುಭವ ಕ್ಕೋಸ್ಕರ ಈ ಬಗೆಯ ವಿಭೇದವು ರೂಢಿಗೆ ಬಂದು ಅದರ ಹಿನ್ನೆಲೆಯಾಗಿ ಪುರುಷನ ದಬ್ಬಾಳಿಕೆಯು ಆರಂಭವಾಯಿತೆಂಬ ಅಂಶವನ್ನು ಶಿವಶರಣರು ಚೆನ್ನಾಗಿ ಮನಗಂಡಿದ್ದರು. ಪ್ರಭುದೇವರು ಈ ಮಾತನ್ನೇ 'ಸತಿಪತಿಯೆಂಬ ಅಂಗಸುಖ ಹಿಂಗಿ ಲಿಂಗವೇ ಪತಿಯಾದ ಬಳಿಕ ಸತಿಗೆ ಪತಿಯುಂಟೇ? ಪತಿಗೆ ಸತಿಯುಂಟೇ?' ಎಂದು ಕೇಳಿದ್ದಾರೆ. 'ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ. ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ.' ಕೂಡಿದ ಹೆಣ್ಣನ್ನು ಜತೆಯಲ್ಲಿ ಒಯ್ಯದವನ ಭಕ್ತಿ ಭಕ್ತಿಯಲ್ಲ ಎಂದು ಹೇಳಿದರು.

"ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ.
ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರಸಿದಂತೆ
ಕಾಣಾ ರಾಮನಾಥಾ."

ಬಸವಣ್ಣನವರು ಪರವಧುವನ್ನು ಮಹಾದೇವಿಯೆಂದು ಕಾಣುತ್ತಿದ್ದುದಲ್ಲದೆ, ತಮ್ಮನ್ನೇ ಹೆಣ್ಣೆಂದೂ ಈಶ್ವರನನ್ನೇ ಪತಿಯೆಂದೂ ಭಾವಿಸಿಕೊಂಡು ಸ್ತ್ರೀಜನಾಂಗಕ್ಕೆ ಹೆಚ್ಚಿನ ಸನ್ಮಾನವನ್ನು ಸಲ್ಲಿಸಿದರು. ವೀರ ವಿರಾಗಿನಿಯಾಗಿದ್ದ ಮಹಾದೇವಿಯಕ್ಕಗಳಂತಹ ಶಿವಶರಣೆಯರು ನಾಮಮಾತ್ರವಾದ ತಮ್ಮ ಲೈಂಗಿಕ ದೌರ್ಬಲ್ಯವನ್ನು ನೀಗಿ ತಮ್ಮ ವೈರಾಗ್ಯದ 'ಗಂಡಸುತನ' ವನ್ನು ಸಾರಿದರು.

"ಕಾಮಾರಿಯ ಗೆಲಿದೆನು ಬಸವ ನಿಮ್ಮ ದಯದಿಂದ.
ಸೋಮಧರನ ಹಿಡಿತಪ್ಪೆನು ಬಸವ ನಿಮ್ಮ ಕೃಪೆಯಿಂದ.
ನಾಮದಲ್ಲಿ ಹೆಂಗುಸೆಂಬ ಹೆಸರಾದರೇನು? ಭಾವಿಸಲು ಗಂಡುರೂಪು.
ಅತಿಕಾಮಿ ಚೆನ್ನಮಲ್ಲಿಕಾರ್ಜುನಂಗೆ ತೊಡರನಿಕ್ಕಿ ಎರಡುಮರಿಯದೆ
ಕೂಡಿದೆನು ಬಸವ ನಿಮ್ಮ ಕೃಪೆಯಿಂದ.

೬

ಮನೋಭೂಮಿಕೆಯನ್ನು ಇಂತು ಶುಚಿಗೊಳಿಸಿಕೊಂಡ ಶರಣರು ಪ್ರಗತಿಪಥದಲ್ಲಿ ಬಹಳ ಮುಂದುವರಿದಂತೆಯೇ ಆಯಿತು. ಈ ಮುಕ್ತಿಯಾತ್ರೆ ಸುಗಮವೂ ಶ್ರೇಯಃಪ್ರದವೂ ಆಗುವಂತೆ ಶಿವಶರಣರು 'ಷಟ್‌ಸ್ಥಲ'ಗಳನ್ನು ನಿಯೋಜಿಸಿ ತಮ್ಮ ಧರ್ಮತತ್ತ್ವ ಶಾಸ್ತ್ರೋಕ್ತವಾಗುವಂತೆ ಮಾಡಿದರು. ಷಟ್‌ಸ್ಥಲ ಮೂರ್ತಿಗಳಾಗಿದ್ದ ಚೆನ್ನಬಸವಣ್ಣನವರಿಂದ ಅಧಿಕೃತರಿಗೆ ದೀಕ್ಷೆ ದೊರಕುತ್ತಿತ್ತು. ಬಸವಣ್ಣನವರು, ಅಲ್ಲಮಪ್ರಭುಗಳು, ಸಿದ್ಧರಾಮದೇವರು, ಮಹಾದೇವಿಯಕ್ಕಗಳು ಸಾಧಕರ ಕೈಹಿಡಿದು ಯಾರು ಯಾರನ್ನು ಎಲ್ಲಿ ಎಲ್ಲಿ ಮುಟ್ಟಿಸಬೇಕೋ, ಅಲ್ಲಿ ಅಲ್ಲಿಗೆ ಒಯ್ದು ಮುಟ್ಟಿಸುತ್ತಿದ್ದರು. ಇದರಿಂದ 'ಅನುಭವ ಮಂಟಪ'ವು ಕೇವಲ ಜ್ಞಾನ, ಪಾಂಡಿತ್ಯಗಳಿಂದ ಕೊಬ್ಬಿದ ಕೆಲವು ಪಂಡಿತರ ವಾದಸಂತೆಯಾಗದೆ ಸಜೀವ ಸಾಧಕರ ಒಂದು ಪ್ರಯೋಗ ಕ್ಷೇತ್ರವಾಯಿತು. ದಿದ್ರಿಕ್ಷುಗಳೂ, ಜಿಜ್ಞಾಸುಗಳೂ, ಜ್ಞಾನಭಿಕ್ಷುಗಳೂ, ಭಕ್ತಿಮಾರ್ಗಾನುಯಾಯಿಗಳೂ, ಉತ್ಕಟ ಯೋಗಿಗಳೂ ಎಲ್ಲರೂ ನೆರೆಯಲು ಅನುವಾಯಿತು.

ಈ ಮಹಾಮಥನದಿಂದ ಅಮೃತ ಸದೃಶವಾದ ಸಾಹಿತ್ಯವು ಹುಟ್ಟಿತು. ಶಿವಶರಣ ಶರಣೆಯರ ವಚನಗಳೇ ಸಾಹಿತ್ಯದ ಒಂದಮೌಲ್ಯ ರಸಘಟ್ಟಿ

ಯಾದುದಲ್ಲದೆ, ಅವರ ವಚನ ಹಾಗೂ ಜೀವನ ಸ್ಫೂರ್ತಿಯಿಂದ ಹರಿಹರ, ರಾಘವಾಂಕ, ಚಾಮರಸ, ವಿರೂಪಾಕ್ಷ ಪಂಡಿತ, ಷಡಕ್ಷರಿ, ನಿಜಗುಣ ಶಿವ ಯೋಗಿ ಮೊದಲಾದ ಕವಿಪುಂಗವರು ಕನ್ನಡ ಸಾಹಿತ್ಯವನ್ನು ತಮ್ಮ ಕೃತಿರತ್ನ ಗಳಿಂದಲಂಕರಿಸಲು ಸಹಾಯವಾಯಿತು. ಅನುಭವ ಮಂಟಪದ ಕಾಲದಿಂದ ಐದು ಶತಮಾನಗಳಾನಂತರ ಬಂದ ಸರ್ವಜ್ಞಕವಿಯು ವಚನಕಾರರ ಮಾತು ಗಳನ್ನು ಇದ್ದಂತೆಯೇ ಉಪಯೋಗಿಸಿಕೊಂಡಿರುವುದೂ ಇಂದಿಗೂ ಕನ್ನಡಿಗರ ಜೀವನದ ಹಾಸುಹೊಕ್ಕಾಗಿ ವಚನಕಾರರ ನುಡಿಗಳು, ಉಪಮೆಗಳು, ಪ್ರಯೋಗಗಳು ಬಳಕೆಯಲ್ಲಿರುವುದೂ ಅವರ ಕೃತಿಯ ಜೀವಂತತೆಯ ಸಲ್ಲಕ್ಷಣಗಳಾಗಿವೆ. ವಚನಕಾರರು ಕನ್ನಡ ಸಾಹಿತ್ಯಕ್ಕೆ ಮಾಡಿರುವ ಉಪ ಕಾರ, ಸಲ್ಲಿಸಿರುವ ಸೇವೆ ಅನರ್ಘ್ಯವಾದುದು. ಕನ್ನಡ ತಾಯಿಯನ್ನು ಭಾವ, ಭಾಷೆಗಳೆರಡರ ಬಂಧನದಿಂದ ಬಿಡುಗಡೆಮಾಡಿ ತಾಯಿಯ ಸಿರಿರೂಪಕ್ಕೆ ತಕ್ಕುದಾದ ನೂತನ ಉಡುಗೆತೊಡಿಗೆಗಳಿಂದ ಅಲಂಕರಿಸಿದ ಕೀರ್ತಿ ವೀರ ಶೈವ ವಚನಕಾರರಿಗೆ ಸಲ್ಲುತ್ತದೆ.

೭

ವೀರಶೈವ ಅನುಭಾವಿಗಳು, ತಮ್ಮ ಜೀವನದ ಜೇನುಕೊಡವನ್ನು 'ಅನುಭವ ಮಂಟಪದಲ್ಲಿ ಶೇಖರಿಸಿ, ಜೇನುಹೊಂಡವನ್ನೇ ನಿರ್ಮಾಣಮಾಡಿ ಬಿಟ್ಟರು. ಇದರಲ್ಲಿ ಎಲ್ಲ ಪುಷ್ಪಗಳ ಸೌರಭ, ಪರಿಮಳ ಸವಿಗಳು ಬೆರೆತು ಕೊಂಡಿವೆ. ಎಲ್ಲ ಧರ್ಮಗಳೂ ಒಂದೊಂದು ಜಾಡನ್ನು ಹಿಡಿಯಹೋಗಿ, ಕಂಡ ಸತ್ಯದ ಕೇಂದ್ರವನ್ನೇ ವೀರಶೈವ ಧರ್ಮವು ಅರಿಸಿತು. ಇದು ಎಲ್ಲ ಧರ್ಮಗಳ ಸಾರವಾಯಿತು. ಅಂತೇ ವಿಶ್ವಧರ್ಮವೆನಿಸಿಕೊಳ್ಳಲು ಪೂರ್ಣ ಅರ್ಹತೆಯನ್ನು ಪಡೆಯಿತು. ವಿಶ್ವಧರ್ಮವನ್ನೇ ಗುರಿಯನ್ನಾಗಿಟ್ಟುಕೊಂಡು ಮಧ್ಯಯುಗದಲ್ಲಿ ಅರೇಬಿಯಾ, ಪರ್ಶಿಯಾದೇಶಗಳಲ್ಲಿ 'ಸೂಫಿ ಧರ್ಮ' ತಲೆ ಯೆತ್ತಿತ್ತು. ಆದರೆ ಇಸ್ಲಾಮಿನ ಕಟುಧರ್ಮೀಯತೆಯನ್ನು ತಾಳಲಾರದೆ ಅದು ಒಂದು 'ಮತ'ದ ಸ್ವರೂಪ ತಾಳಿ ಅಲ್ಲಿ ಇಲ್ಲಿ ತಲೆಮರಸಿಕೊಳ್ಳಬೇಕಾ ಯಿತು. ಹದಿನಾರನೆಯ ಶತಮಾನದಲ್ಲಿ ಅಕ್ಬರ್ ಸ್ಥಾಪಿಸಲೆತ್ನಿಸಿದ 'ದೀನ್ ಇ ಇಲಾಹಿ' ಎನ್ನುವ ವಿಶ್ವಧರ್ಮವೂ ಇದೇ ಗತಿಯನ್ನು ಪಡೆಯಿತು. ಅದು ಮುಂದಿನ ತಲೆಮಾರಿನ ತನಕ ಕೂಡ ಹೋಗಲಿಲ್ಲ. ಆದರೆ ವೀರಶೈವ

ಧರ್ಮ ಜೀವಂತ ಧರ್ಮವಾಗಿ ಉಳಿದಿದೆ. ಅನುಭವ ಮಂಟಪದ ಮಹಾನು ಭಾವಿಗಳ ಕೃತಿಗಳು ನಾಡವರ ಕೊರಳಲ್ಲಿ ಮುಕ್ತಮಣಿಗಳಾಗಿ ರಾರಾಜಿಸುತ್ತಿವೆ. ಇಂದಿನ ಜಗತ್ತಿನ ಧರ್ಮ ಹಾಗೂ ಜೀವನ ಸಮಸ್ಯೆಗಳಿಗೆ ತನ್ನಲ್ಲಿ ನಿವಾರಣೋಪಾಯವನ್ನು ಧರಿಸಿದೆಯೋ ಏನೋ? ಜಗತ್ತಿನ ಕಲ್ಯಾಣಕ್ಕೆ ಅವಶ್ಯಕವಾದ ಬೆಳಕನ್ನು ನೀಡುವ ಸೌಭಾಗ್ಯವನ್ನು ಅನುಭವ ಮಂಟಪದ ಶಿವಾನುಭಾವಿಗಳು ಕನ್ನಡ ನಾಡಿಗೆ ಒದಗಿಸಿಕೊಟ್ಟಿರಬಾರದೇತಕ್ಕೆ?

ಹರೀಶ್ವರನ ಇಬ್ಬರು ಮಹಾನುಭಾವರು

ಕನ್ನಡ ಸಾಹಿತ್ಯದ ಉತ್ಕ್ರಾಂತಿಗೆ ವೀರಶೈವ ಕವಿಗಳು ಮಾಡಿರುವ ಮಹದ್ಸೇವೆಯನ್ನು ಅಳೆಯಲಳವಲ್ಲ. ಚಂಪುವಿನಸುವರ್ಣ ಶೃಂಖಲೆಯಿಂದ ಕನ್ನಡ ಮಾತೆಯನ್ನು ಬಿಡಿಸಿ ಶುಭ್ರವಾದ ಶ್ವೇತಾಂಬರವನ್ನು ತನ್ನ ತ್ರಿಕರಣ ಪೂರ್ವಕವಾದ ಸ್ವಾತಂತ್ರ್ಯಾಭಿಮಾನದಿಂದುಡಿಸಿ, ಕನ್ನಡ ನುಡಿಯೊಡತಿಯು ಹೆಮ್ಮೆಯಿಂದ ಬೀಗಿ ಮೆರೆಯುವಂತೆ ಮಾಡಿದ ಅಣ್ಣಗಳಲ್ಲಿ ಹರೀಶ್ವರನೂ ಒಬ್ಬನು, ಗಣ್ಯನು ಜನಜನಿತವಾದ ರಗಳೆಯ ಧಾಟಿಯನ್ನೇ ಅವಲಂಬಿಸಿ ಸಾಧುಸಂತರ ಜೀವನಗಳಿಗೆ ತನ್ನ ಆತ್ಮಶಕ್ತಿಯ ಕುಂದಣವಿಕ್ಕಿ ಕನ್ನಡ ಸಾಹಿತ್ಯ ಸಾಮ್ರಾಜ್ಯಕ್ಕೆ ಮಾತ್ರವಲ್ಲದೆ ಜನಜೀವನಕ್ಕೆ ಧಾರಾಳವಾದ ಸೇವೆಯನ್ನು ಹರೀಶ್ವರನು ಸಲ್ಲಿಸಿದ್ದಾನೆ.

ಹರೀಶ್ವರನು ಗಿರಿಜಾ ಕಲ್ಯಾಣವೆಂಬ ಚಂಪೂ ಕಾವ್ಯವನ್ನೂ, ಅನೇಕ ರಗಳೆ, ಶತಕಗಳನ್ನೂ ಬರೆದಿದ್ದಾನೆ. ರಗಳೆಗಳನ್ನೇ ಬರೆಯುತ್ತಿದ್ದ ಹರೀಶ್ವರನನ್ನು 'ರಗಳೆಗಳ ಕವಿ'ಯೆಂದು ಜನರು ಪರಿಹಾಸ್ಯಮಾಡಿಕೊಂಡತೆಯೂ, ಅದಕ್ಕೆ ಹರೀಶ್ವರನು ತನ್ನ ಚಂಪೂ ಕವನ ಸಾಮರ್ಥ್ಯವನ್ನು ತೋರಲು ಗಿರಿಜಾ ಕಲ್ಯಾಣವನ್ನು ಬರೆದಂತೆಯೂ ಪ್ರತೀತಿಯಿದೆ. ಉದ್ದಾಮ ಕವಿಯೂ ಪರಮ ಶಿವಭಕ್ತಶಿರೋಮಣಿಯೂ ಆದ ಹರೀಶ್ವರನು ಜನತೆಯನ್ನು ಮೆಚ್ಚಿಸುವುದಕ್ಕಾಗಲೀ, ಅರ್ಚಿಸುವುದಕ್ಕಾಗಲೀ ಲೆಕ್ಕಣಿಯನ್ನು ಎಲ್ಲಿಯೂ ಹಿಡಿವಂತಿಲ್ಲ. ಅವನ ಮನಸ್ಸು

'ಬೆಳೆದು ಕವಲಿರಿಮು ನೀಳ್ದ ಪ್ರವಾಳ ಜಾಳದಂತೆ ಬೆಂಬಳಿವಿಡಿದಿಳಿದ ಕೆಂಜೆಡೆಗಳಿಂ ಸುತ್ತಿದ ಜಟಾಬಂಧದೊಣಗಣ ಸುರನದಿಯೆಂಬ ಸರೋಜಿನೀ ತಟದೊಳಗಿರ್ದ ಬಿಸಕಂದದಂಕುರದಂತಿರ್ದ ಚಂದ್ರಕಳೆಯಿಂ, ವಿದ್ಯುಲ್ಲತಾ ಗರ್ಭೀಕೃತಶಾರದಾಭ್ರವಿಭ್ರಮದಂತೆ ಭಸಿತಮುಂ ಮುಸುಂಕಿದ ಬಿಸುಗಣ್ಣಿಂ ಮೆರೆವ ಲಲಾಟ ಪಟ್ಟದಿಂ, ಶೃಂಗಾರದತವರ್ಮನೆಯಂತಿರ್ದ ಮುಖಮಂಡಲದಿಂ, ನಯಮಂ ಕರೆವ ನಾಗಕುಂಡಲದಿಂ, ಹರನೊಳನೆರೆಯಲ್ ಬಂದ ಕಾಳಿಂದೀನದಿ ಸುರನದಿಗೆ ಸೊಲ್ತೀಳಿದಂತಿರ್ದ ಕೊರಳ ಗರಳದಿಂ, ಕಲ್ಪಕುಜದ

ಶಾಖೆಗಳಂತಿರ್ದ ದಶಭುಜಂಗಳ ತೋಳ್ದುರುಗಲಿಂ, ವೇದಂಗಳ್ ತನ್ನ ಕಾಣ ದಂತೆ ಮುಸುಂಕಿದ ಮಾಯಾಪಟಲವೆನಿಪ ಗಜಚರ್ಮದಿಂ, ಎಳವಿಸಿಲ ಬೆಳಗಂ ತರುಣ ತರುಣಿಗೆ ಕಡಂಗೊಡುವ ಪ್ರಭಾದುಕೂಲದಂತಿರ್ದ ಪುಲಿ ದೊಗಲಿಂದೊಪ್ಪಿದ ಪಶುಪತಿಯ' ಕಡೆಗೆ ಸ್ವಾಭಾವಿಕವಾಗಿಯೇ ಹರಿದು ಗಿರಿಜಾಕಲ್ಯಾಣವನ್ನು ಬರೆಯುವಂತೆ ಪ್ರೇರೇಪಿಸಿರಬಹುದು. ಶತಕವನ್ನೇ ಸೃಷ್ಟಿಸಲಿ, ರಗಳೆಯನ್ನೇ ರಚಿಸಲಿ, ಕಾವ್ಯದಲ್ಲೇ ಕೈಯಾಡಲಿ ಹರೀಶ್ವರನದು ಅರಿತ ನುರಿತ ಕೈ ಎನ್ನುವುದರಲ್ಲಿ ಸಂದೇಹವಿಲ್ಲ.

ಹರೀಶ್ವರನು ಇತರ ಕವಿಗಳಿಗಿಂತಲೂ ಒಂದು ವಿಚಾರದಲ್ಲಿ ಮೇಲ್ತರ ಗತಿಯವನು. ಅವನ ಹಾಗೆ ಹವಣಿನ ಬೆಲೆಯನ್ನರಿತಿರುವ ಕವಿಗಳು ಇಡೀ ಕನ್ನಡ ಸಾಹಿತ್ಯದಲ್ಲಿಯೇ ನಾಲ್ಕಾರು ಜನರು ಕೂಡ ದೊರೆಯಲಾರರೆಂದರೆ ತಪ್ಪಾಗದು. ಪ್ರಭುದೇವರ ರಗಳೆಯಲ್ಲಿ ಕಾಮಲತೆಯ ರೂಪವರ್ಣನೆಗೆ ಸದವಕಾಶದೊರೆತಾಗ

"ರೂಪಿನೊಳು ರತಿಸರಸ್ವತಿಗುಪ್ಪರಂಗಟ್ಟಿ ।
ಪೆಸರೆಸೆವ ಕಾಮುಲತೆಯೆಂದೆಂಬ ನಾಮದಿಂ ।
ದೊಸೆದು ಸೌಭಾಗ್ಯಲತೆ-ಕುಡಿಯಿಡಲ್ ಪ್ರೇಮದಿಂ ।
ಶಶಿಕಿರಣದಂತೆ ಬೆಳೆದಳ್ ಬೆಳೆದಳಮ್ಮಮ್ಮ ।
ಕುಸುಮಶರದಂತೆ ನೆರೆದಳ್ ನೆರೆದಳಮ್ಮಮ್ಮ ।
ರತಿಗಿತಿಯು ರಂಭೆಗಿಂಬೆಯ ಮಾತು ಬೇಡಿಲ್ಲಿ ।
ಮತಿಗಿತಿಗೆ ಪೊಗಳ್ವಗಿಗಳ್ವಾಸೆಗಳ್ ಪುಗವಿಲ್ಲಿ ।
ಈ ತೆರದೊಳೆಸೆವ ಸೊಬಗಿನ ರೂಪನೊಳಗೊಂಡು"

ಎಂದು ಹೇಳಿ ಮುಗಿಸಿಬಿಡುತ್ತಾನೆ. ಕಾವ್ಯದಲ್ಲಿ ಕವಿಯ ಕಣ್ಣೆಲ್ಲಾ ತನ್ನ ಪ್ರಧಾನವಸ್ತುವಿನ ಕಡೆಯೇ ಇರುತ್ತದೆ. ಪ್ರಭುವಿನ ಕಥೆ ಹೇಳಹೋಗಿ ಕಾಮುಲತೆಯ ರೂಪವರ್ಣನೆಯಲ್ಲಿ ಮೂಲ ಉದ್ದೇಶವು ಮುಳುಗುವಂತೆ ಮಾಡುವ ಚಾಪಲ್ಯಕ್ಕೆ ಹರೀಶ್ವರನು ಮನತೆತ್ತಿಲ್ಲ. ಬಸವರಾಜದೇವರ ರಗಳೆ ಯಲ್ಲಿ ಒಂದು ಕಠಿಣ ಸಮಸ್ಯೆಯೊದಗುತ್ತದೆ. 'ಬೇಡಿ ಬೇಡಿದ ಶರಣಂಗೆ ನೀಡದಿರ್ದಡೆ ತಲೆದಂಡ ಕೂಡಲಸಂಗ' ಎಂಬ ವಚನವನ್ನು ಕೇಳಿ ಮಹಾ ದೇವಿಶೆಟ್ಟಿಯೆಂಬ ಮಹಾಭಕ್ತನು ಬಸವಣ್ಣನವರನ್ನು ಪರೀಕ್ಷಿಸಲು ಬರು

ತ್ತಾನೆ. ಅವನು ಕೇಳಿದ ಸಮಸ್ತ ಕನಕರತ್ನಾಭರಣಗಳನ್ನು ಶಿವನನುಗ್ರಹ ದಿಂದೆ ಕೊಟ್ಟುಕಳುಹಿಸಲು ಸಾಕ್ಷಾತ್ ಶಿವನೇ 'ಮನಂ ಮತ್ತೆ ಪರೀಕ್ಷೆಪೆಂ. ಮಹಾದೇವಿಶಿಟ್ಟಿಗೆ ಕನಕರತ್ನಂಗಳಂ ಕೊಡುವುದರಿದಲ್ಲ. 'ಕುಲವಧುವಂ ಕೊಡರಿದು' ಎಂದುಕೊಂಡು ಬಂದು ಹಾಗೆಯೇ ಬಸವರಾಜನನ್ನು ಬೇಡು ತ್ತಾನೆ. ಬಸವರಾಜನು ಪರಿಚಾರಕರಂ ಪುರದೊಳಯಿಂಕೆ ಕಳುಪಲವರಿವ ರೆನ್ನದೆ ಪುಣ್ಯಾಂಗನೆಯರೆಲ್ಲಂ ಕೂಡಿ ದಂಪತಿಗಳಾಗಿರೆ, ದೇವಾ ಎಲ್ಲಿಯುಂ ತೆರವಿಲ್ಲ ಎಂದು ಬಿನ್ನೈಸೆ ಕೌತುಕಂಬಟ್ಟು—ಅರಿದೆನರಿದೆಂ ತನ್ನ ಮಾಯ ವೆನ್ನಂ ಕೊಳುವುದೆ? 'ಸಿರಿಸರಸ್ವತಿಗಳಂ ಕೀಳ್ಮಾಡುವ ತನ್ನರಸಿ ಮಾಯಿ ದೇವಿಯರಂ ತಂದು ಕೊಡುವೆಂ' ಎಂದು ತನ್ನ ಸತೀರತ್ನ ಮಾಯಿದೇವಿ ಯನ್ನು ಕರೆತಂದು ಜಂಗಮನ 'ಸಜ್ಜೆಯಂ ಮನೆಯ ಪೊಗಿಸಿ ಮುಚ್ಚಳಕ್ಕಿ ಕೊಂಡು ಬಸವಂ ಪೊರವಾಗಿಲೊಳಿರೆ' ಮಾಯಿದೇವಿಯರು ದೇವನ ತೊಡೆಯಂ ಹೊಯ್ದೆಬ್ಬಿಸಿ ದೇವನ ಪುಸಿಮುಸುಕನೊಯ್ಯನೋಸರಿಸೆ, ಮಾಯೆಯ ಜವನಿಕೆಯಂ ತೆಗೆದಂತೆ ದೇವನ ಚೋಹವಳಿದು ದಶಭುಜಂ ಪಂಚವದನ ತ್ರಿಣೇತ್ರನಾಗಿರೆ, ಮಾಯಿದೇವಿಯರು ನೋಡಲಮ್ಮದೆ ನಡನಡಂ ನಡುಗಿ ಬಸವಬಸವಾ ಜಂಗಮದೇವರು ಸಂಗಮದೇವರಾದರೆನೆ; ತಾಯೆ ತಾಯೆ ಮುನ್ನವಾರೆಂದು ಕೊಟ್ಟೆನೆಂದು ನುಡಿವಲ್ಲಿ ಮುನ್ನವೆ ಸಂಗಮೇಶ್ವರಂ ಬಸವನ ಚಿತ್ತಂ ಪರೀಕ್ಷಿಸಲಾರದೆ ಸೋಲ್ತು ಬೇಗದಿಂದಂತರ್ಧಾನಕ್ಕೆ ಸಂದುದಂ ಮಾಯಿದೇವಿಯರು ಕಂಡು' ಎಂದು ಹೇಳಿ ಮುಗಿಸಿದ್ದಾನೆ. ಸಾಮಾನ್ಯಕವಿಗಳು ಈ ವಸ್ತುವನ್ನು ಅಶ್ಲೀಲ ಮಹಾಸಾಗರದಲ್ಲಿ ಮಳುಗಿಸು ತ್ತಿದ್ದರು, ಇಲ್ಲವೆ ಮುಟ್ಟಲಾಗದೆ ಬಿಡುತ್ತಿದ್ದರು—ಹರೀಶ್ವರನು ಬಸವರಾಜ ಮಾಯಿದೇವಿಯರ ಗೌರವಕ್ಕೆ ಕುಂದುಬಾರದಂತೆ ಈ ವಸ್ತುವನ್ನು ನಿರ್ವಹಿಸಿ ದ್ದಾನೆ. ವರ್ಣನೆಯೇ ಆಗಲಿ, ಅಲಂಕಾರವೇ ಆಗಲಿ, ಚಿತ್ರರೂಪಣೆಯೇ ಆಗಲಿ, ಉಪದೇಶವೇ ಆಗಲಿ, ಯಾವುದೇ ಆದರೂ ಹರೀಶ್ವರನು ಅವುಗಳಿಗೆ ಕಾವ್ಯದಲ್ಲಿ ಯಾವ ಸ್ಥಾನ, ಯಾವ ಯೋಗ್ಯತೆಯೆಂಬುದನ್ನು ಮೊದಲು ನಿಷ್ಕರ್ಷಿಸಿಕೊಂಡು ಅನಂತರ ಸೃಷ್ಟಿಕ್ರಿಯೆಗೆ ತೊಡಗುತ್ತಾನೆ.

ಎರಡನೆಯದಾಗಿ ಹರೀಶ್ವರನ ಕಾವ್ಯಗಳಲ್ಲಿ ನಮಗೆ ಕಾಣಬರುವ ಇನ್ನೊಂದು ಗುಣವೆಂದರೆ, ಅವನ ಅಸಾಧಾರಣ ಲೋಕಾನುಭವ. ಲೌಕಿಕ

ವೈದಿಕ ಎರಡು ವ್ಯವಹಾರಗಳಲ್ಲಿಯೂ ಜನರು ಹೇಗೆ ನಡೆದುಕೊಳ್ಳುವರು ಎನ್ನುವದನ್ನು ಹರೀಶ್ವರ ಚೆನ್ನಾಗಿ ಬಲ್ಲನು. ಅದಕ್ಕೆ ಅವನ ಕಾವ್ಯಗಳಲ್ಲಿ ಜನಜೀವನಕ್ಕೆ ಸಂಬಂಧಪಟ್ಟ ಸನ್ನಿವೇಶ ಬಂದಾಗ, ಆ ಚಿತ್ರ ನಮ್ಮ ಕಣ್ಣು ಮುಂದೆ ನಡೆದಂತೆ ಅವನು ಚಿತ್ರಿಸುತ್ತಾನೆ. ಶರಣರು ಬಸವರಾಜನಲ್ಲಿ ಬಂದಾಗ ನಡೆದ ಪೂಜಾವಿಧಾನವನ್ನು

"ಓತುಕೊಂಡಾಡುತಂ ಹರಸುತಂ
ಹೊಸ ಹೊಸ ಪರಿಯ ಸಿರಿಯ ನೇಮದಚಲರ್ ಕೆಲರು
ಕುಸುಮಮಂ ಕೊಡದೆ ಪರಿಮಳವನೀವರ್ ಕೆಲರು
ಮಜ್ಜನಕ್ಕೆರೆವುತಂ ಕರಗುತಿರ್ಪರ್ ಕೆಲರು
ಉಜ್ವಳಿಪ ಲಿಂಗಮಂ ನೋಡುತಿರ್ಪರ್ ಕೆಲರು
ಪೂಜೆಯಂ ಮಾಡಿ ಪುಟನೆದ್ದಾಡುವರ್ ಕೆಲರು
ಪೂಜಿಸುತೆ ಕಂಪಿಸುತೆ ಕೈಮರೆವವರ್ ಕೆಲರು
ಹೂವನೀಕ್ಷಿಸುತೆ ಹೊರೆಯೇರುತಿಪ್ಪರ್ ಕೆಲರು
ದೇವನಂ ನೋಡಿ ದಳವೇರುತಿಪ್ಪರ್ ಕೆಲರು
ಶಿವಲಿಂಗಮಂ ಮುಟ್ಟಿ ಮರೆವುತಿಪ್ಪರ್ ಕೆಲರು
ತವಕದಿಂ ಸುತ್ತಿಯಿಸುತೆ ಗದಗದಿಸುವರ್ ಕೆಲರು
ಹಾಡಬೆಂದನುಗೆಯ್ದು ನೋಡುತ್ತಿಪ್ಪರ್ ಕೆಲರು
ನೋಡಲೆಂದನುಗೆಯ್ದು ಹಾಡುತಿಪ್ಪರ್ ಕೆಲರು
ಆಡುಡಾಡುತೆ ಮೀರಿ ಮಸಗಿ ಕುಣಿವರ್ ಕೆಲರು
ನೋಡಿ ನೋಡುತ್ತಲೆವೆಯಿಕ್ಕದಿಪ್ಪರ್ ಕೆಲರು
ಶಿವಶಬ್ದಮಂ ಕೇಳ್ದು ಪುಳಕಿಸುವವರ್ ಕೆಲರು
ಶಿವನೊಡನೆ ಮುಸಿಮುಸಿದು ಜಿನುಗಿತಿಪ್ಪರ್ ಕೆಲರು
ಧೂಪಮಂ ಮರೆದಾರತಿಯನೆತ್ತುವರ್ ಕೆಲರು
ದೀಪಮಂ ಧೂಪವೆಂದರ್ಚಿಸುವವರ್ ಕೆಲರು"

ಎಂದು ವರ್ಣಿಸುತ್ತಾ ತಾನು ಎಂತಹ 'ತೆರದ ಕಣ್ಣಿನವನು' ಎನ್ನುವುದನ್ನು ಹರೀಶ್ವರನು ನಮಗೆ ತಿಳಿಸುತ್ತಾನೆ. ಪ್ರಭುದೇವರ ಜನನವನ್ನು ಹೇಳುತ್ತಾ ನವಯೌವನೆಯ ಗರ್ಭದೊಳಗಿಗುದಿಸಿ ತೊಳತೊಳಗೆ

"ಹೊರಗೆ ಸಾರಿದುದವಯವಂ ಗರ್ಭಚಿಹ್ನಮಂ
ತುರುಗಿದುದು ಲಾವಣ್ಯವೊಪ್ಪಿದಿಡಿದಂಗಮಂ

ನಡೆ ಮೆಲುಪಿನೊಳ್ ನೆರೆಯೆಕೊಡೆ ಥಾಳದೊಳ್ ಪೊರೆಯೆ
ನಡು ಬಟ್ಟನಾಗಿ ಸಿಲೆ ಕುಡಿಕಪ್ಪನಾಳೆ ಮೊಲೆ
ಪೊಕ್ಕುಳುಣ್ಮುತ್ತಮಿರೆ ಮಿಕ್ಕು ಕೀಳ್ಪೊಡೆಯುಲರೆ
ಅಕ್ಕಜಂ ಕೊರ್ವಿ ಜಘನಂ ನಡಿಯ ಬೀಗುತಿರೆ
ತ್ರಿವಳಿ ಬಸುರಿಂ ಪಾರೆ ಪೊಸಬಾಸೆ ಮೆಯ್ದೋರೆ
ಅವಯವಂ ಚೆಲ್ವಾಗೆ ಬಾಹುಯುಗ ದಳವೇರೆ
ಮೊಗವಲರ್ದು ಬೆಳ್ಪಾಗೆ ಮಿಗೆ ಮಾತು ತೆಳ್ಪಾಗೆ
ಬಗಸೆಗಣ್ ಬಿಳುಪಾಗೆ ಕದಪು ಮಿಗೆ ನಯವಾಗೆ
ನವಮಾಸವಾದುದಾಕೆಗೆ ಚೆಲುವು ಮಿಗಿಲಾಗೆ”

ಎಂದು ಗರ್ಭಸ್ಥಿತಿಯ ವರ್ಣನೆಯಲ್ಲಿ ಹರೀಶ್ವರನು ಸ್ತ್ರೀಜನವು ನೈಸರ್ಗಿಕ ಅವಸ್ಥೆಗಳಲ್ಲಿ ಪಡೆಯುವ ರೂಪವ್ಯತ್ಯಾಸವನ್ನು ಎಷ್ಟು ಸೂಕ್ಷ್ಮವಾಗಿ ಗಮನಿಸಿದ್ದಾನೆಂಬುದು ವ್ಯಕ್ತವಾಗುತ್ತದೆ.

ಹರಿಹರನು ತನ್ನ ಕಾಲದಲ್ಲಿ ಕೂಡ ಉತ್ತಮ ಪಂಡಿತನೆಂದು ಖ್ಯಾತಿ ಪಡೆದಿದ್ದನು. ಇತನಿಗೆ ‘ಹರಿಯಣ್ಣ ಪಂಡಿತ’ನೆಂಬ ಹೆಸರೂ ವಾಡಿಕೆಯಲ್ಲಿದ್ದಿತು. ರಗಳೆಗಳಲ್ಲಿಯೂ, ಗಿರಿಜಾಕಲ್ಯಾಣದಲ್ಲಿಯೂ ಹರೀಶ್ವರನು ತನ್ನ ಪಾಂಡಿತ್ಯದಾಳವನ್ನು ಸೂಚಿಸಿದರೂ, ಕಾವ್ಯಾತಃಕರಣಕ್ಕೆ ಅಪವಾದವೆಸೆಯುವ ರೀತಿಯಲ್ಲಿ ಮಾತ್ರ ಪಾಂಡಿತ್ಯಪ್ರದರ್ಶನಕ್ಕೆ ಹೊರಟಿಲ್ಲ. ಸಾಹಿತ್ಯ, ಧರ್ಮ, ಮತಪ್ರಕ್ರಿಯೆಗಳಲ್ಲಿ ಮಾತ್ರವಲ್ಲದೆ ಸಂಗೀತದಲ್ಲಿ ಕೂಡ ಹರೀಶ್ವರನಿಗೆ ಎಂತಹ ಪಾಂಡಿತ್ಯವಿತ್ತೆಂಬುದು ಈ ಕೆಲವು ದೃಷ್ಟಾಂತಗಳಿಂದ ಗೊತ್ತಾಗುತ್ತದೆ. ‘ಗಿರಿಜಾಕಲ್ಯಾಣ’ ದಲ್ಲಿ ಗಿರಿಸುತೆಯನ್ನು “ಮಣಿಗಣಪ್ರಭಾ ಸಂಪುಟಮೆನಿಸಿದ ರನ್ನದೊಟ್ಟಿಲೊಳಗಿರಿಸುತ್ತುಂ

ರಾಗಂಮಿಂಗೆ ಸಪ್ತರ್ಷಿ
ಸ್ತ್ರೀಗಣಮೊಲವಿಂದೆ ಲಲಿತೆ ಬಂಗಾಳಂ ಶ್ರೀ
ರಾಗಂಗಳೊಗೆಯೆ ಪಾಡುತೆ
ತೂಗಿದರಖಿಳಪ್ರಪಂಚವಾಡಿಪ ಶಿಶುವಂ”

ಲಲಿತೆ, ಬಂಗಾಳ, ಶ್ರೀರಾಗಗಳ ಮೇಲೆ ತನಗಿರುವ ಪ್ರೇಮನ್ನು ತೋರಿಸಿದ್ದಾನೆ. ಗಿರಿಜೆಯ ತೊಟ್ಟಿಲು ತೂಗುವಂತಹ ಸಕೋಮಲ ಸನ್ನಿವೇಶಕ್ಕೆ ತಕ್ಕ ಹಾಗೆ ಲಲಿತೆ, ಬಂಗಾಳ, ಶ್ರೀರಾಗಗಳಂತಹ ಸುಕೋಮಲ

ರಾಗಗಳನ್ನೇ ಆಯ್ದಿರುವ ಹರೀಶ್ವರನ ಕಾವ್ಯಾಂತಃಕರಣ ಎಷ್ಟು ಪಕ್ವವಾದು ದೆಂಬುದು ಗೊತ್ತಾಗುತ್ತದೆ. ಪ್ರಭುದೇವರು ಗೊಗ್ಗೇಶ್ವರಾಲಯದಲ್ಲಿ ನುಡಿಸಿದ ಮೃದಂಗ-ಗತಿಗಳನ್ನು ಕವಿಯು ಹೀಗೆ ವರ್ಣಿಸುತ್ತಾನೆ:

"ಅತಿರಸಾಮೃತ ಕಾಂತಿಯುತ, ಸುಖಾಸ್ಪದವೆಂಬ
ನುತಗತಿ ನವೀನಗತಿ ಸರಸಗತಿಯೆಂಬ
ನುಣ್ಗತಿ ಸುಗಂಭೀರಗತಿ ಸಾಂದ್ರಗತಿಯೆಂಬ
ಜಾಣ್ಗತಿ ಮಧುರಗತಿ ಮನೋಹರಗತಿಗಳೆಂಬ
ಸುಗತಿ ಶರ್ವಂಗೆ ಕರ್ಣಾಭರಣಮಾಗುತಿರೆ"

ಈ ಸಂಗೀತಜ್ಞಾನವು ಹರೀಶ್ವರನ ಎಲ್ಲ ಕಾವ್ಯಗಳ ಮೇಲೂ ಸುಗತಿಯ ತಂಜೆಲರನ್ನು ಬೀಸಿದೆ ಎಂದು ಹೇಳಬಹುದು. ಭಾವರಸಗಳಿಗೆ ತಕ್ಕ ಶೈಲಿಯನ್ನು ಜೋಡಿಸಿ ಪ್ರತಿಯೊಂದು ಸನ್ನಿವೇಶವೂ ಹೃದಯಂಗಮವಾಗುವಂತೆ ಮಾಡುವ ಹರೀಶ್ವರನ ಜಾಣ್ಮೆಯ ರಹಸ್ಯವೇ ಇದೆನ್ನಬಹುದು. ಕಿನ್ನರ ಬೊಮ್ಮಯ್ಯನ ವೃತ್ತಾಂತವನ್ನು ಹೇಳುವಾಗ ವಾದ್ಯ ಶಬ್ದಾನುಕರಣವನ್ನು ಹರೀಶ್ವರನು ಚಿತ್ರವತ್ತಾಗಿಯೂ ನೈಸರ್ಗಿಕವಾಗಿಯೂ ಮಾಡಿದ್ದಾನೆ.

"ನೆರೆದು ಬಹುವಿಧವಾದ್ಯವಡಿಸಿ ನೆರೆ ಮೊಳಗಿದವು
ಧಿಮಿಧಿಮಿಕುದುಮುಕುತತ್ತೊಂಗೆಂಬ ಮದ್ದಳೆಯ
ಚಮುಕ ತಕನಕ ತಕನವೆಂಬ ಕಹಳೆಯ ಧ್ವನಿಯ
ನಟಟಹಕು ಘಣಘಣಚ್ಛಿಳಿಲೆಂಬ ಆವುಜೆಯ
ನಟವಿಕಟ ಕಟಕ ಬಿರ್ರೆಂಬ ಕರಡೆಯ ದನಿಯ"

ನಾದ ಮಾಧುರ್ಯದ ಸೊಬಗನ್ನು ಬಲ್ಲ ಹರೀಶ್ವರನು ತನ್ನ ಶೈಲಿಯ ವೈಶಿಷ್ಟ್ಯಕ್ಕಾಗಿ ಅದನ್ನು ಮಾರ್ಪಡಿಸಿಕೊಂಡು, ಹಿರಿಯರ್ಥಮಂ ಕಿರಿಮಾತಿನೊಳ್ ತುಂಬುವ ಗಾರುಡಿಗತನವನ್ನು ವಿಪುಲವಾಗಿ ತೋರಿ ಕೃತಾರ್ಥನಾಗಿದ್ದಾನೆ.

"ಬಸವನ ಗೀತಿ ಗೀತಿ ಬಸವಣ್ಣನ ರೂಪು ರೂಪು ಕೇಳ್
ಬಸವನ ಗಾಡಿ ಗಾಡಿ ಬಸವಣ್ಣನ ಬಂಧುರಕೀರ್ತಿ ಕೀರ್ತಿ ಮೇಣ್ ।
ಬಸವನ ಬುದ್ಧಿ ಬುದ್ಧಿ ಬಸವಣ್ಣನ ಪುಣ್ಯದ ಲೀಲೆ ಲೀಲೆ ಹೋ
ಬಸವನ ರಕ್ಷೆ ರಕ್ಷೆ ಬಸವಣ್ಣನ ಶಿಕ್ಷೆಯ ಶಿಕ್ಷೆ ಲೋಕದೊಳ್ ॥"

ಈ ಎಲ್ಲ ಸಾಧನ ಸಂಪತ್ತನ್ನು ಹರೀಶ್ವರ ಕವಿ ಹೇಗೆ ಉಪಯೋಗಿಸಿಕೊಂಡ, ಅವನ ಕಾವ್ಯಕ್ರಿಯೆಯ ಉದ್ದೇಶವೇನು, ಅವನ ಜೀವನಕ್ಕೂ

ಕಾವ್ಯಕ್ಕೂ ಇರುವ ಸಂಬಂಧವೇನು ಎಂಬುದನ್ನು ವಿವೇಚಿಸುವುದೇ ಮುಂದಿನ ಕರ್ತವ್ಯಭಾಗ.

ಶೈಲಿ, ಪಾಂಡಿತ್ಯ. ಲೋಕಾನುಭವಗಳಿದ್ದರೂ ಕಾವ್ಯಸೃಷ್ಟಿಗೆ ಅವಶ್ಯಕವಾದ ಪ್ರತಿಭೆಯಿಲ್ಲದಿದ್ದರೆ, ಯಾವನೂ ಉತ್ತಮಕಾವ್ಯದ ನಿರ್ಮಾಣ ಕರ್ತೃವಾಗಲಾರ. ಹೊರಗಣ್ಣಿನಿಂದ ಲೋಕವನ್ನೂ, ಅದರ ವ್ಯಾಪಾರವನ್ನೂ ನೋಡಿ ಚಿತ್ರವತ್ತಾಗಿ ವರ್ಣಿಸುವುದು ಒಂದು ರೀತಿ; ಅದೇ ವ್ಯಾಪಾರವನ್ನು ಒಳಗಣ್ಣಿನಿಂದ, ಆದರ್ಶದ ಒಂದು ಪ್ರಸ್ಥಾನದಿಂದೀಕ್ಷಿಸಿ ಜೀವನದ ಅವಿಶ್ರಾಂತ ಪ್ರಗತಿ ವಿಗತಿಗಳನ್ನು ಸಾಧಿಸಿಕೊಳ್ಳುವುದು ಎರಡನೆಯ ರೀತಿ. ಸ್ಥೂಲ ದರ್ಶನಾನುಭವವು ವ್ಯಕ್ತಿ ವ್ಯಕ್ತಿಗೆ ಬದಲಿಸುತ್ತ ಹೋಗುತ್ತದೆ. ಒಬ್ಬನು ಹೇಳಿದ್ದು ಪ್ರಾಯಶಃ ಇನ್ನೊಬ್ಬನಿಗೆ ಸರಿಬರಲಾರದು. ಆದರೆ, ಆತ್ಮೋತ್ಕ್ರಾಂತಿಯ ದೃಷ್ಟಿಯಲ್ಲಿ ಮಾನವನು ಅನುಭವಿಸಿದ ವೇದನೆಗಳು, ಸಂತೋಷಗಳು ಜಗತ್ತಿಗೇ ಮಾನ್ಯವಾಗುತ್ತವೆ. ಜಗತ್ತು ತನ್ನನ್ನು ತಾನು ಕವಿಯ ಕನ್ನಡಿಯಲ್ಲಿ ಒಮ್ಮೆಯಾದರೂ ಕಂಡುಕೊಂಡು 'ನಾನಿನ್ನೂ ಇಲ್ಲೇ ಇರುವಾಗಲೇ ಈತನು ಬಹಳ ಮುಂದೆ ಹೋಗಿದ್ದಾನೆ. ಅವನ ದಾರಿಯ ಜಾಡನ್ನು ನಾನೂ ಹಿಡಿಯಬೇಕು' ಎಂದು ಹವಣಿಸುತ್ತದೆ. ಒಳಗಣ್ಣಿನಿಂದ ಜಗತ್ತನ್ನು ನೋಡಿ ಅದರ ಸುಖವೇ ತನ್ನ ಸುಖ ಎಂಬ ಉನ್ನತ ಆದರ್ಶವನ್ನು ಮುಂದಿಟ್ಟುಕೊಂಡು ಸಾಹಿತ್ಯಕ್ಕೆ ಕೈ ಹಾಕಿದವರಲ್ಲಿ ಹರೀಶ್ವರನು ಒಬ್ಬನು. ಕನ್ನಡ ಕವಿಗಳ ಜೀವನ ಕಥೆಯೆಲ್ಲಾ ಅಂಧಕಾರದಲ್ಲಿರುವುದರಿಂದ ಹರೀಶ್ವರನ ಜೀವನಕ್ಕೂ, ಕಾವ್ಯಕ್ಕೂ ಇರುವ ಸಂಬಂಧವನ್ನು ಸುಲಭವಾಗಿ ಗೊತ್ತುಮಾಡಲು ಸಾಧ್ಯವಾಗುವುದಿಲ್ಲ. ಆದರೆ ಬಸವಣ್ಣನವರ ಭಕ್ತಿಯನ್ನು ವಿವರಿಸುವಾಗ, ಹರೀಶ್ವರನು ತೋರಿಸುವ ಕಳಕಳಿಯೂ, ಶ್ರದ್ಧೆಯೂ ಅವನು ಆ ಕುಲುಮೆಯಲ್ಲಿ ಬಹಳ ಬೆಂದವನೆಂದು ದೃಢಪಡಿಸುತ್ತದೆ.

ಹರೀಶ್ವರನು ರಚಿಸಿರುವ ಮಹಾನುಭಾವರ ಜೀವನ ಚರಿತ್ರೆಗಳಲ್ಲಿ ನಾವು ಎರಡನ್ನೇ ಈಗ ಚರ್ಚಿಸಬೇಕಾಗುತ್ತದೆ. ಒಂದು ಪ್ರಭುದೇವರ ರಗಳೆ, ಇನ್ನೊಂದು ಬಸವರಾಜದೇವರ ರಗಳೆ. ಇಬ್ಬರೂ ಕನ್ನಡ ಸಮಾಜವನ್ನು ಅಂಧಕೂಪದಿಂದೆತ್ತಿದ್ದ ಮಹಾ ಪುರುಷರು. ಇಬ್ಬರು ಮುಸುಕಿನೊಳಗಡಗಿದ್ದ ಧರ್ಮಸಿಂಹವನ್ನು ಹೊರಗೆಳೆದು ಅದರ ಗರ್ಜ

ನೆಯು ಅಷ್ಟದಿಕ್ಕುಗಳಿಗೂ ಹರಡುವಂತೆ ಮಾಡಿದ ಮಹಾವೀರರು. ಇಬ್ಬರೂ ಸುಪ್ತ ಜನಾಂಗವನ್ನು ಜಾಗೃತಗೊಳಿಸಿ ರೂಢಿಬದ್ಧ ಆಚರಣೆಗಳ ಮಾಟದಿಂದ ಅದನ್ನು ಉದ್ಧಾರ ಮಾಡಿದ ಸೀಮಾಪುರುಷರು. ಹರೀಶ್ವರನು ಅವರಿಬ್ಬರ ಜೀವನವನ್ನು ಭಕ್ತಿಯಿಂದಲೂ, ಶಕ್ತಿಯಿಂದಲೂ ನಿರ್ವಹಿಸಿದ್ದಾನೆ.

ಪ್ರಭು, ಬಸವೇಶ್ವರ ಇವರಿಬ್ಬರ ಜೀವನಧ್ಯೇಯ ಒಂದೇ ಆಗಿದ್ದರೂ ಮಾರ್ಗ ಒಂದೇ ಆಗಿರಲಿಲ್ಲ. ಭವಿಯಾಗಿ ಹೋಗಿದ್ದ ಸೊನ್ನಲಿಗೆ ಸಿದ್ಧ ರಾಮಣ್ಣನವರು ಕಟ್ಟಿಸುತ್ತಿದ್ದ ಪಶುಪತಿಯ ದೇವಾಲಯದ ಮುಂದೆ ನಿಂತು ಕೆಲಸಗಾರರಿಗೆ 'ಹೋಗಿ ಕರೆಯಿರಿ ನಿಮ್ಮ ಒಡ್ಡರಾಮನನ್ನು' ಎಂದು ಮೂದ ಲಿಸಿ ಹಂಗಿಸಿ ಹೇಳುವ ದಾರಿ ಪ್ರಭುವಿನದು. ಕಿನ್ನರಯ್ಯಗಳು ಮುನಿದು ಹೋದರೆಂದು ಕೇಳಿದ ಬಸವಣ್ಣ 'ಮರವಟ್ಟು ಹಂಬಲಿಸಿ ಹಲುಬಿ ಘನತಾಪ ಮನಮಂ ನಟ್ಟುನೊಂದು ಮನಗುಂದಿ ತನುಕುಂದಿ ಮಿಗೆ ಮಿಗೆ ಕೋಡಿ ಬಂದ ಸುಕೃತಂ ತಿರುಗಿ ಹೋಯ್ತೆಂದು ನೆರೆಬಾಡಿ' ಬಸವಳಿಯುತ್ತಾನೆ. ಇದಕ್ಕೆ ಕಾರಣ ಪರಶಿವನಿಂದ ಆಜ್ಞಪ್ತನಾಗಿ ಭವಿಗಳ ಉದ್ಧಾರಕ್ಕೂ, ಮಾಯೆ ಯನ್ನು ಜಯಿಸುವುದಕ್ಕೂ ಭೂಮಿಗೆ ಬಂದವನು ಅಲ್ಲಮನು, ಪರಶಿವನಿಂದ ಶಾಪಗ್ರಸ್ತನಾಗಿ ಬಂದವನು ಬಸವೇಶ್ವರನು. ಸ್ವಭಾವವಾಗಿಯೇ ಅಲ್ಲಮ ನಲ್ಲಿ ಔನ್ನತ್ಯದ ಹಮ್ಮೂ ಬಸವಣ್ಣನಲ್ಲಿ ದೈನ್ಯದ ಹೃದಯಂಗಮತೆಯೂ ಕಂಡು ಬರಬೇಕಷ್ಟೆ! ಈ ಅಂಶವನ್ನು ಹರೀಶ್ವರನು ಬಹಳ ಚೆನ್ನಾಗಿ ಗ್ರಹಿಸಿದ್ದಾನೆ. ಪ್ರಭುವು ಮೊದಲಿನಿಂದಲೂ ದಿಗ್ವಿಜಯಕ್ಕೆ ಹೊರಟಿದ್ದಾನೆ. ತನ್ನ ಮೃದಂಗ ವಾದನವಿದ್ಯಾನೈಪುಣ್ಯದಿಂದ ಅರಸುಮಗಳನ್ನು ಮರುಳು ಮಾಡಿದ ಅಲ್ಲಮ ಕೊನೆಗೆ ಅವಳ ಮನವನ್ನು ಸೆಳೆದು, ಅವಳಲ್ಲಿ ಅನುರಕ್ತಿ ಪಡೆದು ಕೆಲವು ದಿವಸ ಸುಖವಾಗಿದ್ದು ಬಿಡುತ್ತಾನೆ. ಹೀಗೆ ಕೆಲವುಕಾಲ ಕಳೆ ಯಲು, ಕಂತುಹರ ತಾನು ಅಲ್ಲಮನನ್ನು ಲೋಕಕ್ಕೆ ಕಳುಹಿಸಿದ ಉದ್ದೇಶ ವನ್ನು ಜ್ಞಾಪಿಸಿಕೊಡು ಕಾಮಲತೆಯನ್ನು ಕೊಂಡೊಯ್ಯುತ್ತಾನೆ. ಅಲ್ಲಮ ನಿಗೆ ಹುಚ್ಚು ಹಿಡಿದಂತಾಗುತ್ತದೆ. ಕಾಮಲತೆಯ ವಿರಹವೇದನೆಯಲ್ಲಿ ತೊಳಲುತ್ತಿರುವಾಗ್ಗೆ 'ವೃಷಭಾಂಕಿತ ಶಿವಾಲಯ'ವೊಂದು ಭೂಮಿಯಲ್ಲಿ ಕಂಡುಬರುತ್ತದೆ. ಅದನ್ನು ಅಗೆಯಿಸಿ 'ಅರಸಂ ಹರುಷದಿಂದೊಲ್ದು ಬಲ

ವೆಂದು ರಾಗದಿಂ ದೇವಾಲಯದ ಬಾಗಿಲೊಳ್ನಿಂದು ಕದವ ತೆರೆದೊಳಪೊಕ್ಕು ನೋಡಲಾರ್ಪವರುಂಟೆ' ಎಂದು ಯೋಚಿಸುತ್ತಿರಲಾಗಿ ಕಾಮಲತೆಯನ್ನು ನೀಗಿಕೊಂಡು ಜೀವದ ಮೇಲಣ ಆಸೆಯನ್ನು ಬಿಟ್ಟಿದ್ದ ಅಲ್ಲಮನು

"ಭೋಂಕನೊಳಪೊಕ್ಕು ಲೋಕವಾರ್ತೆಯು ನೆರೆ ಮರೆದು।
ಬಗೆಬೇರೆ ಪೊಸತಾಗೆ, ಗಳಗಳನೆ ನಡೆತಂದು।
ಪುಗುತಂ ಮಹಾಲಿಂಗದಂಘ್ರಿಗೆರಗುತ್ತಂ."

ಇಲ್ಲಿ ಅಲ್ಲಮನ ಜೀವನವು ಬದಲಿಸುತ್ತದೆ. ಮಾಯೆ ಹರಿದು ತನ್ನ ಕಾರ್ಯ, ಪ್ರಭುವಿನ ಅಣತಿ ಸ್ಮರಣೆಗೆ ಬರುತ್ತವೆ. ಅಲ್ಲಿಂದ ಮುಂದೆ ಹೊರಟು ಬಸವೇಶ್ವರ, ಮಹಾದೇವಿಯಕ್ಕ, ಸಿದ್ಧರಾಮಣ್ಣ, ಮೊದಲಾದ ಭಕ್ತರನ್ನು ಅನುಗ್ರಹಿಸಿ ಶಿವನನ್ನು ಸೇರಿ ಅವನ ಗಣಗಳಲ್ಲಿ ಸ್ಥಾನವನ್ನು ಪಡೆಯುತ್ತಾನೆ.

ಬಸವೇಶ್ವರನ ಜೀವನ ವೃತ್ತಾಂತವನ್ನು ಎಷ್ಟು ವಿಸ್ತರಿಸಿ ಚಿತ್ತಾಕರ್ಷಕವಾಗಿ ಹರೀಶ್ವರನು ಮಾಡಿದ್ದಾನೆ ಅಷ್ಟು ಶ್ರಮೆಯನ್ನು ಪ್ರಭುವಿನ ವಿಚಾರ ಅವನು ವಹಿಸಲಿಲ್ಲ. ಪ್ರಭುವು ತನಗೆ ಬಹಳ ಪೂಜ್ಯನೆಂದು ಅವನ ಚರಿತ್ರೆಯನ್ನು ವಿಸ್ತರಿಸಲಂಜಿಬಿಟ್ಟನೋ, ವಿಮುಕ್ತ ಜೀವನವನ್ನು 'ಗಿರಿಜಾಕಲ್ಯಾಣ'ದಲ್ಲಿ ತೋರಿಸಿದ್ದುದರಿಂದ ಈಗೇಕೆ? ಎಂದು ದ್ವಿರುಕ್ತಿ ಭಯದಿಂದ ಬಿಟ್ಟನೋ ತಿಳಿಯದು. ಅಂತೂ 'ಬಸವರಾಜದೇವರ ರಗಳೆ'ಯಲ್ಲಿರುವ ಕಲಾಶೋಭೆ 'ಪ್ರಭುದೇವರ ರಗಳೆ'ಯಲ್ಲಿ ಕಾಣಬರುವುದಿಲ್ಲ.

'ಬಸವರಾಜ ದೇವರ ರಗಳೆ' ಎಲ್ಲಾ ದೃಷ್ಟಿಯಿಂದಲೂ ಉತ್ತಮ ಕಾವ್ಯವಾಗಲಿಕ್ಕೆ ಹರಿಹರನ ದೃಷ್ಟಿಯೇ ಕಾರಣ. ಮೊದಲೇ ಹರೀಶ್ವರನು ಬಸವಣ್ಣನವರನ್ನು ಮಹಾನುಭಾವರೆಂದು ಒಪ್ಪಿಕೊಂಡು ನಾಲ್ಕು ಮಾತಿನಲ್ಲಿ ಅವರ ಕಥೆಯನ್ನು ಮುಗಿಸಿ ಬಿಡಬೇಕಾಗಿತ್ತು. ಆದರೆ, ಆ ಸುಲಭ ಮಾರ್ಗಕ್ಕಿಂತಲೂ ಬಸವಣ್ಣನವರು ಮಹಾನುಭಾವರಾದ ರೀತಿಯನ್ನು ತೋರುವ ಕಠಿಣಮಾರ್ಗವನ್ನು ಅನುಸರಿಸುವುದರಲ್ಲಿ ಹರೀಶ್ವರನು ಹೆಚ್ಚು ವಿಶ್ವಾಸ ತೋರಿಸಿದ್ದಾನೆ. ಶಶಿಧರನ ಸಿರಿಮುಡಿಗೆ ಬೇಕೆಂದು ತಂದಿತ್ತ ಒಬ್ಬ ಮಾಲೆಕಾರನ ಕಂಪುಳ್ಳ ಸಂಪಿಗೆಯ ಪೂಗಳನ್ನು ಶರಣತತಿಗೀಯುತ ಕಾರ್ಯದಲ್ಲಿ

ಅತ್ಯುತ್ಸಾಹದಿಂದ ಉದ್ಯುಕ್ತನಾದ ವೃಷಭಮುಖನು ಪ್ರಸಾದವನ್ನು ಎಲ್ಲರಿಗೂ ಹಂಚಿ ಕುಮಾರಸ್ವಾಮಿಯನ್ನೇ ಮರೆಯುತ್ತಾನೆ. ಸ್ವಾಮಿಯು ಕೇಳಲು, ಕೊಟ್ಟೆನೆಂದು ತಪ್ಪಿ ನುಡಿಯುತ್ತಾನೆ. ಮಗನ ಕರುಣಾಸ್ಯಮಂ ಚಂದ್ರಚೂಡಂ ಕಂಡು ವಿಮಳಶಿಶುವಿಗೆ ಪುಸಿನುಡಿದ ದೋಷಕ್ಕೆ ಧರಣಿಯೊಳು ಪುಟ್ಟೆಂದು ಬೆಸಸುವನು. ಆ ಪ್ರಕಾರ ವೃಷಭಮುಖನು ಬಾಗೇವಾಡಿಯಲ್ಲಿ ಮಾದಿರಾಜನ ಸತಿಯಾದ ಮಾದಾಂಬೆಯ ಗರ್ಭದಲ್ಲಿ ಬಸವನೆಂಬ ಅಭಿದಾನಮಂ ಕೂಡಿ ಹುಟ್ಟುತ್ತಾನೆ. ಬಸವನ ಬಗೆಬಗೆಯ ಬಾಲಲೀಲೆಯಲ್ಲಿ ಅವನ ತಂದೆತಾಯಿಗಳು ಹಿಗ್ಗುತ್ತಿರುವಂತೆ 'ಪಲವು ಕಾರಣದಿಂ ಮರ್ತ್ಯಲೋಕದೊಳ್ ಪುಟ್ಟಿದ ಗಣೇಶ್ವರನನ್ನು ಬಸವರಾಜರಿಗೆ ತಾಯ್ತಂದೆಗಳಿಲ್ಲೆಂಬುದನರಿಪುವಂತೆ ಶಿವಭಕ್ತನುಮಂ ಶಿವಭಕ್ತೆಯುಮಂ ಶಿವನಾಜ್ಞೆಯಿಂ ಕೈಲಾಸಕ್ಕೆ ಕೊಂಡೊಯ್ಯೆ' ಬಸವರಾಜನು ಹದಿನಾರು ಸಂವತ್ಸರದ ತನಕ ಶಿವಭಕ್ತಿ ಮುತ್ತಂತಿರ್ದ ಮುತ್ತಬ್ಬೆಯ ಪಕ್ಕದೊಳ್ ಬೆಳೆಯುತ್ತಾನೆ. ಹೀಗೆ ಬೆಳೆಯುತ್ತಿರುವಾಗಲೇ 'ಜನನದ ಬಳಿವಿಡಿದೆಂತಕ್ಕೆ ಬಂದ ಜವ್ವನಂ ಶಿವಪೂಜೆಯಲ್ಲಿ ಸವೆಯವೇಳುಂ' ಎಂದುಕೊಂಡು ಕರ್ಮಲತೆಯಂತಿರ್ದ ಜನ್ನಿವಾರಮಂ ಕಳೆದು ಬಿಸುಟು ಹೋತಿನ ಗಂಟಲಂ ಬಿಗಿವಂತಿರ್ದ ಮೌಂಜಿಯಂ ಪರಿದು ಬಿಸುಟು ನವ್ಯದುಕೂಲಮಂ ತೆಗೆದುಟ್ಟು ದಿವ್ಯವಸ್ತ್ರಮಂ ಪೊದೆದು, ಮನೆನೆಳಲಂ ನೆನೆಯದೆ ಅರ್ಥಮಂ ಲೆಕ್ಕಿಸದೆ ವೃತ್ತಿಯಂ ವಿಚಾರಿಸದೆ ಬಂಧುಗಳಂ ಬಗೆಯದೆ, ಪುರಜನಮಂ ಪರಿಕಿಸದೆ ಹರಭಕ್ತಿಯೊಳಾತುರದಿಂ ಬಾಗೆವಾಡಿಯಿಂ ಪೊರಮಟ್ಟು ಕೂಡಲ ಸಂಗಮೇಶ್ವರನಿಪ್ಪ ಕಪ್ಪಡಿಸಂಗಮಕ್ಕೆ ಬರುತ್ತಾನೆ. ವೈರಾಗ್ಯದ ಪ್ರವೃತ್ತಿ ಇಲ್ಲೇ ಚೆನ್ನಾಗಿ ಮೊಳಕೆಯಿಟ್ಟಿದೆ. ಬ್ರಾಹ್ಮಣ ಲಾಂಛನಗಳನ್ನು ಕರ್ಮಲತೆಯೆಂದು ಗ್ರಹಿಸುವಷ್ಟು ಜ್ಞಾನದ ಕುಡಿಯೊಡೆದಿದೆ. ಆದರೆ, ಈ ಜ್ಞಾನಭಾಸ್ಕರನ ಉದಯಕ್ಕೆ ಕಾರಣಕರ್ತನಾರು ?—ಸಹಜಗುಣದ ಸ್ಫೋಟನವೇ, ಇಲ್ಲವೆ ರೂಢಿಯಾಚರಣೆಯ ಬಗ್ಗೆ ಹುಟ್ಟಿದ ಅಮಾನುಷವಿಕರ್ಷವೇ ಎಂಬುದನ್ನು ಕವಿ ಸ್ಪಷ್ಟಗೊಳಿಸಿಲ್ಲ. ಆದರೆ, ಈಗಾಗಲೇ ಬಸವರಾಜನ ಮನಸ್ಸಿನಲ್ಲಿ ತುಮುಲವಾದ ವಿಪ್ಲವ, ಅಶಾಂತಿ, ದುಃಖ ಹುಟ್ಟಿದೆ. ಕಪ್ಪಡಿಸಂಗಮಕ್ಕೆ ಬಂದವನೇ 'ಶಂಕರಾಲಯಮಂ ಭೋಂಕನೆ ಕಂಡು ಪೂರ್ವಸ್ಮರಣೆ ಕೈಗೂಡಿ ಕಣ್ ಬಂದಂತೆ ಉಸಿರ್ ಬಂದಂತೆ

ಪರಿತಂದು ರಂಗಮಂಟಪದೊಳು ದೊಪ್ಪನೆ ಬಿದ್ದಂತಕ್ಕೆದ್ದು ನಿಂದು—'ದೇವ ದೇವ, ಅನಾಥನಾಥ, ಅನಿಮಿತ್ತ ಬಂಧುವೆ, ತಾಯ್ತಂದೆ ಬಂಧು ಬಳಗವೆ, ಕುಲವೆ, ಬಲವೆ, ಛಲವೆ, ತವರೆ, ಕಣ್ಣೆ, ಗತಿಯೆ, ಮತಿಯೆ, ಪುಣ್ಯವೆ, ಪ್ರಾಣವೆ, ಕಾವುದುಕಾವುದೆಂಬೆ' ಎಂದು ಮೊರೆಯಿಡಲು ಶಿವನು ಕನಿಕರಿಸಿ ಬಿಜಯಂಗೈದು ಬಸವನನ್ನು ಸಮಾಧಾನಗೊಳಿಸಿ ಈಶಾನ್ಯಗುರುಗಳೆಂಬ ಸ್ಥಾನಪತಿಗಳನ್ನು ಅನುಗ್ರಹಿಸುತ್ತಾನೆ. ಶಿವನ ಅನುಗ್ರಹದಿಂದ ಬಸವಣ್ಣನಿಗೆ ಗುರುಗಳಲ್ಲಿ ದೊರಕಿವರೆಂಬ ಭಾವವನ್ನು ಕವಿಯು ಹೇಳಹೊರಟಿದ್ದಾನೆ.

ತನ್ನೊಂದಿಗೆ ಹುಟ್ಟಿದ ವೈರಾಗ್ಯ ಬುದ್ಧಿಗೆ, ಕರ್ಮಲತೆಯ ನಿರಾಕರಣದ ಪ್ರಚೋದನ ದೊರೆತದ್ದು ಮಾತ್ರವಲ್ಲದೆ, ಗುರುಲಾಭವೂ ಆಗಿ, ಬಸವಣ್ಣನ ಭಕ್ತಿ ಉಜ್ಜಲಕಾಂತಿಯಿಂದ ಮಿರುಗಲಾರಂಭಿಸುವುದು. ಶಿವ ಸಾಯುಜ್ಯವನ್ನು ಪಡೆಯುವ ಹಂಬಲ ತಾನೇತಾನಾಗಿ ಬೆಳೆಯುವುದು. ಪ್ರಭಾತಸಮಯಕ್ಕೆ ಮುನ್ನವೇ ಎದ್ದು ಭಸಿತೋದ್ಧೂಳನಂ ಮಾಡುತಂ ಸಂಗಂಗೆ ಸಾಷ್ಟಾಂಗದಿಂದಲ್ಲಿ ದಿನಾಚರಣೆಯು ಆರಂಭವಾಗುವುದು. ಎಷ್ಟು ಬಗೆಯ ಹೂಗಳನ್ನು ಸಂಗ್ರಹಿಸಿ ಸಂಗನನ್ನರ್ಚಿಸಿದರೂ ತೃಪ್ತಿಯಿಲ್ಲ. ಸಂಗಂಗೆ ಎಷ್ಟು ಅಲಂಕಾರಮಾಡಿ ನೋಡಿದರೂ ಕಣ್ದಣಿಯುವಂತಿಲ್ಲ.

"ಪೂಜೆಯಂ ನೋಡಿ ಮೆಚ್ಚುವೆ ಪೂಜೆಯಂ ಮಾಡಿ
ಓಜೆಗೆಟ್ಟುರುಹುಗೆಟ್ಟತಿಲಲ್ಲೆಯಂ ಮಾಡಿ
ನಯನಂಗಳೊಳು ಪೂಜೆ ಬರೆದಂತೆ ನೋಡುತಂ
ಭಯಭಕ್ತಿಯಿಂ ಪೂಜೆ ಮೆರೆವಂತೆ ಮಾಡುತಂ
ಚಿತ್ತದೊಳು ಪೂಜೆಯುಚ್ಚೊತ್ತಿದಂತರ್ಚಿಸುತೆ
ಚಿತ್ತದೊಳು ಪೂಜೆ ಪುಟ್ಟಿರ್ದಂತೆ ಈಕ್ಷಿಸುತೆ"

ನಾನಾಬಗೆಯ ನವಶಾಕಪಾಕಂಗಳಂಬಡಿಸಿ, ನವಮಧುರ ರಸವೊಸರ್ವ ಪಕ್ವಾನ್ನಮಂ ಬಡಿಸಿ 'ದೇವ ಚೆನ್ನನ ನಿಧಿಯೆ ಆರೋಗಿಸೆಲೆ ಸಂಗ' ಎಂದು ಉಪಚರಿಸುತ್ತಾ ಮೃದು ಮೃದಂಗ ಕಹಳಾರವವಂ ಮಾಡುತ್ತೆ ಕರ್ಪುರದ ವೀಳೆಯವನೀಯುತ್ತೆ

"ಎನ್ನನತಿಕರುಣದಿಂ ನೋಡು ಕೂಡಲಸಂಗ
ಎನ್ನ ಮನಪಕ್ಕದೊಳು ಕೂಡು ಕೂಡಲಸಂಗ

ಎನ್ನ ಕಣ್ಣೊಳಗೆ ಪರಿದಾಡು ಕೂಡಲಸಂಗ
ಎನ್ನ ಮನದೊಳಗೆ ಕುಣಿದಾಡು ಕೂಡಲಸಂಗ"

ಎಂದು ಪ್ರಾರ್ಥಿಸುತ್ತಾನೆ. ಸಾಮಾನ್ಯಮಾನವರಿಗೆ ಯಾವುದು ಕೇವಲ ಒಂದು ಕಲ್ಲೋ ಅದು ಬಸವಣ್ಣನವರಿಗೆ 'ನೀನೆ ತಂದೆ ತಾಯಿ ಗತಿ ಮತಿ' ಎಂದು ಹೇಳಿಸಿಕೊಳ್ಳುವಷ್ಟು ಜೀವಂತವಾದ ಶಕ್ತಿಸ್ವರೂಪು. ತನುಮನಗಳನ್ನು ಪೂಜೆಯಲ್ಲಿ ಲೀನಮಾಡಿ ಬಸವಣ್ಣನವರು ತಮ್ಮ ಇರವನ್ನೇ ಸಂಪೂರ್ಣವಾಗಿ ಮರೆತುಬಿಡುತ್ತಾರೆ. ಕವಿ ಅದನ್ನೇ ಬಹಳ ಸೂಕ್ಷ್ಮವಾಗಿ 'ನಯನಂಗಳೊಳು ಪೂಜೆ ಬರೆದಂತೆ ನೋಡುತಂ' ಎಂದು ಹೇಳಿದ್ದಾನೆ. ಶಿವಭಕ್ತಿ ಭಾವವು ಬಸವಣ್ಣನವರ ದೇಹಮನಸ್ಸುಗಳೆರಡನ್ನೂ ಸಂಪೂರ್ಣವಾಗಿ ಆಚ್ಛಾದಿಸಿ ಬಿಡುತ್ತದೆ. ಈ ಸಮಯದ ಅವರ ಸ್ಥಿತಿಯನ್ನು ಹರೀಶ್ವರ ಕವಿಯು ಹೀಗೆ ವರ್ಣಿಸಿದ್ದಾನೆ.

"ಭವದಿಂದ ಹಿಂಗುತಂ ನೆನಹಿಂದ ಹಿಗ್ಗುತಂ
ಬೆವರುತಂ ಬಿಕ್ಕುತಂ ತೇಗುತಂ ತೂಗುತಂ
ಕ್ರಮವಳಿದು ಸುಳಿದು ಸುಖಿಯಾಗುತಂ ಬೀಗುತಂ
ನಮಿಸುತಂ ಕಂಪಿಸುತೆ ಮನವೊಲಿದು ಹೊಗಳುತಂ
ಪುಳಕಂಗಳಿದಿರೇರೆ ಸುಖಜಲಂ ಕಣ್ತೀವೆ
ಬೆಳೆವ ಗದುಗದವಲರೆ ಭಕ್ತಿ ಚಿತ್ತಮನೋವೆ
ಕಂಪಿಸುತೆ ನಡೆಯುಡುಗೆ ಮನವಕ್ಕರಿಂ ಕರಗೆ
ಜೊಂಪಿಸುತೆ ತನು ಜೋಲೆ ಸಾತ್ತ್ವಿಕರಸಂ ಮಸಗೆ
ಮಣಿಮಣಿದು ಕುಣಿಕುಣಿದು ಕೆಲೆಕೆಲೆದು ನಲಿದಾಡಿ
ತಣಿತಣಿದು ತಕ್ಕೈಸಿ ಮಿಕ್ಕು ಮುಲೆಮುಲೆದಾಡಿ

* * *

ಈಸಾಡಿ ಗಂಗಾಧರನ ಚರಣಮಂ ಪಿಡಿದು
ಲೇಸಾಗಿ ಚಿತ್ತದೊಳು ಸಂಗನಂ ನೆರೆಪಿಡಿದು
ಮನದೊಳಚ್ಚೊತ್ತಿ ಸುಖಮೂರ್ಛೆಯೊಳ್ ಸಂದಿರ್ದು
ಘನಸುಖದೊಳೆರಡಿಲ್ಲದೊಂದಲ್ಲದಿರುತಿರ್ದು
ನೆನೆದು ಚೇತರಿಸಿ ಮೆಲ್ಲನೆ ಮೆಲ್ಲನೆಚ್ಚತ್ತು
ಅನುಪಮಶಿವೈಕಸುಖಮುಖತೃಪ್ತಿಯಂ ಹೊತ್ತು

ಕಣ್ದೆರೆದು ಕುಳ್ಳಿರ್ದು ಸಂಗನಂ ನಡೆ ನೋಡಿ
ನುಣ್ದನಿಯೊಳರ್ಚನೆಯ ನೇಹಮಂ ಮಾತಾಡಿ

ಉಡುವಲ್ಲಿ ಉಂಬಲ್ಲಿ, ಕೊಡುವಲ್ಲಿ, ಪೊದೆವಲ್ಲಿ, ನಡೆವಲ್ಲಿ ನುಡಿವಲ್ಲಿ ಸಂಗ ಶರ ಣೆಂದೆನುತೆ, ಸಂಗನಾಮಂಗಳಂ ಪುರಜನಕೆ ಕಲಿಸುತಂ

ಶಿವಪೂಜೆಯೊಳಗೆ ಪುಟ್ಟಿದ ಸುಧಾಕರನಂತೆ
ಭವಪೂಜೆ ಬಲಿದು ಪುರುಷಾಕಾರವಾದಂತೆ
ಲಿಂಗ ಜಂಗಮವೊ ಮೇಣ್ ಜಂಗಮವೆ ಲಿಂಗವೋ
ಲಿಂಗಜಂಗಮವೆರಡು ಇಳೆಯೊಳು ವಿಭೇದವೋ
ಎಂಬಂತೆ ಸಾತ್ತ್ವಿಕಪ್ರಭುಪೂಜಿಸುತ್ತಮಿರೆ"

ಸಂಗದೇವಂ ಪ್ರಸನ್ನನಾಗಿ 'ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಪೋಗು' ಎಂದು ಕನಸಿನೊಳ್ ನುಡಿಯುವನು. ಈ ಭಕ್ತಿಗೆ—ಈ ನಿಸ್ಸೀಮ ಆತ್ಮಾರ್ಪಣಕ್ಕೆ—ಈ ಪ್ರೇಮಪಾರವಶ್ಯಕ್ಕೆ ಕಟ್ಟುಬೀಳದ ದೇವನಾವನು ? ಒಂದೊಂದು ಅನುಭವವನ್ನು ಪಡೆಯುತ್ತಾ ಬಸವಣ್ಣನವರು ಅನಪೇಕ್ಷಿತವಾಗಿಯೇ ಶಿವಸಾಯುಜ್ಯದ ಕಡೆಗೆ ತೆರಳುತ್ತಿದ್ದರೆಂಬಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಕಾರಣಪುರುಷರಾಗಿ ಭವಿಗಳ ಉದ್ಧಾರಕ್ಕೆ ಪುಟ್ಟಿದ ವಿಮುಕ್ತರಿಗೆ ಮುಕ್ತಿಯ ವೇಳೆ ಮಾತ್ರ ದೊರೆಯಲಿಲ್ಲ. ಈ ಅನುಭವವೃತ್ತಾಂತವನ್ನು ಮುಗಿಸಿ ಕವಿಯು 'ಹರಕರುಣೋದಯಮಾದಂತರುಣೋದಯಮಾಗೆ' ಎನ್ನುವಾಗ ಪುಳಕದೊಂದಿಗೆ ನಮ್ಮ ಕಣ್ಣುಗಳಲ್ಲಿ ಆನಂದಭಾಷ್ಪಗಳುದುರುತ್ತವೆ. ಮುಂದೆ ಹರೀಶ್ವರನು ತಡೆಯಲಾರದೆ ಉಕ್ಕಿಬರುವ ಆನಂದದಿಂದ 'ಎಲೆ ಬಸವ ಬಸವಣ್ಣ ಬಸವಯ್ಯ ಬಸವರಸ ಬಸವರಾಜ ಬಸವದೇವ, ಕೇಳಯ್ಯಾ! ನಿನ್ನ ನೇಮವಿದಾರ್ಗುಂಟು ಗುರುಲಿಂಗದೊಳೆರಡಲ್ಲದಿಪ್ಪೆ . . ಈಶನ ಮೀಸಲಪ್ಪ ಭಕ್ತ, ನಿನಗೆಣೆಯಿಲ್ಲ ಪಡಿಯಿಲ್ಲ ಪಾಸಟಿಯಾವಂ? ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಗಣಪರ್ವಂಗಳಂ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ, ನಿನ್ನ ದೆಸೆಯಿಂ ದೆಮ್ಮ ಭಕ್ತಿಬಣ್ಣವೇರಿತು' ಎಂದು ಹೇಳುವ ನುಡಿಗೆ ನಾವೂ ದನಿಸೇರಿಸುತ್ತೇವೆ. ಒಮ್ಮೊಮ್ಮೆ 'ಕಾರಣಿಕನಾಗಿ ಏಕೆ ಪುಟ್ಟಿದೆ ತಂದೆ, ನಮಗಾಗಿ ಇನಿತು ಕಷ್ಟವನೇಕೆ ಸಹಿಸುವೆ ಬಸವರಾಜ' ಎಂದು

ಹಲಬುವಂತಾಗುತ್ತದೆ. ಹರೀಶ್ವರನ ಕಲಾಕೃತಿಯು ಮುತ್ತಿನ ಮಂಟಪವೇ ಈ ಸಾಧನಾ ಚಿತ್ರವೆಂದಲ್ಲಿ ತಪ್ಪಾಗದು. ಬಸವಣ್ಣನವರ ಪ್ರತಿಯೊಂದು ಹೆಜ್ಜೆಯೂ ಅನುಕರಣೀಯವೆಂಬ ಪೂರ್ಣಪ್ರೇಮದಿಂದಲೇ ಹರೀಶ್ವರನು ಅದನ್ನು ಅನುಕರಣೀಯವಾಗಿ ಚಿತ್ರಿಸಿದ್ದಾನೆ.

ಸಂಗಮೇಶ್ವರನ ದರ್ಶನಲಾಭವು ಬಸವೇಶ್ವರನಿಗೆ ದೊರೆಯುವುದು. ದರ್ಶನಾನಂತರ ಬಸವಣ್ಣನವರ ಜೀವನಲ್ಲಿ ಯಾವ ಮಾರ್ಪಾಡು ಹುಟ್ಟುತ್ತದೆಯೆಂಬುದು ಸ್ವಾರಸ್ಯವಾದ ಸಂಗತಿ. ಬಿಜ್ಜಳರಾಯನಲ್ಲಿ ಮಂತ್ರಿ ಪದವಿಯೂ ದೊರೆಯುತ್ತದೆ. ಅದೇ ಸಮಯದಲ್ಲಿ ಅವರು ಅನೇಕ ಪವಾಡಗಳನ್ನು ಮೆರೆದು ಲೋಕವಿಖ್ಯಾತರಾಗುತ್ತಾರೆ. ಶರಣಸಂಕುಲವೆಲ್ಲ ಅವರ ಆಶ್ರಯದಲ್ಲಿ ವರ್ಧಿಸುತ್ತದೆ. ಲೌಕಿಕವಾದ ಎಲ್ಲ ಸಂಪತ್ತೂ ಬಸವಣ್ಣನವರದೇ ಆದರೂ 'ಎಲೆ ಎಲೆ ಮಾನವ, ಅಳಿಯಾಸೆ ಬೇಡಲೋ, ಕಾಡ ಬೆಳದಿಂಗಳ ಸಿರಿಯು ಸ್ಥಿರವಲ್ಲ. ಕೇಡಿಲ್ಲದ ಪದವಿಯ ಕೊಡಲು, ಕೂಡಲ ಸಂಗಮದೇವನ ಮರೆಯದೆ ಪೂಜಿಸು' ಎನ್ನುವ ಮನೋಭಾವದಲ್ಲಿ ಯಾವ ವ್ಯತ್ಯಾಸವೂ ಬರುವುದಿಲ್ಲ. ಸಂಗನ್ನಿತ್ತುದನ್ನು ಶರಣರಿಗೀಯುವುದೊಂದನ್ನಲ್ಲದೆ ಬೇರೆ ಯಾವ ಸಂಬಂಧವನ್ನೂ ಬಸವಣ್ಣನವರು ಕಾಣರು. ಧನಕ್ಕೆ ಯಾವ ಬೆಲೆಯನ್ನಿತ್ತಿದ್ದರೆನ್ನುವುದಕ್ಕೆ ಈ ವಚನವೇ ಸಾಕು, 'ಕಾಂಚನವೆಂಬ ನಾಯ ನೆಚ್ಚಿ, ನಿಮ್ಮ ನಾನು ಮರೆದೆನಯ್ಯಾ! ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆ ಇಲ್ಲ. ಹಡಿಕಿಗೆ ಮೆಚ್ಚಿದ ಸೊಣಗನು ಅಮೃತದ ರುಚಿಯ ಬಲ್ಲುದೆ ಕೂಡಲಸಂಗಮದೇವಾ.' ಜಾತಿ, ಮತ, ಕುಲಗೋತ್ರಗಳ ಮತ್ತ ದರ್ಪಕ್ಕೆ ಮಣ್ಣುಗಾಣಿಸುವುದನ್ನು ಬಸವಣ್ಣನವರು ತಮ್ಮ ಜೀವನ ಧ್ಯೇಯವನ್ನಾಗಿ ಮಾಡಿಕೊಂಡರು. ತಾವು ಬ್ರಾಹ್ಮಣಕುಲದಲ್ಲಿ ಹುಟ್ಟಿದ್ದರೂ ಒಮ್ಮೆಯೂ ಆ ಹೆಮ್ಮೆಗೆ ಮನವ ತೆರಲಿಲ್ಲ. ಹುಟ್ಟಿನ ಮದವಳಿಯಬೇಕೆಂದು ತಮ್ಮನ್ನು ತಾವು ಬಹಳ ಹೀನಾಯವಾಗಿ ಕಂಡುಕೊಳ್ಳುತ್ತಿದ್ದರು.

'ಚೆನ್ನಯ್ಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು, ಇವರಿಬ್ಬರೂ ಹೊಲದಲ್ಲಿ ಬೆರಣಿಯನಾಯಹೋಗಿ ಸಂಗವ ಮಾಡಿದರು. ಇವರಿಬ್ಬರಿಗೆ ಹುಟ್ಟಿದ ಮಗ ನಾನು, ಕೂಡಲಸಂಗಮ ದೇವ ನೀ ಸಾಕ್ಷಿಯಾಗಿ' ಎಂದು ಹೇಳಿಕೊಳ್ಳುವಷ್ಟು ದೂರ ಹೋಗಿದ್ದಾರೆ.

ಭಕ್ತ, ಭವಿ ಎಂಬೆರಡು ಭೇದವನ್ನಲ್ಲದೆ ಬೇರೆ ಯಾವ ಅಸ್ತಿಭಾರದ ಮೇಲೆ ಕಟ್ಟಿದ ಮಾನವ ಕಲ್ಪಿತಭೇದಗಳನ್ನೂ ಬಸವಣ್ಣನವರು ಒಪ್ಪುತ್ತಿರಲಿಲ್ಲ. ಮಧುವಯ್ಯನೆಂಬ ಬ್ರಾಹ್ಮಣನ ಮಗಳನ್ನು, ಹರಳಯ್ಯನೆಂಬ ಹೊಲೆಯನ ಮಗನಿಗೆ ಕೊಟ್ಟು ವಿವಾಹವನ್ನು ಕೂಡ ಬಸವಣ್ಣನವರು ಮಾಡಿಸುತ್ತಾರೆ. ಇವರು ವರ್ಣಾಶ್ರಮಧರ್ಮಗಳಿಗೆ ತೋರುತ್ತಿದ್ದ ಈ ಗೌರವವು ಸ್ವಾಭಾವಿಕವಾಗಿಯೇ ಆಗಿನ ಬ್ರಾಹ್ಮಣರನ್ನು ನೋಯಿಸಿ ಕೆರಳಿಸಿರಬೇಕು. ಅವರು ಬಂದು, ಬಸವಣ್ಣನವರನ್ನು ಅರಸನ ಮುಂದೆ ದೂರುವುದು ಅದಕ್ಕೆ 'ಎರಗಿವಿಸು ಮರುಳಾದ, ಬಿಜ್ಜಳರಾಯನು ಬಸವಣ್ಣನವರನ್ನು ಪರೀಕ್ಷಿಸಹೋಗಿ ಸೋತು, ಅಪಮಾನಕ್ಕೀಡಾಗುವುದನ್ನು ಹರೀಶ್ವರನು ಚಿತ್ತವತ್ತಾಗಿ, ವರ್ಣಿಸಿದ್ದಾನೆ. ಬಸವಣ್ಣನವರನ್ನು ದೂರಲು ಬಂದ ಹಾರುವರನ್ನು ಕುರಿತು 'ಭಾಂಡರಸರು, ವೇದಜಡರು, ಮಟ್ಟಿಯ ಮರುಳ್ಗಳು, ವೃಥೋತ್ಸಾಹಿಗಳು, ಹೆಬ್ಬೇಳಿಗಳು, ದರ್ಭೆಯ - ನಿರ್ಭಾಗ್ಯರು' ಎಂದು ಕರೆಯುವಾಗಂತೂ ಹರೀಶ್ವರನ ಲೇಖಣಿ ಬಹಳ ಚುರುಕಾಗಿ ಓಡುತ್ತದೆ. ಗ್ರಂಥದ ತೂಕ ಈ ನುಡಿಗಳಿಂದಿಳಿಯುವುದನ್ನು ಕೂಡ, ಹರೀಶ್ವರನು ಒಮ್ಮೊಮ್ಮೆ ಮರೆತುಬಿಡುತ್ತಾನೆ. ಬಸವಣ್ಣನವರಂಥಹ ಮಹಾನುಭಾವರನ್ನು ಈ ಹೀನರು ಹಳಿದರಲ್ಲಾ ಎಂಬುದೇ ಹರೀಶ್ವರನ ಲಕ್ಷ್ಯ. ಅದಕ್ಕೆ ಆ ಕಾಲದಲ್ಲಿ ಸಾಕಷ್ಟು ಕಾರಣಗಳು ಇದ್ದರೂ ಇದ್ದಿರಬಹುದು. ಆದರೆ ಸೈರಣೆಯ ಕಣಿಯೆನಿಸಿದ್ದ ಬಸವಣ್ಣನವರ ಬಾಯಲ್ಲಿ ಆ ಮಾತುಗಳನ್ನು ಕವಿಯು ಹಾಕಬಾರದಾಗಿತ್ತು. ಬಸವಣ್ಣನವರ ಧಾರ್ಮಿಕ ದಿಗ್ವಿಜಯಕ್ಕೆ ಅವರ ಆತ್ಮಶಕ್ತಿ, ಪರಮತಸಹಿಷ್ಣುತೆ, ನಿಸ್ಸೀಮ ತ್ಯಾಗವೃತ್ತಿಗಳೇ ಕಾರಣವೆಂದು ಹರಿಹರನೇ ಹೆಜ್ಜೆಹೆಜ್ಜೆಗೂ ನಮ್ಮ ಮನಸ್ಸಿನಲ್ಲಿ ಅಚ್ಚೊತ್ತುತ್ತಾ ಹೋಗಿದ್ದಾನೆ. ಕಿನ್ನರ ಬೊಮ್ಮಯ್ಯನವರ ಕಥೆಯೊಂದಿಗೆ ಉಳಿಯ ವೃತ್ತಾಂತವನ್ನು ಸೇರಿಸಿ ಕಾವ್ಯ ಸ್ವಲ್ಪ ಕೆಳಗಿಳಿಯಲು ಹರೀಶ್ವರನು ಕಾರಣನಾಗಿದ್ದಾರೆ. ಅಂತಹ ಸಣ್ಣ ವಿಷಯಕ್ಕೆ ಬೊಮ್ಮಯ್ಯನವರಂತಹ ಭಕ್ತರು ಮುನಿದರೆಂದೂ, ಆ ಮುನಿಸನ್ನು ಮನ್ನಿಸಲು ಬಸವಣ್ಣನವರು ಅಷ್ಟು ಶ್ರಮಿಸಿದರೆಂದೂ ಹೇಳಹೋಗಿರುವುದು ಸ್ವಲ್ಪ ಹಾಸ್ಯಾಸ್ಪದವಾಗಿದೆ.

ಬಸವಣ್ಣನವರ ಮಾನಸಿಕ ಬೆಳವಣಿಗೆ, ಜಾಗೃತಿಗಳನ್ನೇ ಲಕ್ಷ್ಯದಲ್ಲಿಟ್ಟು ಕೊಂಡಿರುವ ಹರೀಶ್ವರನು ಬಿಜ್ಜಳ ಬಸವ ಸಂಬಂಧದ ಸಮಸ್ಯೆಗೆ ಕೈಹಾಕ ದಿರುವುದು ಅವನ ನೆಟ್ಟನೋಟದ ಬಗೆಗೆ ಇನ್ನೊಂದು ಸಾಕ್ಷಿಯಾಗಿದೆ. ಭಕ್ತಪರಾಧೀನರಾದ ಬಸವಣ್ಣನವರ ಮಹಿಮೆಯನ್ನೇ ವರ್ಣಿಸುತ್ತ ಬಂದು

"ಬಸವಂ ಭಕ್ತಿಯುಂ ನುಡಿವುತಿರುಲಂದು
ಬಂದು ಸಂಗಂ ಜಂಗಮಾಕಾರದೊಳ್ ನಿಂದು
ನಡೆ ಬಸವ ಕೈಲಾಸಗಿರಿಗೆ ಪುಷ್ಪಕದೊಳಗೆ
ಪೊಡವಿಯೊಳಗಿರಲು ಸಾಲ್ವುದು ಬಾ ಮಗನೆ ನಿನಗೆ
ಎನೆ ಕೇಳ್ದು ನಸುನಗುತೆ ನುಡಿದನಾ ಸಂಗಂಗೆ
ಮನಸಿಜಹರಂಗೆ, ಗಿರಿಶಂಗೆ ಗಿರಿಜೇಶಂಗೆ
ಸಂಗಯ್ಯ ಬಾಯೆಂದು ಕರೆವೆ ನೀನೆನ್ನುವಂ
ಪಿಂಗಲೀಯದು ಶರಣಗೋಷ್ಠಿ ಕೇಳೆನ್ನುವಂ
ಶರಣರೊಕ್ಕುದರ ಸವಿ ಕೈಲಾಸದೊಳಗುಂಟೆ
ಇಲ್ಲಿಯ ಸುಖಂ ದೇವ ಅಲ್ಲಿಯುಳ್ಳಡೆ ಲೇಸು
ಅಲ್ಲೆನ್ನ ಈಗಳೇ ಕೊಂಡು ಹೋಹುದು ಲೇಸು"

ಎಂದು ಹೇಳಲು ಸಂಗನು ಶಿವಶರಣರಿಗೆಲ್ಲಾ ಮುಕ್ತಿಯನ್ನು ದಯಪಾಲಿಸಿ ದನು. ಇಲ್ಲಿಯೂ ಬಸವೇಶ್ವರನು ತನ್ನ ಪವಿತ್ರಾತ್ಮನ ಹೆಚ್ಚಳವನ್ನು ತೋರಿ, ಸಂಗನು ಎಲ್ಲ ಭಕ್ತರನ್ನೂ ಅನುಗ್ರಹಿಸುವಂತೆ ಮಾಡಿದ್ದಾನೆ.

ಧಾರಾಳವಾದ ಶೈಲಿ, ಸರಸೋಪಮೆ, ಉನ್ನತ ಪಾತ್ರ ಸೃಷ್ಟಿ, ಕಳಾ ಮಯವಾದ ರಸವೈವಿಧ್ಯಗಳಿಂದ ಮಾತ್ರವಲ್ಲದೆ, ವಿಚಾರ ರೀತಿಯ ನಾವೀನ್ಯ, ಕೆಚ್ಚೆದೆಗಳಿಂದ ಹರೀಶ್ವರನು ಕನ್ನಡ ಕಾವ್ಯಾಕಾಶದಲ್ಲಿ ಚಿರಕಾಲ ರಾರಾಜಿ ಸುವ ತಾರೆಯಾಗಿದ್ದಾನೆ. ಸ್ವಾತಂತ್ರ್ಯವನ್ನು ಪ್ರೀತಿಸುವ ಕವಿಗಳಿಗಂತೂ ಅವನು ಧ್ರುವತಾರೆಯಾಗಿದ್ದಾನೆಂದರೂ ತಪ್ಪಾಗದು.

ಅಕ್ಕ ಮಹಾದೇವಿಯ ಆಧ್ಯಾತ್ಮಿಕ ಪ್ರಗತಿ

೧

ಹನ್ನೆರಡನೆಯ ಶತಮಾನದ ಕರ್ಣಾಟಕದ ಧಾರ್ಮಿಕ ಇತಿಹಾಸ ಜಗತ್ತಿನ ಧಾರ್ಮಿಕ ಇತಿಹಾಸಗಳಲ್ಲಿ ಉಚ್ಚಸ್ಥಾನವನ್ನು ಪಡೆಯಲು ಅರ್ಹವಾಗಿದೆ. ಉಪನಿಷತ್ತುಗಳು ಹೇಗೆ ಆಧ್ಯಾತ್ಮಿಕ ತತ್ತ್ವಗಳ ಮಹೋನ್ನತಿಯನ್ನು ತೋರಿದವೋ ಹಾಗೆ ಅನುಭವ ಮಂಟಪದ ಶಿವಶರಣ ಶಿವಶರಣೆಯರ ಕೃತಿ, ಜೀವನಗಳು ಉನ್ನತ ಆಧ್ಯಾತ್ಮಿಕ ತತ್ತ್ವಗಳ ಅನುಷ್ಠಾನದ ಮಹೋನ್ನತಿಯನ್ನು ಸಾರಿದವು. ಆತ್ಮನ ಉತ್ಕ್ರಾಂತಿಗೆ ಈ ಮಾರ್ಗ ಸರಿಯೇ ಆ ಮಾರ್ಗ ಸರಿಯೇ ಎಂದು ಒಣ ವಾದದ ಮರುಭೂಮಿಯಲ್ಲಿ ದಾರಿಕಾಣದೆ ತೊಳಲುವುದಕ್ಕಿಂತಲೂ ಎಲ್ಲ ಮಾರ್ಗಗಳ ಸಮನ್ವಯವನ್ನೂ ಕಂಡುಕೊಂಡು ಅದರ ಸಾಧನೆಗೆ ಜೀವನವನ್ನು ಮೀಸಲುಮಾಡುವುದೇ ಯೋಗ್ಯವೆಂದು ಅವರು ಮನಗಂಡಿದ್ದರು. ಬಸವಣ್ಣ, ಮಹಾದೇವಿಯಕ್ಕ ಇವರ ಜೀವನಗಳೆಂದರೆ ಈ ಸಮನ್ವಯ ಸಿದ್ಧಾಂತದ ದೃಷ್ಟಾಂತಗಳು. 'ನನ್ನ ತಂದೆಯ ಮನೆಗೆ ಅನೇಕ ಕಿಟಕಿಗಳಿವೆ, ನನ್ನ ತಂದೆಯ ಮನೆಗೆ ಬರಲು ಅನೇಕ ಮಾರ್ಗಗಳಿವೆ' ಎಂದು ಯೇಸುಕ್ರಿಸ್ತನು ಹೇಳಿದುದರ ಸಾಮಂಜಸ್ಯವು ಇವರ ಜೀವನದಲ್ಲಿ ಕಂಡುಬರುತ್ತದೆ.

ಭಾರತವರ್ಷದ ಆಧ್ಯಾತ್ಮಿಕ ಜೀವಿಗಳ ಚರಿತ್ರೆಗಳನ್ನವಲೋಕಿಸಿದರೆ ಸ್ತ್ರೀಯರ ಸಂಖ್ಯೆ ಬೆರಳು ಮುಗಿಯುವಷ್ಟೂ ಸಿಕ್ಕುವುದಿಲ್ಲ. ಮನುವಿನ ಶಾಸನ ಎಲ್ಲ ಮನ್ವಂತರಗಳನ್ನೂ ಆಳಿಕೊಂಡು ಬಂದು ಹನ್ನೆರಡನೆಯ ಶತಮಾನದಲ್ಲಿ ತುಸು ವಿಶ್ರಾಂತಿ ತಾಳಬೇಕಾಯಿತು. ವೇದಕಾಲದ ಮೈತ್ರೇಯಿ ಗಾರ್ಗಿಯರು ಮತ್ತೆ ಹುಟ್ಟಬಹುದು, ಹುಟ್ಟುತ್ತಾರೆ ಎಂಬುದನ್ನು ಮನುವಿನ ಶಾಸನಗಳು ಅರಿಯಬೇಕಾದ ಕಾಲವೊದಗಿತು. ಅನುಭವ ಮಂಟಪವು ಸ್ತ್ರೀ ಶೂದ್ರರ ಬಂಧನಗಳನ್ನು ಪರಿಹರಿಸುವ ಪವಿತ್ರಕಾರ್ಯದಲ್ಲಿ ಕೈಹಾಕಿತು. ಆಧ್ಯಾತ್ಮಿಕ ಪ್ರಗತಿಯಲ್ಲಿ ಸ್ತ್ರೀ ಯಾವ ಹಂತವನ್ನು ಹತ್ತಬಹುದೆಂಬುದನ್ನು ತೋರುವುದಕ್ಕೆ ಮಹಾದೇವಿಯಕ್ಕನ ಆಧ್ಯಾತ್ಮಿಕ ಜೀವನವು ನೆರ

ವಾಯಿತು. ಆತ್ಮನಿಗೆ ಗಂಡುಹೆಣ್ಣುಗಳೆಂಬ ಕೀಳು ಪ್ರಭೇದಗಳಿಲ್ಲವೆಂದು ಮಹಾದೇವಿಯಕ್ಕನು ಸಾರಿ, ಹೊಸ ಧೈರ್ಯ ಚೈತನ್ಯಗಳನ್ನು ನಾಡ ಹೆಣ್ಣು ಮಕ್ಕಳ ಹೃದಯದಲ್ಲಿ ಬಿತ್ತಿದಳು. ಅವಳ ಸಾಧನೆಯ ಸಾಹಸ, ಜೀವನದ ಉಚ್ಚ ಆದರ್ಶ, ಆ ಆದರ್ಶಸಾಧನೆಯಲ್ಲಿ ತೋರಿದ ಧೈರ್ಯಸ್ಥೈರ್ಯ ಜಗತ್ತಿನ ಆಧ್ಯಾತ್ಮಿಕ ಇತಿಹಾಸದಲ್ಲಿಯೇ ಮಹಾದೇವಿಯಕ್ಕನಿಗೆ ಉಚ್ಚಸ್ಥಾನ ವನ್ನು ದೊರಕಿಸಿಕೊಟ್ಟಿವೆ.

ಜೀವನದ ಆದಿಯಲ್ಲಿಯೇ ಮಹಾದೇವಿ ತನ್ನ ಆಧ್ಯಾತ್ಮಿಕತೆಯ ಬುನಾದಿ ಎಂತಹುದೆಂಬುದನ್ನು ತೋರಿದ್ದಾಳೆ. ಆಕೆ ಕೈಹಿಡಿದಿದ್ದುದು ನಾಡೊಡೆಯ ಕೌಶಿಕನನ್ನು; ಸಕಲ ಭೋಗಭಾಗ್ಯವೂ ಅವಳದಾಗಿತ್ತು. ಅಚ್ಚುಮೆಚ್ಚಿನ ದಾಸ ದಾಸೀಜನ. ತನ್ನ ಗುಣರೂಪಗಳ ಬಂದಿಯಾಗಿದ್ದ ಪತಿ. ತಾನು ನವಯೌವನಭರಿತೆ, ಜೀವನದ ಸವಿಯನ್ನು ಕಂಡು ಕೊಂಡಿದ್ದವಳು. ಇಂತಹ ಐಹಿಕ ಭೋಗ ಭಾಗ್ಯದ ಶಿಖರದ ಮೇಲೆ ನಿಂತಿರುವಾಗಲೇ ಮಹಾ ದೇವಿ ಅದರ ಎತ್ತರ ಎಷ್ಟು ಚಿಕ್ಕದೆಂದು ಕಂಡುಕೊಳ್ಳುತ್ತಾಳೆ. ಮಧು ರೆಯ ಮೀನಾಕ್ಷಿ ದೇವಾಲಯದ ಗೋಪುರವನ್ನು ಕಾಣದಿದ್ದವನು ತನ್ನ ಹಾಳೂರಿನ ಬೆನಕನ ಗುಡಿಯ ಗೋಪುರವೇ ಬಹಳ ಎತ್ತರವಾದುದೆಂದು ಭಾವಿಸುವಂತೆ ತಾನು ಭಾವಿಸುತ್ತಿದ್ದೆನೆಂಬುದರ ಅರಿವವಳಿಗಾಗುತ್ತದೆ. ಕೌಶಿ ಕನು ಶಿವಭಕ್ತನಲ್ಲದಿದ್ದರೂ ಅವನ ಅನನ್ಯ ಭಕ್ತಿಪ್ರೇಮಗಳಿಗೆ ಮೆಚ್ಚಿ, ಮಹಾ ದೇವಿಯು ಅವನನ್ನು ವರಿಸಿರುತ್ತಾಳೆ. ನಾಡೊಡೆಯನ ಹೃದಯವನ್ನು ಗೆದ್ದರೆ ನಾಡನ್ನುಗೆದ್ದಂತೆ ಎಂದು ಭಾವಿಸಿ ಅವನ ಆಶ್ವಾಸನಗಳನ್ನುಒಪ್ಪಿ ನಂಬಿ ಅವ ನನ್ನು ಕೂಡಿರುತ್ತಾಳೆ. ಆದರೆ ಅರಸು ಕೇವಲ ಕಾಮಿ. ತಾಸಿತ್ತ ವಚನ ವನ್ನು ಪರಿಪಾಲಿಸಬೇಕೆಂಬ ಶ್ರದ್ಧೆ ಅವನಲ್ಲಿ ಎಳ್ಳಷ್ಟು ಇರಲಿಲ್ಲ. ಮಹಾ ದೇವಿ ತನಗೆ ದೊರೆಯಲು ಅವಳನ್ನು ತನ್ನ ಐಹಿಕ ಜೀವನದ ಕಡೆಗೆಳೆ ಯಲು ಯತ್ನಿಸುತ್ತಾನೆ. ಅವಳ ಭಕ್ತಿಗೆ ಭಂಗ ತರುತ್ತಾನೆ. ಅವಳ ಸಂಯಮವನ್ನು ತಿರಸ್ಕರಿಸುತ್ತಾನೆ. ಯಾವ ವಿವಾಹದಿಂದ ತನ್ನ ಮತ್ತು ತನ್ನ ಜನತೆಯ ಪಾರಮಾರ್ಥಿಕ ಉತ್ಕರ್ಷವನ್ನು ಸಾಧಿಸಬೇಕೆಂದು ಬಯಸಿ ದಳೋ ಅದು ವಿಫಲವಾಗುತ್ತದೆ. ಜೀವನದಲ್ಲಿ ಜಿಹಾಸೆ ಹುಟ್ಟುತ್ತದೆ. ತನ್ನ ಮಾಯಾ ಬಂಧನದ ಅರಿವು ದಿನದಿನಕ್ಕೆ ತೀಕ್ಷ್ಣವಾಗುತ್ತ ಬರುತ್ತದೆ.

ಈ ಬಗೆಯ ಕೃತ್ರಿಮ ಬಾಳುವೆಯಿಂದ ಹಿತವಿಲ್ಲವೆಂದು ಬಗೆದು ತನ್ನ ಗುರು, ಪ್ರಭುಗಳನ್ನರಸುತ್ತ ಹೊರಟು ಬಿಡುತ್ತಾಳೆ. ತಂದೆ, ತಾಯಿ, ಪತಿ, ಬಳಗ, ಐಶ್ವರ್ಯ, ಪದವಿಗಳೆಲ್ಲವೂ ತುಚ್ಛವಾಗಿ ಕಂಡುಬರುತ್ತವೆ. ಮುಂದಿನ ಗುರಿಯೊಂದನ್ನುಳಿದು ಬೇರೆ ಯಾವುದೂ ಕಣ್ಣಿಗೆ ಕಾಣುವುದಿಲ್ಲ, ಚಿತ್ತಫಲಕದ ಮೇಲೆ ಹೊಳೆಯುವುದಿಲ್ಲ. ದೇಹದ ಪರಿವೆ ಮರೆತುಹೋಗುತ್ತದೆ. ಎಲ್ಲ ಉಪಾಧಿಗಳನ್ನೂ ನಿರಾಕರಿಸುತ್ತಾ 'ತನ್ನತನ' ವನ್ನು ಜ್ಞಾಪಿಸಿಕೊಡುವ ಒಡವೆ ವಸ್ತ್ರಗಳ ಹಂಗೇಕೆಂದು ಅವುಗಳನ್ನೂ ತೊರೆದುಬಿಡುತ್ತಾಳೆ. ವಿಷಯೋಪಭೋಗಗಳನ್ನು ಗೆಲ್ಲುವುದು ಸಾಧನೆಯ ಮೊದಲನೆಯ ಹೆಜ್ಜೆ. ಅದು ಮಹಾದೇವಿಯನ್ನು ಬಲವತ್ತರವಾಗಿ ಆವರಿಸಿತ್ತು; ಜತೆಗೆ ಸ್ತ್ರೀ ಜನ್ಮಕ್ಕೆ ಸಹಜವಾದ ಲಜ್ಜಾದಿ ಗುಣಗಳು. ಮಹಾದೇವಿಯ ಮುಂದಿದ್ದ ಘನವು ಲಿಂಗ ರಹಿತವಾಗಿತ್ತು; ಭೋಗ ರಹಿತವಾಗಿತ್ತು; ಉಪಾಧಿ ರಹಿತವಾಗಿತ್ತು. ತಾನು ಘನವಾಗಿ ಘನದಲ್ಲಿ ಬೆರೆಯುವ ತನಕ ಘನದ ಮಹತ್ವವು ಮನವರಿಕೆಯಾಗುವ ಹಾಗಿರಲಿಲ್ಲ. ಮಹಾದೇವಿ ತನ್ನ ಲಿಂಗಜ್ಞಾನವನ್ನು ಮರೆತಳು. 'ನಾಮದಲ್ಲಿ ಹೆಂಗುಸೆಂಬ ಹೆಸರಾದರೇನು, ಭಾವಿಸಲು ಗಂಡುರೂಪು'* ಎನ್ನುವಮಟ್ಟಿಗೆ ಆಕೆಯ ಮನಸ್ಸು ಪರಿಪಕ್ವವಾಯಿತು. 'ಉಟ್ಟ ಸೀರೆಯ ಸೆಳೆದು ತೊಟ್ಟತೊಡಿಗೆಯ ಹರಿದು, ಬಿಟ್ಟೆನೋ ನಾನು ಬಿಡುಮುಡಿಯ ಎಲೆದೇವ, ಕೊಟ್ಟೆನೋ ಎನ್ನ ತನುಮನವ' ಎಂದು ಹೊರ ಆವರಣದ ಬಗ್ಗೆ ತನಗಿದ್ದ ನಿರ್ಮಮತೆಯನ್ನು ಸಾರಿಬಿಟ್ಟಳು. ವಿಲೋಭ

* ಆಧ್ಯಾತ್ಮಿಕ ಸಾಧನೆಯಲ್ಲಿ ಇದು ಒಂದು ಮಹತ್ತರವಾದ ಸ್ಥಿತಿ. ಭಗವಾನ್ ರಾಮಕೃಷ್ಣ ಪರಮಹಂಸರು ತಾವು ಗೋಪಿಯೆಂದು ಭಾವಿಸಿ ಹಾಗೆಯೇ ಉಡುಗೆ ತೊಡಿಗೆಗಳನ್ನು ಧರಿಸಿ ತಮ್ಮ ಇಷ್ಟದೇವನಾದ ಕೃಷ್ಣನನ್ನು ಆರಾಧಿಸಿದರು. ಭಗವಾನ್ ಬಸವಣ್ಣನವರು 'ಎಲ್ಲ ಗಂಡರ ಪರಿಯಂತಲ್ಲ ನೋಡಲೆಗವ್ವ. ನಮ್ಮನಲ್ಲ ಸುಳಿಯಲಿಲ್ಲ, ಸುಳಿದು ಸಿಂಗಾರವ ಮಾಡಲಿಲ್ಲ. ಕೂಡಲಸಂಗಮದೇವ ತನ್ನಲ್ಲೆನ್ನ ಬೈಚಿಟ್ಟನಾಗಿ' ಎಂದು ಸತೀತ್ವಭಾವನೆಯಿಂದ ಕೈವಲ್ಯಸಾಧನೆಯನ್ನು ಮಾಡಿದರು. ಸ್ತ್ರೀ ಮುಖಾವಲೋಕವನ್ನೂ ಮಾಡುವುದಿಲ್ಲವೆಂದು ಶಪಥಮಾಡಿದ್ದ ವಿಜಯಕೃಷ್ಣ ಗೋಸ್ವಾಮಿಗೆ ಭಕ್ತ ಮೀರಾ 'ಕೃಷ್ಣನ ಮುಂದೆ ಯಾರು ಗಂಡಸರು? ಆವನೇ ಎಲ್ಲರ ಗಂಡ, ಎಲ್ಲರೂ ಅವನ ಸತಿಯರು' ಎಂದು ಹೇಳಿದಳು.

ನೆಯ ತವರಾಗಿದ್ದ ನಗರವನ್ನು ಬಿಟ್ಟು ಕಾಡನ್ನು ಸೇರಿದಳು. ಆದರೆ ಜೀವಕ್ಕೆ ಅಂಟಿಕೊಂಡಿದ್ದ ಅಂತಃಕರಣಚತುಷ್ಟಯದ ಮೊದಲನೆಯ ಉಪಾಧಿ ಅಲ್ಲಿಯೂ ಬಿಡದಾಯಿತು. 'ಒಡಲ ಕಳವಳಕ್ಕಾಗಿ ಅಡವಿಯ ಪೊಕ್ಕೆ. ಗಿಡು ಗಿಡುದಪ್ಪದೆ ಬೇಡಿದೆನ್ನಂಗಕ್ಕೆಂದು, ಅವು ನೀಡಿದವು ತಮ್ಮ ಲಿಂಗಕ್ಕೆಂದು, ಆನು ಬೇಡಿ ಭವಿಯಾದೆನು, ಅವು ನೀಡಿ ಭಕ್ತರಾದವು, ಇನ್ನು ಬೇಡಿದೆನಾದರೆ ಚನ್ನಮಲ್ಲಿಕಾರ್ಜುನಯ್ಯ ನಿಮ್ಮಾಣೆ' ಎಂದು ದೃಢ ಪ್ರತಿಜ್ಞೆ ಮಾಡಿಬಿಟ್ಟಳು.

ಅಕ್ಕನಿಗೆ ಮಾಯೆಯ ನೆನಹು ಹೋಗಿರಲಿಲ್ಲ. ಅವಳು ಮುಂದೆ ಹೋಗಗೊಡದೆ ಅವು ಕಾಡುತ್ತಲೇ ಇದ್ದವು. ಕಾಯಕ್ಕೆ ನೆಳಲಾಗಿ, ಪ್ರಾಣಕ್ಕೆ ಮನವಾಗಿ, ಮನಕ್ಕೆ ನೆನಹಾಗಿ, ನೆನಹಿಂಗೆ ಅರಿವಾಗಿ ಕಾಡುತ್ತಿತ್ತು. ಆ ಮಾಯೆಯ ಪ್ರಭಾವ ಕೇವಲ ವ್ಯಕ್ತಿಗಳಿಗೆ ಅಡಕವಾಗಿರಲಿಲ್ಲ. ಪುರುಷನ ಮುಂದೆ ಸ್ತ್ರೀಯಾಗಿತ್ತು, ಸ್ತ್ರೀಯ ಮುಂದೆ ಪುರುಷನಾಗಿತ್ತು; ಯೋಗಿಗೆ ಯೋಗಿಣಿಯಾಗಿತ್ತು, ಸವಣಗೆ ಸವಣಿಯಾಗಿತ್ತು; ಯತಿಗೆ ಪರಾಕಿಯಾಗಿತ್ತು; ಅದರ ಮುಂದೆ 'ಶರಣಚಾರಿತ್ರ್ಯ ಮರುಳಾಗಿ ತೋರುತ್ತಿತ್ತು. ಹರಿ, ಅಜ, ಇಂದ್ರ, ಚಂದ್ರರು ಯಾರೂ ಅದಕ್ಕೆ ಲಕ್ಷ್ಯವಿಲ್ಲ. ಬಲ್ಲೆನೆಂಬ ಬಲುಗಯ್ಯರ ನುಂಗಿತ್ತು, ಅರಿಯೆನೆಂಬ ಅಜ್ಞಾನಿಗಳ ನುಂಗಿತ್ತು. ಈರೇಳು ಭುವನವನಾರಡಿಗೊಂಡಿತ್ತು. ಆ ಕಾಲದಲ್ಲಿ ತನಗೆ ದಾರಿ ತೋರುವ ಗುರುವೆಲ್ಲಿದ್ದಾನೆಂದು ಅಕ್ಕನು ಹಂಬಲಿಸಿದಳು, ಹಲುಬಿದಳು, ಯೋಗದ ಹಾದಿಯನ್ನು ಹಿಡಿದಳು. 'ಮೂಲಾಧಾರದ ಬೇರ ಮೆಟ್ಟಿ, ಭೂಮಂಡಲವನೇರಿದೆ. ಆಧಾರದ ಬೇರ ಹಿಡಿದು ಐಕ್ಯದ ತುದಿಯನೇರಿದೆ. ವೈರಾಗ್ಯದ ಸೋಪಾನದಿಂದ ಶ್ರೀ ಪರ್ವತವನೇರಿದೆ, ಕೈವಿಡಿದು ತೆಗೆದುಕೊಳ್ಳಾ ಚನ್ನಮಲ್ಲಿಕಾರ್ಜುನಾ' ಎಂದು ಅರಚಿದಳು. ಆದರೆ ಚನ್ನ'ಮಲ್ಲಿಕಾರ್ಜುನ ಅಷ್ಟು ಸುಲಭಸಾಧ್ಯನಾಗಿರಲಿಲ್ಲ. ಭೂಮಿಯಿಂದ ನಾಲ್ಕು ಅಡಿ ಏಳುವವರಿಗೂ, ನೀರಿನ ಮೇಲೆ ನಡೆಯುವವರಿಗೂ ಲಭ್ಯನಾಗಿರಲಿಲ್ಲ. ಇಂದ್ರಜಾಲದಿಂದ ಲೋಕದ ಮೂಢಜನ ಭ್ರಾಂತರಾಗಬಹುದು. ಆದರೆ ಜ್ಞಾನದ ದೀಪ್ತಿಯನ್ನು ಮೋಸದ ಮುಸುಕಿನಿಂದ ಮುಚ್ಚಲು ಸಾಧ್ಯವಿಲ್ಲ.

ಅಕ್ಕನ ಅನುಭವಕ್ಕೂ ಆ ಸತ್ಯ ಹೊಳೆಯಿತು. 'ಆಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧಿ, ಆಜ್ಞೇಯ ಮಾತ ಹೇಳಿದೊಡೇನು, ಕೇಳಿದೊಡೇನು ? ತನ್ನಲ್ಲಿದ್ದುದ ತಾನರಿಯದನ್ನಕ್ಕ ಹೇಳಿದೊಡೇನು, ಕೇಳಿದೊಡೇನು ? ಉನ್ಮನಿಯ ರಭಸದ ಪವನದಲ್ಲಿದ್ದು ಚನ್ನಮಲ್ಲಿಕಾರ್ಜುನಯ್ಯನ ಭೇದಿಸದನ್ನಕ್ಕರ ?' ವೇದಶಾಸ್ತ್ರ ಪುರಾಣಗಳ ಪ್ರಯೋಜನವನ್ನೂ ಕಂಡುಕೊಂಡಳು. 'ವೇದಶಾಸ್ತ್ರ ಪುರಾಣಾಗಮಂಗಳೆಲ್ಲ ಕೊಟ್ಟಣದ ನುಚ್ಚುತೌಡು ಕಾಣಿಭೋ ಇವ ಕುಟ್ಟಲೇಕೆ' ಎಂದು ಅವುಗಳನ್ನು ದೂರಮಾಡಿಬಿಟ್ಟಳು.

ಈ ಹೊತ್ತಿನಲ್ಲಿಯೇ ಅಕ್ಕನಿಗೆ ಲೋಕದ ಗುರುಗಳ ಗುರುತ್ವವೂ ಅನುಭವಕ್ಕೆ ಬಂದಿರಬೇಕು. ಅವರಲ್ಲಿ ಗುರುತನದ ಹಿರಿಯತನಕ್ಕಿಂತಲೂ ಸೋಗು ಎಷ್ಟು ಪ್ರಧಾನವೆಂಬುದನ್ನು ಆಕೆ ಕಂಡುಕೊಂಡಿರಬೇಕು. ಬಂಧನವನ್ನು ಬಯಲುಮಾಡುವ ಗುರುವಿಗೂ ಅಡ್ಡಪಲ್ಲಕ್ಕಿ ಮುತ್ತಿನ ಕಿರೀಟದ ಗುರುವಿಗೂ ಇರುವ ವಿಭೇದವು ಅಕ್ಕನಿಗೆ ಅರಿವಾಯಿತು. ಅಂತಹವರ ಬಗ್ಗೆ ಖಂಡಿತವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾಳೆ.

"ಅಯ್ಯಾ, ಸರ್ವಮೂಲಾಹಂಕಾರವಿಡಿದು, ಕುಲಭ್ರಮೆ, ಛಲಭ್ರಮೆ, ಜಾತಿ ಭ್ರಮೆ, ನಾಮ ವರ್ಣ ಆಶ್ರಮ ಮತ ಶಾಸ್ತ್ರಭ್ರಮೆ, ರಾಜ್ಯಭ್ರಮೆ, ಧನಧಾನ್ಯ ಪುತ್ರ ಮಿತ್ರ ಐಶ್ವರ್ಯ ತ್ಯಾಗಯೋಗ ಭ್ರಮೆ, ಕಾಯಕರಣ ವಿಷಯಭ್ರಮೆ, ವಾಯು ಮನ ಭಾವ ಜೀವ ಮೋಹ ಭ್ರಮೆ, ನಾಹಂಕೋಹಂ ಭ್ರಮೆ, ಶಿವೋಹಂ ಭ್ರಮೆ, ಮಾಯೂ ಭ್ರಮೆ ಮೊದಲಾದ ಮೂವತ್ತೆರಡು ಪಾಶಾಭ್ರಮಿತರಾಗಿ ತೊಳಲುವ ವೇಷಧಾರಿಗಳ ಕಂಡು, ಶಿವಭಕ್ತಿ ಶಿವಭಕ್ತ ಶಿವಪ್ರಸಾದಿ ಶಿವಶರಣ ಶಿವೈಕ್ಯ ಶಿವಜಂಗಮವೆಂದು ನುಡಿಯಲಾರದೆ ಎನ್ನಮನ ನಾಚಿ ನಿಮ್ಮಡಿಗಭಿಮುಖವಾಯಿತ್ತಯ್ಯ, ಚೆನ್ನಮಲ್ಲಿಕಾರ್ಜುನ."

"ಅಯ್ಯ ಆದಿ ಅನಾದಿಯಿಂದತ್ತತ್ತ ಮೀರಿತೋರುವ ನಿತ್ಯನಿರಂಜನ ಗುರುಲಿಂಗ ಜಂಗಮ ಶಿವಶರಣರ ಸತ್ಯ ಸನ್ಮಾರ್ಗದ ಗೊತ್ತಿನ ಮರಿಯಾದೆಯನರಿಯದೆ, ಮರ್ತ್ಯದ ಜಡಜೀವಿ ಭವಿಪ್ರಾಣಿಗಳ ಹಾಗೆ ಗುಹ್ಯಾಲಂಪಟಕ್ಕಿಚ್ಛಿಸಿ, ದಾಶಿ ವೇಶಿಯರ ಕೂಡಿಕೊಂಡು ಭುಂಜಿಸಿ, ಷಟ್ಸ್ಥಲ ಬ್ರಹ್ಮಾನುಭಾವ ಕೇಳಿಹೇಳುವ ಮೂಳ ಚುಕ್ಕೆಯರ ಕಂಡು ಎನ್ನ ಮನ ನಾಚಿತ್ತು ಕಾಣಾ."

"ಅರಿಯದವರೊಡನೆ ಸಂಗವ ಮಾಡಿದರೆ ಕಲ್ಲು ಹೊಯ್ದು ಕಿಡಿಯ ತೆಗೆದು ಕೊಂಬಂತೆ; ಬಲ್ಲವರೊಡನೆ ಸಂಗಮಾಡಿದರೆ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ. ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣರ ಸಂಗ ಕರ್ಪುರಗಿರಿಯ ಉರಿ ಕೊಂಡಂತೆ."

ವಿವೇಚನೆ, ಉಪಾಧಿನಿರಾಕರಣೆಗಳಿಂದ ಅಕ್ಕನ ಮನಸ್ಸು ಒಂದು ನಿಲುಗಡೆಗೆ ಬಂತು. ಲೌಕಿಕ ಶಾಂತಿ, ಸಮಾಧಾನಗಳು ಮೂಡಿದವು. ದೊಡ್ಡ ವಿಚಾರಗಳಿಗೆ ಮನಸ್ಸು ಕೊಡಲು ಅನುವು ದೊರೆಯಿತು. ಗುರಿ-ಗಮ್ಯಗಳು ಹೆಚ್ಚು ಸ್ಪಷ್ಟವಾಗುತ್ತ ಬಂದವು.

೨

ಮಹಾದೇವಿ ಹುಟ್ಟು ಹೆಣ್ಣು. ಅವಿಚಾರಪರವಾದ ಲಿಂಗಭೇದವನ್ನು ಕಲ್ಪಿಸಿ ಹೆಣ್ಣನ್ನು ಕೀಳುಗಳೆಯಲು ಸಮಾಜ ಹೂಡಿದ್ದ ಕಪಟನಾಟಕಕ್ಕೆ 'ಭಾವಿಸಲು ಗಂಡು ರೂಪು' ಎಂದು ಕಿಚ್ಚಿಕ್ಕಿದಳು. ಆದರೂ ಹೆಣ್ತನದ ಹಾರ್ದಿಕ ಸ್ನಿಗ್ಧತೆಯನ್ನೂ, ಸೌಕುಮಾರ್ಯವನ್ನೂ ಅವಳು ಕಳೆದುಕೊಂಡಿರ ಲಿಲ್ಲ. 'ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲರೆ ಹಾವಿನ ಸಂಗವೇ ಲೇಸು ಕಂಡಯ್ಯ, ಕಾಯದ ಸಂಗಲೇ ಲೇಸು ಕಂಡಯ್ಯ' ಎಂಬ ತತ್ತ್ವವನ್ನು ತಿಳಿದಿದ್ದಳು. ತನ್ನ ಹೆಣ್ತನವನ್ನೇ ಆಧ್ಯಾತ್ಮಿಕ ಪ್ರಗತಿಗೆ ಅನುಕೂಲಿಸುವಂತೆ ಉಪಯೋಗಿಸಿಕೊಂಡಳು. ತನ್ನ ಮಗುವಿನ ಮೇಲಿದ್ದ ಮಮತೆಯನ್ನು ಮರೆತು ಈಶನನ್ನು ನೆನೆಯಲಾಗದ ತಾಯಿಯೊಬ್ಬಳು ಭಗವಾನ್ ರಾಮ ಕೃಷ್ಣ ಪರಮಹಂಸರಲ್ಲಿ ತನ್ನ ದುಃಖವನ್ನು ಸುರಿಕೊಂಡಳು. ಆಗ ಗುರುದೇವ 'ಅಮ್ಮ ದೇವರು ಬೇರೆಯಲ್ಲ, ನಿನ್ನ ಮಗುವೇ ಅವನು. ಅವನೇ ನಿನ್ನ ಮಗು. ಹಾಗೆ ಭಾವಿಸು' ಎಂದು ಹೇಳಿದರು. ಅಂದು ಆ ತಾಯಿಗೆ ಕರ್ಮ ಬಂಧನ ಪ್ರೇಮ ಪುಷ್ಪಮಾಲೆಯಾಯಿತು.

ಲೌಕಿಕವಾಗಿ ನಡೆದಿದ್ದ ತನ್ನ ಜೀವನದ ಪ್ರತಿಯೊಂದು ಘಟನೆಗೂ ಅಧ್ಯಾತ್ಮದ ಪುಟಹಾಕಿ, ತನ್ನ ಸಿದ್ಧಿಪ್ರದಾತೃವನ್ನು ಪತಿಯೆಂದು ಕಂಡು ಕೊಂಡು ಅಕ್ಕಮಹಾದೇವಿ ಜಗತ್ತಿನ ಒಂದು ಮಹತ್ತಾದ ಸಮಸ್ಯೆಯನ್ನು ಪರಿಹರಿಸಿದಳು. ದೇವರು ವಾದಪ್ರಿಯ, ನಾದಪ್ರಿಯ, ಶಕ್ತಿಪ್ರಿಯ—ಆದರೆ ಭಕ್ತಿಮುಗ್ಧ! ವಾದ, ನಾದ, ಶಕ್ತಿಗಳು ಅವನಿಂದಲೇ ಹುಟ್ಟಿದವು ಆದರೆ ಭಕ್ತಿ ಅವನೇ! ಎಲ್ಲವುಗಳಲ್ಲಿ ಅವನ ಅಂಶವಿದ್ದರೆ ಭಕ್ತಿಯಲ್ಲಿ ಅವನೇ

ಇದ್ದಾನೆ. ಈ ಪ್ರಿಯ ಪ್ರೇಯಸೀ ಮಾರ್ಗದಲ್ಲಿ ಅಕ್ಕಮಹಾದೇವಿ ಹೊಂದಿದ ಸಾಫಲ್ಯ ಜಗತ್ತಿನ ಮುಕ್ತಿಗೆ ಮಾದರಿಯಾಯಿತು. ಅನಂತವಾಗಿ ಜಗತ್ತಿನ ಪ್ರಧಾನ ಧರ್ಮಗಳು ಬೋಧಿಸಿದ್ದುದನ್ನು ಅಕ್ಕನು ಆಚರಣೆಯಲ್ಲಿ ತಂದು ತೋರಿಸಿದಳು. ಅಕ್ಕನಂತೆ ಈ ಮಾರ್ಗವನ್ನು ಅನುಸರಿಸಿದ ರಾಬಿಯಾ, ಮೀರಾ, ಜೇಬ್ಉನ್ನೀಸಾ ಮೊದಲಾದ ಪ್ರೇಮಯೋಗಿನಿಯರ ಪಂಕ್ತಿಯಲ್ಲಿ ಅಮರವಾದ ಸ್ಥಾನವನ್ನು ದೊರಕಿಸಿಕೊಂಡಳು.

ಈ ಪ್ರಿಯ ಪ್ರೇಯಸೀ ಮಾರ್ಗವನ್ನನುಸರಿಸುವುದರಲ್ಲಿ ಅಕ್ಕನ ವಿಶ್ವದೃಷ್ಟಿಯೂ ವೇದ್ಯವಾಗುತ್ತದೆ. ರಾಜ, ಹಟ, ಕರ್ಮ, ಜ್ಞಾನಯೋಗಗಳು ವ್ಯಷ್ಟಿ ಅಥವಾ ಮಿತ ಸಮಷ್ಟಿಗೆ ಮಾತ್ರ ಆಚರಣಾಯೋಗ್ಯವೂ ಸಾಧ್ಯವೂ ಆಗಿ ಉಳಿದುಬಿಟ್ಟವು. ಭಕ್ತಿಯ ಸಾರ್ವತ್ರಿಕತೆಯನ್ನು ಉಪನಿಷತ್ತು, ಕುರಾನ ಮತ್ತು ಬೈಬಲ್ಲುಗಳೂ ಒಪ್ಪಿಕೊಂಡಿವೆ. ಎಲ್ಲ ಧರ್ಮಗಳೂ, ಧರ್ಮಗಳ ಋಜು ತತ್ವಗಳನ್ನನುಸರಿಸಿದ ಮಹಾ ವಿಭೂತಿಗಳೂ, ಮತ ಪಂಥ ದೇಶ ವರ್ಗಗಳ ಶೃಂಖಲೆಗೆ ಸಿಕ್ಕದೆ ಒಂದೇ ಹಂತದಲ್ಲಿ ಬಂದು ನಿಲ್ಲುತ್ತಾರೆ. ಭಕ್ತಿಯೇ ಆ ಹಂತ. ಮಹಾದೇವಿ, ರಾಬಿಯಾ, ಮೀರಾ, ಜೇಬ್ಉನ್ನೀಸಾ ಮೊದಲಾದ ಮಹಿಳೆಯರನ್ನೂ ಯೇಸು, ಮಹಮ್ಮದ್, ಕಬೀರ್, ಬಸವಣ್ಣ, ರಾಮಕೃಷ್ಣ ಮೊದಲಾದ ಮಹಾ ಪುರುಷರನ್ನೂ ಆ ವಿಶ್ವದ ಮಾನದಂಡದಿಂದಲೇ ಅಳೆಯಬೇಕು.

ಭಕ್ತ-ಭಗವಂತರ ಪ್ರಿಯ ಸಂಬಂಧವನ್ನು ಕಠೋಪನಿಷತ್ತು ಸೂಚಿಸಿದೆ. ಕಠೋಪನಿಷತ್ತಿನ ಶಾಂತಿ ಮಂತ್ರವೇ ಈ ಸಮರಸ ಭಾವವನ್ನೂ ಸಮರತಿಯನ್ನೂ ನಿರ್ದೇಶಿಸಿದೆ. ವ್ಯಕ್ತಿವ್ಯಕ್ತಿಗಾಗಲೀ ವ್ಯಕ್ತಿ-ಭಗವಂತರಿಗಾಗಲೀ ಬೇರೆ ಯಾವ ಬಗೆಯ ಸಂಬಂಧವಿದ್ದರೂ ಮನಗೂಡಿದ ಮೈತ್ರಿಯ ಅಗತ್ಯವಿದ್ದೇ ಇರುತ್ತದೆ. *

---

* ಓಂ ಸಹನಾವವತು ॥ ಸಹ ನೌ ಭುನಕ್ತು ॥
ಸಹ ವೀರ್ಯಂ ಕರವಾವಹೈ ॥
ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ॥
ಓಂ ಶಾಂತಿಃ ಶಾಂತಿಃ ಶಾಂತಿಃ ॥ — ಕಠ, ೧

ಆ ಮೈತ್ರಿಯಿಂದ ಪರಮಾತ್ಮನ ಕೃಪೆಯನ್ನು ದೊರಕಿಸಿಕೊಳ್ಳಬೇಕು. 'ಆತ್ಮಜ್ಞಾನವು ಪ್ರವಚನದಿಂದ ಲಭ್ಯವಲ್ಲ. ಮೇಧಾಶಕ್ತಿಯಿಂದ ಅಥವಾ ಬಹಳ ಶ್ರವಣನಿಂದ ಲಭ್ಯವಲ್ಲ. ಆತ್ಮನು ಯಾವನ ಮೇಲೆ ಪ್ರಸನ್ನನಾಗುವನೋ ಅವನಿಗೆ ಮಾತ್ರ ಅವನು ಲಭ್ಯನು'* ಎಂದು ಹೇಳಿದೆ. ಮಹಾಭಾರತ ಶಿವನನ್ನು 'ಭಕ್ತಾನುಕಂಪಿ' ಎಂದು ಸಂಬೋಧಿಸಿದೆ. ಮಹಾಭಾಗವತವೆಲ್ಲಾ ಋಷಿಗಳು ಗೋಪಿಕೆಯರಾಗಿ ಶ್ರೀ ಕೃಷ್ಣನ ಪ್ರೇಮವನ್ನಾರ್ಜಿಸಿದ ಚರಿತ್ರೆಯಾಗಿದೆ. ಮಧ್ಯ ಯುಗದಲ್ಲಿ ಬರುವ ಚಿತ್ತೂರಿನ ಮೀರಾಬಾಯಿಯ ಜೀವನವೂ ಪ್ರೇಮ ರಸಪಾನದಿಂದ ಪ್ರಮತ್ತಳಾದ ಸಾಧ್ವಿಯ ಚರಿತ್ರೆಯಾಗಿದೆ. ಅಕ್ಕನಂತೆ ಮೀರಾಬಾಯಿಯೂ ಪತಿಯನ್ನೂ ಪತಿಯ ಗೃಹವನ್ನೂ ಸ್ವದೇಶವನ್ನೂ ತೊರೆದು, ತನ್ನ ಗಿರಿಧರನಾಗರನನ್ನರಸುತ್ತಾ ಬೃಂದಾವನದ ಧೂಳಿಯಲ್ಲಿ ಬೆರೆಯುತ್ತಾಳೆ. ಹಿಂದೂ ಧರ್ಮದ ಬದ್ಧವೈರಿಯಾಗಿದ್ದ ಅವರಂಗಜೇಬನ ಮಗಳು ಜೇಬುಉನ್ನೀಸಾ ಮೀರಾಬಾಯಿಯಂತೆ ಶ್ರೀಕೃಷ್ಣನಲ್ಲಿ ಅನುರಕ್ತಳಾಗಿ, ಆ ಪ್ರೇಮತಪದಲ್ಲಿ ತನ್ನ ಜೀವವನ್ನು ಸವೆಸಿದಳು. ಶ್ರೀಕೃಷ್ಣನನ್ನು ಸಂಬೋಧಿಸಿ ಅವಳು ತನ್ನ 'ದಿವಾನ್' ನಲ್ಲಿ ಆಡಿರುವ ಮುತ್ತಿನಂತಹ ಮಾತುಗಳು ಅವಳ ಪ್ರೇಮದ ಉಲ್ಬಣಾವಸ್ಥೆಯನ್ನು ತೋರುತ್ತವೆ:—

"ರೂಪರಾಣಿಯು ಪ್ರೇಮ ಪ್ರಭುವಿನ ಬಂದಿ. ಪರಿಮಳಿತ ಪಾತ್ರೆಯಲ್ಲಿ ಪದ್ಮರಾಗದಂತ ಮಧುವನ್ನು ಹಾಕಿ ತನ್ನ ನಾಥನಿಗೆ ಅರ್ಪಿಸುತ್ತಾಳೆ. ಅವನು ಸಂತೋಷದಿಂದ ತನ್ನ ಜೀವವನ್ನೇ ಅವಳಿಗೆ ಅರ್ಪಿಸುತ್ತಾನೆ—ಅವಳ ಪ್ರೇಮಕ್ಕೆ." ‡

---

* ನಾಯಮಾತ್ಮಾ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾ ಶ್ರುತೇನ ॥
ಯಮೇವೈಷ ವೃಣುತೇ ತೇನ
ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್ ॥ —ಮುಂಡಕ.

‡ The queen of Beauty's but a captive maid
To Lord of Love, and on her bridal bed
She fills the musky glass with ruby wine;
And lo! to her in joy does he resign
His life, for Love, the heart is given to thee.
The Garden of the East (P 121)

ಧರ್ಮಕ್ಕೆ ಕ್ರಿಸ್ತಧರ್ಮದಿಂದ ಬಂತೆಂದು ಹೇಳುವಷ್ಟು ದೂರ ಕೆಲವು ಪಂಡಿತರು ಹೋಗಿದ್ದಾರೆ.

"ತಂದೆ ನನ್ನನ್ನು ಪ್ರೀತಿಸಿದ ಹಾಗೆ ನಾನು ನಿಮ್ಮನ್ನು ಪ್ರೀತಿಸಿದ್ದೇನೆ. ನನ್ನ ಪ್ರೀತಿಯ ಆಶ್ರಯದಲ್ಲಿ ಬಾಳಿರಿ." *

"ಇದೇ ನನ್ನ ಆಜ್ಞೆ. ನಾನು ನಿಮ್ಮನ್ನು ಪ್ರೀತಿಸಿರುವಂತೆ ನೀವು ಒಬ್ಬರನ್ನೊಬ್ಬರು ಪ್ರೀತಿಸಿರಿ." ‡

"ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವುದಕ್ಕಿಂತಲೂ ಹೆಚ್ಚಿನ ಪ್ರೀತಿಯು ಯಾವದೂ ಇಲ್ಲ." †

ಮಹಾದೇವಿಯಕ್ಕನ ಪ್ರೇಮ ಕಲ್ಪನೆ ಕ್ರಿಸ್ತಧರ್ಮದ ಕಲ್ಪನೆಗಿಂತಲೂ ಬಹುದೂರ ಹೋಗಿತ್ತು. ಅದು ರಾಬಿಯಾಳ ಕಲ್ಪನೆಯಂತೆ ನಿಷ್ಕಾಮದಿಂದ ಕೂಡಿತ್ತು. ದೇವರು ಪ್ರೇಮನಿಧಿ; ಅವನ ಭಂಡಾರ ಅಕ್ಷಯ, ಅನಂತ; ಅದರಿಂದ ಹೆಚ್ಚು ಹೊನ್ನನ್ನೊಯ್ಯಲು ಮಾನವನು ಹೆಚ್ಚು ಶಕ್ತಿಯನ್ನು ಸಂಪಾದಿಸಿಕೊಳ್ಳಬೇಕು ಎಂಬ ಭಾವನೆ ಅವಳ ಹೃದಯದ ಮೇಲೆ ಅಚ್ಚೊತ್ತಿದಂತೆ ಮೂಡಿತ್ತು.

ಪ್ರಿಯ-ಪ್ರೇಯಸೀ ಭಾವದ ಈ ಎಲ್ಲ ತತ್ತ್ವಗಳೂ ಅಕ್ಕನ ಜೀವನದಲ್ಲಿ ಕಂಡು ಬರುತ್ತವೆ. ಕಲ್ಲು ಮುಳ್ಳುಗಳಿಂದ ತುಂಬಿದ ಈ ಮಾರ್ಗವನ್ನು ಆಕೆ ಚೆನ್ನಾಗಿ ತುಳಿದಿದ್ದಾಳೆ. ಅವಳ ಆಧ್ಯಾತ್ಮಿಕ ಸಾಧನೆಯ ಸಂಕಷ್ಟಗಳನ್ನು ನೋಡಿದವರು ಬಸವಣ್ಣನವರ ಮಾತಿನಲ್ಲಿ 'ಭಕ್ತಿಯೆಂಬುದ ಮಾಡಬಾರದು. ಗರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು' ಎಂದೆನ್ನದಿರಲಾರರು.

೩

ಅಕ್ಕನ ಅಧ್ಯಾತ್ಮಿಕ ಜೀವನ ಪ್ರಗತಿ ಅವಳ ಸ್ವಯಂವರ, ವಿವಾಹ, ಗಂಡನೊಂದಿಗೆ ಬಾಳುವೆ ಮಾಡಿದುದು, ಗಂಡನೊಂದಿಗೆ ಐಕ್ಯವಾದುದು ಈ ನಾಲ್ಕು ಭಾಗಗಳಲ್ಲಿ ಕಂಡು ಬರುತ್ತದೆ. 'ಲೌಕಿಕ ಪಾರಮಾರ್ಥಿಕವೆಂಬೆರ

---

* St. John : 15 : 9.
‡ Ibid : 15 : 12.
† Ibid : 15 : 13.

ಡನ್ನು ನುಡಿಸಲು ಬಾರದಯ್ಯಾ. ಬಿಲ್ಲು ಬೆಳವಲಕಾಯಿ ಒಂದಾಗಿ ಹಿಡಿಯಲು ಬಾರದಯ್ಯಾ' ಎಂದು ಆಕೆಯೇ ನುಡಿದಿದ್ದರೂ ಲೌಕಿಕವನ್ನು ಪರಮಾರ್ಥವನ್ನಾಗಿಸಿದ ಕೀರ್ತಿಯನ್ನು ಮಹಾದೇವಿ ಗಳಿಸಿದ್ದಾಳೆ. ಕೌಶಿಕನನ್ನು ವರಿಸುವಾಗಲೇ ಮಹಾದೇವಿ ಶಿವಪೂಜಾ ದುರಂಧರೆಯಾಗಿದ್ದಳು. ತನ್ನ ಶಿವಪೂಜೆಗೆ ಯಾವ ಕುಂದು ಆಚರಣೆಗಳೂ ಬರುವುದಿಲ್ಲವೆಂದು ಧೈರ್ಯ ಮಾಡಿಕೊಂಡು ಕೌಶಿಕನನ್ನು ಕೂಡಿದಳು. ಇದೇ ಧೈರ್ಯದಿಂದಲೇ ಅಲ್ಲವೆ ಭಗವಾನ್ ರಾಮಕೃಷ್ಣರು ಶಾರದಾಮಣಿ ದೇವಿಯರನ್ನು ಕೂಡಿದುದು. ಆದರೆ ರಾಮಕೃಷ್ಣರ ಜೀವನದಲ್ಲಿ ವಿವಾಹ ಕುತ್ತಾಗಲಿಲ್ಲ; ಮಡದಿ ಗಂಡನ ಧರ್ಮದ ಮಾರಿಯಾಗಲಿಲ್ಲ, ಧರ್ಮಪತ್ನಿಯಾದಳು. ಗಂಡ, ಹೆಂಡತಿಯನ್ನು 'ಭವತಾರಿಣಿ'ಯೆಂದು ಪೂಜಿಸುವಷ್ಟು ದೂರ ಅವರ ಧರ್ಮಮೈತ್ರಿ ಬೆಳೆಯಿತು. ಮಹಾದೇವಿ ಕೌಶಿಕರ ವಿವಾಹ ಹಾಗಾಗಲಿಲ್ಲ. ಧರ್ಮದ ಹೆಣ್ಣು ಕರ್ಮದ ಗಂಡನ್ನು ಕೂಡಿತು; ಪ್ರೇಮ ಕಾಮದ ಕೈಗೆ ಸಿಲುಕಿತು; ಬೆಳಕು ಕತ್ತಲೆಯ ಸನಿಹಕ್ಕೆ ಹೋದಂತಾಯಿತು. ಘರ್ಷಣವೊದಗಿದಾಗ ಸ್ವಲ್ಪ ವಿರಸಕ್ಕೆ ಕಾರಣವಾದರೂ, ಅದರಿಂದ ಲೋಕ ಕಲ್ಯಾಣವೂ ಧರ್ಮಜಯವೂ ಸಾಧಿಸಿದವು. ಕೌಶಿಕನನ್ನು ಮದುವೆಯಾಗುವಾಗಲೂ, ಅವನೊಂದಿಗೆ ಬಾಳುವೆ ಮಾಡುವಾಗಲೂ ತಾನು ತನ್ನ ಏಕಾಂತ ಚಿಂತೆಯಲ್ಲಿ ಮಗ್ನಳಾಗಿರುತ್ತಿದ್ದಳು. ಅವಳಿಗೆ ಎಲ್ಲವೂ ಶಿವಮಯ. ಕೌಶಿಕನೂ ಅವಳಿಗೆ ಶಿವನೇ. ಅವಳು ಮದುವೆಯಾದುದು ಶಿವನನ್ನೇ ಹೊರತು ಕೌಶಿಕನನ್ನಲ್ಲ. ಅವನು ಶಿವನಲ್ಲ, ಶಿವನ ಗುಣಗಳಿಂದ ಬಾಹಿರನಾಗಿದ್ದಾನೆಂಬ ಅರಿವು ಬಂದೊಡನೆಯೇ ಅವನನ್ನು ಬಿಟ್ಟು ತೆರಳಬೇಕಾಯಿತು. ಮೈತ್ರಿಭಂಗ ಹೊಂದಿದ ವಿವಾಹ ಆತ್ಮನ ಅತ್ಯಾಚಾರವೆಂಬುದು ಅಕ್ಕನಿಗೆ ಚೆನ್ನಾಗಿ ಗೊತ್ತಿತ್ತು. ತಾನು ನಡೆಸಿದ ಬಾಳುವೆ, ಪಟ್ಟ ಅನುಭವಗಳನ್ನು ಅಧ್ಯಾತ್ಮದ ಎರಕದಲ್ಲಿ ಹೊಯ್ದು, ಹೊಸ ಮೂರ್ತಿಯನ್ನು ಸೃಜಿಸಿದಳು.

ನವಿಲು ಗಿರಿಯಲ್ಲದೆ ಹುಲ್ಲು ಮೊರಡಿಯಲ್ಲಾಡುವದೇ? ಹಂಸೆ ಕೊಳವನ್ನಲ್ಲದೆ ಕಿರಿವಳ್ಳಕ್ಕೈಳಸುವದೇ? ಕೋಗಿಲೆ ಮಾಮರ ತಳಿತಲ್ಲದೆ ಸ್ವರಗೈವುದೇ? ಭ್ರಮರ ಪರಿಮಳವಿಲ್ಲದ ಪುಷ್ಪಕ್ಕೈಳಸುವದೇ? ಹಾಗೆಯೇ ಮಹಾ

ದೇವಿಯ ಮನಸ್ಸು ಚೆನ್ನಮಲ್ಲಿಕಾರ್ಜುನನಲ್ಲದೆ ಬೇರೆ ಯಾರನ್ನು ಬಯಸುವುದು? ಹರನು ಗಂಡನಾಗಬೇಕೆಂದು ಅನಂತಕಾಲ ತಪಸಿದ್ದುದನ್ನು ಹೇಳುತ್ತಾಳೆ. ಹರನನ್ನು ಸಕಾರಣವಾಗಿಯೇ ಒಲಿದಿದ್ದಾಳೆ. ಅವನು ಸಾವಿಲ್ಲದ ರೂಹಿಲ್ಲದ ಕೇಡಿಲ್ಲದ ಚೆಲುವ; ಎಡೆಯಿಲ್ಲದ ಕಡೆ ಇಲ್ಲದ ಕುರುಹಿಲ್ಲದ ಚೆಲುವ; ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವ; ಕುಲಸೀಮೆ ಇಲ್ಲದ ನಿರ್ಭಯ ಚೆಲುವ. ಇಂತಹ ಗಂಡನನ್ನು ಬಿಟ್ಟು ಉಳಿದ ಸಾವ ಕೆಡುವ ಗಂಡರ ಒಯ್ದು ಒಲೆಯೊಳಗಿಕ್ಕು ಎಂದು ತನ್ನ ಮನಸ್ಸಿನ ಏಕನಿಷ್ಠೆಯನ್ನೂ ಸ್ಥಿರಪ್ರತಿಜ್ಞೆಯನ್ನೂ ಸೂಚಿಸುತ್ತಾಳೆ. ಕಾಪಾಲಿಯೂ, ಸ್ಮಶಾನವಾಸಿಯೂ, ಮೂರುಕಣ್ಣಿನ ವಕ್ರರೂಪಿಯೂ ಆದ ಶಿವನೇ ತನ್ನ ಪತಿಯೆಂದು ಅವನನ್ನು ವರಿಸಿದ ಗಿರಿಜೆಯ ಮನೋದಾರ್ಢ್ಯವೂ ಶಿವಾನುಭವವೂ ಮಹಾದೇವಿಯಲ್ಲಿಯೂ ಕಂಡುಬರುತ್ತದೆ. ಇಂತಹ ಗಂಡಿನೊಂದಿಗೆ ಮಹಾದೇವಿಯ ಮದುವೆ ವಿಜೃಂಭಣೆಯಿಂದ ನೆರವೇರುತ್ತದೆ. ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಭ, ಹವಳದ ಚಪ್ಪರವನ್ನು ಹಾಕಿ ಮಾಣಿಕದ ಮೇಲು ಕಟ್ಟು ಕಟ್ಟಿ ಮದುವೆಮಾಡಿದರು. ಲೌಕಿಕವಿವಾಹಗಳಲ್ಲಿ ಹಲಕೆಲವು ವೈಭವದ ಪ್ರದರ್ಶನ ನಡೆಯುತ್ತದೆ. ವಧೂವರರು ಅದನ್ನು ಯಾವಜ್ಜೀವಪರ್ಯಂತ ಹೇಳಿಕೊಳ್ಳುವುದುಂಟು. ವೈಭವದ ಮುಗಿಲಮುಟ್ಟವೇ ತನ್ನ ಮದುವೆಯಲ್ಲಿ ಕಂಡುಬಂದಿತೆಂದು ಮಹಾದೇವಿ ಹೇಳಿಕೊಳ್ಳುತ್ತಾಳೆ. ಆದರೆ ಎಲ್ಲರ ಮದುವೆಯಲ್ಲಿ ಆಗದ ಕೆಲವು ವ್ಯವಸ್ಥೆಗಳು ಆಗಿದ್ದವು. 'ಜಲದ ಮಂಟಪದ ಮೇಲೆ ಉರಿಯ ಚಪ್ಪರವನ್ನಿಕ್ಕಿ, ಆಲಿಕಲ್ಲ ಹಸೆಯಹಾಸಿ, ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದುಮದುವೆಯಾದನು. ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ' ಎಂದು ಹೇಳುತ್ತಾಳೆ. ಮುಂದೆ ಇಂತಹ ಸನ್ನಿವೇಶದಲ್ಲಿ ಆದ ಮದುವೆಯ ಪರಿಯಂತೆ ತನ್ನಜೀವನವೂ ಉಷ್ಣ ಶೀತ, ಸುಖದುಃಖಗಳೆರಡನ್ನೂ ಸಮನಾಗಿ ಭಾವಿಸುವುದೆಂದು ಸೂಚಿಸುತ್ತಾಳೆ* ತನ್ನ ಅಲಂಕಾರದ

---

* ಸುಖದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥
– ಭಗವದ್ಗೀತೆ. ೨.೩೮

ಪರಿಯನ್ನು ಬಹಳ ರಮ್ಯವಾಗಿ ವರ್ಣಿಸುತ್ತಾಳೆ. 'ಮಂಗಳವೇ ಮಜ್ಜನವೆನಗೆ, ವಿಭೂತಿಯೇ ಒಳುಗುಂದದರಿಸಿನವೆನಗೆ, ದಿಗಂಬರವೇ ದಿವ್ಯಾಂಬರವೆನಗೆ, ಶಿವಪಾದರೇಣುವೆ ಅನುಲೇಪವೆನಗೆ, ರುದ್ರಾಕ್ಷಿಯೇ ಮೈದೊಡಿಗೆ ಎನಗೆ, ಶರಣರ ಪಾದಂಗಳೇ ತೊಂಡಿಲ ಬಾಸಿಗವೆನಗೆ, ಚೆನ್ನಮಲ್ಲಿಕಾರ್ಜುನನೇ ಗಂಡ ಎನಗೆ, ಆನು ಚೆನ್ನಮಲ್ಲಿಕಾರ್ಜುನಂಗೆ ಮದುವಳಿಗೆ, ಎನಗೆ ಬೇರೆ ಶೃಂಗಾರ ವೇಕೆ ಹೇಳಿರವ್ವಾ."

ಮದುವೆಯಾದ ಮೇಲೆ ಗಂಡನ ಕಡೆಯವರೇ ಮಹಾದೇವಿಯ ಬಂಧು ಬಳಗವಾಗುತ್ತಾರೆ. ಗಂಡನ ಭಕ್ತ ಭಕ್ತೆಯರೇ ಆಕೆಯ ಸೋದರ ಸೋದರಿಯರಾಗುತ್ತಾರೆ. 'ಶಿವಭಕ್ತರೇ ಬಂಧುಗಳೆನಗೆ' ಎಂದು ಹೇಳುತ್ತಾಳೆ. ಶಿವಾನುಭಾವಿಗಳ ಸಂಗದಿಂದ ತನ್ನ ತನುಮನ ಶುದ್ಧವಾದ ಬಗೆಯನ್ನು ಸಂಗದಿಂದ ಅಗ್ನಿ ಹುಟ್ಟುವ ರೀತಿಯಲ್ಲಿ, ಸಂಗದಿಂದ ಬೀಜ ಮೊಳೆಯುವ ರೀತಿಯಲ್ಲಿ ಸಂಗದಿಂದ ದೇಹವಾಗುವ ರೀತಿಯಲ್ಲಿ, ಸಂಗದಿಂದ ಸರ್ವ ಸುಖದೋರುವ ರೀತಿಯಲ್ಲೆಂದು ವರ್ಣಿಸುತ್ತಾಳೆ.

ಪತಿದೇವನು ಅವಳ ಸುಖವನ್ನಪ್ಪಿಕೊಂಡು, ಮನವ ಸೂರುಗೊಂಡು ತನುವಸೂರೆಗೊಂಡು, ಇರವನಿಂಬುಗೊಳ್ಳುತ್ತಾನೆ. ನಿಂತಲ್ಲಿ ಕುಳಿತಲ್ಲಿ ಮಹಾದೇವಿಗೆ ಅವನದೇ ಧ್ಯಾನ, ಅವನದೇ ಜ್ಞಾನ. ಅವನ ರೂಪು, ಅವನ ನಡವಳಿಕೆ, ಅವನ ಸರಸ ಸಲ್ಲಾಪಗಳು ಅವಳ ನೆನಹನ್ನು ಮುತ್ತುತ್ತವೆ. ಅವಳಿಗೆ ಬೇರೆ ಉದ್ಯಮಕ್ಕೆ ವ್ಯವಧಾನವಿಲ್ಲ. ಪತಿಯ ಧ್ಯಾನ ಚಿಂತನೆಗಳಿಗಿಂತಲೂ ಹೆಚ್ಚಿನದು ಯಾವುದೂ ಕಂಡು ಬರುವುದಿಲ್ಲ. ಪತಿ ಯಾವಾಗ ಬರುವನೋ ಎಂದು ಹಾರೈಸುವಳು, ನಿರೀಕ್ಷಿಸುವಳು, ಹಸೆ ಹಂದರವನ್ನಿಕ್ಕಿ ಅವನಡಿಗಳಿಗೆಡೆ ಮಾಡಿಕೊಂಡಿರುವಳು.

ಆದರೆ ಆ ಪತಿ ಸುಲಭಸಾಧ್ಯಸಲ್ಲ. ಜಗತ್ತಿನ ಸೂತ್ರಚಾಲಕ ವೃತ್ತಿಯಲ್ಲಿ ಒಮ್ಮೊಮ್ಮೆ ತನ್ನ ಪ್ರಿಯಸತಿಯನ್ನು ಮರೆಯುತ್ತಿದ್ದನು. ಕರ್ತವ್ಯದ ಬಂಧನದಲ್ಲಿ ಮಮ್ಮಲ ಮರುಗುವ ಮಡದಿಯನ್ನು ಮರೆತುಬಿಡುತ್ತಿದ್ದನು. ಅವನು ಬರುವ ದಾರಿಯನ್ನು ನೋಡಿ ನೋಡಿ ಮಹಾದೇವಿಗೆ ಬಾಯಾರುತ್ತಿದ್ದಿತು; ಕಳವಳದಿಂದ ಮನಸ್ಸು ತಲೆಕೆಳಗಾಗುತ್ತಿತ್ತು, ಬೀಸುವ ಗಾಳಿ ಉರಿ

ಯಾಗುತ್ತಿತ್ತು, ಬೆಳುದಿಂಗಳು ಬಿಸಿಲಾಗುತ್ತಿತ್ತು. ತನ್ನ ಸ್ಥಿತಿಯನ್ನು 'ಹೊಳಲು ಸುಂಕಿಗ'ನಿಗೆ ಹೋಲಿಸಿಕೊಳ್ಳುತ್ತಾಳೆ. ಕಂಡ ಕಂಡವರಿಗೆ ಗಂಡನ ಗುರುತು ಹೇಳಿ ಬುದ್ಧಿ ಹೇಳಿ ಕರೆದುಕೊಂಡು ಬನ್ನಿ ಎಂದು ಬಿನ್ನವಿಸಿಕೊಳ್ಳುತ್ತಾಳೆ. 'ಹೊಳೆವ ಜಡೆಯ ಮೇಲೆ ಎಳೆವೆಳದಿಂಗಳು, ಫಣಿ ಮಣಿ ಕರ್ಣ ಕುಂಡಲದವ ನೋಡವ್ವಾ, ರುಂಡಮಾಲೆಯ ಕೊರಳವನ ಕಂಡರೆ ಒಮ್ಮೆ ಬರ ಹೇಳವ್ವಾ, ಗೋವಿಂದನ ನಯನ ಉಂಗುಟದ ಮೇಲಿಪ್ಪುದು—ಇದು ಚೆನ್ನ ಮಲ್ಲಿಕಾರ್ಜುನನ ಕುರುಹು' ಎಂದು ಹೇಳುತ್ತಾಳೆ. ಮಹಾದೇವಿ ವಿರಹವೇದನೆಯನ್ನು ತಡೆಯದಾಗುತ್ತಾಳೆ. ಅವಳ ಬಾಳು ಬೇಯತೊಡಗುತ್ತದೆ, ಬರಿದಾಗ ತೊಡಗುತ್ತದೆ. ಹುಚ್ಚಳಂತೆ ಕಂಡ ಕಂಡವರನ್ನು, ಕಂಡ ಕಂಡ ವಸ್ತುಗಳನ್ನು 'ಪತಿಯ ಕಂಡಿರಾ' ಎಂದು ಕೇಳಲಾರಂಭಿಸುತ್ತಾಳೆ.

"ಅಳಿ ಸಂಕುಳವೇ, ಮಾಮರನೇ, ಬೆಳುದಿಂಗಳೇ, ಕೋಗಿಲೆಯೇ, ನಿಮ್ಮ ನಿಮ್ಮನೆಲ್ಲರನು ಒಂದು ಬೇಡುವೆನು. ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೆ."

"ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೆ, ಸರವೆತ್ತಿ ಪಾಡುವ ಕೋಗಿಲೆಗಳಿರಾ ನೀವು ಕಾಣಿರೆ ನೀವು ಕಾಣಿರೆ, ಎರಗಿ ಬಂದಾಡುವ ತುಂಬಿಗಳಿರಾ ನೀವು ಕಾಣಿರೆ ನೀವು ಕಾಣಿರೆ, ಕೊಳತಡೆಯೊಳಾಡುವ ಹಂಸಗಳಿರಾ ನೀವು ಕಾಣಿರೆ ನೀವು ಕಾಣಿರೆ, ಗಿರಿಗಹ್ವರದೊಳಗಾಡುವ ನವಿಲುಗಳಿರಾ ನೀವು ಕಾಣಿರೆ, ನೀವು ಕಾಣಿರೆ, ಚೆನ್ನಮಲ್ಲಿಕಾರ್ಜುನನೆಲ್ಲಿರ್ದಿಹನೆಂದು ನೀವು ಹೇಳಿರೆ ನೀವು ಹೇಳಿರೆ."

ಈ ನೋವಿನ ತೀಕ್ಷ್ಣತೆಯನ್ನರಿಯದೆ ಒಣ ಸಮಾಧಾನಗಳನ್ನು ಹೇಳುತ್ತಿದ್ದವರಿಗೆ 'ಬಂಜೆ ಬೇನೆಯನರಿಯಳು. ಬಲತಾಯಿ ಮುದ್ದ ಬಲ್ಲಳೇ? ನೊಂದ ನೋವ ನೋಯದವರೆತ್ತ ಬಲ್ಲರು? ಚೆನ್ನಮಲ್ಲಿಕಾರ್ಜುನ ನೀನಿರಿದಲಗು ಒಡಲಲ್ಲಿ ಮುರಿದು ಹೊರಳುವಳ ನೀವೆತ್ತ ಬಲ್ಲಿರೇ ಎಲೆತಾಯಿಗಳಿರಾ' ಎಂದು ಉತ್ತರ ಕೊಡುತ್ತಿದ್ದಳು.

ಅಗಲಿದ ಗಂಡ ಮತ್ತೆ ಬಂದಾಗ ಆಗುತ್ತಿದ್ದ ಸುಖದ ಅನುಭವವು ಅಕ್ಕನಿಗಿತ್ತು. ಕೂಡಿಡುವ ಸುಖದಿಂದ ಸ್ವಲ್ಪ ಅಗಲಿ ಕೂಡುವ ಸುಖಲೇಸು. ಆದರೆ ಆ ಸುಖ ಚೆನ್ನಮಲ್ಲಿಕಾರ್ಜುನನನ್ನು ಅಗಲದೆ ದೊರೆಯಬೇಕೆಂದು ಹಾರೈಸುವಳು. ತನ್ನನ್ನು ಚೆನ್ನಮಲ್ಲಿಕಾರ್ಜುನ ಬಿಟ್ಟುಹೋದಾಗ ಅಗಲಿ

ಕೆಯ ಒಂದು ಬಗೆಯ ನೋವಾದರೆ ಹತ್ತಿರಿದ್ದು ವಿರಹವೇದನೆಯನ್ನುಂಟು ಮಾಡುತ್ತಿದ್ದ ಪ್ರಿಯನನ್ನು ಕುರಿತು 'ನೀನು ದಂಡು ಮಂಡಲಕ್ಕೆ ಹೋದೆ ನೆಂದೊಡೆ ನಾನು ಸುಮ್ಮನಿಹೆನು. ನೀನು ಎನ್ನ ಕೈಯೊಳಗಿರ್ದು ಎನ್ನ ಮನದೊಳಗಿರ್ದು ನುಡಿಯದಿರ್ದೊಡಾನು ಎಂತು ಸೈರಿಸುವೆನಯ್ಯ?' ಎಂದು ಕೇಳುತ್ತಾಳೆ.

ಈ ವೇದನೆಯನ್ನು ಸಹಿಸಲಾರದೆ ಅತ್ಯಂತ ದೈನ್ಯದಿಂದ 'ನನ್ನ ಬಿನ್ನಪವ ಆಲಿಸು, ಲಾಲಿಸು, ಪಾಲಿಸು ನನ್ನ ದುಃಖವ ನೋಡು. ನನ್ನ ಬಳಿಗೆ ಬಾರೆನ್ನ ದೊರೆಯೇ, ನಿನ್ನ ಬರವೇ ನನ್ನಸುವಿನ ಬರವು. ನಿನ್ನನ್ನಗಲಿ ನಾನು ಉಳಿವೆನೇ, ಬಾಳುವೆನೇ? ಒಂದಿರುಳು ನಿನ್ನನ್ನಗಲಿರುವುದೆಂದರೆ ತೆಕ್ಕೆ ಸಡಲಿದ ಜಕ್ಕವಕ್ಕಿಯಂತಾಗುವೆನಲ್ಲಾ. ನಿನ್ನರಿಕೆಯ ನರಕವೇ ಮೋಕ್ಷ ನೋಡಯ್ಯ; ನಿನ್ನನರಿಯದ ಮುಕ್ತಿಯೇ ನರಕ ಕಂಡಯ್ಯ. ನೀನೊಲ್ಲದ ಸುಖವೇ ದುಃಖ ಕಂಡಯ್ಯ. ನೀನೊಲಿದ ದುಃಖವೇ ಪರಮಸುಖ ಕಂಡಯ್ಯ. ನೀಕಟ್ಟಿ ಕೆಡಹಿದ ಬಂಧನವೇ ನಿರ್ಬಂಧನವೆಂದಿಪ್ಪೆನು' ಎಂದು ಮೊರೆಯಿಡುತ್ತಾಳೆ. ಪತಿಯ ಒಲವಿಗಾಗಿ ಯಾವ ತ್ಯಾಗವನ್ನು ಬೇಕಾದರೂ ಮಾಡಲು ಸಿದ್ಧಳಾಗುತ್ತಾಳೆ.

ಪತಿಯಾದರೋ ಬಹು ಕಠಿಣಚಿತ್ತ, ನಿಷ್ಠುರ. ತನು ಕರಗದವರಲ್ಲಿ ಮಜ್ಜನವನೊಲ್ಲ, ಮನಕರಗದವರಲ್ಲಿ ಪುಷ್ಪವನೊಲ್ಲ, ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲ, ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲ, ಭಾವ ಶುದ್ಧವಿಲ್ಲದವರಲ್ಲಿ ಧೂಪವನೊಲ್ಲ, ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲ, ತ್ರಿಕರಣಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲ, ಹೃದಯಕಮಲ ಶುದ್ಧವಿಲ್ಲದವರಲ್ಲಿ ಇರಲೊಲ್ಲ. ಅಂತಹ ಗಂಡನಿಗೆ ತನ್ನ ಮನದ ನಚ್ಚು, ಮಚ್ಚು, ಸಲುಗೆ, ಸೋಲು, ಅಳಲು, ಬಳಲು, ಕೊರಗು ಎಲ್ಲವನ್ನೂ ಅರ್ಪಿಸಿ 'ತರಗೆಲೆಯ ಮೆಲ್ಲಿದ್ದು ನಾನಿಹೆನು, ಸುರಿಗೆಯ ಮೇಲೊರಗಿ ನಾನಿಹೆನು. ಆದರೆ ನೀನು ನಿಕೃಷ್ಟವಾಗಿ ಕಂಡರೆ ಒಡಲನು ಪ್ರಾಣವನು ನಿನಗೇ ಅರ್ಪಿಸಿ ಶುದ್ಧಳಾಗುವೆನು' ಎಂದು ಬಿನ್ನವಿಸಿಕೊಳ್ಳುತ್ತಾಳೆ.

ಈ ಪತಿದೇವನನ್ನು ಹೇಗೆ ಮೆಚ್ಚಿಸುವುದು ಹೇಗೆ ಅರ್ಚಿಸುವುದು? ಅಷ್ಟವಿಧಾರ್ಚನೆಯ ಮಾಡಿ ಒಲಿಸುವುದಕ್ಕೆ ಅವನು ಬಹಿರಂಗ ದೂರನು;

ಅಂತರಂಗ ಧ್ಯಾನದಿಂದ ಒಲಿಸುವುದಕ್ಕೆ ವಾಙ್ಮನಾತೀತನು; ಜಪಸ್ತೋತ್ರ ದಿಂದೊಲಿಸುವುದಕ್ಕೆ ನಾದಾತೀತನು; ಭಾವಜ್ಞಾನದಿಂದೊಲಿಸುವುದಕ್ಕೆ ಮತಿಗತೀತನು; ಹೃದಯ ಕಮಲದಲ್ಲಿಟ್ಟುಕೊಳ್ಳುವುದಕ್ಕೆ ಸರ್ವಾಂಗ ಪರಿಪೂರ್ಣನು' ಜಗಜ್ಯೋತಿಯನ್ನು ತಂದು ಹಿತ್ತಿಲ ಹುಲ್ಲು ಮೆದೆಯಲ್ಲಿ ಬೈತಿಡಲು ಶಕ್ಯವೇ ? ಪತಿದೇವನನ್ನೇ 'ಅಯ್ಯಾ ನಿನ್ನ ಒಲಿಸಲಿನ್ನವಳಲ್ಲ-ನೀನೊಲಿವುದೇ ಸುಖವಯ್ಯ' ಎಂದು ಬೇಡುತ್ತಾಳೆ.

ತನ್ನ ಅಂತರಂಗದ ಆಂಹತಿಗೆ ತಾನೇ ಸಮಾಧಾನ ಹೇಳಿಕೊಳ್ಳುತ್ತಾಳೆ. ಅರಸಿ ತೊಳಲಿದರಿಲ್ಲ, ಬಯಸಿ ಹೊಕ್ಕರಿಲ್ಲ, ತಪಸ್ಸು ಮಾಡಿದರಿಲ್ಲ. ಅದು ತನ್ನ ಬಹುಕಾಲಕ್ಕಲ್ಲದೆ ಸಾಧ್ಯವಾಗದು. ಶಿವನೊಲಿದಲ್ಲದೆ ಶಾಂತಿಯು ಕೈಗೂಡದು. ಅಕ್ಕನ ಭಕ್ತಿ ದೇಶಾವರದ ಭಕ್ತಿಯಲ್ಲ. ಶಿವನೊಂದಿಗೆ ಅವಳು ವ್ಯಾಪಾರಕ್ಕೆ ಹೊರಟಿರಲಿಲ್ಲ. ತನ್ನ ಭಕ್ತಿ ವಿರಕ್ತಿಗಳ ಪರಿಶುದ್ಧತೆಯನ್ನು ನಿಷ್ಕಾಮ ನಿರ್ವ್ಯಾಜ ಪ್ರೇಮದಲ್ಲಿ ಹೊರ ಚೆಲ್ಲಿದ್ದಾಳೆ. 'ಅಯ್ಯಾ ನೀ ಕೇಳಿದರೆ ಕೇಳು, ಕೇಳದಿರ್ದೊಡೆ ಮಾಡು, ನಾನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ; ಅಯ್ಯ, ನೀ ಒಲಿದರೆ ಒಲಿ, ಒಲಿಯದಿರ್ದೊಡೆ ಮಾಣು, ನಾನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯ: ಅಯ್ಯ ನೀನೋಡಿದೊಡೆ ನೋಡು ನೋಡದಿರ್ದೊಡೆ ಮಾಣು. ನಾನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯ. ಚೆನ್ನಮಲ್ಲಿಕಾರ್ಜುನಯ್ಯ, ನಾ ನಿಮ್ಮ ಪೂಜಿಸಿ ಹರುಷದೊಳೋಲಾಡುವೆನಯ್ಯ' ಎಂದು ತನ್ನ ದೃಢ ಪ್ರತಿಜ್ಞೆಯನ್ನು ಬಿನ್ನವಿಸಿಬಿಡುತ್ತಾಳೆ.

ಮಹಾದೇವಿಯ ನಿಶ್ಚಲಭಕ್ತಿಯನ್ನು ಕಂಡು ಮನದನ್ನನು ಕನಸಿನಲ್ಲಿ ಆಕೆಗೆ ದರ್ಶನಕೊಡುತ್ತಾನೆ. 'ಅಕ್ಕ ಕೇಳಕ್ಕ ಆನೊಂದು ಕನಸ ಕಂಡೆ. ಚಿಕ್ಕ ಚಿಕ್ಕ ಜಡೆಸುಲಿಪಲ್ಲಿಗರುವನು ಬಂದೆನ್ನ ನೆರೆವನು ನೋಡವ್ವಾ, ಆತನ ನಪ್ಪಿಕೊಂಡು ತಳವೆಳಗಾದೆನೆಲಗೆ' ಎಂಬ ಅನುಭವವನ್ನು ಪಡೆಯುತ್ತಾಳೆ. ಈಗ ಅಕ್ಕನಿಗೆ ತನ್ನ ಪ್ರಿಯನ ನಿಜವಾದ ಸ್ವಭಾವದರಿವಾಗುತ್ತದೆ. ಅವನು ಹೂಡಿದ ವಿವಿಧ ಪರೀಕ್ಷೆಗಳಲ್ಲಿ ತಾನು ಜಯಶಾಲಿಯಾದುದನರಿಯುತ್ತಾಳೆ. 'ನಾನು ನಿನಗೊಲಿದೆ. ನೀನು ಎನಗೊಲಿದೆ, ನೀನೆನ್ನ ಅಗಲದಿಪ್ಪೆ, ನಾನಿನ್ನ ನಗಲದಿಪ್ಪೆನಯ್ಯ. ನಿನಗೆ ನನಗೆ ಬೇರೊಂದು ಠಾವುಂಟೆ? ನೀನು ಕರುಣಿ

ಎಂಬುದ ನಾನು ಬಲ್ಲೆನು. ನೀನಿರಿಸಿದ ಗತಿಯೊಳಗೆ ಇಪ್ಪವಳಾನಯ್ಯ ನೀನೆ ಬಲ್ಲೆ ಚೆನ್ನಮಲ್ಲಿಕಾರ್ಜುನಾ' ಎಂದು ಸಮಾಧಾನ ಪಡೆಯುತ್ತಾಳೆ. ಹೊಳೆವ ಕೆಂಜೆಡೆಗಳ, ಮಣಿಮಕುಟ, ಒಪ್ಪುವ ಸುಲಿಪಲ್ಲ, ನಗೆಮೊಗದ ಕಂಗಳ, ಕಾಂತಿಯಿಂ ಈರೇಳು ಭುವನಮಂ ಬೆಳಗುವ ದಿವ್ಯ ಸ್ವರೂಪನ ಕಂಡೆ ನಾನು, ಕಂಡೆನ್ನ ಕಂಗಳ ಬರ ಹಿಂಗಿತಿಂದು, ಗಂಡ ಗಂಡರೆಲ್ಲ ಹೆಂಡ ಹೆಂಡರಾಗಿ ಆಳುವ ಗರುವನ ಕಂಡೆ ನಾನು, ಜಗದಾದಿ ಶಕ್ತಿಯೊಳು ಬೆರಸಿಯೊಡನಾಡುವ ಪರಮಗುರು ಚೆನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು' ಅಕ್ಕನ ಸರ್ವ ಸಂಕಷ್ಟಗಳೂ ಪರಿಹಾರವಾಗುತ್ತವೆ. ಮನದಲ್ಲಿ ಶಾಂತಿ ಮೂಡುತ್ತದೆ. ವಾದ ಭೇದಗಳು, ದುಃಖ ಸಂಶಯಗಳು ಅಡಗುತ್ತವೆ. 'ಲಿಂಗವೆನ್ನೇ, ಲಿಂಗೈಕ್ಯವೆನ್ನೆ, ಸಂಗವನ್ನೇ, ಸಮರಸವೆನ್ನೆ, ಆಯಿತೆನ್ನೆ, ಆಗದೆನ್ನೆ, ನೀನೆನ್ನೆ, ನಾನೆನ್ನೆ, ಚೆನ್ನಮಲ್ಲಿಕಾರ್ಜುನನಲ್ಲಿ ಲಿಂಗೈಕ್ಯವಾದ ಬಳಿಕ ಏನೂ ಎನ್ನೆ' *

ಪ್ರೇಮವು ಪ್ರಿಯದರ್ಶನದ ಮಾರ್ಗವಾಗಿತ್ತು. ಪ್ರೇಮವೇ ಮಹಾದೇವಿಯ ದೇವರು. ಅಲ್ಲಿಯೇ ತನ್ನ ಚೆನ್ನಮಲ್ಲಿಕಾರ್ಜುನನನ್ನು ಕಾಣುತ್ತಾಳೆ, ಕೂಡುತ್ತಾಳೆ. ಜಗದ ಜಂಜಡವೆಲ್ಲಾ ಹರಿಯುವ ಬಗೆಯನ್ನು ಸೂಚಿಸಿ ಕೃತಾರ್ಥಳಾಗುತ್ತಾಳೆ. ತನ್ನ ಆತ್ಮಾನುಭವದಿಂದ ಮಹಾ ಶಿವಶರಣ ಶರಣೆಯರ ಪಂಕ್ತಿಯಲ್ಲಿ ಜಗತ್ತಿನ ಅಧ್ಯಾತ್ಮಿಕ ಜೀವಿಗಳ ಶ್ರೇಣಿಯಲ್ಲಿ ಹಿರಿದೂ ಅಮರವಾದುದೂ ಆದ ಸ್ಥಾನವನ್ನು ದೊರಕಿಸಿಕೊಂಡಳು. ಆದರ್ಶ

---

* "Unattached; yet shining in everything the motive Power of the universe, without which the universe will fall to pieces in a moment, is Love, and Love, is God"

– Swami Vivekananda
Speeches and writings—Page 354.

"Tell me how much one loves and I will tell you how much he has seen of God. Tell me how much he loves and I will tell you how much he lives with God. Tell me how much he loves and I will tell you how far into

ಜೀವನವನ್ನು ಸಾಗಿಸಿ ಜಗತ್ತಿಗೆ ಆದರ್ಶವಾದಳು. ಕರ್ಮದ ಕದಳಿಯಲ್ಲಿ ಸಿಲುಕಿ ತೊಳಲುವ ಲೋಗರಿಗೆ ಧೈರ್ಯವನ್ನೂ, ಆಸೆಯನ್ನೂ, ನೆರವನ್ನೂ ಇತ್ತು ತನ್ನ ಜನ್ಮವನ್ನು ಸಫಲ ಮಾಡಿಕೊಂಡಳು.

---

the kingdom of heaven, the kingdom of harmony, he has entered, for Love is the fulfilling of the law"

"In Tune with the Infinate" - P 89.

by Ralfh Waldo Trine.

ಹರಿಶ್ಚಂದ್ರ ಕಾವ್ಯ

೧

ರಸಿಕರ ರಸಾಯನ, ಕಬ್ಬಿಗರ ಹಬ್ಬವಾದ 'ಹರಿಶ್ಚಂದ್ರ ಕಾವ್ಯ'ವನ್ನು ಬರೆದವನು ಪಂಡಿತ ರಾಘವಾಂಕನಲ್ಲ, ಕವಿ ರಾಘವಾಂಕ. ಅವನ ಪಾಂಡಿತ್ಯ ಅಳತೆಯ ಮಾನದಂಡಕ್ಕೆ ಸಿಕ್ಕಬಹುದು, ಆದರ ಅವನ ಕಾವ್ಯಕ್ಕೆ ಮಾನ ದಂಡವಿಲ್ಲ. ಮಹಾಕವಿಯೆನಿಸಿಕೊಳ್ಳಬೇಕೆಂಬ ಚಾಪಲ್ಯದಿಂದ, ಪ್ರಾಚೀನ ಮಹಾಕವಿಗಳ ಜಾಡನ್ನೇ ಹಿಡಿದು, ಅವರಾಡಿದ ಮಾತನ್ನೇ ಆಡಿ, ತಾನೂ ಅವರಲ್ಲಿ ಒಬ್ಬನೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ಹವ್ಯಾಸ ರಾಘವಾಂಕ ನಲ್ಲಿ ಕಂಡುಬರುವುದಿಲ್ಲ. ಆದರೆ 'ವಿನೂತನತೆ'ಯ ಕ್ಷಣಿಕ ಬೆಡಗಿಗೆ ಮರು ಳಾಗಿ, ಬೆಳೆದು ಬಾಳಿ ಬಂದ ಪರಂಪರೆಯ ಭವ್ಯಗುಣಗಳನ್ನು ಅಲ್ಲೆಗಳೆಯುವ ಅಕ್ಷಮ್ಯ ಅಪರಾಧವನ್ನೂ ಅವನು ಮಾಡಿಲ್ಲ. ಪ್ರತಿಭಾವಂತನೂ, ರಸಿಕನೂ ಆದ ಕವಿಯನ್ನು ನಡಸುವುದು ಅವನ ಕಾವ್ಯ ದೀಧಿತಿ, ಅವನ ಅಂತರಂಗದ ಆನಂದ, ಅವನ ಭಾವವಿಕಾಸದ ರಸರಮಣೀಯತೆ. ಜೀವನ ಸೌಂದರ್ಯ ವನ್ನು ಕಂಡುಂಡ ಕವಿ ಅದನ್ನು ತನ್ನೊಳಗೇ ಅಡಗಿಸಿಕೊಳ್ಳಲೆತ್ನಿಸುವುದಿಲ್ಲ. ಅವನು ಯತ್ನಿಸಿದರೂ ಅದು ಸಾಧ್ಯವಾಗುವುದಿಲ್ಲ. ಸೌಂದರ್ಯಾನುಭವ ಪರಾಕಾಷ್ಠದೆಸೆಗೆ ಬಂದಿತೆಂದರೆ ಅದು ನಾನಾಮುಖದಲ್ಲಿ ಹೊರಬೀಳಲೆತ್ನಿಸು ತ್ತದೆ. ಕವಿಹೃದಯದ ಸೆರೆ ಅದಕ್ಕೆ ಸಲ್ಲದು. ಅನಂತ ಆಕಾಶದಲ್ಲಿ ಹಾರಾ ಡುವ ದಿವ್ಯಪಕ್ಷಿ ಕಬ್ಬಿಣದ ಸೆರೆಯನ್ನು ತೃಣಪ್ರಾಯವಾಗೆಣಿಸುತ್ತದೆ. ಕವಿ ಹೃದಯವನ್ನು ಭೇದಿಸಿಕೊಂಡು ಕಾವ್ಯಗಂಗೆ ಲೋಕದೆಲ್ಲೆಡೆಯಲ್ಲಿಯೂ ಹರಿದು ಬರಡನ್ನು ಹಯನಾಗಿಸಿ, ಕೊರಡನ್ನು ಕೊನರಿಸಿ, ವಿಷವನ್ನು ಅಮೃತ ವೆನಿಸಿ ಜನಪದದ ಬಾಳನ್ನು ಹಸನು ಮಾಡುತ್ತದೆ. ಇಂತಹ ಸನ್ನಿವೇಶದಲ್ಲಿ ಕವಿ ನಿಮಿತ್ತಮಾತ್ರದವನಾಗುತ್ತಾನೆ. ಅವನ ಪುಣ್ಯ ಪ್ರಭಾವದಿಂದ ಕಾವ್ಯ ದಧಿದೇವಿ, ರಸ ಸರಸ್ವತಿ ಅವನನ್ನು ತನ್ನ ಸಾಧನವಾಗಿ ಉಪಯೋಗಿಸುತ್ತಾಳೆ.

ಉತ್ತಮ ಕಾವ್ಯ ಪ್ರಾಚೀನವಾರ್ಚೀನತೆಗಳ ತೊಡಕಿನಿಂದಾಗಲಿ, ಸಾಕ್ಷೇಪ ಸಂಗ್ರಹಣ ಸಿದ್ಧಾಂತಗಳಿಂದಾಗಲೀ ಬದ್ಧವಾಗಿಲ್ಲ. ಕವಿಯ

ಪ್ರಯೋಗ ಶಾಲೆಯಲ್ಲಿ ಜಗತ್ತು ಅದರ ಜೀವಿಗಳಿಗೆ ಹೇಗೆ ಸ್ಥಾನವಿದೆಯೋ ಹಾಗೆ ಪೂರ್ವ ಕವಿಗಳ ಕೃತಿ, ಅನುಭವಗಳಿಗೂ ಸ್ಥಾನವಿದೆ. ಅವನು ಬೇಕಾದುದನ್ನು ತೆಗೆದುಕೊಳ್ಳುತ್ತಾನೆ, ಬೇಡವಾದುದನ್ನು ಬಿಡುತ್ತಾನೆ. ಇದರಿಂದ ಅವನ ಸ್ವಾತಂತ್ರ್ಯಕ್ಕಾಗಲಿ ಆತ್ಮಗೌರವಕ್ಕಾಗಲಿ ಭಂಗ ಬರುವುದಿಲ್ಲ. ಯಾವ ಕವಿಯೂ ಲೋಕಾನುಭವವನ್ನು ಮುಗಿಸಿಲ್ಲ. ಆನಂದದ ವಿಶ್ವರೂಪವನ್ನು ಬಣ್ಣಿಸಿ 'ಇದೇ ಕೊನೆ'ಯೆಂದು ಸಾರಿಲ್ಲ, ಸಾರುವುದು ಸಾಧ್ಯವೂ ಇಲ್ಲ.* ಯಾರು ಎಷ್ಟು ಹೇಳಿದರೂ ಹೇಳಬೇಕಾದುದು ಉಳಿದೇ ಇರುತ್ತದೆ. ಹೇಳುವ ದೃಷ್ಟಿ ಕಾಲಕಾಲಕ್ಕೆ ಪರಿಸ್ಥಿತಿಗನುಸಾರವಾಗಿ, ಕವಿಯ ಸಂಸ್ಕೃತಿಯನ್ನವಲಂಬಿಸಿ ಬದಲಾಯಿಸುತ್ತ ಹೋಗುತ್ತದೆ.

ರಾಘವಾಂಕ ಕವಿಯ ಕಾವ್ಯದ ಮಹೋನ್ನತಿಯನ್ನರಿಯುವುದಕ್ಕೆ ಈ ಮಾತುಗಳು ತುಂಬ ಸಹಕಾರಿಯಾಗುತ್ತವೆ. ಅವನಿಗಿಂತ ಹಿಂದೆ ಹರಿಶ್ಚಂದ್ರ ಕಾವ್ಯವಸ್ತುವನ್ನು ಆರಿಸಿಕೊಂಡಿದ್ದವರಿದ್ದರು. ಅವನಾನಂತರವೂ ಹರಿಶ್ಚಂದ್ರನ ಮೇಲೆ ಕಾವ್ಯಗಳನ್ನು ಬರೆದವರಿದ್ದಾರೆ. ಆದರೆ ರಾಘವಾಂಕನು ರಾಘವಾಂಕನೇ ಇತರರು ಇತರರೇ!

ಹರಿಶ್ಚಂದ್ರನ ಕಥೆಯನ್ನು ಕಾವ್ಯವಸ್ತುವನ್ನಾಗಿ ಆರಿಸಿಕೊಳ್ಳುವುದಕ್ಕೆ ರಾಘವಾಂಕ ಸ್ವಲ್ಪ ಎದೆಗಾರಿಕೆಯನ್ನು ತೋರಿರಬೇಕೆಂದು ನಮಗನಿಸುತ್ತದೆ. ಅವನಿದ್ದ ವಾತಾವರಣ, ಪರಂಪರೆಯಲ್ಲಿ ಶಿವಶರಣರ ಸಂತಾನಕ್ಕೆ ಸೇರದವರು ಅಸ್ಪೃಶ್ಯರು. ಹರಿಶ್ಚಂದ್ರ ಪರಮ ವೈಷ್ಣವ ಶಿರೋಮಣಿಯೆನಿಸಿಕೊಂಡಿದ್ದ. ಆದರೆ ಕವಿಯ ಮನಸ್ಸು ತುಂಬ ವಿಶಾಲ. ಹರಿಶ್ಚಂದ್ರನ ಅಚ್ಚಳಿಯದ ಸತ್ಯಪ್ರಿಯತೆ ಅವನ ಚಿತ್ತವನ್ನು ಮುತ್ತಿಬಿಟ್ಟಿತು. ಉಗ್ರವಿರೋಧವನ್ನು ಉಪಶಮನವಮಾಡಲೆಳಸಿ ವೈಷ್ಣವನನ್ನು ಶೈವಭಕ್ತಿಭಾಸ್ಕರನನ್ನಾಗಿ ಮಾರ್ಪಡಿಸಿದ್ದಾನೆ. ಅಘದೂರನಾದ ಆ ಘನನೃಪನ ತೇಜಸ್ಸು ರಾಘವಾಂಕನನ್ನು ವ್ಯಾಪಿಸಿಬಿಟ್ಟಿದೆ. ಎಂತಹ ಮೇರುಮಂಧರಸದೃಶ್ಯವಾದ ದೃಢತೆ, ಎಂತಹ ನಿಸ್ಸೀಮ ಸತ್ಯಸಂಕಲ್ಪ ಎಂದು ಕವಿ ಬೆರಗಾಗಿ, ಆ ಪುಣ್ಯನಾಮನ ಆದರ್ಶ

---

* "Everything remains to be said. Everything remains to be done. Let us get to work!" — Romain Rolland.

ಜೀವನ ನಮ್ಮ ನಾಡವರ ಕಣ್ಮಣಿಯಾಗಿ ಮೆರೆಯಲೆಂದು, ನಮ್ಮ ಜನ ಬದುಕಲೆಂದು, ನಿರಪೇಕ್ಷ ಬುದ್ಧಿಯಿಂದ ಕಾವ್ಯವನ್ನು ರಚಿಸಿದ್ದಾನೆ. ರಾಘ ವಾಂಕ ಹಂಪೆಯರಸನನ್ನು ಪೊಗಳ್ವ ನಾಲಗೆಯೊಳನ್ಯ ದೈವವ ಭವಿಗಳನ್ನು ಕೀರ್ತಿಸುವವನಲ್ಲ. ಜತೆಗೆ ಪಂಪಾಂಬಿಕೆಯರಸನಿಗೊಪ್ಪುವ 'ಕಾವ್ಯಕನ್ನಿಕೆ' ಯನ್ನು ನಿರ್ಮಾಣಮಾಡಬೇಕೆಂಬ ಆಕಾಂಕ್ಷೆ. ಇವೆರಡೂ 'ಹರಿಶ್ಚಂದ್ರ ಕಾವ್ಯ'ದಲ್ಲಿ ಕವಿಯ ಉದ್ದೇಶಕ್ಕಿಂತಲೂ ಅಧಿಕವಾಗಿ ಸಿದ್ಧಿಸಿವೆ. ಇವನ ಕಾವ್ಯ 'ವಾಣಿಯರಿವಿನ ಬೆಳಗು, ಮುಕುತಿ ವನಿತೆಯ ಮುಡಿಯ ಮಾಣಿಕಂ.' ಇವನನ್ನು ಉತ್ಕ್ರಾಂತಿಯ ಉನ್ನತಪೀಠದ ಮೇಲೊಯ್ದುದು '**ಹರನೆಂಬುದೇ ಸತ್ಯ ಸತ್ಯವೆಂಬುದು ಹರನು**' ಎಂಬ ಮಹಾವಾಕ್ಯ. ಅದರ ಒಣ ಉದ್ಘೋಷ ವಲ್ಲ, ನಿತ್ಯನಿಷ್ಠಾನುಸರಣೆ.

೨

ಹರಿಶ್ಚಂದ್ರ ಕಾವ್ಯ ಕನ್ನಡದ ಕಾವ್ಯಕೀರ್ತಿಯನ್ನು ಬಹಳ ಮೇಲಕ್ಕೆ ಒಯ್ಯಿತು. ಕವಿ ಕುಂಜರ ಹೇಳಿರುವಂತೆ ಗಾವಿಲ ಭುವನದ ಭಾಗ್ಯದಿಂದ ಇಂತಹ ಉತ್ತಮ ಕೃತಿ ಹೊರಬಿದ್ದಿತು. ಇಂತಹ ಮಹಾ ಕವಿಯನ್ನು ತನ್ನ ವಿರಾಟ-ಗರ್ಭದಿಂದೊಗೆದ ಹದಿಮೂರನೆಯ ಶತಮಾನವನ್ನು ಪುಣ್ಯ ಕಾಲ ವೆಂದು ಕರೆಯಬೇಕು. ಕನ್ನಡ ನಾಡಿನಲ್ಲಿ ಇವನು ಹುಟ್ಟಿ ನೃಪತುಂಗದೇವನ 'ಮಾತರಿವವರೊಳ್ ನೀತಿವಿದರಮಲ ಕವಿತಾ ನೀತಿಯುತರ್' ಎಂಬ ಸತ್ಯ ವನ್ನು ನಿತ್ಯಮಾಡಿದುದು ಕನ್ನಡ ನಾಡವರಾದ ನಮ್ಮ ಪುಣ್ಯ. ಕನ್ನಡದ ಬಗ್ಗೆ ಇಂದು ಸಾರ್ವತ್ರಿಕವಾಗಿ ಮೂಡುತ್ತಿರುವ ನವಜಾಗೃತಿಯ ಛಾಯೆ ಯನ್ನು ರಾಘವಾಂಕನ ಮೇಲೆ ಮತ್ತು ಅವನ ಕಾಲದ ಮೇಲೆ ಚೆಲ್ಲಿ ಇವ ನಿಂದ ಕನ್ನಡಕ್ಕೆ ಉಪಕಾರವಾಯಿತು ಎಂದು ನಾವು ದೂರಾನ್ವಯ ಮಾಡು ತ್ತಿಲ್ಲ. ಕನ್ನಡದ ಬಗ್ಗೆ ನಮಗಿರುವ ಕಳಕಳಿ, ಕೆಚ್ಚು, ಕಲಿತನ ರಾಘ ವಾಂಕನಲ್ಲಿಯೂ ತುಂಬಿತ್ತು. ಅಯೋಧ್ಯೆಯ ರಾಜನ ಕಥೆಯನ್ನು ಹೇಳುತ್ತ ಕವಿ ವಶಿಷ್ಠ ಆಶ್ರಮವನ್ನು ಪಂಪಾಕ್ಷೇತ್ರದಲ್ಲಿ ತಂದಿರಿಸುತ್ತಾನೆ. ಅವನಿಗೆ ಪಾವನ ಪುಣ್ಯ ನದಿ ಗಂಗೆಯಲ್ಲ ತುಂಗಭದ್ರೆ.

"ನೆರೆದ ವೇದಂಗಳುಗ್ಗಡವುಪನಿಷತ್ತುಗಳ
ಗರವಟಿಗೆ ಯಣಿಮಾದಿಗಳ ಜೊಬ್ಬೆ ಧರ್ಮದ
ಬ್ಬರ ಘನಜ್ಞಾನ ಪ್ರದೀಪ್ತಿಗಳು ಹರಿಬ್ರಹ್ಮಾದಿ ಸುರರ ಕಾಹು ॥
ಪುರುಷಾರ್ಥ ನಾಲ್ಕರೊಳು ಸಲುಗೆ ಪುಣ್ಯದ ಮುಂದೆ
ಸಿರಿ ಸರಸ್ವತಿಯುರೆಡೆಯಾಟವೆಳೆದಿರೆ ಜಗ
ದ್ಗುರು ವಿರೂಪಾಕ್ಷನಿಲ್ಲಿಯೆ ಸುಖದೊಳಿಪ್ಪ ಪಂಪಾಕ್ಷೇತವಿದೆಯೆಂದನು ॥"

"ಬಿಡದೊಮ್ಮೆ ಕಂಡಜೀವರ ಭವವ್ರಜದ ಬೆಂ
ಬಡಿಗೆ ಪಾತಕಕೋಟಿಯಾ ಕತ್ತಿ ದುಷ್ಕರ್ಮ
ದೆಡೆಗೊರಳ ಕತ್ತರಿಸಿ ಸಮಸ್ತರೋಗಂಗಳೆಡೆಗೊಡ್ಡಿದಲಗಜ್ಞಾನವ ॥
ನಡುದಲೆಯ ಗರಗಸಂ ಮಲೆವ ಮಾಯೆಯು ಬಸುರ
ನೊಡೆಹೊಯ್ವ ಶೂಲವಿನ್ನುಳಿದ ದುರಿತವನುರುಹಿ
ಸುಡುವ ಕಿಚ್ಚೆಂದೆನಿಪ ತುಂಗಭದ್ರಾನದಿಯು ನವನೀಶ ನೋಡೆಂದನು ॥"

ಸಂಸ್ಕೃತದಲ್ಲಿಯೂ, ಸಂಸ್ಕೃತ ಛಂದಸ್ಸುಗಳಲ್ಲಿಯೂ ಕವಿಗೆ ಸಾಕಷ್ಟು ಪ್ರಾವೀಣ್ಯತೆಯಿದ್ದರೂ ಅವನು ಅಚ್ಚಗನ್ನಡ ಛಂದಸ್ಸಾದ ಷಟ್ಪದಿಯನ್ನೇ ಅವಲಂಬಿಸಿ, ಅದನ್ನು ಕಲೆಯ ಎರಕದಲ್ಲಿ ಪರಿಪೂರ್ಣಮಾಡಿದ್ದಾನೆ. ವಿವಿಧ ಷಟ್ಪದಿಗಳಲ್ಲಿ ಇವನು ತೋರಿರುವ ಕೌಶಲ್ಯ, ಪ್ರಯೋಗ ಪಾಂಡಿತ್ಯವನ್ನು ನೋಡಿ 'ಷಟ್ಪದಿ ಜನಕ' ನೆಂದೂ ಜನ ಇವನನ್ನು ಕರೆಯಲಾರಂಭಿಸಿದರು. ಸಂಸ್ಕೃತದ ಪದಗಳಿದ್ದರೂ ಅವುಗಳಿಗೆ ಸಮಾನಾರ್ಥದ ಕನ್ನಡ ಪದಗಳನ್ನು ನಿರ್ಮಾಣಮಾಡಿ ಕನ್ನಡದ ಸಾರಳ್ಯವನ್ನು ಸ್ಥಾಪಿಸಿದ್ದಾನೆ. ಉದಾ: ತಾವರೆಗಣ್ಣ, ಕಬ್ಬಿನ ಬಿಲ್ಲವೀರ, ಅರಳಸರಳ, ಹಲವು ಕಣ್ಣಾದವ, ಸಾವನೀಡಾಡಿದವ, ಗರಳಕೊರಳ ಇತ್ಯಾದಿ. ಕನ್ನಡದ ಹಿಡಿನುಡಿಗಳನ್ನೂ, ಗಾದೆಮಾತುಗಳನ್ನೂ ಧಾರಾಳವಾಗಿ ಬಳಸಿದ್ದಾನೆ. ಉದಾ: ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತು, ತುಂಬಿದ ಬಂಡಿಗೆ ಮೊರಂ ದಿಮ್ಮಿತೇ? ಹೆತ್ತ ತಾಯನು ಮಾರಿ ತೊತ್ತಕೊಂಬರೇ, ಹೇರನೊಪ್ಪಿಸಿದವಗೆಲ್ಲಿಯದು ಸುಂಕ ಇತ್ಯಾದಿ. ಇವನ ಪ್ರಯೋಗಗಳನ್ನು ತರುವಾಯ ಬಂದ ಕವಿಗಳು ಧಾರಾಳವಾಗಿ ಬಳಸಿಕೊಂಡಿರುವುದೇ ಅವುಗಳ ಲೋಕಪ್ರಿಯತೆಗೆ ದೃಷ್ಟಾಂತಗಳಾಗಿವೆ.

೩

ಕಾವ್ಯೋಪಾಸಕರು ತಮ್ಮ ಕೃತಿಗಳಲ್ಲಿ ಚಿತ್ರ ಕಥನ ರೀತಿ, ಸಂವಾದ ಪದ್ಧತಿ, ನಿರೂಪಣ ರೀತಿಗಳಲ್ಲಿ ಯಾವದಾದರೊಂದನ್ನು ಹೆಚ್ಚಾಗಿ ಅವಲಂಬಿಸುತ್ತಾರೆ. ಎಲ್ಲರೂ ಎಲ್ಲವುಗಳಲ್ಲಿಯೂ ನಿಷ್ಣಾತತೆಯನ್ನು ಪಡೆಯುವುದಕ್ಕಾಗುವುದಿಲ್ಲ. ಹಾಗೆ ನಿಷ್ಣಾತರಾದ ಕೆಲವರಲ್ಲಿ ರಾಘವಾಂಕ ಒಬ್ಬನಾಗಿದ್ದಾನೆ. ವರ್ಣನೆಗಳನ್ನು ಕೊಡುವಾಗ ನಿರೂಪಣ ರೀತಿಯನ್ನು, ಸಂವಿಧಾನಗಳನ್ನು ಕಲ್ಪಿಸುವಾಗ ಸಂವಾದ ಪದ್ಧತಿಯನ್ನು, ಸನ್ನಿವೇಶಗಳನ್ನು ಚಿತ್ರಿಸುವಾಗ ಚಿತ್ರಕಥನ ರೀತಿಯನ್ನು ಇವನು ಅವಲಂಬಿಸಿದ್ದಾನೆ. ಎಲ್ಲಕ್ಕೂ ಹೆಚ್ಚಾಗಿ ಆಧುನಿಕ ಕಾವ್ಯದೃಷ್ಟಿಯನ್ನು ಕಾಲಜ್ಞಾನದಿಂದ ಕಂಡುಕೊಂಡಂತೆ ರಾಘವಾಂಕ ಅಂತರಂಗದ ಚಲನವಲನ, ಶಾಂತಿ, ಸಮರಗಳನ್ನು ಪೃಥಕ್ಕರಿಸುವ ಮನೋವಿಶ್ಲೇಷಣೆಯನ್ನು ಕಾವ್ಯದ ಉದ್ದಕ್ಕೂ ಮಾಡಿಕೊಂಡು ಹೋಗಿದ್ದಾನೆ. ಆದ್ದರಿಂದ 'ಹರಿಶ್ಚಂದ್ರ ಕಾವ್ಯ' ಪುರಾತನ ಕವಿಯಿಂದ ಪ್ರಾಚೀನ ವಸ್ತುವನ್ನವಲಂಬಿಸಿ ಬರೆದ ಕಾವ್ಯವಾದರೂ ಆಧುನಿಕ ಬುಧರ ವಿಶೇಷ ಮೆಚ್ಚುಗೆಗೂ ಪಾತ್ರವಾಗಿದೆ.

ಹರಿಶ್ಚಂದ್ರನ ಹೆಸರನ್ನು ನಾವು ಮೊದಲು ಕೇಳುವುದು ದೇವಲೋಕದಲ್ಲಿ. 'ಮನ ವಚನ ಕಾಯದೊಳಗೊಮ್ಮೆಯುಂ ಹುಸಿ ಹೊದ್ದದಂತೆ ನಡೆವ ಕಲಿಗಳಾರಯ್ಯ' ಎಂದು ಹಲವು ಕಣ್ಣಾದವನು ವಶಿಷ್ಠಮುನಿಯನ್ನು ಕೇಳಲು ವಸುಧಾಧಿಪತಿ ಹರಿಶ್ಚಂದ್ರನೆಂದು ಅವನು ನುಡಿಯುತ್ತಾನೆ. ಇದು ವಿಶ್ವಾಮಿತ್ರನನ್ನು ಕೆರಳಿಸುತ್ತಿದೆ, ಅವನು ಕೆರಳಬೇಕಾದ ಕಾರಣವಿಲ್ಲ. ಅವನಿಗೆ ಸಂಬಂಧಪಟ್ಟ ವಿಚಾರವಲ್ಲ. ಆದರೆ ತನ್ನಂ ಮೊದಲೊಳೋವಿ ನುಡಿಸದ ಕೋಪವೊಂದು, ವಶಿಷ್ಠಮುನಿಯಾವುದಂ ಪೇಳ್ದಡದನಲ್ಲೆಂಬ ಭಾಷೆಯೆಡು, ಅಖಿಳ ಜೀವಾವಳಿಯುಲಿ ಭಾವಿಪರೆ ಕುಂದನಲ್ಲದೆ ಲೇಸ ಕಾಣದಿಹ ಭಾವ ಮುಪ್ಪುರಿಗೊಂಡಿತ್ತು. ಮಾತು ಬೆಳೆಯುತ್ತದೆ, ಬಲಿಯುತ್ತದೆ, ಪ್ರಕೋಪಕ್ಕೆ ಹೋಗುತ್ತದೆ. ವಿಶ್ವಾಮಿತ್ರನು ಹರಿಶ್ಚಂದ್ರನನ್ನು ಸತ್ಯ ಭ್ರಷ್ಟನನ್ನಾಗಿ ಮಾಡುತ್ತೇನೆ ಇಲ್ಲದಿದ್ದರೆ ದಿಗಂಬರನಾಗಿ ಮುಕ್ತಕೇಶಿತನಾಗಿ ನರ ಕಪಾಲದೊಳು ಸುರೆಯೆರೆದು ಕುಡಿಯುತ ತೆಂಕ ಮುಖನಾಗಿ ಹೋಹೆಂ ಎಂದು

ಶಪಥ ಮಾಡುತ್ತಾನೆ. ಕವಿ ಇಲ್ಲಿಗೆ ಈ ವಿಷಯವನ್ನು ಕೈಬಿಟ್ಟು ಮುಂದಕ್ಕೆ ಹೋಗಬಹುದಾಗಿತ್ತು. ಆದರೆ ಈಯೆಲ್ಲ ಘರ್ಷಣೆಯಾದ ಸುರಪನ ಸಭೆಯ ಸ್ಥಿತಿ ಹೇಗಿತ್ತು, ಸುರೇಂದ್ರನ ಸ್ಥಿತಿ ಹೇಗಿತ್ತು ಎಂದು ತಿಳಿಯಬೇಕೆಂಬ ನಮ್ಮ ಆಸಕ್ತಿಯನ್ನು ಕವಿ ಕಂಡುಕೊಂಡಿದ್ದಾನೆ. ವಿಶ್ವಾಮಿತ್ರ ಮೊದಲೇ ರಾಜರ್ಷಿ, ಪ್ರಳಯ ರುದ್ರನಂತೆ ಭೀಕರ, ಪ್ರತಿವಾದಿ ಭಯಂಕರ, ಈಗಂತೂ ಕಾಳ್ಗಿಚ್ಚಿನಂತೆ ಕೆರಳಿ ಕೆದರಿ ನಿಂತಿದ್ದಾನೆ.

"ನುಡಿಯುರಿಯುನುಗುಳೆ ಕಣ್ ಕಿಡಿಗೆದರೆ ವದನ ಕೆಂ
ಪಡರೆ ನಿಟಿಲಂ ಬಿಸಿಯ ಬಿಂದುವಂ ತಳೆಯೆ ಕೈ
ನಡುಗೆ ಪುರ್ಬಲುಗೆ ಮಿಸುಪಧರ ಸಿಡಿಯೆಲಾಕುಳ ಹೊಗೆಯೆ ಕಾಲ್ಕುಂಬಿಡೆ ‖
ತೊಡೆದ ಭಸಿತಂ ಧೂಮವಿಡೆ ಮೆಯ್ಯ ರೋಮ ಕಾ
ರಿಡೆ ಕಮಂಡಲುಜಲಂ ತೆಕ್ಕತೆಕ್ಕನೆ ಕುದಿಯೆ
ಮೃಡನ ಪಣೆಗಣ್ಣಿ ಮುನಿಯಾದಂತೆ ಕೌಶಿಕಂ ಮುನಿದನು ವಶಿಷ್ಠ ಮುನಿಗೆ ‖"

ದೇವಸಭೆಗೆ ಪ್ರಾಣಸಂಕಟ

"ಇರಬಾರದೇಳಬಾರದು ನುಡಿಯಬಾರದಂ
ತಿರಬಾರದಹುದೆನಲು ಬಾರದಲ್ಲೆನ ಬಾರ
ದೆರಡುಂ ನಿರೋಧದಿಂದೊಡ್ಡೋಲಗಂ ಚಿಂತೆ ಮುಸುಕಿ ಸೈವೆರಗಾದುದು ‖"

ದೇವೇಂದ್ರನ ಪಾಡೂ ಹಾಗೆಯೇ ಆಗಿದೆ

"ಒಂದಕ್ಕೆ ಹಿತ ನುಡಿಯೆ ಪಕ್ಷವೆಂದೆರಡುವಂ
ಹಿಂದುಗಳೆದಿರಲುಪೇಕ್ಷಿತನೆಂದು ಜರೆದಡೆ
ಮ್ಮಿಂದಧಿಕನೇ ಎಂದು ಹೊಗಳ್ದಡುಪಚಾರವೆಂದೆತ್ತಿದಡೆ ಧೂರ್ತನೆಂದು ‖
ನೊಂದು ಶಾಪವನೀಯದಿರರೆಂದು ಸುರಪನಾ
ನಂದರಸವರಿತು ಬೆರಗಿನ ಮೊಗದೊಳಿರಲು . . . ."

ಆದರಿವರೆಲ್ಲರ ಮಧ್ಯೆ ಧೃತಿಗೆಡದೆ ಸ್ಥಿರಚಿತ್ತನಾಗಿರುವವನು ವಶಿಷ್ಠ. ಅವನಾಡಿದ ಮಾತಿನ ಬೆಲೆ ಅವನಿಗೆ ಗೊತ್ತು. 'ತರಣಿ ತೇಜಂಗೆಡದಿರು, ಅಗ್ನಿ ಬಿಸುಪಾರದಿರು. ಎಲೆ ಮಂದರವೆ ಚಲಿಸದಿರು' ಎಂದು ಹೇಳಬೇಕಾದ ಅಗತ್ಯವೆ ಇಲ್ಲ. ಹರಿಶ್ಚಂದ್ರನನ್ನು ಹೋಗಿ ಎಚ್ಚರಿಸು ಎಂದು ವಿಶ್ವಾಮಿತ್ರ ಮೂದಲಿಸಿದಾಗ, ಅದೇ ಶಾಂತಿ, ತಾಳ್ಮೆಗಳಿಂದ ಅದರ ಅಗತ್ಯವಿಲ್ಲ ಎಂದವನು ಹೇಳುತ್ತಾನೆ. ಸಾವನೀಡಾಡಿದವರೊಡೆಯನೋಲಗದಿಂದ ವಿಶ್ವಾಮಿತ್ರ

ಆಡಂಬರದ ಸಿಡಿಲು ಗಜರಿ ಗರ್ಜಿಸಿ ಮೇಘದಿಂದ ಪೊರಮಡುವಂದದಿ ಹೊರಡುತ್ತಾನೆ, ಹರಿಶ್ಚಂದ್ರ ಭೂನಾಥನ ಸತ್ಯ ಪರೀಕ್ಷೆಗಾಗಿ.

೪

ತನ್ನ ಪಾಡಿಗೆ ಮಡದಿ ಮಗನೊಂದಿಗೆ ಸುಖವಾಗಿ ರಾಜ್ಯಭಾರ ಮಾಡಿಕೊಂಡು, ಪ್ರಜೆಗಳ ಪರಮಾನುರಾಗದಿಂದ ವಿರಾಜಿಸುತಿದ್ದ ಹರಿಶ್ಚಂದ್ರ ಭೂನಾಥನಿಗೆ ಗ್ರಹಚಾರವಾರಂಭವಾಯಿತು. ಕೌಶಿಕ ಕೆಲವು ಮುನಿಗಳನ್ನು ಎತ್ತಿ ಕಟ್ಟಿ ಬಹು ಸುವರ್ಣ ಯಾಗವನ್ನು ಮಾಡುವಂತೆ ಅವರಿಂದ ಹರಿಶ್ಚಂದ್ರನಿಗೆ ಪ್ರೇರೇಪಿಸುತ್ತಾನೆ. ಯಾಗವೂ ಆಯಿತು. ಎಲ್ಲರಿಗೂ ಯೋಗ್ಯ ಸತ್ಕಾರ ಪುರಸ್ಕಾರಗಳಾದವು. ವಶಿಷ್ಠಮುನಿ ಬಂದು ಹೋದ ಹೊತ್ತನರಿದು ವಿಶ್ವಾಮಿತ್ರ ಬಂದು 'ಪಿರಿಯ ಕರಿಯಂ ಮೆಟ್ಟಿ ಕವಡೆಯಂ ಮಿಡಿದಡೆನಿತುದ್ದಕ್ಕೆ ಹೋಹುದದರ ಸರಿಯೆನಿಸಿ ಸುರಿದ ಹೊಸ ಹೊನ್ನ ರಾಸಿಯ ನೀವುದರಸ' ಎಂದು ಕೇಳಲು ಹರಿಶ್ಚಂದ್ರ ಹಸಾದವೆಂದು ಒಪ್ಪಿಕೊಳ್ಳುತ್ತಾನೆ. ಈಗ ತೆಗೆದುಕೊಂಡು ಹೋಗಲಾರೆ ನಿನ್ನಲ್ಲಿಯೇ ಇರಲಿ, ಬೇಕಾದಾಗ ತರಿಸಿಕೊಳ್ಳುವೆನು ಎಂದು ಹೇಳಿ ಹೋಗುತ್ತಾನೆ. ಆ ಹಣವೇ ಮುಂದೆ ಹರಿಶ್ಚಂದ್ರನ ಎಲ್ಲಾ ಕಷ್ಟ ನಿಷ್ಠೂರಗಳ ಸಂಚಕಾರವಾಗುತ್ತದೆ.

ಸುವರ್ಣಯಾಗದಿಂದ ವಸುಧೆ ತಣಿದಿದೆ, ಅರಸು ದಣಿದಿದ್ದಾನೆ. ವಸಂತಮಾಸ ತಲೆದೋರಿದೆ. ರಾಜ ವನವಿಹಾರಕ್ಕೆ ತೆರಳಲು ನಿಶ್ಚಯಿಸುತ್ತಾನೆ. ಶೃಂಗಾರ ರಸವನ್ನು ವರ್ಣಿಸುವುದಕ್ಕೆ ಕವಿಗೂ ಒಂದು ಅವಕಾಶ ಬೇಕಾಗಿತ್ತು. ಈ ಸಂಧಿಯನ್ನೇ ಅವನು ಸಾಧಿಸಿಕೊಂಡಿದ್ದಾನೆ. ಮುಂದೆ ಹರಿಶ್ಚಂದ್ರನು ರುದ್ರಗಭೀರ ಜೀವನವನ್ನು ಹೇಳುತ್ತಾ ಹೋಗುವಾಗ ಕವಿಗೆ ಶೃಂಗಾರವನ್ನು ತರುವುದಕ್ಕೆ ಅವಕಾಶವಿರುವುದಿಲ್ಲ. ಕಥಾಪ್ರವಾಹಕ್ಕೆ ಈ ವರ್ಣನೆ ಅವಶ್ಯಕವಿಲ್ಲ. ಹಾಗೂ ಅವು ಕಥೆಯ ಓಟವನ್ನು ಕುಂದಿಸುತ್ತವೆ. ಆದರೆ ರಾಘವಾಂಕ ಕೆಲವು ಅಪೂರ್ವವೂ ರಸವತ್ತಾದವೂ ಆದ ಪದ್ಯಗಳನ್ನು ಬರೆದಿದ್ದಾನೆ.

"ಹೊಸಬನದೊಳಿರ್ಪಬಲೆಯುರ ತುಡಿಗೆವೆಳಗು ಹೊಂ
ಬಿಸಿಲಂತಿರಲ್ ಕಂಡು ಕಮಲವರಳುವುವವರ
ಸಸುನಗೆಯ ಬೆಳಗು ಬೆಳ್ದಿಂಗಳಂತಿರೆ ಕಂಡು ಕುಮುದವರಳುವುವಲ್ಲದೆ ॥

ಶಶಿರವಿಗಳಾಟವಾ ಬನದೊಳಗೆ ಹುಗದು ನಿ
ಟ್ಟಿಸಲು ರವಿ ಕಾಣದುದ ಕವಿ ಕಂಡನೆಂಬ ನುಡಿ
ಹುಸಿಯಲ್ಲ ಸುಕವಿ ಹಂಪೆಯ ರಾಘವಾಂಕನದರಳವ ಬಣ್ಣಿಸಿದನಾಗಿ ॥"

ಕವಿಯಿಲ್ಲಿ ಪ್ರಕೃತಿಯ ಶಕ್ತಿಗಿಂತಲೂ ಕವಿಶಕ್ತಿ ಹಿರಿದೆಂದು ಬಹಳ ಸೂಕ್ಷ್ಮವಾಗಿ ತಿಳಿಸಿದ್ದಾನೆ.

ಆ ಬನಶ್ರೀಯಲ್ಲಿ ಮೂಡಿದ ಸಂಧ್ಯಾರಾಗ ಅತ್ಯಂತ ರಮಣೀಯವಾಗಿಯೇ ಇರಬೇಕು.

"ಮೊಳೆವ ಸಂಧ್ಯಾಂಗನೆಗಬುಧಿ ನಿವಾಳಿಸಲೆಂದು
ತಳೆದ ಮಾಣಿಕದ ಹೆಜ್ಜೊಡರೊ ದಿನರಾತ್ರಿಗಳ
ನಳೆದು ಹೊಲಮೇರೆಯುಲಿ ನಡಲೆಂದು ವರುಣ ನಿಲಿಸಿದ ಹವಳದೊಂದು ಸರಿಯೋ ॥
ಬೆಳಗೆಂಬ ಲತೆಯೊಲೆದು ಕುಡಿಜಡಿದು ಕೆಂಪಡರ್ದ
ಕಳಿವಣ್ಣೊ ಪಡುವಣ ದಿಶಾಂಗನೆಯ ಮುಂದಲೆಯ
ತೊಳಪ ಚೂಡಾರತ್ನವೋ ಎನಿಸಿ ಕಡೆವಗಲ ರವಿ ಕಣ್ಗೆ ಸೊಗಯಿಸಿದನು ॥"

ಚಂದ್ರೋದಯವನ್ನು ಕವಿ ನವರಸಗಳ ನವೀನ ಉಪಮಾನವನಿತ್ತು ಬಣ್ಣಿಸುತ್ತಾನೆ.

"ಚೋರರ್ಗೆ ಭಯ ಚಕ್ರವಾಕಕ್ಕೆ ವಿರಹವೀ
ನಾರೀ ಜನಕ್ಕೆ ಶೃಂಗಾರ ಕುಸುಮಶರಂಗೆ
ವೀರ ನಕ್ತಂಚರರ ರುಧಿರಪಾನಕ್ಕೆ ಬೀಭತ್ಸು ಜಲಸಿಧಿಗದ್ಭುತಾ ॥
ಕೈರವಕ್ಕೆ ಹಾಸ್ಯ ವಿರಹಾಗ್ನಿ ಗತಿರೌದ್ರತೆ ಚ
ಕೋರವ್ರಜಕೆ ಶಾಂತಿರಸದ ಪ್ರವಾಹಪ್ರ
ಪೂರವನೆ ನವರಸೋದಯವೆನಿಸಿತಂದು ಹಿಮಕರನುದಯವಾಗಲಂದು ॥"

ವನಶ್ರೀಯ ವಸಂತಶೋಭೆಯನ್ನನುಭವಿಸಿ ಬಂದರಸು ತನ್ನ ಪುರದಲ್ಲಿ ರಾತ್ರಿ ಸಂಚರಿಸುತ್ತಾನೆ. ಸ್ತ್ರೀ ವರ್ಣನೆ ಮಾಡುವುದಕ್ಕೆ ಕನ್ನಡ ಕವಿಗಳಿಗೆ ಇದು ಮೆಚ್ಚಿನ ಅವಕಾಶ. ರಾಘವಾಂಕನೂ ಅದನ್ನು ಉಪಯೋಗಿಸಿ ಕೊಂಡಿದ್ದಾನೆ.

"ಮುಡಿಯ ಪರಿಮಳದೊಡನೆ ಮರಿದುಂಬಿಗಳು ಪರಿಯೆ
ನಡೆವ ನಟಣೆಗಳೊಡನೆ ಹಂಸೆಗಳು ಜಡಿವ ಸವಿ

ನುಡಿಯ ಸೊಬಗುಗಳೊಡನೆ ಗಿಳಿಗಳೊಯ್ಯನೆ ಕುಣಿವ ಕುಚವೊಡನೆ
ಕೋಕಂಗಳು ॥
ಒಡಲ ಚಲುವುಗಳೊಡನೆ ನೋಟಕರ ದಿಟ್ಟಿಗಳು
ಬಿಡದೆ ಕೊಲ್ಲಣಿಗೆವರಿದೆಡೆಯಾಡುತಿರಲಿಂತು
ಮಡದಿಯರು ಕೋಲಾಟವಾಡುತಿರ್ದರು ತೋಳ ಗತಿಬಂಧ ವಿವರಣೆಯೊಳು॥"

ಕೋಲಾಟವಾಡುತ್ತಿದ್ದ ಹೆಂಗಳೆಯರಷ್ಟೇ ಚೆಂಡಾಡುತ್ತಿದ್ದ ಚೆಲ್ವೆಯರೂ ಸುಂದರಿಯರು

"ಮುಡಿಜಡಿಯು ಕುಂತಳಂ ಕುಣಿಯೆ ಕಡೆಗಣ್ ಹೊಳೆಯೆ
ನಡುನಳಿಯೆ ಕರ್ಣಪಾಳಿಕೆಯೊಲೆಯೆ ಹಾರ ಹೊಳೆ
ದೆಡೆಯಾಡೆ ಲಂಬಿಸುವ ಮೇಲುದಿನ ತೆರಹಿನೊಳು ಮೊಲೆಗಳಲುಗಲು ಬಾಗಿದ॥
ಒಡಲು ಶೋಭಿಸೆ ತಪ್ಪುತಡೆ ಮೆಟ್ಟುವಡಿಗಳೊಳು
ಬಿಡದೆ ನೇವುರ ಝಣಂ ಝಣಂಮೆನಲು ಮಡದಿಯರ
ನಡುವೆ ಸೆಂಡಂ ಹೊಯ್ಯುತಿರ್ದಳೊರ್ವಳು ಕಾಮನಂಕಮಾಲೆಯ ಪಾಡುತ ॥"

ಸೌಂದರ್ಯ ಎಲ್ಲರಿಗೂ ಪ್ರಿಯವಾದ ವಸ್ತು. ಅದರ ಸಾರ್ಥಕ್ಯ ಸಹೃದಯ ಸರಸಿಯಾದ ಇನಿಯನಲ್ಲಿ. ಆದರೆ ಹೆತ್ತೊಡಲು ನೋಡುವ ಕಣ್ಣು ಬೇರೆ. ಒಂದೆಡೆ ಸೌಂದರ್ಯಾರಾಧನೆಯಿದ್ದರೆ ಇನ್ನೊಂದು ಕಡೆ ಸೌಂದರ್ಯರಕ್ಷಣೆ ಇರುತ್ತದೆ. ತನ್ನದೆನ್ನುವ ವಸ್ತು ಹೇಗೇ ಇದ್ದರೂ ಅದನ್ನು ನೋಡುವ ತಾಯಿಯ ಕಣ್ಗಳಿಗೆ ಅದು ಅಪರೂಪವಾದ ವಸ್ತು. ರಾಘವಾಂಕ ಕವಿ ಈ ಪ್ರಕೃತಿ ವೈಚಿತ್ರ್ಯವನ್ನು ಚೆನ್ನಾಗಿ ಬಲ್ಲ.

"ಹಾಡಳೆಳಗೋಗಿಲೆಯ ದನಿ ಕಿಡುವುದೆಂದು ಮಾ
ತಾಡಳರಗಿಳಿಯ ಚಪಳತೆ ಕಿಡುವುದೆಂದು ನಡ
ವಾಡಳೆಳ ಹಂಸೆಗಳ ನಡೆಯ ಚಲುವಳಿಗೆಂಪು ಮುಸುಡದೆರೆದಂಗಣದಲಿ ॥
ಆಡಳಿಂದುವಿನ ಸೊಬಗಳಿಗೆಂದು ಮುಡಿಯುನ
ಲ್ಲಾಡಳೆಳನವಿಲ ಚಲುವಳಿಗೆಂದು ಕಣ್ದೆರೆದು
ನೋಡಳುಪ್ಪಳದ ಸಿರಿಯುಳಿಪುದೆಂದೆನ್ನ ಮಗಳೆಂದೊರ್ವ ಸತಿ ನುಡಿದಳು ॥" *

* ಈ ಪದ್ಯದ ಭಾವಾರ್ಥವನ್ನು ಬೊಮ್ಮರಸನ ಸೌಂದರ ಪುರಾಣದಲ್ಲಿ ನೋಡಬಹುದು. ಪುಟ ೩೫.

ತನ್ನ ಸೌಂದರ್ಯ ಮೀಮಾಂಸೆಯನ್ನು ಮುಂದುವರಿಸುತ್ತಾ ರಾಘವಾಂಕನಿಗೆ ಪ್ರಾಯಶಃ ಒಂದು ಸಂದೇಹ ಬಂದಿರಬಹುದು. ತನ್ನ ರೂಪ ವಿಲಾಸವನ್ನು ಮೆರೆಸುವುದಕ್ಕೆ ನಿಸರ್ಗ ಮಾನವನನ್ನು ಅನುಕರಿಸಿರಬಹುದೇ ?

"ಅಳಿಗಳಳಕಕೆ ನವಿಲ್ ಮುಡಿಗೆ ಶಶಿ ವದನಕು
ತ್ಪಲ ಕಣ್ಗೆ ಬಿಂಬವಧರಕೆ ಮಾಣಿಕಂ ರದಕೆ
ಬೆಳದಿಂಗಳುಂ ನಗೆಗೆ ಕೋಕಿಲಂ ಧ್ವನಿಗೆ ತಂಬೆಲರುಂ ಸುಯಿಲ್ಗೊಪ್ಪುವ ॥
ಗಿಳಿ ನುಡಿಗೆ ಲತೆ ನಡುಗೆ ಚಕ್ರವಾಕಂ ಕುಚ
ಸ್ಥಳಕೆ ಕೃತಕಾಚಲ ನಿತಂಬಕ್ಕೆ ತಳಿರು ಪದ
ತಳಕೆ ರೂಢಿಸಿದ ರೂಪಂ ತಾಳ್ದ ವನಿತೆಯರು ಸುಳಿದರೆಲ್ಲಾ ದೆಸೆಯೊಳು ॥"

ನಿಸರ್ಗದ ಲಕ್ಷಣಗಳನ್ನು ತೆಗೆದುಕೊಂಡು ಸ್ತ್ರೀಗೆ ಉಪಮಿಸುವಂತೆ, ಸ್ತ್ರೀಯ ಲಕ್ಷಣಗಳನ್ನು ಪ್ರಕೃತಿಗೇಕೆ ಅನ್ವಯಿಸಿ ನೋಡಬಾರದು ಎಂಬ ಭಾವನೆ ರಾಘವಾಂಕನಿಗೆ ಬಂದಿರಬಹುದು.

೫

ಪ್ರತಿನಾಯಕ ವಿಶ್ವಾಮಿತ್ರ ತನ್ನ ವೃತ್ತಿಯನ್ನು ಆರಂಭಿಸಿದ್ದಾನೆ. ಅರಣ್ಯದ ಕ್ರೂರಮೃಗಗಳು ಸಿಡಿದೆದ್ದು ದೇಶವನ್ನೆಲ್ಲಾ ಧ್ವಂಸಮಾಡುತ್ತಿವೆ. ಜನರು ಭೀತಿಯಿಂದ ತಪ್ತರಾಗಿದ್ದಾರೆ. ಬೇಡರು ಈ ಸುದ್ದಿಯನ್ನು ಧೊರೆಗೆ ಮುಟ್ಟಿಸಿ, ಬೇಟೆಯಾಡಿ ಕ್ರೂರ ಮೃಗಗಳನ್ನು ನಿಗ್ರಹಿಸಬೇಕೆಂದು ಬೇಡುತ್ತಾರೆ. ಧೊರೆಯೊಪ್ಪಿ ಬೇಟೆಯಾಡುತ್ತಾ ಕಿಷ್ಕಿಂಧಾಚಲಕ್ಕೆ ಬರುತ್ತಾನೆ. ಅಲ್ಲಿ ಒಮ್ಮೆಲೇ ಉರಿ ಶೈತ್ಯವಾದಂತೆ, ವಿಷವಮೃತವಾದಂತೆ, ತರಣಿ ತಂಪಾದಂತೆ ಹರಿ, ಕರಿ, ಹರಿಣವೈರಿಗಳು ತಮ್ಮ ನಿಜಸ್ವಭಾವವನ್ನು ಮರೆತು ಸಾತ್ವಿಕ ವೃತ್ತಿಯಿಂದಿರುವುದನ್ನು ನೋಡುತ್ತಾನೆ. ಅದೇ ಪವಿತ್ರ ಪಂಪಾಕ್ಷೇತ್ರ, ಪಾಪ ಸಲಿಲವನ್ನು ತೊಳೆವ ತಾಯಿ ತುಂಗಭದ್ರೆ ಧೀರ ನಿರ್ಮಲ ಶಾಂತಿಯಿಂದ ಹರಿಯುವ ಪುಣ್ಯಸ್ಥಾನ, ಗುರು ವಶಿಷ್ಠರ ತಪೋಭೂಮಿ. ಚೇತೋಹಾರಿಯಾದ ಪ್ರಕೃತಿಮಾತೆಯ ಪಲ್ಲಂಕದಲ್ಲಿ ಮಂಡಿಸಿದ್ದ ತಪಸ್ವಿಯನ್ನು ಕವಿ ಮನೋಹರವಾಗಿ ವರ್ಣಿಸುತ್ತಾನೆ

"ತಿಳಿಗೊಳನ ನಳನಳಿಸಿ ಬೆಳೆದಳ ಮಾವು
ಗಳ ತಳದ ಮಲ್ಲಿಕಾಮಂಟಪದ ತಣ್ಣೆಳಲ
ತೆಳುಗಾಳಿಯೊಳು ಪುಣ್ಯವಪ್ಪ ಪುಳಿನಸ್ಥಳದ ಮೇಲರೋಕೆಯ ತರುವಿನ ॥

ತಳಿದ ತೊಂಗಲ ಗದ್ದುಗೆಯೊಳೋಲಗಂ ಗೊಟ್ಟು
ಬಳಸಿ ಹಿಂದೆಡಬಲದೊಳಿಪ್ಪ ಮುನಿಗಳ ಕೂಡೆ
ನಲವಿನಿಂ ನುಡಿವ ಪಶುಪತಿಯಂತಿರಿರ್ದ ಮುನಿನಾಥ ಕಣ್ಗೆಸೆದಿರ್ದನು ‖”

“ನೀತಿ ಬಲಿದುದೊ ಶಾಂತಿ ರೂಪಾಯ್ತೊ ಸದ್ಗುಣ
ವ್ರಾತವೇ ಮುನಿಯಾಯ್ತೊ ಮುಕ್ತಿ ಜಡೆವೆತ್ತುದೋ
ಭೂತದಯೆ ವಲ್ಕಲಾಂಚಲವಾಂತುದೋ ಪುಣ್ಯವೆಳಸಿ ಭಸಿತವನಿಟ್ಟುದೋ ‖
ನೂತನ ಶ್ರುತ್ಯರ್ಥ ನುಡಿಗಲಿತುದೋ ಘನ
ಸ್ವಾತಂತ್ರ್ಯ ವೃತ್ತಿ ಗೋಚರಿಸಲೆಳಸಿತೋ ಎಂಬ
ಚಾತುರ್ಯದಿಂದಿರ್ದ ಮುನಿನಾಥನಂ ಕಂಡು ಹರುಷದಿಂ ಭೂನಾಥನು ‖”

ಅನಿರೀಕ್ಷಿತವಾಗಿ ಒದಗಿದ ಗುರು ದರ್ಶನಭಾಗ್ಯವನ್ನು ಕಂಡು ಹರಿಶ್ಚಂದ್ರನಿಗೆ ಅಳವಲ್ಲದ ಆನಂದವಾಗುತ್ತದೆ.

“ಬಗೆ ಮೀರಿ ಲೋಚನದೊಳಗೆವ ಸುಖಜಲ ಮೆಯ್ಯೊ
ಳೊಗೆವ ಪುಳಕಂ ಕೈಯೊಳೊಗೆವ ಕಂಪನ ನುಡಿಯೊ
ಳೊಗೆವ ತೊದಳಮುಳಕದಪಿನೊಳೊಗೆವ ಬೆಮರು ಕಂಠದೊಳೊಗೆವ ಹೊಸಗದ್ಗದ ‖
ಮಿಗೆ ಮೊಗದೊಳೊಗೆವ ನಸುನಗೆ ಘನಮುಸೋಮತಿಯೊ
ಳೊಗೆವ ಪರವಶವೆರಸಿ ಮೆರೆವ ಭೂರಮಣನಂ
ಮೊಗವೆತ್ತಿ ಕುಳ್ಳಿರಿಸಿ ಮೆಯ್ದಡವಿ ಬೋಳೈಸಿ ಮುನಿನಾಥನಿಂತೆಂದನು ‖”

ತ್ರಿಕಾಲೋಚಿತ ಜ್ಞಾನಿಯಾದ ವಶಿಷ್ಠನಿಗೆ ಹರಿಶ್ಚಂದ್ರನ ಭವಿಷ್ಯ ಹೊಳೆಯುತ್ತದೆ. ಕೌಶಿಕನ ಮಾಯದ ಬಲೆಯೇ ಅವನನ್ನಿಲ್ಲಿ ಎಳೆದುಕೊಂಡು ಬಂದು ಮುಂದೆ ಕಷ್ಟಪರಂಪರೆಗಳಿಗೀಡುಮಾಡುವುದೆಂಬುದನ್ನು ಮುನಿ ಗ್ರಹಿಸುತ್ತಾನೆ. ಈಗೇನು ಮಾಡಬೇಕು? ವಿಶ್ವಾಮಿತ್ರ ನಿನ್ನ ಮೇಲೆ ತಪ್ಪು ಸಾಧಿಸುವುದಕ್ಕೆ ನಿಂತಿದ್ದಾನೆ, ಎಚ್ಚರದಿಂದಿರು ಎಂದು ಹೇಳಿದರೆ ಪಿಶುಣತ್ವವಾಗುವುದು. ಹೇಳದಿದ್ದರೆ ನೃಪನಿಗಾಗುವ ಕೇಡನ್ನು ತಿಳಿದೂ ಎಚ್ಚರಕೊಡದಿದ್ದ ದೋಷವೆನ್ನದಾಗುವುದು ಎಂದು ಚಿಂತಿಸಿ ಮನೆಗೆ ಬಂದ ಶಿಷ್ಯನಿಗೆ ಉಪದೇಶ ಮಾಡುವುದರಲ್ಲಿ ಯಾವ ತಪ್ಪೂ ಇಲ್ಲವೆಂದು ಬಗೆದು ‘ಮಗನೆ, ವಿಶ್ವಾಮಿತ್ರನ ಆಶ್ರಮಕ್ಕೆ ಹೋಗಬೇಡ’ ಎಂದು ತಿಳಿಸಿ, ಶಿಷ್ಯನಿಗೆ ವಿರೂಪಾಕ್ಷನ ದರ್ಶನವನ್ನು ಮಾಡಿಸಿ ಮಂಗಳವನ್ನು ಕೋರುತ್ತಾನೆ.

ಬೇಟೆ ಮುಂದುವರಿಯುತ್ತದೆ. ಕೌಶಿಕಮುನಿ ಒಂದು ಮಾಯಾ ವರಾಹನಂ ಮಾಡಿ ಭೂರಮಣನೆಡೆಗೆ ಕಳುಹಿಸುತ್ತಾನೆ. ಅದನ್ನು ಬೆನ್ನಟ್ಟಿ ಶರಸಂಧಾನಮಾಡಿ ಹೊಡೆಯುತ್ತಾನೆ. 'ಗರಳಕೊರಳವ ನರಳಸರಳಂಗೆ ಮುನಿವಂತೆ, ಯಿರುಳತಿರುಳಿನ ಹೊರಳಿಗಾ ತರಣಿ ಕೆರಳ್ವಂತೆ, ಸರಳ ತೆರಳಿಕೆಗೆ ಕರುಳ ಸುರುಳಿಯೊಳು' ಹಂದಿ ಹೊರಳುತ್ತ ಬೀಳುತ್ತದೆ. ಧೊರೆ ಕತ್ತೆತ್ತಿ ನೋಡುತ್ತಾನೆ. ಮುನೀಶ್ವರರ ಓಡಾಟ; ಫಳಭಾರದಿಂದೊಲೆದು ತೂಗಿ ಬಾಗುವ ಮರಂಗಳ ಕೆಳಗೆ ನಳನಳಿಸಿ ಬೆಳೆದೆಳಲತೆಯ ತಳಿರ ತಿಳಿಗೊಳನ ಪುಳಿನಸ್ಥಳದ ಕಮಲಕೈರವದ ತನಿಗಂಪುವೆರಸಿ ಸುಳಿವ ತಣ್ಣೆಲರ ತಂಪು' ಒಬ್ಬಮುನಿಯನ್ನು ಕೇಳುತ್ತಾನೆ - ಇದಾರ ಆಶ್ರಮವೆಂದು; ವಿಗಡ ವಿಶ್ವಾಮಿತ್ರನ ಬನವೆಂದು ಅವನು ಹೇಳಲು ಸುಖಂ ಸುಗಿದು ಪೊಯ್ವೆಡೆದಂತೆ ಹಾವಗಿದು ಬಿಟ್ಟಂತೆ ಬಗೆಬೆದರಿ ಗುರುವಾಜ್ಞೆಯನ್ನು ಮೀರಿದೆನಲ್ಲಾ ಇನ್ನೇನು ಗತಿ ಎಂದು ಹರಿಶ್ಚಂದ್ರ ಸಂತಪ್ತನಾಗುತ್ತಾನೆ. ಸಾಕಷ್ಟು ಆಯಾಸವೂ ಆಗಿದೆ, ಮನದಲ್ಲಿ ಮಿತಿಮೀರಿದ ದುಗುಡಮೂಡಿದೆ - ಸಂಧ್ಯಾ ಸಮಯ

"ಹೊಳೆವ ಮೇರುವ ಸುತ್ತಿ ಬೆಂಡಾದ ರವಿ ಚಂದ್ರ
ಕಳೆಯು ತೊಡೆಯೆಡೆಯೊಳೊಯ್ಯನೆ ಮಲಗುವಂತೆ ರವಿ
ಕುಲಲಲಾಮಂ ವರಾಹನ ಹಿಂದೆ ಹತ್ತಿದಾಸರಿ ಮೇಲೆ ಗುರುವಾಜ್ಞೆಯ ॥
ಕಳೆದ ಕೌಶಿಕನಾಶ್ರಮಂಬೊಕ್ಕ ಚಿಂತೆಯಿಂ
ಮುಳುಗುತ್ತ ನಿಜಸತಿಯ ತೋರದೊಡೆಗಳ ಮೇಲೆ
ಲಲಿತಮಣಿಮಕುಟಮಂಡಿತ ಮಸ್ತಕವನಿಕ್ಕಿ ಮಗ್ಗುಲಿಕ್ಕಿದನಾಗಳು ॥"

ಸುಖವಾದ ನಿದ್ರೆಯೂ ಹತ್ತಿತು. ಆದರೆ ನಾನಾವಿಧ ದುಃಖವನ್ನು ಸೂಚಿಸುವ ಭಯಂಕರ ಕನಸೊಂದನ್ನು ಕಾಣುತ್ತಾನೆ. ತಾನು ಓಲಗ ಕೊಟ್ಟಿರುವಂತೆಯೂ ಆಗ ಘುಡುಘುಡಿಸುತ್ತ ಒಬ್ಬ ಮುನಿ ಬಂದು ಮಣಿ ಮಂಟಪದ ಕಂಬಗಳೆಲ್ಲವನ್ನೂ ತಡೆಗಡಿದು ಹೊಂಗಳಸಗಳನ್ನು ಪುಡಿಪುಡಿಮಾಡಿ ಸಭೆಯೊಳಗೆ ರಾಜನನ್ನು ಕೆಡಹಿ, ಸಿಂಹಾಸನವನ್ನೊಯ್ಯುವಾಗ 'ಎನ್ನೆದೆಯ ನಡದೊರ್ಂದು ಕಾಗೆ ಕರೆದುದು, ಬಳಿಯ ಗಿರಿಯ ನಡದುರ್ಗ ಶಿಖರದೊಳಗೆವ ಮಣಿಗೃಹಂಬೊಕ್ಕೆ.' ಈ ದುಸ್ಸ್ವಪ್ನ ಗುರುವಾಜ್ಞೆಯನ್ನು ಮೀರಿದಕ್ಕೊದಗಿದ

ಫಲ, ಬರುವ ಕೇಡಿಂಗೆ ಸೂಚನೆ ಎಂದು ಚಂದ್ರಮತಿ ನಿರ್ಧರಿಸಿಕೊಂಡು, ಗಂಡನಿಗೆ ಒಂದು ಭವ್ಯವಾದ ಸಂದೇಶವನ್ನು ನೀಡುತ್ತಾಳೆ.

" . . . . . . ಮಂ
ತ್ರಿಗೆ ಮಗಂಗೆನಗೆ ರಾಜ್ಯಕ್ಕೆ ಚತುರಂಗಸೇನೆಗೆ ಸಕಲಭಂಡಾರಕೆ ॥
ನಗರಕ್ಕೆ ಸರ್ವಪರಿವಾರಕ್ಕೆ ತೇಜದೇ
ಳ್ಗೆಗೆ ನಿನ್ನ ಹರಣಕ್ಕೆ ಕೇಡು ಬಂದಡೆ ಬರಲಿ
ಮಿಗೆ ಸತ್ಯವಂ ಬಿಟ್ಟು ಕೆಡದಿರವನೀಶ ಕೈಮುಗಿದು ಬೇಡಿದೆನೆಂದಳು ॥"

ಧುರದೊಳರಿಭೂಭುಜರನಂಜಿಸುವ ನಡುಗಿಸುವ ಕೊರಗಿಸುವ ಕೋಡಿಸುವ ಬಳುಕಿಸುವ ಜಳಕಿಸುವ ಬಿರುದಂಕಮಲ್ಲನಿಂತು ದುಸ್ಸ್ವಪ್ನಕ್ಕೆ ಅಧೀರನಾಗಿದ್ದಾಗ ಚಂದ್ರಮತಿ ದೇವಿ 'ನಿನ್ನ ಹರಣಕ್ಕೆ ಕೇಡು ಬಂದಡೆ ಬರಲಿ ಮಿಗೆ ಸತ್ಯವಂ ಬಿಟ್ಟು ಕೆಡದಿರವನೀಶ' ಎಂದು ಅಚಲವಾದ ಆದರ್ಶವನ್ನು ಅವನ ಕಣ್ಮುಂದೆ ಇಡುತ್ತಾಳೆ. ಚಂದ್ರಮತಿಯ ಪಾತ್ರದ ಸೂಕ್ಷ್ಮಪರಿಚಯವನ್ನು ಕವಿ ಇಲ್ಲಿ ಆರಂಭಿಸಿದ್ದಾನೆ. ಸತ್ಯಕ್ಕೆ ಮನವನ್ನು ಪಸಾಯನ ದಾನ ಕೊಟ್ಟ ಸಾಧ್ವಿಯನ್ನು ನೋಡಿ ಅವಳ ವೀರವಾಣಿಯನ್ನು ಕೇಳಿದ್ದೇವೆ. ಕವಿ ಅವಳ ಬಾಯಲ್ಲಿ ದೊಡ್ಡ ಮಾತನ್ನು ಆಡಿಸಿ ತೃಪ್ತನಾಗುವುದಿಲ್ಲ. ದೊಡ್ಡ ದೊಡ್ಡ ಮಾತುಗಳನ್ನು ಆಡುವುದು ಸುಲಭ. ಅವುಗಳಿಗನುಗುಣವಾಗಿ ನಡೆಯುವುದು ಕಷ್ಟ. ನುಡಿಯಂತೆ ನಡೆ, ನಡೆಯಂತೆ ನುಡಿಯಿರಬೇಕು ಹಿರಿಯ ಬಾಳ್ವೆಗೆ. ಇದನ್ನು ಚಂದ್ರಮತಿ ಮುಂದೆ ಘೋರ ಸನ್ನಿವೇಶಗಳನ್ನೆದುರಿಸುವ ರೀತಿಯನ್ನು ವರ್ಣಿಸುವಾಗ ಕವಿ ನಮ್ಮ ಹೃದಯದ ಮೇಲೆ ಅಚ್ಚೊತ್ತುತ್ತ ಹೋಗಿದ್ದಾನೆ.

೬

ವಿಶ್ವಾಮಿತ್ರನಿಗೆ ಹಿಡಿಸಲಾರದಷ್ಟು ಆನಂದ, ಅವನು ಯೋಚಿಸಿದಂತೆ ಎಲ್ಲವೂ ನಡೆದುಬಂದಿದೆ. ಯಾಗಪಶು ತಾನೇ ಯಾಗಶಾಲೆಯ ಯೂಪಸ್ತಂಭದ ಬಳಿ ಬಂದು ನಿಂತಿದೆ. ಮುನಿ ಮಸೆಯುತ್ತಿದ್ದ ಕತ್ತಿಯ ದಾಹ ಇನ್ನೇನು ಉಪಶಮನವಾಗಲಿದೆ. ಕೌಶಿಕ ಇಬ್ಬರು ಸತಿಯರನ್ನು ಮುನಿಗೆ ಹೊಲೆಯಾದ ಅತಿಕೋಪ, ಬದ್ಧದ್ವೇಷ, ಅನಿಮಿತ್ತ ವೈರಗಳಿಂದೊಗೆದು, ಹರಿಶ್ಚಂದ್ರನನ್ನು ಮರುಳುಮಾಡಿರಿ ಹೋಗೆಂದು ಅಟ್ಟುತ್ತಾನೆ.

"ಸಂದ ಕಾರಿರುಳ ಕನ್ನೆಯರು ಹಗಲಂ ನೋಡ
ಲೆಂದು ಬಂದರೊ ಸುರಾಸುರರಬುಧಿಯಂ ಮಥಿಸು
ವಂದು ಹೊಸ ವಿಷದ ಹೊಗೆ ಹೊಯ್ದು ಕಗ್ಗನೆ ಕಂದಿ ಜಲದೇವಿಯರು ಮನದಲಿ ॥
ನೊಂದು ಮಾನಿಸರಾದರೊ ಕಮಲಜಂ ನೀಲ
ದಿಂದ ಮಾಡಿದ ಸಾಲಭಂಜಿಕೆಗಳೊದವಿ ಜೀ
ವಂದಳೆದವೋ ಎನಿಪ್ಪಂದದಿಂ ಬಂದರಂಗನೆಯರವನೀಶನೆಡೆಗೆ ॥"

ಬಳಲಿ, ಜೇಸತ್ತಿದ್ದ ಅರಸನನ್ನು ರಮಿಸಲು ಗಾಣನಾಯಕಿಯರೊಲಿದು ದಂಡಿಗೆವಿಡಿದು ಪೊಡಮಟ್ಟು ಹಾಡಲುದ್ಯೋಗಿಸಿದರು.

"ಗತಿಗಮಕ ಗಹಗಹಿಕೆ ರೀತಿ ಜಾಳೆಯ ಕೊಂಕು
ಜತಿ ಜೋಕೆ ಮಾರ್ಗವಣೆ ತರಹರಿಕೆ ಕಂ
ಪಿತ ಹೊಂಪು ಬಾಗು ಕೊಕ್ಕಡ ವಿರಳ ಕಾಳಾಸ ಕಮ್ಮವಣೆಲವು ಲಂಘಿತ ॥
ನುತ ಶುದ್ಧ ಸಾಳಂಗ ಸಂಕೀರ್ಣಮುಂ ಯಥೋ
ಚಿತ ತಾರಮಧುರ ಮಂದ್ರಗಳಿಂ ಪಾಡಿ ಭೂ
ಪತಿಯ ದುಗುಡವನು ತೊಳೆದರು ರಾಗರಸಲಹರಿಯಿಂದನಾಮಿಕಸತಿಯರು ॥"

ರಾಜನೂ ಸಂತುಷ್ಟನಾಗುತ್ತಾನೆ. ಸರ್ವಾಭರಣಮಂ ಕಳಚಿ ಅವರಿಗೆ ಕೊಡುತ್ತಾನೆ. ಆದರೆ ಗಾಣರಾಣಿಯರಿಗೆ ಆ ಬಹುಮತಿ ಒಲ್ಲದು, ಸಾಲದು. ಅವರು ಚರ್ಚೆಗಾರಂಭಿಸುತ್ತಾರೆ.

ಗಾಣರಾಣಿಯರು: ಬಡತನದ ಹೊತ್ತಾನೆ ದೊರಕಿ ಫಲವೇನು, ನೀರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು, ರುಜೆಯಡಿಸಿ ಕೆಡೆದಿಹ ಹೊತ್ತು ರಂಭೆ ದೊರೆಕೊಂಡಲ್ಲಿ ಫಲವೇನು, ಸಾವ ಹೊತ್ತು ಪೊಡವಿಯೊಡೆತನ ದೊರಕಿ ಫಲವೇನು, ಕಡುವಿಸಿಲು ಹೊಡೆದು ಬೆಂಡಾಗಿ ಬೀಳ್ವೆಮಗೆ ನೀನೊಲಿದು ಮಣಿದೊಡಿಗೆಗಳನಿತ್ತು ಫಲವೇನು?

ಕಡಲೊಳ್ಬಾಂಗೆ ತೆಪ್ಪವನು, ದಾರಿದ್ರಂಗೆ ಕಡವರವ, ಅತಿರೋಗಿಗೆಮೃತಮುಂ ಕೊಟ್ಟಡವರಗಡಿಗವಾಪ, ಹರುಷವನೆಯ್ದುತಿಪ್ಪರವರಂ ಪೋಲ್ಪರೀ ಪೊತ್ತಿನ ಸುಡುಸುಡನೆ ಸುಡುವ ಬಿರುಬಿಸಿಲು ಸೆಕೆಯುಸುರ ಬಿಸಿ ಹೊಡೆದುಮುರಿ ಹತ್ತಿ ಬಾಯ್‌ಬತ್ತಿ ಡಗೆಸುತ್ತಿ ಸಾವಡಸುತಿದೆ ನಿನ್ನ ಮುತ್ತಿನ ಸತ್ತಿಗೆಯನ್ನಿತ್ತು ಸಲಹು ಭೂಭುಜ."

ಆಸೆಗೂ ಮಿತಿಯಿರಬೇಕು, ಆದರೆ ಅದಕ್ಕೆ ಇತಿಮಿತಿಯಿಲ್ಲ. ತಮ್ಮ ಯೋಗ್ಯತೆಗೆ ತಕ್ಕ ವಿಶೇಷ ಪಾರಿತೋಷಿಕವನ್ನು ಅವರು ಬೇಡಬಹುದಾಗಿತ್ತು. ಆದರೆ ಒಂದೇ ವರವನ್ನು ಕೊಡಲೊಪ್ಪಿದ ಕೇಶವದೇವರನ್ನು ಹೆಚ್ಚು ವರಗಳಿಗೆ ಆಶ್ರಯಿಸಿ ವಿಮುಖನಾದ ಮೃತ್ಯೋನ್ಮುಖನಾದ ಬಡಬ್ರಾಹ್ಮಣನು ತನ್ನ ಆಸೆ ಆಶಯಗಳನ್ನೆಲ್ಲಾ ಒಂದುಗೂಡಿಸಿ 'ನನ್ನ ಮರಿಮಗ ಚಿನ್ನದ ತಣಿಗೆಯಲ್ಲಿ ಊಟಮಾಡುವುದನ್ನು ಕಣ್ತುಂಬ ನೋಡುವ ಒಂದೇ ವರವನ್ನು ಕೊಡು ಸ್ವಾಮಿ' ಎಂದು ಬೇಡಿದಂತೆ ಗಾಣರಾಣಿಯರು ಹರಿಶ್ಚಂದ್ರನ ಅರಸೊತ್ತಿಗೆಯ ಲಾಂಛನವಾದ ಮುತ್ತಿನ ಸತ್ತಿಗೆಯನ್ನೇ ಬೇಡುತ್ತಾರೆ. ತಾರತಮ್ಯ ಜ್ಞಾನವಿಲ್ಲದೆ, ಔದಾರ್ಯದ ದುರುಪಯೋಗ ಮಾಡಿಕೊಂಡು ಅಲಭ್ಯವಾದುದನ್ನು ನಿರ್ಲಜ್ಜೆಯಿಂದ ಬೇಡುವ ಹೆಣ್ಣುಮಕ್ಕಳನ್ನು ನೋಡಿ ಅರಸನಿಗೆ ಮನಸ್ಸು ಕದಡಿಹೋಯಿತು. ಆದರೂ ಶಾಂತಿಯಿಂದ

ಹರಿಶ್ಚಂದ್ರ : ರವಿಕುಲದ ಪೀಳಿಗೆಯೊಳೊಗೆದ ರಾಯರ್ಗೆ ಪಟ್ಟವ ಕಟ್ಟುವಂದಿದಿಲ್ಲದಡರಸುತನ ಸಲ್ಲದವನಿಯೊಳು, ಯುದ್ಧರಂಗದೊಳಿದಂ ಕಂಡ ಹಗೆಗಳು ನಿಲ್ಲರಿದರ ಕೆಳಗೆ, ಕವಿವ ನೆಳಲೊಳಗಾವನಿರ್ದನಾತಂಗೆ ತಾಂತವಿಲೆದರು, ಬಡತನಂ, ರೋಗವಪಕೀರ್ತಿ ಪರಿಭಯುಭಯಂ ಹರೆವುದಿದನರಿದರಿದು ಸತ್ತಿಗೆಯ ಕೊಡಬಹುದೆ?

ಗಾಣರಾಣಿಯರು : ಕುಡಬಾರದೊಡವೆಯುಂ ಕುಡುವುದರಿದೈಸೆ ಕುಡುವೊಡವೆಗಳನಾರಾದೊಡಂ ಕುಡರೆ ಹೇಳು. ಬೇಡುವರ ಬಾಯಿ ಹರಿವುದೇ ಬೇಡಿದುದನೀವ ದೊರೆಯಾವನು. ಕುಡರೆ ಮುನ್ನಿನ ಬಲಿ ದಧೀಚಿ ಶಿಬಿಗಳು. ಬೇಡಿದೊಡವೆಗಳನೆನಲದೇಂ ತ್ಯಾಗವೇ ದಾನ, ಗುಣವಿಡಿದೈಸಲೇ ಕೊಟ್ಟರೆನೆ ಹಿಂದುಗಳೆವರೇ ಕುಡಬೇಹುದಿದನ.

ಅನುನಯದೊಳೆಲ್ಲವಂ ಕೊಡಬಹುದು ಬಿಡಹುದು.

ಹರಿಶ್ಚಂದ್ರ : ಜನನಿಯುಂ ಜನಕನಂ ನಲ್ಲಳಂ ದೈವವಂ ಮನವಾರೆ ನಂಬಿ ನಚ್ಚಿರ್ದ ಪರಿವಾರಮುಂ ಕೊಡುವ ಬಿಡುವತಿಕಲಿಗಳು ಜನರೊಳಗೆ ಜನಿಸರ್.

ಗಾಣರಾಣಿಯರು : ನೀನೀಗ ಪೇಳ್ದನಿತರೊಳು ಬೇಡಿದೆಡೆ ಕೊಡಬೇಡ, ಕೊಡೆಯು ನೀಯೆನೆ ಲೋಭವೇಕರಸ?

ಹರಿಶ್ಚಂದ್ರ : ಇದಲ್ಲದೆ ಬೇರೆ, ಮಾತಾಪಿತರಲ್ಲ. (ಎನಗೆ)

ಲೋಗರಿಗೆ ಕೊಡಬಾರದಾಗಿ ಸತಿ ವಂಶಗತವಾಗಿ ಬಂದುದರಿಂದ ತಂದೆ

ಪಟ್ಟವ ಕಟ್ಟುವಾಗಲರ್ಚಿಸಿಕೊಂಬುದಾಗಿ ದೈವಂ ನೆಳಲ ತಂಪನೊಸೆದೀವುದಾಗಿ, ಸಾಗಿಸುವ ತಾಯ್ ಧುರದೊರಳಿಗಳಂ ನಡುಗಿಸುವುದಾಗಿ, ಚತುರಂಗ ಬಲವೆನಿಸಿತೀ ಛತ್ರವೆಂಬಾಗಳಿದನರಿದರಿದು ಬೇಡುವರನತಿಮರುಳರೆನ್ನರೇ ಮೂಜಗದೊಳು."

ಏನು ಮಾಡಿದರೂ ಅರಸ ಮುತ್ತಿನ ಸತ್ತಿಗೆಯನ್ನು ಕೊಡಲೊಲ್ಲ; ಗಾಣರಾಣಿಯರು ಬಿಡಲೊಲ್ಲರು. ಅವರು ಜಾಣ್ಮೆಯಿಂದ ಅದಕ್ಕೂ ಮಿಗಿಲಾದ ಒಂದು ದಾನಕ್ಕೆ ಗಂಟು ಬೀಳುತ್ತಾರೆ.

ಗಾಣರಾಣಿಯರು : ಇಳೆಯೊಳಗೆ ಹೆಸರುಳ್ಳ ದಾಸಿಯೆಂಬುದನು ಕೇಳ್ದೆಳಸಿ ಕಟ್ಟಾಸೆವಟ್ಟೆಯ್ತಂದು ಬೇಡಿ ನಿಷ್ಫಳವಾಗದಂತೆ ನಾವತಿಮರುಗದಂತಳಲದಂತೆ ಬಿಸುಸುಯ್ಯದಂತೆ, ತಿಳಿದು ನೀನೆಮಗೆ ವಲ್ಲಭನಾಗಿ ಚಿತ್ತದುಮ್ಮಳಿಕೆಯುಂ ಕಳೆ ಹರಿಶ್ಚಂದ್ರ ಭೂನಾಥ.

ಅವರೇನೋ ಅತ್ಯಂತ ವಿನಯ ದೈನ್ಯಗಳಿಂದ ಅಳವಳಿದು ಬಾಯ್ಬಿಟ್ಟು ಕೈಮುಗಿದು ಬೇಡುತ್ತಿದ್ದಾರೆ. ಭೂನಾಥ ಬೆಕ್ಕಸ ಬೆರಗಾಗಿದ್ದಾನೆ. ಪ್ರಾಯಶಃ ಕ್ಷಣಕಾಲ ಅವನು ಅರೆಮೂಕನಂತೆ ಅವರ ದಾರ್ಷ್ಟ್ಯಕ್ಕೆ ವಿಸ್ಮಿತನಾಗಿ ನಿಂತುಬಿಟ್ಟಿರಬೇಕು. ಕೋಪವೂ ತುಂಬಿ ಬಂದಿದೆ.

"**ಹರಿಶ್ಚಂದ್ರ :** ಲಲಿತ ವಸುಮತಿ ಹುಟ್ಟುವಂದು ಹುಟ್ಟಿದ ಸೂರ್ಯಕುಲದ ರಾಯರ್ಗೆ ವಂಶದೊಳು ಕೀರ್ತಿಯೊಳು ಭುಜಬಲದೊಳೊರೆದೊರೆಯೆನಿಸಿ ಕನ್ನಿಕೆಯರಂ ಕುಡುವ ಭೂಪರಿಲ್ಲಿಂದು ತನಕ. ಹೊಲತಿಯರು ಬಂದಾವು ಸತಿಯರಾದಪ್ಪೆವೆಂಬುಲಿಹವೆಂಬುದು ಬಂದ ಕಾಲಗುಣವೋ ನಿಂದ ನೆಲದ ಗುಣವೋ !

ಗಾಣರಾಣಿಯರು : ಪಾವನ ಕ್ಷೀರವುಂ ಕೊಡುವ ಕೆಚ್ಚಲ ಮಾಂಸವಾವ ಲೇಸು. ಇನಿದುಳ್ಳ ಮಧುವನೊಸೆದೀವ ನೊಳವಾವ ಲೇಸು. ಅಧಿಕ ಕಸ್ತೂರಿಯುಂ ಕೊಡುವ ಮೃಗನಾಭಿ ತಾನಾವಲೇಸು, ದೇವರಿಗೆ ಸಲ್ಲವೇ? ಉತ್ತಮ ಗುಣಂಗಳಿರ್ದಾವ ಕುಂದಂ ಕಳೆಯಲಾರವವನೀಶಕೇಳ್ ಭಾವಿಸುವಡಿಂದೆಮ್ಮ ರೂಪಜವ್ವನವಿರಲು ಕುಲದ ಮಾತೇಕೆ ?

ಹರಿಶ್ಚಂದ್ರ : ಅಕ್ಕಕ್ಕು, ಬಚ್ಚಲುದುಕಂ ತಿಳಿದಡಾರ ಮಿಾಹಕ್ಕೆ ಯೋಗ್ಯಂ. ನಾಯ್ಗೆ ಹಾಲುಳ್ಳಡಾವನೂಟಕ್ಕೆ ಯೋಗ್ಯಂ. ಪ್ರೇತವನದೊಳಗೆ ಬೆಳೆದ ಹೂವಾರ ಮುಡಿಹಕ್ಕೆ ಯೋಗ್ಯಂ. ಮಿಕ್ಕ ಹೊಲತಿಯರು ನೀವೆನೆ ನಿಮ್ಮ ಜವ್ವನದ ಸೊಕ್ಕು, ರೂಪಿನ ಗಾಡಿ, ಜಾಣತನದೊಪ್ಪವೇತಕ್ಕೆ ಯೋಗ್ಯಂ. ರಮಿಸಿದವರುಂಟೆ ಶಿವಶಿವೀ ಮಾತು ಹೊಲೆ.

ಗಾಣರಾಣಿಯರು : ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ. ಮಾತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ. ರೂಪ ನೆರೆನೋಡಿದ ವಿಲೋಚನಕೆ ಹೊಲೆಯಿಲ್ಲ. ಮೆಯ್ಮುಡಿಗಳಿಂ ಸುಳಿವ ತಂಗಾಳಿಯಿಂ ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ ನಾಡೆ ಹೊಲೆಯಿಲ್ಲ. ಸೋಂಕಿಂಗೆ ಹೊಲೆಯುಂಟಾಯ್ತೆ? ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಮವೊಂದಧಿಕವೆ?

ಹರಿಶ್ಚಂದ್ರ : ಕಂಡರಿವವೈಸಲೇ ನಯನೇಂದ್ರಿಯಂ, ಘ್ರಾಣಕೊಂಡಿರುವವೈಸಲೆ ವಾಸನೆಯು ಕರ್ಣಂಗಳುಂಡರಿವವೈಸಲೇ ಶಬ್ದಂ, ದೂರದಿಂದಲ್ಲದವು ಮುಟ್ಟಲಿಲ್ಲ. ಭಂಡತನವೀಮಾತು. ಇದಕ್ಕುಪಮಾನವೇ? ಕೆಂಡವದು ಮುಟ್ಟಿದಡೆ ಬೇವಂತೆ ಕೇಳ್ದಡಂ ಕಂಡು ವಾಸಿಸಿದಡಂ ಬೆಂದವೇ ಕಾಳುಗೆಡೆಯದೆ ಹೋಗಿ ನೀವು.”

ಹೊಲತಿಯರ ವಾದವೈಖರಿ ಹರಿಶ್ಚಂದ್ರರಾಯನನ್ನು ತತ್ತರಿಸುತ್ತಿದೆ. ಅವನ ಸ್ಪೃಶ್ಯಾಸ್ಪೃಶ್ಯತೆ ಎಂತಹ ಕಿರಿದಾದ ಕಾಲುವೆಯಲ್ಲಿ ಹರಿಯುತ್ತಿದೆಯೆಂಬುದು ಗೊತ್ತಾಗುತ್ತದೆ. ಪಂಚೇಂದ್ರಿಯಗಳಲ್ಲಿ ನಾಲ್ಕರ ವ್ಯಾಪಾರಕ್ಕೆ ಹೊಲೆಯಿಲ್ಲ, ಸೊಂಕಿಂಗೆ ಹೊಲೆಯುಂಟಾಯ್ತೆ ಎಂದವರು ಕೇಳಿದುದಕ್ಕೆ ಅವನು ಕೆಂಡವನು ಮುಟ್ಟಿದಡೆ ಬೇವಂತೆ ಕೇಳ್ದಡಂ ಕಂಡು ವಾಸಿಸಿದಡಂ ಬೆಂದವೇ ಎಂದು ಯುಕ್ತಿಯಿಂದ ಉತ್ತರಿಸುತ್ತಾನೆ. ಅವರು ಇನ್ನೂ ಸೋತಿಲ್ಲ. ಮತ್ತೊಂದು ಸಯುಕ್ತವಾದವನ್ನು ರಾಯನ ಮುಂದಿಡುತ್ತಾರೆ.

“ಗಾಣರಾಣಿಯರು : ಶಾಪದಿಂದೆಮಗಾದ ದುಷ್ಕುಲಂ ಸತ್ಕುಲಜ ಭೂಪ ನಿನ್ನಯ ಸಂಗದಿಂ ಶುದ್ಧವಪ್ಪುದೆಂಬಾಪೇಕ್ಷೆಯಿಂ ಬಂದೆವೆಂ.

ಹರಿಶ್ಚಂದ್ರ : ನಿಮಗೊಸುಗೆನ್ನ ಕುಲಮಂ ಕೆಡಿಪೆನೆ?

ಗಾಣರಾಣಿಯರು : ಪಾಪಿಗಳ ಪಾಪಮಂ ತೊಳೆವ ಗಂಗೆಗೆ ಪಾಪಲೇಪವುಂಟಾಯ್ತೆ?

ಹರಿಶ್ಚಂದ್ರ : ಕುಲಧರ್ಮವೀ ಪಂಥವಲ್ಲ. ಕೊಡವಾಲ ಕೆಡಿಸುವಡಾಮ್ಲವೆನಿತಾಗಬೇಕು.”

ಹರಿಶ್ಚಂದ್ರನ ನ್ಯಾಯಾನ್ಯಾಯ ವಿಮರ್ಶೆ ಮುಗಿದುಹೋಯಿತು. ಇಲ್ಲಿ ಅವನು ಮೊಂಡುವಾದವನ್ನು ಹೂಡಿದ್ದಾನೆ. ಪಾಪಿಗಳಾದ ನಾವು ಪರಿಶುದ್ಧರಾಗುವ ಬಗೆ ಹೇಗೆ? ನಿನ್ನಂತಹ ಸತ್ಕುಲಜ ಸತ್ಪುರುಷನ ಸಹವಾಸವಾದರೆ ಅದರ ಸಂಪರ್ಕದಿಂದ ನಮ್ಮ ಹೊಲೆತನ ಹರಿಯುವುದು. ನಮ್ಮ

ನಮ್ಮಲ್ಲಿಯೇ ನಾವು, ನಿಮ್ಮ ನಿಮ್ಮಲ್ಲಿಯೇ ನೀವಿದ್ದರೆ ನಮ್ಮ ಹೊಲೆತನ ಹೋಗುವುದಿಲ್ಲ, ನಿಮ್ಮ ಸದ್ವೃತ್ತಿಗಳಿಂದ ಯಾರಿಗೂ ಪ್ರಯೋಜನವಿಲ್ಲ. ಸದ್ವೃತ್ತಿ, ಸದಾಚರಣೆಗಳ ಯೋಗ್ಯತೆ ಸುತ್ತ ಕೋಟೆ ಕಟ್ಟಿಕೊಂಡು ಕೂಡುವುದರಲ್ಲಿಲ್ಲ. ಯಾವ ಪರೀಕ್ಷೆ ಬಂದರೂ ಅದನ್ನು ಗೆದ್ದು ಅವು ವಿಜಯ ಪತಾಕೆಯನ್ನು ಮೆರೆಸಬೇಕು. ತಮ್ಮ ಬಳಿಗೆ ಯಾರೂ ಸುಳಿಯಕೂಡದು, ತಮಗದರಿಂದ ಮೈಲಿಗೆ ಸೋಕುವುದೆಂದು ಹಾರಾಡುವ ಸದಾಚಾರವೂ ಒಂದು ಬಗೆಯ ಅಸ್ಪೃಶ್ಯತೆಯೇ. ಹರಿಶ್ಚಂದ್ರ ಕುಲಧರ್ಮವೆಂಬ ಅಪ್ಪಹಾಕಿದ ಆಲದ ಮರಕ್ಕೆ ನೇಣು ಬಿಗಿದುಕೊಳ್ಳುತ್ತಿದ್ದಾನೆ. ತನ್ನ ಕುಲಧರ್ಮದ ಹೆಚ್ಚುಗಳದಲ್ಲಿ ಅವನಿಗೇ ನಂಬಿಕೆ ಸಾಲದು. ಸರ್ವರೂ ತಮ್ಮ ಪಾಪಗಳನ್ನು ತಂದು ಉಡಿ ತುಂಬಿದರೂ ಗಂಗೆ ಪಾಪರಹಿತೆಯಾಗಿರುವಂತೆ ತನ್ನ ಕುಲಧರ್ಮ ಇರಬಲ್ಲುದೆಂಬ ನಚ್ಚು ಹರಿಶ್ಚಂದ್ರನಿಗೆ ಮೆಚ್ಚಾಗಿಲ್ಲ.

ಗಾಣರಾಣಿಯರ ನಯ ವಿಧಾನ ತೀರಿದೆ. ಇನ್ನು ಸ್ವಭಾವಾನುಗುಣವಾದ ಮೊಂಡತನವನ್ನು ಅವರು ಮರೆಹೊಗುತ್ತಾರೆ.

"**ಗಾಣರಾಣಿಯರು :** ಮಾತಿಂಗೆ ಮಾತುಗೊಡಲರಿಪು ನಿನ್ನಯ ನುತಖ್ಯಾತಿ ಗಡಟಂಗೆ, ರೂಪಿಂಗೆ, ಸುರುಚಿರ ಗುಣಪಾತ್ರತಕ್ಕೆ, ಹರೆಯಕ್ಕೆ, ಗರುವಿಕೆಗೆ ಮನಸಂದು ಮತಿಗೆಟ್ಟು ಮರುಳಾದೆವು. ಓತು ಬಂದವರನ್ನುಪಚರಿಸದಿಪ್ಪುದು ನಿನಗೆ ನೀತಿಯಲ್ಲ. ಏಗೆಯ್ದೊಡಂ ಗಂಡನಾದಲ್ಲದಾತುರಂ ಪೋಗದು. ಇನ್ನೊಲಿದಂತೆ ಮಾಡು ನಿನ್ನಯ ಬೆನ್ನ ಬಿಡೆವು.

ಬಳಿವಿಡಿದು ಬಂದು ಮಾಡುವುದೇನು ? ನಮ್ಮ ಬೆಂಬಳಿಯಲೆನಿಬರು
ಹೊಲೆಯರಿಲ್ಲೆಂದಡಹಗೆ ಬಿಡೆವೆಳಸಿ ಮುಟ್ಟಿಸಿ ಮರುಳ್ಗೊಳಿಸಿ ಮತ್ತೊಲ್ಲ
ನವನಿಪನೆಂದು ಮೊರೆಯಿಡುತ್ತ ಇಳೆಯೊಳಗೆ ಸಾರುತ್ತ ದೂರುತ್ತ ಬಪ್ಪೆವು"

ಅರಸನಿಗೆ ಸೈರಣೆ ಮೀರುತ್ತದೆ. ಚಮ್ಮಟಿಗೆಯನ್ನು ಸೆಳೆದುಕೊಂಡು ಬೆನ್ನೊಡೆಯೆ ಮುಡಿ ಹುಡಿಯೊಳಗೆ ಹೊರಳೆ ಹಲುಬೀಳೆ ಬಾಯೊಡೆಯೆ ಮೆಯ್ ನೋಯೆ ಕೈಯುಳುಕೆ, ನಡೆದಲ್ಲಿ ನಡೆದು, ಹೊಕ್ಕಲ್ಲಿ ಹೊಕ್ಕು, ಓಡಿಹೋದೆಡೆಗೆ ಬೆನ್ನಟ್ಟಿ, ರುಧಿರಂ ಬಸಿಯೆ ಹೊಯ್ದು ಹಿಂತಿರುಗುತ್ತಾನೆ. ಅವರು ಅಳುತ್ತಾ ವಿಶ್ವಾಮಿತ್ರನ ಬಳಿಗೆ ದೂರು ಹೊತ್ತು ಹೋಗುತ್ತಾರೆ.

ಹಿಂದೂ ಸಮಾಜದ ರಕ್ತವನ್ನು ಶೋಷಿಸುತ್ತಿರುವ ಜಾತಿಯ ಪ್ರಶ್ನೆಯನ್ನು ಕವಿ ರಾಘವಾಂಕ ಎತ್ತಿಕೊಂಡಿದ್ದಾನೆ. ಬಸವಣ್ಣನವರ ಕರುಣೆಯ ಕಂದನಾದ ಕವಿಗೆ ಈ ವಿಷಯದಲ್ಲಿ ಅವರು ಆಡಿರುವ ಖಂಡಿತವಾದ ಮಾತುಗಳು ಮರೆತು ಹೋಗಿಲ್ಲ.

"ಕೊಲ್ಲುವವನೆ ಮಾದಿಗ, ಹೊಲಸು ತಿಂಬುವನೇ ಹೊಲೆಯ
ಕುಲವೇನೋ, ಆವಂದಿರ ಕುಲವೇನೊ ?
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲ ಸಂಗನ ಶರಣರೇ ಕುಲಜರು ॥"

ಎಂಬ ಸಂದೇಶ ಅವನ ಕಿವಿಯಲ್ಲಿ ಮೊರೆಯುತ್ತಿದೆ. ಗಾಣರಾಣಿಯರಿಗೂ ಹರಿಶ್ಚಂದ್ರನಿಗೂ ಆದ ಸಂಭಾಷಣೆ ಪರಂಪರೆ, ಪ್ರಗತಿಗಳ ವಾದವೆಂದೇ ನಾವು ಭಾವಿಸಬೇಕು. ಕವಿ ಪ್ರಗತಿಯ ವಾಣಿಯಾಗಿ ನಿಂತು ಅಸ್ಪೃಶ್ಯತಾನಿವಾರಣೆಗೆ ಹೋರಾಡಿದ್ದಾನೆ. ಅವನೇ ಅನಾಮಿಕ ಸತಿಯರ ಗುಣದೋಷಗಳನ್ನು ಪೃಥಃಕರಿಸುತ್ತಾ

"ಹೊಸ ಕುಟಿಲಕುಂತಲದ ಚಂಚಲಾಕ್ಷಿಗಳ ಕ
ರ್ಕಶಕುಚದ ಶಿಥಿಲಮಧ್ಯದ ಲಘುಶ್ವಾಸದ
ತ್ಯಸಮರಾಗಾಧರದ ಗೂಢನಾಭಿಯ ಮಿಾರೆ ಕೊಬ್ಬಿದ ನಿತಂಬಯುಗದ ॥
ಅಸದಳದ ಜಳಗತಿಯ ಬೆಳುನಗೆಯ ವಕ್ರವಾ
ಕ್ಯ ಸಮೂಹದವಗುಣಂಗಳ ಸಂಗದಿಂ ಕುಲಂ
ಹಸಗೆಟ್ಟನಾಮಿಕೆಯದಾದರಲ್ಲದೆ ಸಂಗವಾರ ಕುಲಮಂ ಕೆಡಿಸದು ॥"

ಎಂದು ನಿಷ್ಕೃಷ್ಟವಾಗಿ ತನ್ನ ಅಭಿಪ್ರಾಯವನ್ನು ಹೇಳಿಬಿಟ್ಟಿದ್ದಾನೆ. ಹಾಗಾದರೆ ಹರಿಶ್ಚಂದ್ರರಾಯ ಹೊಲತಿಯರ ಆಕಾಂಕ್ಷೆಗಳನ್ನೇತಕ್ಕೆ ಈಡೇರಿಸಲಿಲ್ಲ. ರಾಘವಾಂಕನು ಚಿತ್ರಿಸಿರುವಂತೆ ಹರಿಶ್ಚಂದ್ರ, ಧೀರೋದ್ಧಾತ ನಾಯಕ. ಪರಮ ಸಾಧ್ವಿಯೂ, ಸಕಳ ಕಲಾಸೌಂದರ್ಯಗಳ ಗಣಿಯೂ ಆಗಿದ್ದ ಚಂದ್ರಮತೀದೇವಿಯ ಪ್ರಾಣಾಧಿಕ. ಒಲಿದು ಬಂದ ಹೆಂಗಸರನ್ನು ಬರಮಾಡಿಕೊಳ್ಳುವ ಪ್ರಕೃತಿಯವನಲ್ಲ. ಜತೆಗೆ ಸನಾತನ ಪರಂಪರೆಯಲ್ಲಿ ಬೆಳೆದು ಬಂದ ಒಬ್ಬ ಪುರಾಣ ಪ್ರಸಿದ್ಧ ವ್ಯಕ್ತಿಯನ್ನು ಕವಿ ಚಿತ್ರಿಸುತ್ತಿದ್ದಾನೆ. ಆ ಕಾಲದ ಮನೋಧರ್ಮವನ್ನು ಎತ್ತಿತೋರುವುದೇ ಕವಿಯ ಆಶಯ.

ಆ ಕಾಲದ ಅಸ್ಪೃಶ್ಯತೆಯ ಕಲ್ಪನೆಗೆ ತನ್ನ ಸಮ್ಮತಿಯಿಲ್ಲವೆಂದು ಸೂಚಿಸಿ ಕವಿ ಕಾಲೋಚಿತವಾಗಿ ಕಥೆಯನ್ನು ನಡಸಿಕೊಂಡು ಹೋಗಿದ್ದಾನೆ. ಹರಿಶ್ಚಂದ್ರನ ಸ್ಥೈರ್ಯವನ್ನು ಪರೀಕ್ಷಿಸಲೋಸುಗ ಬಂದವರು ಅನಾಮಿಕ ಸತಿಯರು. ಅದರಿಂದ ಅವನು ಸುಖವಾಗಿ ಪಾರಾದನೆಂದು ತೋರಬೇಕಾಗಿರುವುದೂ ಕವಿಯ ಮುಖ್ಯ ಕೆಲಸಗಳಲ್ಲಿ ಒಂದಾಗಿದೆ. ಇವುಗಳ ಜತೆಗೆ ಕಥೆ ಮುಂದು ವರಿಯಬೇಕಾಗಿದೆ. ನಿಮಿತ್ತಮಾತ್ರಕ್ಕೆ ಹುಟ್ಟಿಕೊಂಡ ಒಂದು ಸನ್ನಿವೇಶ ದಲ್ಲಿ ಮೈಮರೆತು ಕವಿ ಕರ್ತವ್ಯಮೂಢನಾಗಲು ಸಾಧ್ಯವಿಲ್ಲ.

೭

ಪರಿಭವಪಡೆದ ಗಾಣರಾಣಿಯರಾದ ಅನಾಮಿಕ ಸತಿಯರು ಅಳುತ್ತಾ ವಿಶ್ವಾಮಿತ್ರನ ಬಳಿಗೆ ಹೋಗಿ ತಮ್ಮಳಲನ್ನು ನಿವೇದಿಸಿಕೊಳ್ಳುತ್ತಾರೆ. ಜತೆಗೆ ಸ್ವಲ್ಪ 'ಪುಳ್ಳೆಯಿಡುವ' ಕೆಲಸವನ್ನೂ ಮಾಡುತ್ತಾರೆ. 'ಆರ ಮನೆಯವರೆಂದು ಕೇಳ್ದಡೆರಡನೆಯ ಪುರವೈರಿ ವಿಶ್ವಾಮಿತ್ರಮುನಿಯ ಮನೆಯವರೆಂದಡಾರಾಯ ನೆಮ್ದು ಕೈಯಾರೆ ಸದೆಬಡಿದನೆಮ್ಮಂ ನಿರಪರಾಧಿಗಳನು' ಎಂದು ಹೇಳಿ ಉರಿ ಯುತ್ತಿರುವ ಬೆಂಕಿಗೆ ಆಜ್ಯವನ್ನು ಸುರಿಯುತ್ತಾರೆ. 'ಕಾರುಣ್ಯಚಿತ್ತದಿಂ ಕಳುಹಿ ಕೊಲಿಸಿದೆ ತಂದೆ' ಎಂದವರು ಮೊರೆಯಿಟ್ಟರೆ ವಿಶ್ವಾಮಿತ್ರನ ಮನಸ್ಸು ಅಂತಃಕರಣದಿಂದ ಅವರ ನೋವಿನ ಕಡೆ ಹರಿಯಲಿಲ್ಲ. 'ಎನ್ನಯ ಮನೋರಥಂ ಕೈಸಾರ್ದುದಿಲ್ಲಬೇಡೆಂದು ಕೋಪಾಟೋಪದಿಂ ಹರಿದನು.' ಉಗ್ರತೆಯಿಂದ ಹರಿಶ್ಚಂದ್ರನಿದ್ದಲ್ಲಿಗೇ ಬಂದು 'ಎನ್ನ ಬಸುರಿಂದ ಮೂಡಿರ್ದ ಕನ್ನೆಯರ ಚೆನ್ನೆಯರನಬಲೆಯರ ಗಾಡಿಕಾರ್ತಿಯರ ನರಿವರಿದಿಂತು ಸಾಯ ಸದೆ ಬಡಿವರೇ' ಹೇಳೆಂದನು. ಅರಸನೂ ಕೋಪದಲ್ಲಿದ್ದಾನೆ. ಮಾತಿಗೆ ಪ್ರತಿಯಾಗಿ 'ನಿಮ್ಮ ಮನೆಯವರೆಂದು ಮೊರೆಯಿಟ್ಟರಾಗಿ ಕರುಣಿಸಿಬಿಟ್ಟೆ' ಎಂದು ಹೇಳುತ್ತಾನೆ. ವಿಶ್ವಾಮಿತ್ರ ಚಂಡಕೌಶಿಕನಾಗಿ ಬಿಡುತ್ತಾನೆ. ಅರಸನ ಕೋಪ ಧರಾತಳಕ್ಕಿಳಿದು ಹೋಗುತ್ತದೆ. ಕೋಪ, ಕಠಿಣೋಕ್ತಿಗಳಿಗಿಂತಲೂ ಶಾಂತಿ, ವಿವೇಚನೆಗಳೇ ಈಗ ಪ್ರಯೋಜನಕ್ಕೆ ಬರುವವೆಂದರಿತು ತಿಳಿಯದೆ ಮಾಡಿದ ತಪ್ಪನ್ನು ಕ್ಷಮಿಸು ತಂದೆ ಎಂದು ಪರಿಪರಿಯಾಗಿ ಬೇಡಿಕೊಳ್ಳು ತ್ತಾನೆ. ವಿಶ್ವಾಮಿತ್ರ ಇನ್ನಷ್ಟು ಕೆರಳಿ 'ನಿನ್ನ ಕೋಡ ಕೊರೆಯದೆ ಬರಿದೆ

ಬಿಟ್ಟಪೆನೆ' ಎಂದು ಗದರಿಸುತ್ತಾನೆ. ದುರ್ಜನರೇ ಶರಣೆಂದರೆ ವೈರವನ್ನು ಬಿಡುವಾಗ ಸರ್ವಸಂಗ ಪರಿತ್ಯಾಗಮಾಡಿದ ನಿಮ್ಮಂತಹ ಮುನಿಪರು ಮುನಿಯುವುದು ಲೇಸಲ್ಲ ಎಂದು ಧೊರೆ ಹೇಳಿದುದಕ್ಕೆ ಮುನಿನಾಥ 'ಎನ್ನಯ ಕುಮಾರಿಯರ ಮದುವೆಯಾಗೆಲ್ಲಾ ನಿರೋಧಮಂ ಬಿಡುವೆ ನಿಂತೀಗ' ಎಂದು ಹೇಳುತ್ತಾನೆ. ತನ್ನನ್ನು ಪರೀಕ್ಷಿಸುವುದಕ್ಕೋಸ್ಕರ ಮುನಿ ಹೀಗೆ ಹೇಳುತ್ತಿದ್ದಾನಲ್ಲವೆ ಬದುಕನ್ನು ನವನರಕಮಾಡುವುದಕ್ಕೆ ಅವನೆಂದಿಗೂ ಒಪ್ಪನು ಎಂಬುದೇ ಹರಿಶ್ಚಂದ್ರನ ನಂಬಿಕೆ.

"ಹರನನರ್ಚಿಸು ದಾನಧರ್ಮಮಂ ಮಾಡು ಭೂ
ಸುರ ಮಾನಿಸು ದೇಶವಂ ನೋಡಿ ಪಾಲಿಸ
ಧ್ವರರಕ್ಷೆಗೆಯ್ಯಗ್ರಹಾರಂಗಳ ಬಿಡು ಮುನೀಶ್ವರರನಾರಾಧಿಸು ||
ಧರೆಯೊಳಗನಾಥರಂ ಸಲಹು ದುಷ್ಟರನು ಪರಿ
ಹರಿಸು ಸತ್ಯಂಗೆಡದಿರುತ್ತಮ ಕುಲಾಚಾರ
ವೆರಸಿ ನಡೆಯೆಂದೆನ್ನದೀ ಹೊಲತಿಯರ ಕೂಡಿ ನಡೆಯೆಂಬರೇ ಮುನಿಗಳು ||"

ಸತಿಯರನ್ನು ಹೊಲತಿಯರೆಂದೆನ್ನುತ್ತಾ ಅವರ ತಂದೆಯಾದ ನನ್ನನ್ನೇ ಹೊಲೆಯನೆಂದು ಕರೆಯುವೆಯಾ ಎಂದು ಮುನಿ ಪ್ರಶ್ನಿಸಲು ಅರಸು

" . . . . . ರುದ್ರನಂ ಬಯ್ದುವನೆ ಮುನಿಪ ಹೊಲೆಗೆರೆಯು ಜಲದ ||
ನಡುವೆ ಬಿಂಬಿಸುವ ರವಿ ಹೊಲೆಯನೇ ಕಮಲಭವ
ನೊಡನೆ ಹುರುಡಿಸಿ ಬೇರೆ ಸರ್ವಜೀವರ ಮಾಡು
ವೆಳೆಯೊಳಾಜೀವರೊಳಗಾದಪನೆ ನಿಮ್ಮ ಹವಣರಿಯದಾಡಿದಿರೆಂದನು ||"

ಹರಿಶ್ಚಂದ್ರನ ಭಕ್ತಿ, ಗೌರವಗಳು ಕೌಶಿಕನ ನಿರ್ಧಾರವನ್ನು ಅಲುಗಾಡಿಸುತ್ತಿವೆ. ತಪ್ಪಿತಸ್ಥನಲ್ಲದ ಮನುಷ್ಯ ತಪ್ಪನ್ನು ಹೊತ್ತುಕೊಂಡು ಕೃಪಾಭಿಕ್ಷೆಗೆ ಗೋಗರೆಯುತ್ತಿದ್ದಾನೆ ಅವನ ಮೇಲೆ ರೇಗಿ, ಕೆರಳಿ, ಹರಿಹಾಯಬೇಕೆಂದು ಬಂದ ಮುನಿ ಉತ್ತೇಜನವಿಲ್ಲದೆ ಕಂಗೆಡುವ ಸ್ಥಿತಿಗೆ ಬಂದಿದ್ದಾನೆ. ನಾನು ಮುನಿಸರ್ವೋತ್ತಮ, ನೀನು ನೃಪಸರ್ವೋತ್ತಮ, ನಮ್ಮಲ್ಲಿ ಬೀಗತನವಾದ ಹೆಮ್ಮೆಯೊಂದು ನನಗೆ ಬರಬೇಕು. ನಿನಗೆ ಕೈ ಮುಗಿದು ಬೇಡಿಕೊಳ್ಳುತ್ತೇನೆ ನನ್ನ ಮಕ್ಕಳನ್ನು ಮದುವೆಯಾಗು ಎಂದು ಮುನಿ ಪ್ರಾರ್ಥಿಸುತ್ತಾನೆ. ಹರಿಶ್ಚಂದ್ರ ಪ್ರತಿಕಕ್ಷಿ ಕುಗ್ಗಿದನೆಂದು ಏರಲಿಲ್ಲ. ಅದೇ ವಿನಯದಿಂದ

'ಸರ್ವ ಮುನಿವರರಿಂದ ಕೈಮುಗಿಸಿಕೊಂಬ, ಕೀರ್ತಿಸಿಕೊಂಬ ನೀವು ಕೈಮುಗಿದೆನ್ನನು ನರಕಕ್ಕೆ ಕಳುಹಿಸಲೆಳಸುವರೇ' ಎಂದು ಕೇಳಲು ನಿನಗೆ ಕೈಮುಗಿದೆಮ್ಮ ಹಿರಿಯತನಕಾವ ಕುಂದಾಗಲಿ ಇದೊಂದು ತೇಜಮಂ ಕುಡಬೇಕೆಂದನು. ಮುನಿಯ ಕಾಟ ಅಸಹನೀಯವಾಗುತ್ತ ಬಂದಿದೆ. ಕೋಪದ ಭರದಲ್ಲಿ ಹರಿಶ್ಚಂದ್ರ 'ಎಡೆವಿಡದೆ ಬೇಡಿ ಕಾಡುವಿರಾದಡಿನ್ನು ಕೇಳ್ ಕಡೆಗೆನ್ನ ಸರ್ವ ರಾಜ್ಯವನಾದಡಂ ನಿಮಗೆ ಕೊಡಹಡೆವೆನ್ನೈ ಸಲ್ಲದೀಯೊಂದು ತೇಜಮಂ ಕೊಡೆನೆಂದು' ಭೂಪಾಲನು ನುಡಿಯಲು ಮುನಿ 'ತಥಾಸ್ತು' ಎನ್ನುತ್ತಾನೆ.

ವಿಶ್ವಾಮಿತ್ರ ನಿಂತಿರುವುದು ರಾಜ್ಯ ಸಂಪಾದನೆಗಲ್ಲ. ಇಷ್ಟು ಸುಲಭವಾಗಿ ರಾಜ್ಯ ತನ್ನ ಕೈವಶವಾಗುವುದೆಂದು ಅವನು ನಂಬಿರಲಲ್ಲ. ಹರಿಶ್ಚಂದ್ರನ ಯೋಗ್ಯತೆಯನ್ನು ಮುನಿ ಸರಿಯಾಗಿ ಅರ್ಥ ಮಾಡಿಕೊಂಡಿರಲಿಲ್ಲ. ರಾಜ್ಯದಾನ ಮುನಿಗಾದ ಒಂದು ಸೋಲು. ಇದರಿಂದ ಅವನಿಗೆ ಕಸಿವಿಸಿಯಾಗುತ್ತದೆ. ಮಾತುಮಾತಿಗೂ ನನ್ನ ಮಕ್ಕಳನ್ನು ಮದುವೆಯಾಗು, ನಿನ್ನ ರಾಜ್ಯವನ್ನು ಮರಳಿ ನಿನಗೆ ಕೊಡುತ್ತೇನೆ ಎಂದು ಹೇಳುವುದಕ್ಕಾರಂಭಿಸುತ್ತಾನೆ. ವಂಶ ಗೌರವದ ಹೆಸರಿನಲ್ಲಿ ಹೋರಾಡುತ್ತಿದ್ದ ಹರಿಶ್ಚಂದ್ರನ ಅಧಟನ್ನು ಕಂಡು ಮತ್ತಷ್ಟು ಕೆರಳುತ್ತದೆ. ಶಾಪದ ಭೀತಿಯನ್ನು ಹುಟ್ಟಿಸುತ್ತಾನೆ. ಅದಕ್ಕೆ ಹರಿಶ್ಚಂದ್ರ

"ಪೊಡವಿ ಮುನಿವೊಡೆ ಬಯಲು ಬಡಿವೊಡುಸಿರೊಡಲನಿರಿ
ವೊಡೆ ಕರೆವ ಮೊಲೆಹಾಲನೀಂಟುವೊಡೆ ಬಿಡದಡುವ
ಮಡಕೆಯುಂಬೊಡೆ ಹರಸಿ ರಕ್ಷಿಸುವ ನೀವೆನಗೆ ಮುನಿದು ಶಾಪವೀವೊಡೆ ॥
ಹಿಡಿದು ರಕ್ಷಿಸುವರಾರಾಮಾತದಂತಿರಲಿ
ಪೊಡವೀಶನನ್ಯಾಯಮುಮಂ ಮಾಡಲೊಲ್ಲೆನಂ
ದೊಡೆ ಶಾಪ ಬಂದುದೆಂಬಪಕೀರ್ತಿ ಬಂದೊಡಂ ಬರಲಿ . . . ॥"

ಅರಸನ ಧೈರ್ಯ, ನಿರ್ಮಲವರ್ತನೆಗಳನ್ನು ಮೆಚ್ಚದಿರುವಷ್ಟು ರೂಕ್ಷನಲ್ಲ ಮುನಿನಾಥ. ಇವನ ಬಾಯಲ್ಲಿ ಹುಸಿಯನ್ನು ಹೇಗೆ ನುಡಿಸಲಿ ಎಂಬುದೇ ಅವನ ಸಮಸ್ಯೆ! 'ಹರಣವನು ಬೇಡದುಳುಹಿದನು ಲೇಸಾಯ್ತು ಮುನಿ ಕರುಣಿಸಿದನೆಂದು' ರಥವೇರಲು ಅರಸ ಹೋಗುತ್ತಿರಲು, ಹಿಂದಕ್ಕೆ ಕರೆದು ಉಟ್ಟ ಉಡುಗೆತೊಡುಗೆಗಳನ್ನು ಕಳಚಿಕೊಂಡು ತನ್ನವನೊಬ್ಬನುಟ್ಟ

ಹಣ್ಣಾದ ಸೀರೆಯನ್ನಿಳಿಸಿಕೊಂಡು ನಾಲ್ಕಾಗಿ ಸೀಳಿ ಕೊಡುತ್ತಾನೆ. ಅದನ್ನೇ ಹರಿಶ್ಚಂದ್ರ, ಚಂದ್ರಮತಿ ಮತ್ತು ರೋಹಿತಾಶ್ವ ಧರಿಸಿಕೊಂಡು ಪುತ್ತೆ ಹೊರಡಲನುವಾಗುತ್ತಾರೆ. 'ನೀನು ಯಾಗಮಾಡಿದ ಕಾಲದಲ್ಲಿ ನನಗಿತ್ತ ದಕ್ಷಿಣೆ ದ್ರವ್ಯವನ್ನು ಕೊಟ್ಟು ಹೋಗು' ಎನ್ನುತ್ತಾನೆ. 'ಹೇರನೊಪ್ಪಿಸಿದವಂ ಗೆಲ್ಲಿಯದು ಸುಂಕವೆನಲು ಒಡಲಳಿದಡಂ ಸಾಲವಳಿಯದೆನಲೀ ಧರಣಿಯೊಡೆ ತನಂ ಹೋದಡೇಂ ಸಾಲಹೋದುದೆ ಮುನ್ನಿನೊಡನೆಯುಂ ಕೊಡು; ಕೊಡ ದೊಡೆಲ್ಲವಂ ಮರಳಿ ಕೈಕೊಳು.' ಧೊರೆ ಅದಕ್ಕೂ ಒಪ್ಪಿಕೊಂಡು ನಲವ ತ್ತೆಂಟು ದಿನಗಳ ಅವಧಿಯನ್ನು ತೆಗೆದುಕೊಳ್ಳುತ್ತಾನೆ. ನಾನಾಳ್ವ ದೇಶ ವನ್ನು ಬಿಟ್ಟು ಬೇರೆ ಕಡೆಯಿಂದ ತರಬೇಕು, ಎಂದು ಮುನಿ ಎಚ್ಚರಿಸಿತ್ತಾನೆ. ಆಗಲಿ, ಹಂಪೆ ಕಾಶಿಗಳು ವಿರೂಪಾಕ್ಷನಾಧೀನ, ಅಲ್ಲಿಂದ ತರುತ್ತೇನೆ. ವಿಶ್ವಾ ಮಿತ್ರಮುನಿಯ ಪರೀಕ್ಷೆಯೆಲ್ಲಾ ನಿಷ್ಫಲವಾಗುತ್ತ ಬರುತ್ತದೆ. ಅವನಿಗೊಂದು ಹುಲುಧೈರ್ಯ. ಧೊರೆ ಊರಿಗೆ ಹೋಗಿ ತನ್ನ ರಾಜ್ಯಶ್ರೀಯನ್ನು ಕಂಡಾಗ ಮನವಳುಕಿ, ಮರುಗಿ ಶರಣಾಗತನಾಗುತ್ತಾನೆ ಎಂದು ಭಾವಿಸಿ ಊರಿಗೆ ಬಂದು ಅಲ್ಲಿ ರಾಜ್ಯ, ಕೋಶಗಳನ್ನು ಒಪ್ಪಿಸಿಕೊಟ್ಟು ಹೋಗು ಎಂದು ಆಜ್ಞಾಪಿಸುತ್ತಾನೆ. ಮುನಿ ರಥವನ್ನೇರಿ ಹೊರಡುತ್ತಾನೆ, ಅರಸು ಅವನ ಪರಿವಾರ ಕಾಲ್ನಡಗೆಯಿಂದ ಹಿಂಬಾಲಿಸುತ್ತಾರೆ.

೮

ಧೊರೆ ಬರುತ್ತಾನೆಂದು ಪುರಜನ ಊರನ್ನು ಸಿಂಗರಿಸಿ, ವಿಜೃಂಭಣೆ ಯಿಂದ ಎದುರುಗೊಳ್ಳಲು ಹೋಗುತ್ತಾರೆ. ರಾಜನ ರಥದಲ್ಲಿ ವಿಶ್ವಾಮಿತ್ರ ಕುಳಿತಿದ್ದಾನೆ. ಅವರ ಆಸೆ ನಿರಾಶೆಯಾಗುತ್ತದೆ.

"ನಸುನನೆಯುನಪ್ಪಿದಳಿಕುಳವಂತೆ ಕಡುಹಸಿದು
ಕಸುಗಾಯನಗಿದ ಗಿಳಿಗಳ ಬಳಗದಂತೆ ನ
ಟ್ಟಸವೆ ವಿಷವುಂ ಸವಿದ ಶಿಶುವಿಸರದಂತೆ ಕೊರಡಂ ಕರ್ದುಃ ಚಂಚುನೊಂದು॥
ಕುಸಿದ ಪಿಕನಿಕರದಂತಾಯ್ತು ಬೇಸತ್ತು
ಬಸವಳಿಯುತಂದು ಮಂದಿಗಳೊಳರಸಿದರು ಮಾ
ಮಸಕದಿಂ ಪುರಜನಂ ಭೂಪನಂ ಹೊಲಗೆಟ್ಟ ಕರು ತಾಯನರಸುವಂತೆ ॥"

ಅರಸನ ಸ್ಥಿತಿ ಚಿಂತಾಜನಕವಾಗಿದ್ದರೂ, ಅದರಿಂದ ಜನಾನುರಾಗ ಕುಂದುವುದಿಲ್ಲ. ಕಾಣಿಕೆಯನ್ನು ಒಪ್ಪಿಸಿಕೋ ಎನ್ನುತ್ತಾರೆ. ನನಗರಸು

ತನ ಹೋಯಿತು. ವಿಶ್ವಾಮಿತ್ರ ಮುನಿಗಾಯಿತು ಎಂದು ಬಲಾತ್ಕಾರದಿಂದ ಅವರ ಕೈಯಲ್ಲಿ ಮುನಿಗೆ ಕಾಣಿಕೆಗಳನ್ನು ನೀಡಿಸುತ್ತಾನೆ. ಅರಮನೆಯನ್ನು ಪ್ರವೇಶಿಸುತ್ತಾರೆ. ಕೌಶಿಕ ಸಿಂಹಾಸನದ ಮುಂದೆ ನಿಂತಿದ್ದಾನೆ, ಈಗಲೂ ನನ್ನ ಮಕ್ಕಳನ್ನು ಮದುವೆಯಾಗು, ಇವೆಲ್ಲವನ್ನೂ ಹಿಂದಕ್ಕೆ ಪಡೆಯುವೆ ಎಂದು ವಿಲೋಭನೆಯನ್ನೊಡ್ಡುತ್ತಾನೆ. ಅರಸು ಅಚಲ

"ಹೆತ್ತ ತಾಯಂ ಮಾರಿ ತೊತ್ತ ಕೊಂಬರೆ ಮೂಗ
ನಿತ್ತು ಕನ್ನಡಿಯ ನೋಡುವರೆ ಮಾಣಿಕದೊಡವ
ನೊತ್ತೆಯಿಟ್ಟೊಡೆದ ಗಾಜಂ ಹಿಡಿವರೇ ಕೋಪದಿಂ ಸತ್ತು ಮದುವೆಯಹರೆ ॥
ಕತ್ತುರಿಯ ಸುಟ್ಟಿರಳಕುರುಕಲನು ಗೆಯ್ವರೇ
ಚಿತ್ತೈಸು ಹೊಲತಿಯರ ನೆರೆದು ನಾನೋವದಿ
ಪ್ಪತ್ತೊಂದು ತಲೆವೆರಸಿ ನರಕಕ್ಕೆ ಹೋಹೆನೇ ಮುನಿನಾಥ ಹೇಳೆಂದನು ॥"

ಇನ್ನು ನಿನ್ನ ಪರಿವಾರವೆಲ್ಲವನ್ನು 'ಕರೆಸು' ಎಂದು ಮುನಿ ಹೇಳುತ್ತಾನೆ.

"ಬಾಡಿದ ಮೊಗಂ ಬರಿತ ಬಾಯ್ ಸುರಿವ ನಯನಾಂಬು
ಪಾಡಳಿದ ಮತಿ ನೀಡಿ ಬೆಳೆದ ಸುಯ್ ದುಗುಡದ
ಕ್ಕಾಡುವಂಗಂ ನಿರೋಧಾಗ್ನಿಯಿಂ ಕುದಿದು ಮರುಗುವ ಮನಂ ಮಾಸಿದ
ಮುದಂ ॥"

ಕೂಡೆ ಎಲ್ಲರೂ ಬರುತ್ತಾರೆ. ಅರಸ ಮುನಿನಾಥನಿಗೆ ಎಲ್ಲವನ್ನೂ ಒಪ್ಪಿಸಿಕೊಟ್ಟು ಹೋಗಲಪ್ಪಣೆ ಬೇಡುತ್ತಾನೆ. ಪುರಜನಕ್ಕೆ ದುಃಖ ಉಮ್ಮಳಿಸಿ ಬಂದಿದೆ

"ಪೊರಮಡುವ ಭೂಪಾಲನಂ ಕಂಡು ಕಣ್ಗೆಟ್ಟು
ಮರುಗಿ ಬಸುರಿಂ ಹೊಸೆದು ಬಸವಳಿದು ಬಿಸುಸುಯ್ದು
ಮೊರೆಯಿಟ್ಟು ಬಾಯ್ಬಿಟ್ಟು ಕೈನೀಡಿ ಕರೆದು ಕಟ್ಟೊರಲಿ ಸೈರಿಸಲಾರದೆ ॥
ನೆರೆ ನಿನ್ನ ನಂಬಿ ನಚ್ಚಿರ್ದ ಪರಿವಾರಮಂ
ಮರೆದೆಯೋ ತೊರೆದೆಯೋ ಪೇಳು ನೀ
ಸರ ಕುಲಜ ಎಂದೆಂದು ನುಡಿನುಡಿದು ಮಿಡುಮಿಡನೆ ಮಿಡುಕಿತ್ತು
ಪೌರಜನವು ॥
ದಂತಿಯಿಂದಿಳಿದು ನಡೆದರಿಯದವ ಬರಿಗಾಲೊ
ಳೆಂತಡಿಯನಿಡುವೆ ಹಾಸಿನೊಳು ಪವಡಿಸುವಾತ
ನೆಂತು ಕಲುನೆಲದೊಳೊರಗುವೆ ಸಿತಚ್ಛತ್ರ ತಂಪಿನೊಳು ಬಪ್ಪಾತ ನೀನು ॥

ಎಂತು ಬಿರಿಬಿಸಿಲನಾನುವೆ ಪುರದೊಳಿಪ್ಪಾತ
ನೆಂತರಣ್ಯದೊಳಿಪ್ಪೆ ಜನವನಗಲ್ದರಿಯದವ
ನೆಂತು ಪೇಳೇಕಾಕಿಯಾಗಿಪ್ಪೆ ಎಂದು ಬಾಯ್ಬಿಟ್ಟುದು ಸಮಸ್ತಜನವು ॥

ಹೊರಗೆ ದಾನವ ಬೇಡುವವರುಂಟೆ ಕೊಟ್ಟು ಬೇ
ಸರಿದ ಮುಗುದರಸು ದೊರಕಿದನಲಾ ಎಂದು ಕ
ಟ್ಟರೆಗಂಡ ಪಾಪಿ ನಿಷ್ಕರುಣಿ ನಿರ್ದಯ ಮೂರ್ಖಸೀಜ ನೀರಸ ನಿರ್ಗುಣ ॥
ನೆರೆಕೊಂದೆ ನಂಬಿ ನಚ್ಚಿರ್ದವೆಮ್ಮೊಡಲೊಳ
ಕ್ಕಿರಿಯುತಿಪ್ಪಳಲ ಬೇಗೆಯ ಬೆಂಕಿಯುರಿ ನಿನ್ನ
ನಿರಿಯವೇ ಹೇಳು ವಿಶ್ವಾಮೃತ್ಯುವಾದೆ ವಿಶ್ವಾಮಿತ್ರ ಎನುತಿರ್ದರು ॥

ಜಡೆಗಳೆದು ಮುಕುಟಮಂ ನಾರ ಸೀರೆಯನು ತೊರೆ
ದುಡಿಗೆಯಂ ರುದ್ರಾಕ್ಷಮಾಲೆಯಂ ಕಳೆದು ಮಣಿ
ತೊಡಿಗೆಯಂ ಕಂದಮೂಲವನೊಲ್ಲದೂಟಮಂ ದರ್ಭೆಯಂ ಬಿಟ್ಟಸಿಯನು ॥
ಅಡವಿಯನು ಬಿಟ್ಟು ನಗರಿಯ ಭಸಿತಮಂ ಬಿಟ್ಟು
ಕಡು ಸುಗಂಧಗಳ ಜಿತೇಂದ್ರಿಯತ್ವವ ಬಿಟ್ಟು
ಮಡದಿಯರ ಜಗವರಿಯೆ ಕೂಡಲು ವ್ರತಕ್ಕೆ ಮುಪ್ಪಾಯ್ತೆ ಮುಪ್ಪಿನೊಳೆಂದರು ॥

ಮಲೆತು ಬೆನ್ನಟ್ಟುವ ಮಹಾರಿಷಡುವರ್ಗಮಂ
ಗೆಲಲರಿಯದವನಾವ ಹಗೆಗಳಂ ಗೆಲುವೆ ನಿ
ನ್ನೊಳಗೆ ಕರಣವ ಸಂತವಿಡಲರಿಯದವನಾವ ದೇಶಮಂ ಸಂತವಿಡುವೆ ॥
ಸಲೆ ತಪಸ್ತೇಜದಿಂ ಪುರುಷಾರ್ಥಕೋಶಮಂ
ಬಳಸಲರಿಯದವನಾವ ತೇಜದಿಂ ಕೋಶಮಂ
ಬಳಸಿದಪೆ ಕಂಗೆಟ್ಟು ಕಡುಪಾಪಿ ಮೂರ್ಖ ಕೌಶಿಕ ಕೇಳು ಕೇಳೆಂದರು ॥

ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ ಸಪ್ತ
ಶರಧಿಪರಿವೃತಧರೆಯ ಸಿರಿಯ ಸೊಬಗಜ್ಞಾತವಾಸಕ್ಕೆ ಪೋಗುತಿದೆ ಕೋ ॥
ಎರವ ದೀನಾನಾಥರಾನಂದವಡಗುತಿದೆ
ವರ ಮುನೀಂದ್ರರ ಯಾಗರಕ್ಷೆ ಬಲವಳಿಯುತಿದೆ
ನಿರುತವೆಂದೊಂದಾಗಿ ಬಂದು ಸಂದಿಸಿ ನಿಂದ ಮಂದಿ ನೆರೆ ಮೊರೆಯಿಟ್ಟುದು ॥ ”

ಅರಸನ ಅಂತಃಕರಣ ಕಲಕಿಬಿಟ್ಟಿದೆ. ಮಕ್ಕಳಂತಿದ್ದ ಪ್ರಜೆಗಳ ಗೋಳನ್ನು ನಿವಾರಿಸಲಸಮರ್ಥನಾಗಿದ್ದಾನೆ. ತನ್ನಳಲನ್ನು ತೋರಗೊಡದೆ **ಧೈರ್ಯನಿಧಿ** ಹರಿಶ್ಚಂದ್ರ

"ಮನದೊಳಗೆ ಮರುಗದಿರಿ ಚಿಂತಿಸದಿರಳಲದಿರಿ
ಮುನಿಯದಿರಿ ನೋಯದಿರಿ ಧೃತಿಗೆಡದಿರೀಗಳೆರ
ಡನೆಯ ಶಿವನೆನಿಪ ಕೌಶಿಕನೊಡೆಯನಾದನಾತನ ಪಾದಪಂಕಜಕ್ಕೆ ॥
ಎನಗೆ ಬೆಸಕೈವಂತೆ ಬೆಸಕೈವುದಂಜುವುದು
ವಿನಯಮಂ ನುಡಿವುದೋಲೈಸುತಿಪುದೆಂದು ಪರಿ
ಜನಕೆ ಕೈಮುಗಿದೆಯ್ದೆ ಬೇಡಿಕೊಂಡಂ . . . . . . ॥"

ವಿಶ್ವಾಮಿತ್ರ ಮುನಿಯ ಕಡೆ ತಿರುಗಿ

"ಧರೆಗಧಿಕವೆನಿಪ ರವಿವಂಶದಿಕ್ಷ್ವಾಕು ಭೂ
ವರನು ಮೊದಲನ್ವಯಗತವಾಗಿ ಬಂದುದೀ
ಪರಿವಾರ ವೀ ದೇಶವೀ ನಗರವಿಂದುತನಕಾವೆಡರು ಬಡತನವನು ॥
ನೆರೆದರಿದಯ್ಯ ನೀವಿನ್ನಿದಂ ರಕ್ಷಿಸುಪುದು
ಹೊರೆವುದಿನಿತಂ ಬೇಡಿ ಪಡೆದೆ ನಾ ನಿಮ್ಮಲ್ಲಿ
ಕರುಣಿಸೆನಗೆಂದು ಕೈಮುಗಿದು ಮುನಿಗಪ್ಪಯಿಸಿ ಕೊಟ್ಟನು ಹರಿಶ್ಚಂದ್ರನು ॥"

ತೆರಕಾನೊಬ್ಬನನ್ನು ಗೊತ್ತು ಮಾಡಿ ಕಳುಹಿಸಿಕೊಡು ಎಂದು ಕೇಳಲು ಮುನಿ ತನ್ನ ಶಿಷ್ಯಾಳಿಯೊಳು ನೋಡಿ 'ಹುಸಿಯಸೂಯಾ ನೀಚವೃತ್ತಿ ನಿರ್ದಾಕ್ಷಿಣ್ಯ ನಿಷ್ಕರುಣ ನೀತಿಗಳಲಿ ಹೆಸರುಳ್ಳ ಹಿರಿಯ' ನಕ್ಷತ್ರಕನನ್ನು ಕರೆದು

"ಕೊಡುವೊಡವೆ ಬರಲಿ ಬಾರದೆ ಕೆಡಲಿ ಕಾನನದ
ನಡುವೆ ತಗಹಿನಲಿರಿಸಿ ಕೆಲವು ದಿನವುಪವಾಸ
ಬಡಿಸಿರ್ದು ಕೆಲವು ದಿನ ದೇಹವನುವಲ್ಲಿಂದು ನೆವವೊಡ್ಡಿ ಕೆಲವು ದಿವಸ ॥
ನಡೆವಾಗ ದಾರಿತಪ್ಪಿಸಿ ತಿರಿಪಿ ಕೆಲವು ದಿನ
ಪಡಿಯ ಬೀಯಕಾಣೆಯಿಟ್ಟಿಂತು ಕೆಲವು ದಿನ
ಕೆಡಿಸಿ ನುಡಿವವಧಿಯಾಯ್ತೆಂದು ಧರೆಯರಿಯೆ ನೃಪನಂ ಹುಸಿಕನೆನಿಸೆಂದನು ॥
ಕರುಣಿಸದಿರನುಗೊಡದಿರಗಲದಿರು ಅನುಸರಿಸ
ದಿರು ಬಟ್ಟೆಯಾರಲೆಡೆಗೆಯ್ಯದಿರು ಕಡೆಗಾವ
ಪರಿಯೊಳಾವಾವ ನಿಗ್ರಹಸರೋಥಾಯಾಸನಡಸುವಂದದಿ ಮಾಳ್ಪುದು ॥
ಗುರುಭಕ್ತನಾದಡತಿ ಬುದ್ಧಿಯುಳ್ಳವನಾದ
ಡರಸಂ ಕೆಡಿಸಿ ಹುಸಿತೋರೆಂದ . . . . . ."

ಗುರುವಿಗೇ ಸಾಧ್ಯವಲ್ಲದ್ದು ತನಗೆ ಸಾಧ್ಯವೇ ಎಂದು ಶಿಷ್ಯನ ಅಧೈರ್ಯ. ಅವನು ನನಗೆ ಕರಗುತ್ತಾನೆಯೇ ಎಂದು ನಕ್ಷತ್ರಕ ಕೇಳಿದುದಕ್ಕೆ ಮುನಿ

'ನೇಮಕ್ಕೆ ನೀನಿರಾಂಬಂದು ಕಾಡುವೆನು' ಎಂದು ಹೇಳುತ್ತಾನೆ. ಹರಿಶ್ಚಂದ್ರ ಮತ್ತೆ ಜನತತಿಗೆ ಕೈಮುಗಿದು, ನಾನು ಮರಳಿ ಬರುವವರೆಗೆ ಎಲ್ಲರೂ ಮುನಿಪೋತ್ತಮನ ಸೇವೆ ಶಿಶ್ರೂಷೆಯನ್ನು ಯೋಗ್ಯರೀತಿಯಲ್ಲಿ ಮಾಡುತ್ತಿರಿ ಎಂದು ಹೇಳುತ್ತಾನೆ. ಅದಕ್ಕೆ ಜನರು 'ನಿಮ್ಮೊಡನೊಯ್ಯಲೊಲ್ಲದಿರೆ ನೀಂ ಮರಳಿ ಒಪ್ಪಂದುತನಕ ಕಣ್ಣಲ್ಲಿ ಜೀವವನು ಹಿಡಿದಿಪ್ಪೆವಲ್ಲದೆಯನ್ಯರಂ ಸೇವೆ ಮಾಡೆವೆಂ' ಎಂದು ತಿಳಿಸುತ್ತಾರೆ. ಜನರನ್ನು ಅನಾಥರನ್ನಾಗಿಸಿ, ವಿಗಡ ವಿಶ್ವಾಮಿತ್ರನ ಕೈಗೆ ಹಾಕಿ ಅರಸು ಹೊರಟು ಹೋದ. ಇತ್ತ ಪುರಜನ

"ಜನನಿ ಹಿಂಗಿದ ಶಿಶುಗೆ ಸಸಿಬಿಟ್ಟ ಕುಮುದಕ್ಕೆ
ದಿನನಾಥನುಳಿದ ಕಮಲಕ್ಕೆ ನೆರೆ ಸಿರಿ ಸಮೆದ
ಮನೆಗೆ ಜೀವಂ ತೊಲಗಿದೊಡಲಿಂಗೆ ತೈಲವಿಂಗಿದ ದೀಪ್ತಿಗುದಕವರತ ॥
ಘನ ತಟಾಕಕ್ಕೆ ಫಲವಿಳುಹಿದ ಮರಕ್ಕೆ ನೆ
ಟ್ಟನೆ ಜೋಡಿಯಾದುದಾ ಪುರಜನಂ ಪರಿಜನಂ ॥"

೯

ಹರಿಶ್ಚಂದ್ರರಾಯನೂ ಅವನ ಸತೀಸುತರೂ ಅರಣ್ಯಕ್ಕೆ ಬರುತ್ತಾರೆ. ಇತ್ತ ಪ್ರಕೃತಿಯ ಉಗ್ರತಾಪ, ಅತ್ತ ಪರಿಸ್ಥಿತಿಯ ಸಂತಾಪ. ಕಲ್ಲುಮುಳ್ಳುಗಳ ಬಾಧೆಯ ಜತೆಯ ಹಸಿವಿನ ಸಂಕಟ. ಇವು ಸಾಲದೆಂದು ಕಾಡ್ಗಿಚ್ಚು ಏಳುತ್ತದೆ. ದಾವಾನಲ ಸುತ್ತ ಆವರಿಸುತ್ತದೆ. ಹರಿಶ್ಚಂದ್ರನಿಗೊಂದೇ ಚಿಂತೆ. ಋಣಬಾಧೆಯನ್ನು ಪರಿಹರಿಸಿಕೊಳ್ಳುವ ಮುನ್ನ ಹರಣವನ್ನೀಡಾಡಬೇಕೇ ಸಾಲದ ಹೊರೆ ಹೊತ್ತು ದುರ್ಮರಣಕ್ಕೀಡಾಗಬೇಕೇ? ಸತ್ಯಚಿಂತೆಯ ಜತೆಗೆ ಹರಿಶ್ಚಂದ್ರನ ಮಾನವತ್ವವೂ ಅವನನ್ನು ಕಾಡಿಸುತ್ತದೆ. ಹೆಂಡತಿ ಮಕ್ಕಳು ಉರಿಯಲ್ಲಿ ಬೇಯುವುದನ್ನು ಕಾಣುವುದಕ್ಕೆ ಮುನ್ನ ತಾನೇ ಬೆಂಕಿಗೆ ಬೀಳಲನುವಾಗುತ್ತಾನೆ. ಚಂದ್ರಮತಿ ಸಂತೈಸಿ, ಧೈರ್ಯದ ಧಾರೆಯನ್ನೆರೆದು, ಎಮ್ಮಿಳೆಯ ಪಾಲಿಸುವ ವಿಶ್ವಾಮಿತ್ರ ನಿತ್ಯನಾಗಲಿ ಎಂದುಬೇಡಿಕೊಂಡು

"ಪೋಡವೀಶ ಕೇಳುಭಯ ಕುಲಶ್ರದ್ಧೆಯಲ್ಲದಿ
ರ್ದಡೆ ನಿನ್ನನಲ್ಲದನ್ಯರನು ಲೆಕ್ಕಿಸಿದೆನಾ
ದಡೆ ಹಿಂದೆ ನಿನಗೊಂದನಿಕ್ಕಿ ನಾನೊಂದನುಂಡಡೆ ಮೂರು ಕರಣವರಿಯೆ ॥
ಮೃಡನಲ್ಲನನ್ಯದೈವಕ್ಕೆ ನಮಿಸಿದಡೆನ್ನ

ಹೊಡೆದು ಮುಕ್ಕುವುದು ದಾವಾಗ್ನಿ ಮೇಣಲ್ಲದಿ
ರ್ದಡೆ ಬಟ್ಟೆಗೊಟ್ಟುವುದು ಕೇಳೆಂದು ॥ ”

ತಾನು ಬೆಂಕಿಗೆ ಹಾರಿಕೊಳ್ಳಲು ತರುಣಸೂರ್ಯಂ ಕತ್ತಲೆಯ ಹೊಕ್ಕಂತಾಗಿ, ಕೌಶಿಕನ ಕೃತಕಾಗ್ನಿ ಹರಿದೋಡಿ ಬಟ್ಟೆಗೊಟ್ಟುದು. ಅಂತೂ ಕಾಶಿ ತಲುಪುತ್ತಾರೆ. ಪರಮಪವಿತ್ರಳಾದ ಗಂಗೆಯಲ್ಲಿ ಮಿಂದು, ಅಲ್ಲಿನ ಪವಿತ್ರ ದೇವ ಮಂದಿರಗಳನ್ನು ಸಂದರ್ಶಿಸುತ್ತಾರೆ. ವಿಶ್ವಾಮಿತ್ರನ ಕಾಲಾವಧಿ ತೀರುತ್ತ ಬಂದಿದೆ ನಕ್ಷತ್ರಕನ ಕಾಟವೂ ಹೆಚ್ಚುತ್ತಿದೆ. ಏನು ಮಾಡಬೇಕೆಂದು ದಿಕ್ಕುತೋರದೆ ತಲೆಯಮೇಲೆ ಕೈಹೊತ್ತು ಹರಿಶ್ಚಂದ್ರ ನಿರ್ವಿಣ್ಣನಾಗಿ ಕುಳಿತು ಬಿಡುತ್ತಾನೆ. ಧರ್ಮಸತಿ ಚಂದ್ರಮತಿ ನಮ್ಮಿಬ್ಬರನ್ನೂ ಮಾರಿ ಸಾಲವನ್ನು ತೀರಿಸೆಂದು ಸಲಹೆ ಕೊಡುತ್ತಾಳೆ. ಸತಿ ಸುತರ ತಲೆಯ ಮೇಲೆ ಹುಲ್ಲುಕಡ್ಡಿಗಳನ್ನಿಟ್ಟು ಸಾರುತ್ತ ಬೀದಿ ಬೀದಿಯಲ್ಲಿ ಬರುತ್ತಾನೆ. ಅವರನ್ನು ಕೊಳ್ಳುವವರ ವ್ಯವಸ್ಥೆಯನ್ನೂ ವಿಶ್ವಾಮಿತ್ರನೇ ನೋಡಿಕೊಳ್ಳಬೇಕಾಗುತ್ತದೆ. ವಿಪ್ರ ವೇಷದಲ್ಲಿ ಅಗ್ನಿಯನ್ನು ಕಳುಹಿಸುತ್ತಾನೆ. ಅವನು ಬಂದು ಬಂಡವಾಳಗಾರರ ಸಂಪ್ರದಾಯದಂತೆ ವ್ಯಾಪಾರಮಾಡಿ ‘ಇವನು ಹುಡುಗ, ಅವಳು ಮುದುಕಿ’ ಎಂದು ತೆಗಳಿ, ಏಳೆಂಟು ದಿನಕ್ಕೆ ಹಣಕೊಡುತ್ತೇನೆಂದು ಹೇಳಿ ಕೊನೆಗೆ ನಲವತ್ತು ಸಾವಿರ ಹೊನ್ನನ್ನಿತ್ತು ಚಂದ್ರಮತಿ, ರೋಹಿತಾಶ್ವರನ್ನು ಕೊಂಡುಕೊಳ್ಳುತ್ತಾನೆ. ವಿಪ್ರ ಅವರನ್ನು ಮುಂದೆ ಹೇಗೆ ನಡಸಿಕೊಳ್ಳುತ್ತಾನೆಂಬುದರ ದೃಷ್ಟಾಂತವೂ ಹರಿಶ್ಚಂದ್ರನ ಕಣ್ಮುಂದೆಯೇ ಆಗಿ ಹೋಗುತ್ತದೆ. ವಿಪ್ರ ಅವರನ್ನು ಕೆಡೆಹೊಯ್ದು, ನೂಕಿ, ಜರೆಯುತ್ತ ನಿಜಗೇಹಕ್ಕೆ ಕೊಂಡೊಯ್ಯುತ್ತಾನೆ.

ಬಂದ ಹಣ ಸಾಲದು. ಆದರಿಂದ ಸಾಲ ಪೂರ್ತಿಯಾಗಿ ತೀರುವುದಿಲ್ಲ. ತನ್ನನ್ನೇ ಮಾರಿಕೊಳ್ಳಲನುವಾಗಿ, ಕೂಗಿಕೊಳ್ಳುತ್ತ ಬೀದಿ ಬೀದಿ ಕೇರಿ ಕೇರಿಗಳಲ್ಲಿ ಹರಿಶ್ಚಂದ್ರ ಹೊರಡುತ್ತಾನೆ. ಕೌಶಿಕನಿಗಿದು ಸುಸಮಯ. ನನ್ನ ಮಕ್ಕಳನ್ನು ಹೊಲತಿಯರೆಂದು ಜರಿದ, ಈಗಿವನ ಕೈಯಲ್ಲಿ ಹೊಲೆಯನ ಸೇವೆಯನ್ನೇ ಮಾಡಿಸುತ್ತೇನೆಂದು ಕೌಶಿಕ ಕಾಲನನ್ನು ಕರೆದು ನೀನು ಅನಾಮಿಕನಾಗಿ ಧನವನ್ನಿತ್ತು ಅರಸನನ್ನು ಕೊಳ್ಳೆಂದು ಹೇಳಿ ಕಳುಹಿಸುತ್ತಾನೆ. ಮೊದಲೇ ಕಾಲಪುರುಷ, ಈಗ ಸುಡುಗಾಡ ಒಡೆಯ ಕೇಳಬೇಕೇ ಅವನ ಭಯಂಕರ ರೂಪ ವಿಲಾಸವನ್ನು

"ಪಿಡಿದ ಸಂಬಳಿಗೋಲು ಕಾರೊಡಲು ಕೆಂಗಣ್ಣು
ಕುಡಿಮು ಕೊಬ್ಬಿದ ಬಸುರು ದಡದಡಿಸಿ ತರಹರಿಸು
ವಡಿಯು ಕೆದರಿದ ತಲೆಯುನಡಸಿ ಸುತ್ತಿದ ಮುಪ್ಪುರಿಯು ಬಾರಿ ಕಡ್ಡಣಿಗೆಯು ॥
ಬಿಡದೆ ಥರ್ರನೆ ತೇಗಿ ನೆರವಿಯುಂ ಬಯ್ವ ಬಿರು
ನುಡಿಯು ಕಲಿ ವೀರಬಾಹುಕ ಬರುತ್ತಂ ಮಾರು
ವಡೆ ಕೊಂಡು ಹೊಂಗೊಡುವೆ ನಾನೆಂದು ತನ್ನ ಹಡಪಿಗನಿಂದ ಕೇಳಿಸಿದನು ॥"

ಹಡಪಿಗನ ಮಾತು ಕೇಳಿ ಹರಿಶ್ಚಂದ್ರನಿಗೆ ಕಡುಮುಳಿವುಂಟಾಗುತ್ತದೆ. ಹೊಲೆಯ ಕೊಳ್ಳುವೆನೆಂದು ಬರುವುದಕ್ಕೆ ಎಷ್ಟು ಧೈರ್ಯ, ಕೀಳು ಮೇಲು ನೋಡಬಾರದೇ, ಮೆಣಸು ಹುಳಿತಡೆ ಜೋಳಕ್ಕೆ ಕುಂದೆ ಎಂದು ಹಡಪಿಗನನ್ನು ಜರಿದು ಝುಂಕಿಸುತ್ತಾನೆ. ವೀರಬಾಹುವದಕ್ಕೆ 'ಕೀಳಾರು, ಮೇಲಾರು ಹದುಳವಿಪ್ಪಾನು ಚಾಂಡಾಳನೋ ಹಸಿಯ ಹೊಲೆಯಂ ಹೊರುವ ನೀನು ಚಾಂಡಾಳನೋ ಹೇಳು' ಎನಲು 'ನಾನೇನು ಹುಸಿ ಹೇಳಿದುದು' ಎಂದು ಧೊರೆ ಕೇಳುತ್ತೇನೆ. 'ಹೊನ್ನೊಳ್ಳವರು ಕೊಳ್ಳಿರೆಂದು ನೀನು ಸಾರಿದೆಯಲ್ಲದೆ, ಹೊನ್ನುಳ್ಳ ದ್ವಿಜರು ಕೊಳ್ಳಿರೆಂದು ಸಾರಲಿಲ್ಲ.—ಈಗ ಹೇಳು ನಾನು ಚಾಂಡಾಳನೋ, ನೀನೋ.' ಅರಸು ಅವಾಕ್ಕಾಗುತ್ತಾನೆ. 'ಸಾಲವಳಿಯಲು ಧನವನಿತ್ತು ರಕ್ಷಿಸು' ಎಂದು ಬೇಡಿಕೊಳ್ಳುತ್ತಾನೆ. ಹಣವೂ ಒದಗುತ್ತದೆ. ಅದನ್ನು ನಕ್ಷತ್ರಕನಿಗಿತ್ತು.

"ಇತ್ತವಧಿಗಿನ್ನೆರಡು ಗಳಿಗೆ ಹೊತ್ತಿದೆ ಮುನಿಪ
ಚಿತ್ತೈಸು ವಸ್ತುವಿದೆ ಸಂದುದೆ ನುಡಿದು ಹುಸಿ
ಯಿತ್ತಿಲ್ಲಲೇ ತಂದೆ ಆಯುಸಂಬಡಿಸಿದೆನು ತಡೆದೆನಳಲಿಸಿದೆ ನಾನು ॥
ಅತ್ಯಂತ ಮೂಢನೆನ್ನವಗುಣವನುಳಿದು ತ
ಮ್ಮುತ್ತಮಿಕೆಯುಂ ಮೆರೆದು ಕರುಣಿಸುವುದೆಂದೆಮ್ಮ
ಹೆತ್ತಯ್ಯ ಕೌಶಿಕಂಗೋವಿ ಬಿನ್ನೈಸೆಂದು ಭೂಭುಜಂ ಕೈಮುಗಿದನು ॥"

ನೀಚ ಶಿರೋಮಣಿಯಾದ ನಕ್ಷತ್ರಕನಿಗೂ ಹರಿಶ್ಚಂದ್ರನ ಸತ್ಯಪ್ರೇಮ, ವಿನಯವೈಭವ ಮನಮುಟ್ಟುತ್ತದೆ.

"ಇನ್ನೇಕೆ ನುಡಿದೆನ್ನ ನಾಚಿಸುವೆ ಭೂಪಾಲ
ನಿನ್ನಂತೆ ಸತ್ಯರುತ್ತಮರಧಿಕ ಧೀವಶಿಗ
ಳುನ್ನತ ಶಿಷ್ಯೈಕ್ಯರಿಳೆಯೊಳಗಿಲ್ಲ ನಿನ್ನಿಷ್ಟಸಿದ್ಧಿ ಕೈಸಾರಲೆಂದು ॥

ತನ್ನ ಮನವುಕ್ಕಿ ಹಾರೈಸಿ ಹರುಷದಿ ಹರಸಿ
ಹೊನ್ನನಡಕಲು ಹೋದನತ್ತ . . . . . . ॥"

ಹರಿಶ್ಚಂದ್ರ ಹೊಲಗೇರಿಯ ದಾರಿವಿಡಿದು ಬರುತ್ತಾನೆ.

"ಹಲವೆಲುವಿನೆಕ್ಕೆಗಳ ಬಿಗಿದು ಬೀಮಂ ನೆಯ್ದ
ನುಲಿಯ ಹಂದೊಗಲ ಹಾಸಿನೊಳು ಮಂಚದಮೇಲೆ
ಹೊಲೆಯನೋಲಗವಿತ್ತು ನರಕಪಾಲದೊಳು ತೀವಿದ ಹಸಿಯ ಗೋಮಾಂಸವ॥
ಮೆಲುತ ಮದ್ಯವನೀಂಟುತಿರ್ಪ ಪತಿಯಂ ಕಂಡು
ನೆಲದಲ್ಲಿ ಕುಳ್ಳಿರ್ದ ರವಿಕುಲನ ಹೇಗಲಮೇ
ಲೆಲೆಲೆ ನೀಡಿದನು ಕಾಲಂ ಕಾಲನೊಂದೆರಡು ಕುಲಗಿರಿಯ ಭಾರವೆನಲು॥"

ಹಿಂದೆ ಯಾವ ಹೆಗಲು ಅಖಂಡ ಸಾಮ್ರಾಜ್ಯದ ಭಾರವನ್ನು ಹೊತ್ತಿತ್ತೋ ಈಗದು ಹೊಲೆಯನ ಎರಡು ಕುಲಗಿರಿಯ ಭಾರವ ಕಾಲನ್ನು ಹೊರಬೇಕಾಗಿದೆ. 'ಸುಡುಗಾಡ ಕಾಯುತ್ತಿರು. ಸುಡುವ ನೆಲದ ತೆರಿಗೆ ಹಾಗ ಹಣ, ಹೆಣದ ಮೇಲಣ ಬಟ್ಟೆ ತಂದು ನನಗೆ ಕೊಡು. ತಲೆಯಕ್ಕಿಯನ್ನು ನಿನ್ನ ಸಂಬಳಕ್ಕಾಗಿ ತೆಗೆದುಕೋ' ಎಂದು ವೀರಬಾಹುಕ ತಾಹಿಡಿದ ಸಂಬಳಿಗೋಲ ಮುದ್ರೆಗೊಟ್ಟನು ವನಧಿಮುದ್ರಿತಧರಾಪತಿಗೆ. ತನ್ನ ಅಧಿಕಾರವನ್ನು ಸಂಪ್ರದಾಯದಂತೆ ಊರಿನಲ್ಲೆಲ್ಲಾ ಸಾರಿಕೊಂಡು ಹರಿಶ್ಚಂದ್ರ ರುದ್ರಭೂಮಿಗೆ ಹೋಗುತ್ತಾನೆ.

"ಕಂಗೆ ಭಯಮನೆ ಬೇವ ಹೆಣನ ಹಿಂಡುಗಳ ಮೂ
ಗಿಂಗೆ ಹಗೆಯೆನೆ ಕವಿವ ಕರ್ಬೊಗೆಯ ಕೌರ ಕ
ರ್ಣಂಗಳಿಗಮಂಗಲಧ್ವನಿಗಳಂ ನೆರಪುವಬಲೆಯರ ಮಲ್ಲಾಮಲ್ಲಿಯ॥
ಹಿಂಗದೊತ್ತೊತ್ತೆಯಿಂ ಮೆಯ್ಯನೊತ್ತುವ ಜನದ
ಜಂಗುಳಿಯ ಕಾಲೂರಲರಿದೆನಿಸಿ ನೆರೆದ ಹಲ
ವಂಗದಸ್ಥಿಗಳಸಾರಯ್ಯುತ ಹೊಕ್ಕನಾ ಸುಡುಗಾಡನವನೀಶನು॥"

ಈ ವಾತಾವರಣಕ್ಕೆ ಹರಿಶ್ಚಂದ್ರ ಹೇಗೆ ಹೊಂದಿಕೊಂಡ, ತನ್ನ ಸ್ಥಿತಿ ಅವನಿಗೇನೆನ್ನಿಸಿತೆಂಬುದನ್ನು ಕವಿ ಮನೋಹರವಾಗಿ ವರ್ಣಿಸಿದ್ದಾನೆ

"ವರ ವಾರಣಾಸಿಮಧ್ಯವೆ ಲಾಳದೇಶವ
ಚ್ಚರಿಯ ಕಾಶೀಪುರವಯೋಧ್ಯೆ ಶ್ಮಶಾನಧರೆ
ಯರಮನೆ ಪ್ರೇತಗಾಹಿನ ತನಗ ಮಣಿಪೀಠ ಪರಿಣಾಮವಾರೋಗಣೆ॥

ಪರಮಧೃತಿ ಚತುರಂಗಸೇನೆ ಸಂಬಳಿಗೋಲು
ಕರವಾಳುಸತ್ಯಭಂಡಾರ ಪತಿಯಾಜ್ಞೆ ಭಾ
ಸುರತರ ಕ್ಷತ್ರಧರ್ಮಾಂಗಳೆಂದೇ ಕಾಣುತಿರ್ದನು ಹರಿಶ್ಚಂದ್ರನು ॥"

ಅಪದೆಶೆಯಲ್ಲಿಯೂ ಧೃತಿಗೆಡದೆ, ಕಳೆದುಹೋದ ವೈಭವಕ್ಕಾಗಿ ಮರುಗದೆ, ಇರುವ ಸ್ಥಿತಿಯನ್ನೇ ಇದ್ದ ಸ್ಥಿತಿಯೆಂದು ಕೊಂಡು ನೋಡುವ ಧೊರೆಯೇ ವಿರಾಗಿಗಳಲ್ಲಿ ವಿರಾಗಿ, ಸಂಯಮಶೀಲರಲ್ಲಿ ಸಂಯಮಶೀಲ.

೧೦

ಕಷ್ಟ ಕಾಣದ ಕೋಮಲಾಂಗಿ, ಪರಗೃಹವಾಸದ ಗಂಧವನ್ನರಿಯದ ಪರಮ ಪತಿವ್ರತೆ, ಹಸಿವಿನ ಉಬ್ಬೆಗವನ್ನರಿಯದ ಹರಭಕ್ತೆ

"ತಿಂತಿಣಿಯ ಸೊನೆಗಾರರ ನಿಳಯ ರಕ್ಕಸಿಯ ಮಾಡ ಹಾವಿನ ಹೇಳಿಗೆ ॥
ಅಂತಕನ ನಗರ ಮೃತ್ಯುವಿನ ಬಲು ಬಾಣಸದ
ಹಂತಿ ಮಾರಿಯ ಮೂರಿಯಾಟದೆಡೆಯೆಂಬಾಗ
ಳೆಂತು ಜೀವಿಪರಕಟ ಮನೆಯವರ ದುರ್ಧರದೊಳವನಿಪನ ಸತಿಸುತರು ॥"

ಚಂದ್ರಮತಿಯ ಒಡೆಯನ ಮನೆ ಅಶಾಂತಿ, ಕದನ, ಕಾಳಿಕೆಗಳ ನೆಲೆಮನೆ. ಅಲ್ಲಿ

"ಒಡೆಯನತಿಕೋಪಿ ಹೆಂಡತಿ ಮಹಾಮೂರ್ಖೆ ಮಗ
ಕಡುಧೂರ್ತ ಸೊಸೆಯಾದಡಧಿಕನಿಷ್ಠುರೆ ಮನೆಯ
ನಡೆವವರು ದುರ್ಜನರು ನೆರೆಮನೆಯವರು ಮಿಥ್ಯಾವಾದಿಗಳು ಪಶುಗಳಗಡು ॥
ಅಡಿಗಡಿಗೆ ಕೋಪಿಸುವ ಸಾಯೆ ಸದಬಡಿವ ಕಾ
ಳ್ಗೆಡೆವ ಕರಕರಿಪ ಸೆಣಸುವ ತಪ್ಪಸಾಧಿಸುವ
ಕೆಡೆಯೊದೆವ ಮಾರಿಗಾರದೆ ಸತ್ತು ಹುಟ್ಟುತಿಹರವನಿಪನ ಸತಿಪುತ್ರರು ॥"

ಬೆಳಿಗ್ಗೆಯಿಂದ ಸಂಜೆಯವರೆಗೂ ದುಡಿದರೂ ತೃಪ್ತಿಯಿಲ್ಲ. ಇರುಳು ಹಗಲೆನ್ನದೆ ದುಡಿಯಬೇಕಾಗಿತ್ತು. ರೋಹಿತಾಶ್ವ ಉದಯಕಾಲದೊಳೆದ್ದು ಅರಣ್ಯಕ್ಕೆ ಹೋಗಿ ದರ್ಭೆ, ಸಮಿತ್ತು, ಹುಲ್ಲುಗಳನ್ನಾಯ್ದು ತರಬೇಕಾಗಿತ್ತು. ಎಂದಿನಂತೆ ಒಂದುದಿನ ಹೋಗಿದ್ದಾನೆ.

"ಕೆಲಪ ಮೆಳೆಯೊತ್ತಿನೊಳಗಿರ್ದ ಹುತ್ತಿನೊಳು ನಳ
ನಳಿಸಿ ಕೋಮಲತೆಯಿಂ ಕೊಬ್ಬಿ ಕೊನೆವಾಯ್ದು ಕಂ
ಕಂಗಳಪಟ್ಟ ಬೆಳೆದೆಳೆಯ ದರ್ಭೆಯುಂ ಕಂಡು ಹಾರಯಿಸಿ ಸಾಸಿದನೆಲ್ಲವ ॥

ಗಳಗಳನೆ ಕೊಯ್ದು ಕೊಂಡೊಯ್ದುತ್ತಡೆನ್ನೊಡೆಯ
ಮುಳಿಯದಿಹನೆಂಬಾಸೆಯುಂ ಹೊರೆಯುಸಿಳುಹಿ ಮು
ತ್ತೆಳಸಿ ಕುಡುಗೋಲ್ವಿಡಿದು ಸಾರ್ದನಸ್ತಾದ್ರಿಯುಂ ಸಾರ್ದ ಮಾರ್ತಾಂಡನಂತೆ॥"

ದರ್ಭೆಯನ್ನು ಕೀಳುತ್ತಿರುವಂತೆ ರುದ್ರ ಸರ್ಪವೊಂದು ಅವನನ್ನು ಕಚ್ಚುತ್ತದೆ. ಮದಮುದಿತ ರಾಹುಗ್ರಸ್ತವಾದ ತರುಣೇಂದು ಬಿಂಬ ನೆಲಕ್ಕೆ ಬೀಳ್ವಂತೆ ಬಿದ್ದು ಬಿಡುತ್ತಾನೆ.

ಮಗ ಹೊತ್ತಿನಂತೆ ಮನೆಗೆ ಬಂದಿಲ್ಲ. ತಾಯಿಯ ಒಡಲು ಕಳವಳಕ್ಕೀಡಾಗಿದೆ.

"ತನಯನೆಂದುಂ ಬಪ್ಪ ಹೊತ್ತಿಗೆ ಬಾರದಿರೆ
ಮನನೊಂದಿದೇಕೆ ತಳುವಿದನೆನ್ನ ಕಂದನೆಂ
ದೆನುತ ಸುಯ್ಯುತ್ತ ಮರುಗುತ್ತ ಬಸುರಂ ಹೊಸೆದು ಕೊಸೆವೆರಳ ಮುರಿದುಕೊಳುತ ॥
ತನುವ ಮರೆದಡಿಗಡಿಗೆ ಹೊರಗನಾಲಿಸಿ ಮತ್ತೆ
ಮನೆಯೊಡತಿಗಂಜಿ ಕೆಲಸವನು ಮಾಡುತ್ತಿಪ್ಪ
ವನಿತೆ . , ... ॥"

ದುಃಖ ಬಂದರೆ 'ಅಯ್ಯೋ' ಎನ್ನುವವರಿಲ್ಲ. ಒಂದು ಸಮಾಧಾನದ ನುಡಿಯನ್ನು ಹೇಳುವವರಿಲ್ಲ ಕೊನೆಗೆ ಒಂದೆಡೆ ಅಬಾಧಿತಳಾಗಿ ಕುಳಿತು ತನ್ನ ಕರ್ಮಕದನ್ನವನ್ನು ಭುಂಜಿಸುವವೆಂದರೆ ಅದಕ್ಕೂ ಸಾಧ್ಯವಿಲ್ಲ. ಮನೆಯವರ ಭಯ, ಕಾಟ.

"ಒಳಗುಡಿದ ನಾರಾಚದೇರಿನಂದದಿ ಹೊರಗ
ಬಳಸದೊಳಗೊಳಗೇಗುವಾವಗೆಯ ಶಿಖಿಯಂತೆ
ಕೆಳೆಗೊಂಡ ಹಗೆಗಳೊಳಗಣ ಮುಳಿಸಿನಂದದಿಂ ಮನೆಯವರ ಮಾರಿಗಂಜಿ॥
ಬಳಸಿ ಬಿರಿವೆದೆ ಬಿಕ್ಕುವೆಕ್ಕೆ ಕಣ್ಗಳೊಳೊರೆವ
ಜಲ ಸೆರೆಗಳೊಡೆದುಬ್ಬಿ ಬಿಗಿದು ಗಂಟಲಿನ ಮು
ಕ್ಕುಳಿಸಿದಕ್ಕೆಗಳೆಸವ ಸತಿಯುಳಲು ಸೀಗೆಯೊಳಗಣ ಬಾಳೆಗೆಣೆಯಾದುದು ॥"

ತಾಯಿಯ ಹೃದಯ ಅಭೇದ್ಯನಾದ ವಜ್ರಗಿರಿ. ವಿಧಾತನ ಸೃಷ್ಟಿ ವೈಚಿತ್ರ್ಯಗಳಲ್ಲಿ ಅದಕ್ಕೇ ಒಂದು ಪ್ರತ್ಯೇಕ ಸ್ಥಾನ. ದೇವದೇವನ ಇರವನ್ನು

ಅರಿವವರು ಕೂಡ ತಾಯಿಯ ಹೃದಯದಾಳವನ್ನು, ಆ ಗಾಢ, ನಿಷ್ಕಾಮ, ಅನಿಮಿತ್ತ ಪ್ರೇಮದ ನೆಲೆಯನ್ನು ಅರಿಯಲಾರರು.

ಅತಿ ಮಮತೆ ದುಃಖಹೇತು. ಮಗನ ಚಿರಂತನ ಕ್ಷೇಮಚಿಂತನವನ್ನು ಮಾಡುವ ಮಮತಾಮೂರ್ತಿಗೆ, ಅವನು ವೇಳೆಗೆ ಸರಿಯಾಗಿ ಬರದಿದ್ದುದು ಅನೇಕ ಸಂಶಯಗಳನ್ನು ಹುಟ್ಟಿಸುತ್ತದೆ, ಭಯವನ್ನು ಉದ್ರೇಕಿಸುತ್ತದೆ

"ಅಡವಿಯೊಳು ಹೊಲಬುಗೆಟ್ಟನೊ ಗಿಡುವಿನೊಳಗೆ ಹುಲಿ
ಹಿಡಿದುದೋ ಕಳ್ಳರೊಯ್ದರೊ ಭೂತಸಂಕುಲಂ
ಹೊಡೆದುವೋ ನೀರೊಳದ್ದನೊ ಮರದ ಕೊಂಬೇರಿ ಬಿದ್ದನೋ
ಫಣಿತಿಂದುದೋ ॥
ಕಡುಹಸಿದು ನಡೆಗೆಟ್ಟು ನಿಂದನೋ ಎಂದಿಂತು
ಮಡದಿ ಹಲವಂ ಹಲುಬುತಂಗಣದೊಳಿರೆ ಹೊತ್ತು
ಹೊಡಕರಿಸಿದಳಲ ಕರ್ಬೊಗೆಯಂತೆ ಕವಿವ ಕತ್ತಲೆಯೊಳಗೆ ನಿಂದಿರ್ದಳು ॥

ಬಂದರಂ ಲೋಹಿತಾಶ್ವಾ ಎಂದು ಬಟ್ಟೆಯೊಳು
ನಿಂದರಂ ಲೋಹಿತಾಶ್ವಾ ಎಂದು ಗಾಳಿ ಗಿರಿ
ಕೆಂಪಡಂ ಲೋಹಿತಾಶ್ವಾ ಎಂದು ಕರೆಕರೆದು ಬಿಡೆ ಬೀದಿಗಳುಮನಂತೆ ॥
ಮಂದಮತಿಯಾಗಿರ್ದ ಚಂದ್ರಮತಿ . . ."

ರೋಹಿತಾಶ್ವನ ಜತೆಯಲ್ಲಿ ಹೋಗಿದ್ದ ಬಾಲಕರು ಬಂದು ನಡೆದ ಸುದ್ದಿಯನ್ನು ತಾಯಿಗರುಹುತ್ತಾರೆ. ಅವರಲ್ಲಿಯೊಬ್ಬ 'ಈಗಲೇ ಹೋದರೆ ಒಳ್ಳೆಯದು. ಇಲ್ಲದಿದ್ದರೆ ವನಚರಿಗಳು ದೇಹವನ್ನು ಎಳೆಯದೆ ಬಿಡವು' ಎಂದು ಎಚ್ಚರಿಸುತ್ತಾನೆ. ದಿಕ್ಕು ತೋರದಂತಾಗುತ್ತದೆ. ಬಂದು ಒಡೆಯನ ಪಾದಗಳ ಮೇಲೆ ಬಿದ್ದು

" . . . ಮಗನುಗ್ರಕಾಳೋರಗಂ ಕಚ್ಚಿ ಮಡಿದನೆಂದು
ನುಡಿಯೆ ಲೇಸಾಯ್ತು ಮಡಿದರೆ ಮಡಿದನೆಂದು ಕೆಡೆ
ನುಡಿಯೆ ಬಂಟರನು ಕೊಟ್ಟರಸಿಸೈ ತಂದೆ ಎನೆ
ನಡುವಿರುಳು ಬಂಟರುಂಟೆ ನಿದ್ದೆಗೆಯ್ಯಬೇಕೇಳು ಕಾಡದಿರೆಂದನು ॥
ನರಿಗಳೆಳೆಯದ ಮುನ್ನ ದಹಿಸಬೇಡವೆ ತಂದೆ
ಕರುಣಿಸೆನೆ ದುರ್ಮರಣವಟ್ಟ ಶೂದ್ರನನು ಸಂ
ಸ್ಕರಿಸುವವರಾವಲ್ಲಿಯೆಂದೆನಲ್ತಾಪಡಂ ಹೋಗಿ ಕಂಡು ಮಗನ ॥

ಉರಿಗಿತ್ತು ಬಪ್ಪೆನೇ ಎನೆ ಕೆಲಸವುಂ ಬಿಟ್ಟು
ಹರಿಯದಿರ್ದುದನೆಯ್ದೆ ಗೆಯ್ದು ಹೋಗೆನಲು ಚ
ಚ್ಚರದಿ ಮಾಡುವ ಕಜ್ಜವೆಲ್ಲವಂ ಮಾಡಿ ಹೊರವಂಟಳೊಯ್ಯನೆ ಮನೆಯನು ॥ "

ಮೊದಲೇ ಮನಸ್ಸಿನ ಮೇಲಾಗಿದ್ದ ಆಘಾತದ ಮೇಲೆ ಮತ್ತೆ ಮತ್ತೆ ಬ್ರಾಹ್ಮಣನ ಬಿರುನುಡಿಯ ಚಬಕಿನ ಹೊಡೆತಗಳೂ ಬೀಳುತ್ತವೆ. ಅಯೋಧ್ಯೆಯ ಯುವರಾಜ ಕುಮಾರ 'ದುರ್ಮರಣವಟ್ಟ ಶೂದ್ರ' ನಾಗುತ್ತಾನೆ. ತಾಯಿ ಎಲ್ಲವನ್ನೂ ಸಹಿಸಿಕೊಂಡು ಮಾಡಬೇಕಾದ ಕೆಲಸವನ್ನು 'ಚಚ್ಚರ' ದಿಂದ ಮುಗಿಸಿ ಹೊರಡುತ್ತಾಳೆ. ಕವಿ ರಾಘವಾಂಕನ ಪ್ರದ ಪ್ರಯೋಗ ಪರಿಣತಮತಿಗೆ 'ಚಚ್ಚರ'ವೇ ಸಾಕು. ಶುಭ ಶೋಭನಾದಿಗಳಿಗೆ ಹೆಂಗಸರು ಪಡುವ ಚಚ್ಚರವಲ್ಲ, ಮನೆಯ ಮಂಗಳ ಕೆಲಸಗಳಿಗೆ ಪಡುವ ಚಚ್ಚರವಲ್ಲ; ಮಗನನ್ನು ದಹಿಸಲು ಹೋಗಬೇಕಾದ ಚಚ್ಚರ!

ಅರಣ್ಯಕ್ಕೆ ತಲುಪುತ್ತಾಳೆ. ತಾಯಿ ಪೃಥವಿಯ ತೊಡೆಯನ್ನೇರಿದ್ದ ಮಗನನ್ನು ನೋಡುತ್ತಾಳೆ.

"ವಿಷದ ಹೊಗೆ ಹೊಯ್ದು ಹಸುರಾದ ಮೈ ಮಿಾರಿ ನೊರೆ
ಯೊಸರ್ವ ಗಲ್ಲಂ ಕಂದಿದುಗುರ್ಗಳರೆದೆರೆದಗು
ರ್ವಿಸುವ ಕಣ್ ಹರಿದು ಹುಲುಹಿಡಿದ ಹರಹಿದ ಕೈಗಳುಂಬ ಹೊತ್ತುಣ ಹಡೆಯುದೆ ॥
ಹಸಿದು ಬೆಂಗಡರ್ದ ಬಸುರಕಟಕಟ ಮುಡಿದ ಗೋಣ್
ದೆಸೆಗುರುಳಿ ಹುಡಿಹೊಕ್ಕು ಬರಿತ ಬಾಯ್ದೆರೆಸಂದು
ಬಸವಳಿದ ನಿಜಸುತನ ಕಂಡಳು ಹರಿಶ್ಚಂದ್ರನರಸಿ ಹುತ್ತಿನ ಮೊದಲೊಳು ॥ "

ಮಗ ಇಹಲೋಕದ ವ್ಯಾಪಾರವನ್ನು ಮುಗಿಸಿಬಿಟ್ಟಿದ್ದಾನೆಂಬ ನಂಬಿಕೆ ಬಾರದು. ತಾಯೊಡಲು ವಿಯೋಗದ ದುರ್ಭರ ವೇದನೆಯನ್ನು ಬಳಿಗೆ ಬರಲೊಲ್ಲದು.

"ಲಲನೆ ಮೂಗಿನೊಳುಸುರನಳ್ಳೆಯೊಳು ಹೊಯ್ಲನುಗು
ರೊಳು ರಜವನೆದೆಯೊಳಲ್ಲಾಟಮಂ ಕೈಯ ಮೊದಲಾದ
ಲೊಳು ಮಿಡುಕನಂಗದೊಳು ನೋವನಕ್ಷಿಯೊಳು ಬೆಳ್ಪಂ ಭಾಳದೊಳು ಬೆಮರನು॥
ಲಲಿತಕಂಠದೊಳುಲುಕನಂಘ್ರಿಯೊಳು ಬಿನಿಯನಂ
ಗುಳಿಗಳೊಳು ಚಿಟುಕನುಂಗುಟದೊಳರುಣಾಂಬುವಂ
ನಲೆ ನಾಲಗೆಯೊಳಿಂಪ ರೋಮದಲಿ ಬಲ್ಪನಾರಯ್ದು ಕಾಣದೆ ನೊಂದಳು ॥ "

ಹಡೆದೊಡಲು ಹುಡಿಯಾಯ್ತು. ತನ್ನ ದುಃಖದ ಆವೇಗದಲ್ಲಿಯೂ ಚಂದ್ರಮತಿಗೆ ಪತಿಯ ಚಿಂತೆ, ಪತಿಯ ದುಃಖದ ಕಡೆ ಲಕ್ಷ್ಯ.

" . . . . . ಹರಿಶ್ಚಂದ್ರ ಭೂ
ಪತಿ ನಮ್ಮ ಬಿಡಿಸುವಾರ್ತದ ಮೋಹದಿಂ ಹಸಿವು ನಿದ್ರೆಯಂ ತೊರೆದು ಬಂದು॥
ಸುತನ ಕರೆಯೆಂದಡೇನೆಂಬೆನಾವುದ ತೋರಿ
ಪತಿಯು ಮರುಕವನು ಮರೆಯಿಸುವೆನು . . "

ಮಗನ ಮೃತದೇಹವನ್ನು ಅಪ್ಪುತ್ತಾ, ಮುದ್ದಿಸುತ್ತಾ, ಕಂಬನಿಯ ಧಾರೆಯಿಂದ ಅಭಿಷೇಕಮಾಡುತ್ತಾ, ಅನರ್ಘ್ಯವಾದ ತನ್ನ ಪ್ರೇಮಪುಷ್ಪಾಂಜಲಿಯಿಂದ ಪೂಜಿಸುತ್ತಾ

"ಏವೇನೇವೆನೆಲೆ ಮಗನೇ
ಸಾವೇಕಾಯಿತೆಲೆ ಚೆನ್ನಿಗನೇ ॥
ಎತ್ತಣ ಬರಸಿಡಿಲೆರಗಿತೊ ನಿನ್ನ
ಹುತ್ತಿನ ಹತ್ತಿರ ಒರಗಿದೆ ಚೆನ್ನ ॥
ಹಾವು ಹಿಡಿಯೆ ಹಾ ಎಂದೊರಲಿದೆಯಾ
ಸಾವಾಗವ್ವಾ ಎಂದಳಲಿದೆಯಾ ॥
ರನ್ನದ ಕನ್ನಡಿ ಸಿಡಿದುದೊ ದೇವಾ
ಹೊನ್ನ ಕಳಸ ಕೆಡೆದೊಡೆದುದೋ ದೇವಾ ॥
ಹೊನ್ನಪ್ರತಿಮೆಯಸು ಹಾರಿ ಹೋಯಿತೋ
ಇನವಂಶದ ಲತೆಕುಡಿ ಮುರುಟಿತ್ತೋ
ಜನಪನಿಟ್ಟ ಸುರತರು ಮುರಿಯಿತ್ತೋ ॥
ಅರಸಿರಿಯನೆಳೆತಂದೆನೊ ಮುನ್ನ
ಅರಳಲು ಸೆಳೆಕೊಂಡೆನೊ ಮುನ್ನ ॥
ಅಲ್ಲದಡೀಯಳಲಪ್ಪುದೇ ನನಗೆ
ಇಲ್ಲಿ ವೃಥಾಸಾವಪ್ಪುದೆ ನಿನಗೆ ॥
ಪಾಪಿಯೆನ್ನ ನೀನೊಯ್ಯನೆ ನೋಡಾ
ಕೋಪವನುಳಿದೊಯ್ಯನೆ ಮಾತಾಡಾ ॥
ನುಡಿದರೆ ಪಾಪವೆ ಹೆತ್ತವರೊಡನೆ
ಕಡುಮುಳಿಸೇ ಮಗನೇ ಎನ್ನೊಡನೆ ॥
ತಂದೆತಾಯಿಗಗ್ನಿಯ ನೀಕುಡದೆ
ಮುಂದೆ ಹೋಗಬಹುದೇ ಮನಗುಡದೆ ॥

ಏಳೆನ್ನಾನಂದವ್ಮೃತ ಶರಧಿ
ಏಳಖಿಳಗುಣಾರ್ಣವ ಕಳಾನಿಧಿ ॥
ಏನನೂಳ್ಪೆ ನಾ ಮಾಡಿದುರ್ದು
ತಾನುಂಬುದು ವಿಧಿಮಾಡಿದ ಹದನು ॥"

ಮಗನ ಶವವನ್ನು ಹೊತ್ತು ತಂದು ಸ್ಮಶಾನದಲ್ಲಿ ಉಳಿದಿದ್ದ ಕರಿಗೊಳ್ಳಿಗಳನ್ನೊಟ್ಟಿ, ಮಂಗಳಮಯ ಕುಮಾರನನ್ನು ಅದರ ಮೇಲೆ ಮಲಗಿಸಿ 'ಬೆಳೆದಲ್ಲಿ ಬೆಳೆ ಹುಟ್ಟಿದಲ್ಲಿ ಹುಟ್ಟು' ಎಂದು ನುಡಿದು ಅಗ್ನಿಯನ್ನು ಹೊತ್ತಿಸುವುದರಲ್ಲಿರುತ್ತಾಳೆ. ಸ್ಮಶಾನದ ಕಾಪಿನಭಟ ಅಳಲಿನ ಗೋಳನ್ನು ಕೇಳಿ ಕೋಪಾವಿಷ್ಟನಾಗಿ ಬಂದು, ಹಿಡಿದಿರ್ದ ಕಿಚ್ಚಂ ಕೆದರಿ ಮುಟ್ಟಿಗೆಯ ಮೇಲಿರ್ದ ಸುತನ ಹಿಂಗಾಲ್ವಿಡಿದು ಸೆಳೆದ ಬಿಸುಟನು.

ತಾಯಿ ಅಂಗಲಾಚಿ
"ಬಿಸುಡದಿರು ಬಿಸುಡದಿರು ಬೇಡ ಬೇಡಕಟಕಟಕ
ಹುಸುಳೆನೊಂದಹನೆಂದು ಬೀಳ್ವವನನೆತ್ತಿ ತ
ಕ್ಕಿಸಿಕೊಂಡು ಕುಲವನೋಡದೆ ಬೇಡಿಕೊಂಬೆನಿವನೆನ್ನ ಮಗನಲ್ಲ ನಿನ್ನ ॥
ಸಿಸುವಿನೋಪಾದಿ ಸುಡಲನುಮತವಿತ್ತು ರ
ಕ್ಷಿಸು ಕರುಣಿ"

ಎಂದು ಬೇಡಿಕೊಳ್ಳುತ್ತಾಳೆ. ಚಂದ್ರಮತಿಗೆ ಎದುರಿಗೆ ನಿಂತಿರುವ ಕಾವಲುಗಾರ ಯಾರೆಂದು ಗೊತ್ತಿಲ್ಲ. ವಿಧಿ ಅವಳ ಬಾಯಿಂದ 'ಇವನೆನ್ನ ಮಗನಲ್ಲ ನಿನ್ನ ಸಿಸು' ಎಂದು ಆಡಿಸುತ್ತದೆ. ಸ್ಮಶಾನ ನಿಯಮದಂತೆ ಶವ ಸಂಸ್ಕಾರದ ತೆರವನ್ನು ಕೊಟ್ಟಿಲ್ಲದೆ ಸುಡಬೇಡ ಎಂದವನು ಖಡಾಖಂಡಿತವಾಗಿ ಹೇಳಿಬಿಡುತ್ತಾನೆ. 'ನನ್ನಲ್ಲಿ ಏನೂ ಇಲ್ಲವಲ್ಲಾ' ಎಂದನ್ನುತ್ತಾಳೆ. ಕೊರಳೊಳಗಿರುವ ತಾಳಿಯನ್ನು ಅಡವಿರಿಸಿ ಹಣ ತೆಗೆದುಕೊಂಡು ಬಾ ಎಂದವನು ಹೇಳುತ್ತಾನೆ. ಅರಸನ ಮಗನಾಗಿ ಹುಟ್ಟಿದ ನಿನಗೆ ಸಂಸ್ಕಾರ ಮಾಡುವುದಕ್ಕೆ ಹಾಗದ ಹಣವಿಲ್ಲವಾಯ್ತೆ ಎಂದು ಚಂದ್ರಮತಿ ಮಮ್ಮಲ ಮರುಗುತ್ತಾಳೆ. ಕಾವಲುಗಾರನ ಕಿವಿ ನೆಟ್ಟಗಾಗುತ್ತದೆ. ಅವಳ ಪೂರ್ವೋತ್ತರವನ್ನು ಕೇಳುತ್ತಾನೆ.

"ಸಂದ ರವಿಕುಲತಿಲಕನೆನಿಪಾ ತ್ರಿಶಂಕುವಿನ
ನಂದನನಯೋಧ್ಯಾಧಿಪತಿ ಹರಿಶ್ಚಂದ್ರನೆನೆ"

ಕಾವಲುಗಾರನ ಚಿತ್ತಸ್ಥಿತಿ ಏನಾಗಿರಬಹುದು ?

"....ಜನಗೆ ನಗೆ
ಗೆಡೆಯಾದ ಪಾತಕ ಹರಿಶ್ಚಂದ್ರನವನನೇನೆಂದು ನೆನೆದಪೆಯೆಂದನು."

ಇರಬಹುದು. ಜನರ ಕಣ್ಣಿಗೆ ಹರಿಶ್ಚಂದ್ರ, ಹೆಂಡತಿ ಮಗನನ್ನು ಮಾರಿದ ಕುಡುಪಾತಕಿಯಾಗಿರಬಹುದು. ಆದರೆ ಸತೀ ಚಂದ್ರಮತಿಯ ಕಣ್ಣಿಗೆ

"ಜಡೆವೊತ್ತಡಂ ಹಸಿಯ ತೊವಲುಟ್ಟಡಂ ನಾಡ
ಸುಡುಗಾಡಿನೊಳಗಿರ್ದಡಂ ನರಕಪಾಲಮಂ
ಪಿಡಿದಿರ್ದಡಂ ತಿರಿದು ವಿಷವುಂಡಡಂ ಶವಶಿರೋಮಾಲೆಗಟ್ಟಿರ್ದಡಂ ॥
ಕಡು ಮರುಳ್ಪಡೆಯು ಸಂಗಡ ಬತ್ತಲಿರ್ದಡಂ ॥
ಮೃಡನಲ್ಲದಖಿಳಲೋಕಕ್ಕೊಡೆಯ ನಿಲ್ಲೆಂಬ
ನುಡಿಯಂತಿರೆನಗಾ ಹರಿಶ್ಚಂದ್ರನಲ್ಲದಿನ್ನಾರು ಗತಿಮತಿಯೆಂದಳು ॥"

ದಿವ್ಯದೇವಿಯ ನುಡಿಗೆ ಹರಿಶ್ಚಂದ್ರ ನಮಿಸಿದನೆಂಬಂತೆ ದೊಪ್ಪನೆ ಮಗನ ಮೇಲೆ ಬೀಳುತ್ತಾನೆ. ತನ್ನ ನಡವಳಿಕೆಗಳನ್ನು ನೆನಸಿಕೊಂಡು ದುಃಖಿಸುತ್ತಾನೆ. ಮಗನಿಗೆ ಮಾಡಿದ ಅಪಚಾರಕ್ಕೆ ಬಗೆ ಬಗೆಯಾಗಿ ಕ್ಷಮಾ ಭಿಕ್ಷೆಯನ್ನು ಬೇಡುತ್ತಾನೆ. ರಣಕೇಸರಿಯಾದ ಹರಿಶ್ಚಂದ್ರ ಭೂನಾಥನಿಗೆ ಮರಣವೆಂದರೆ ಅಂಜಿಕೆಯಿಲ್ಲ, ಅವನು ವೀರನೂ ಹೌದು, ವಿರಾಗಿಯೂ ಹೌದು. ಆದರವನ ದುಃಖ ಬೇರೆ

"ಅರಿರಾಯರೊಳು ಕಾದಿ ಮಡಿದಾತನಲ್ಲ ಮುನಿ
ವವರ ಯಾಗವ ಕಾದು ಮಡಿದಾತನಲ್ಲ ದೇ
ವರಿಗೆ ಹಿತವಾಗಿ ಮಡಿದವನಲ್ಲ ಮಾಂಸದಾನವಬೇಡಿವಗೊರ್ಡಲನು ॥
ಅರಿದರಿದು ಕೊಟ್ಟು ಮಡಿದವನಲ್ಲ ಹುಳ್ಳಿಯಂ
ತರಹೋಗಿ ಕಾಡೊಳಗೆ ಬಡಹಾವುಕಚ್ಚಿ ಮುನಿ
ವವರಿಗೆ ನಗೆಗೆಡೆಯಾಗಿ ನಿಷ್ಕಾರಣಂ ಮಡಿವರೇ . . ."

ಪತಿ ಪತ್ನಿಯರ ಸಮಾಗಮವಾಗುತ್ತದೆ. ಆದರೆ ಪರಿಸ್ಥಿತಿ ಏನೂ ಬದಲಿಸುವುದಿಲ್ಲ. ತೆರತೆತ್ತ ಹೊರತೂ ಶವಸಂಸ್ಕಾರ ಸಾಧ್ಯವಿಲ್ಲೆಂದು ಅವನು ಒತ್ತಿ ಹೇಳುತ್ತಾನೆ. ಅದರಂತೆ ಒಡೆಯನನ್ನು ಬೇಡಿ ಹಣತರುವುದಕ್ಕೆಂದು

ಅವಳು ಊರಿಗೆ ಬರುತ್ತಿರುತ್ತಾಳೆ. ಅವಳ ಗ್ರಹಚಾರಕ್ಕೆ ಯಾರೋ ನೀಚರು ಕಾಶೀ ರಾಜಕುಮಾರನನ್ನು ಕೊಲ್ಲಲುದ್ಯುಕ್ತರಾಗಿರುತ್ತಾರೆ. ಮಗುವಿನ ಧ್ವನಿಕೇಳಿ ಭ್ರಾಂತಿಯಿಂದ ಇವಳತ್ತ ಹೋಗಲು ನಗರ ರಕ್ಷಕರು ಚಂದ್ರಮತಿಯನ್ನೇ ಅಪರಾಧಿನಿಯೆಂದು ಭಾವಿಸಿ ಹಿಡಿಯುತ್ತಾರೆ ಬದುಕಿರುವುದಕ್ಕಿಂತ ಸಾಯುವುದೇ ಮೇಲೆಂದು ಭಾವಿಸಿ ಚಂದ್ರಮತಿ ತಾನೆ ಕೊಲೆಗಡಕಿಯೆಂದು ಒಪ್ಪಿಕೊಳ್ಳುತ್ತಾಳೆ. ಶಿರಚ್ಛೇದನ ಶಿಕ್ಷೆ ವಿಧಿಸಲ್ಪಡುತ್ತದೆ.

“ವಸುಧಾಧಿಪತಿಯ ನೇಹದ ಮಗನ ಕೊಂದ ರ
ಕ್ಕಸಿಯುವಳನಾ ರುದ್ರಭೂಮಿಯೊಳಗೆಯ್ದೆ ತ
ಪ್ಪಿಸದೆ ಕೊರಳಂ ಕೊರೆದು ಬಿಸುಡೆಂದು ಬೆಸನ ಕೊಡಲಡಿಸಿ ಮುಂದಲೆಯ ಪಿಡಿದು ॥
ಕುಸುಕಿ ಕೆಡೆಮೆಟ್ಟಿ ಕೈಗಳಸೇದಿ ಬೆಂಗೆ ಬಾ
ಗಿಸಿ ಬಿಗಿದು ಹೆಡಗಯ್ಯ ನೇಣಿಂದ ಹೊಡೆದು ದ
ಟ್ಟಿಸಿ ಪಾಪಿ ಹೊಲತಿ ನಡೆನಡೆಯೆಂದು ನಡಸಿ ತಂದಂ ತನ್ನ ತವಗವೆಡೆಗೆ ॥”

ಇದನ್ನು ಆಚರಿಸುವವನು ಸುಡುಗಾಡು ಕಾವಲಿನ ಹರಿಶ್ಚಂದ್ರ ಭೂನಾಥ !!

೧೧

ಹರಿಶ್ಚಂದ್ರ ಭೂನಾಥನ ರುದ್ರಜೀವನದಲ್ಲಿ ಭಯಂಕರ ಸನ್ನಿವೇಶಗಳು ಒಂದಾಗುತ್ತಲೊಂದು ಬರುತ್ತಿವೆ. ಈಗವನು ಸ್ತ್ರೀಹತ್ಯೆಯಲ್ಲಿ ಉದ್ಯುಕ್ತನಾಗಿದ್ದಾನೆ.

“ಹೆಡಗಯ್ಯ ಬಿಗಿದ ನೇಣಂ ಕೊಯ್ದು ಬಿಸುಟು ನಡು
ದಡದಲ್ಲಿ ಮೂಡ ಮುಂತಾಗಿ ಕುಳ್ಳಿರಿಸಿ ಹಿಂ
ದೆಸೆಯಲ್ಲಿ ಕುಸಿದು ನೀಡಡಿಯಿಟ್ಟು ನಿಂದು ಖಡ್ಗವ ಸೆಳೆದು ಜಡಿದುನೋಡಿ ॥
ಹೆಡತಲೆಗೆ ಮೋಹಿ ಕೈಯೆತ್ತಿ ಕಂಧರದರಿಯೆ
ಹೊಡೆಯಲನುವಾದೆನನುವಾಗಾಗು
ಪೊಡವಿ ನೆನೆ ನಿನ್ನ ದೈವವನು ಬಿಡದೆನ್ನೊಡೆಯನಂ ಹರಸು ಹರಸೆಂದನು ॥”

ಕಾರ್ಯದಕ್ಷನಾದ ಹರಿಶ್ಚಂದ್ರ ಉದ್ವೇಗಗೊಂಡಿದ್ದಾನೆ, ಆತುರನಾಗಿದ್ದಾನೆ. ಆವನ ಸ್ಥಿತಿಗೆ ಪ್ರತಿಕ್ರಿಯೆಯೆಂಬಂತೆ ಚಂದ್ರಮತಿ ಶಾಂತಚಿತ್ತಳಾಗಿ, ಧೈರ್ಯವೇ ಮೈವೆತ್ತು ಹೆಣ್ಣಾಗಿ ಬಂದಂತೆ

"ಬಲಿದ ಪದ್ಮಾಸನಂ ಮುಗಿದಕ್ಷಿ ಮುಚ್ಚಿದಂ
ಜುಳಿವೆರಸಿ ಗುರುವಸಿಷ್ಠಂಗೆರಗಿ ಶಿವನ ನಿ
ರ್ಮಲರೂಪ ನೆನೆದು ಮೇಲಂ ತಿರುಗಿನೋಡಿ ಭೂಚಂದ್ರಾರ್ಕತಾಂಬರಂ ||
ಕಲಿ ಹರಿಶ್ಚಂದ್ರರಾಯಂ ಸತ್ಯವೆರಸಿ ಬಾ
ಳಲಿ ಮಗಂ ಮುಕ್ತನಾಗಲಿ ಮಂತ್ರಿ ನೆನೆದುದಾ
ಗಲಿ ರಾಜ್ಯದೊಡೆಯ ವಿಶ್ವಾಮಿತ್ರ ನಿತ್ಯನಾಗಲಿ ಹರಕೆ ಹೊಡೆಯೆಂಪಳು ||"

ತನ್ನ ಪತ್ನಿಯೆಂಬರಿವುಂಟಾಗುತ್ತದೆ ಹರಿಶ್ಚಂದ್ರನಿಗೆ. ಕ್ಷಣಕಾಲ ಅಧೀರನಾಗುತ್ತಾನೆ. ಮರುಕ್ಷಣವೇ ಧೈರ್ಯವನ್ನು ತಾಳಿ ಒಡೆಯನಾಜ್ಞೆ ಯುಳಿದರೆ ಸಾಕು ಎಂದು ನಿರ್ಧರಿಸುತ್ತಾನೆ. ಈ ಸಮಯವನ್ನು ಸಾಧಿಸಿ ವಿಶ್ವಾಮಿತ್ರ ಮತ್ತೆ ವಿಲೋಭನೆಯನ್ನೊಡ್ಡುತ್ತಾನೆ. 'ಸತ್ಯವನು ಬಿಟ್ಟರನೆನಿಸಿ ದಡೆ ಸಾಕು' ಎಂದು ವಿಶ್ವಾಮಿತ್ರನಿಗೆ ತನ್ನ ಅಚಲ ನಿರ್ಧಾರವನ್ನು ಸೂಸಿ ಕತ್ತಿಯನ್ನು ಕಾಂತೆಯ ಕೊರಳಮೇಲೆ ಇಳುಹುತ್ತಾನೆ.

"ಹೊಡೆವ ಕಡುಗದ ಬಾಯ ಕಡೆಯ ಹೊಡೆಗಳನಾಂತು
ಮಡದಿಯೆಡೆಗೊರಳ ನಡುವಡಿಸಿ ಮೂಡಿದನು ಕೆಂ
ಜೆಡೆಯ ಶಶಿಕಳೆಯ ಸುರನದಿಯ ಬಿಸಿಗಣ್ಣ ಫಣಿಕುಂಡಲದ ಪಂಚಮುಖದ ||
ಎಡದ ಗಿರಿಜೆಯ ತಳಿತ ದಶಭುಜದ ಫುಲಿದೊಗಲ
ನುಡಿಗೆಯ ಮಹಾವಿಷ್ಣುನಯನವೇರಿಸಿದ ಮೆ
ಲ್ಲಡಿಯ ಕಾಶೀರಮಣ ವಿಶ್ವನಾಥಂ ಸುರರ ನೆರವಿ ಜಯ ಜಯವೆನುತಿರೆ ||"

ದೇವಾದಿದೇವತೆಗಳು, ನವಗ್ರಹಗಳು, ಸರ್ವದೇವರೂ ಬರುತ್ತಾರೆ. ವಸಿಷ್ಠರನ್ನು ಕರೆದುಕೊಂಡು

"ಕುಡಿವೌಷಧಂ ಬಾಯ್ಗೆ ನಿಗ್ರಹಂ ಮಾಡಿ ತಾ
ತ್ಡೊಡಲಿಂಗೆ ಸುಖವನೀವಂತೆ ಲೋಕದ ಕಣ್ಗೆ
ಕಡುಮುಳಿವಂತೆ ತೋರಿಸಿ ಸತ್ಯಶುದ್ಧಪಪ್ಪನ್ನೆಗಂ ಕಾಡಿ ನೋಡಿ ||
ಕಡೆಯೊಳು ಹರಿಶ್ಚಂದ್ರರಾಯಂಗೆ ಗಣವೆರಸಿ
ಮೃಡನನಳತಂದಿತ್ತು ಕೀರ್ತಿಯಂ ಮೂಜಗದ
ಕಡೆಗೆ ಹರಹಿದ . . . . . "

ಮುನಿವರೇಣ್ಯ ವಿಶ್ವಾಮಿತ್ರನೂ ಬರುತ್ತಾನೆ. ಘೋರೆ ವಿನಯದಿಂದ ಗಿರಿಜಾರಮಣನನ್ನು ಮಾಡಬಾರದುದನ್ನು ಮಾಡಿ, ನೋಡಬಾರದುದನ್ನು

ನೋಡಿದ ಈ ನೀಚನ ತಾವಿಂಗಿದೇಕೆ ಪಾವನಮೂರ್ತಿ ನೀವು ಬಿಜಯಗೆಯ್ದಿರಿ ಎಂದು ಕೇಳಲು

"ಘನ ಸತ್ಯವೇ ಜೀವವೆಂದಿರ್ದ ನಿನ್ನ ಹೊಲೆ
ಯನ ಸೇವೆ ಗುರುಸೇವೆ ಹೊತ್ತ ಹೊಲೆವೇಷ ಪಾ
ವನ ಪುಣ್ಯವೇಷ ಸುಡುಗಾಡ ರಕ್ಷಿಸುವಿರವು ತಾ ಯಜ್ಞರಕ್ಷೆಯಿರವು ॥
ಅನುದಿನಂ ಭುಂಜಿಸಿದ ಶವದ ಶಿರದಕ್ಕಿಯು
ಲ್ಲನವೇಯ ಚಾಂದ್ರಾಯಣಂ ಪುತ್ರನಳಿವು ಜ
ನ್ಮನಿಕಾಯದಳಿವಂಗನಾಹನನ ಮಾಯಾಹನನವಂಜ ಬೇಡೆಂದನು ॥"

"ಅತಿ ಮುನಿವಯತಿ ಹೊಲೆಯು ಮುನಿಯುಡಿಹ ಹೊಲೆಯುನು
ನ್ನತಯತಿವರನು ಮುನಿದುಮಾಡುವ ಮಹಾಯಜ್ಞ
ಶತವೆಯ್ದೆ ಪಂಚಪಾತಕ ಸತ್ಯವೆರಸಿದ ನ್ಯಾಯಮದು ಲಿಂಗಾರ್ಚನೆ ॥
ಶ್ರುತಿಮತವಿದೆನ್ನಾಜ್ಞೆ . . . . . . "

ಎಂದು ಸಂತೈಸಿ ವಿಪ್ರ, ಸ್ಮಶಾನದೊಡೆಯರಾಗಿದ್ದವರು, ಅಗ್ನಿ, ಕಾಲಪುರುಷರೆಂದೂ, ಅವರನ್ನು ಸೇವಿಸಿದ ಪುಣ್ಯ ನಿಮ್ಮದೆಂದೂ ತಿಳಿಸುತ್ತಾನೆ.

ಹರನ ಕೃಪೆಯಿಂದ ಬದುಕಿ ಬಂದ ಮಗನನ್ನೂ, ಸತಿಯನ್ನೂ ಕರೆದುಕೊಂಡು ಹರಿಶ್ಚಂದ್ರ ಅಯೋಧ್ಯೆಗೆ ಮರಳಿ ತೆರಳುತ್ತಾನೆ. ಮುನಿಪೋತ್ತಮನಾದ ವಿಶ್ವಾಮಿತ್ರ ಅವರ ಜತೆ ಹೋಗಿ ರಾಜ್ಯಕೋಶಗಳನ್ನು ಒಪ್ಪಿಸಿಕೊಟ್ಟು ತನ್ನ ತಪೋಭೂಮಿಗೆ ತೆರಳುತ್ತಾನೆ. '**ಹರನೆಂಬುದೇ ಸತ್ಯ ಸತ್ಯನೆಂಬುದೇ ಹರ**' ನೆಂಬ ನಿತ್ಯ ಸತ್ಯವನ್ನು ಸಾರುವುದಕ್ಕೇ ಈ ಕಥೆಯನ್ನು ಜನ ಬದುಕಬೇಕೆಂದು ತಾನು ಬರೆದೆನೆಂದು ಕವಿ ರಾಘವಾಂಕ ಕೊನೆಯಲ್ಲಿ ನುಡಿಯುತ್ತಾನೆ.

೧೨

'ಹರಿಶ್ಚಂದ್ರ ಕಾವ್ಯ' ಕನ್ನಡ ವಾಗ್ದೇವಿಯ ಮುಕುಟದಲ್ಲಿನ ಅನರ್ಘ್ಯ ರತ್ನ. ಹರಿಶ್ಚಂದ್ರ, ಚಂದ್ರಮತಿ, ವಿಶ್ವಾಮಿತ್ರರ ಪಾತ್ರಗಳನ್ನು ಕವಿ ನಿರ್ವಹಿಸಿರುವ ರೀತಿ ಅನ್ಯಾದೃಶ್ಯವಾಗಿವೆ. ಸತ್ಯದ ಶ್ರೇಷ್ಠತೆಯನ್ನು ಸಾರುವ ತನ್ನ ಆವೇಶದಲ್ಲಿ ಕವಿ ರಸದುಂಬಿಗಳಾದ ನಮ್ಮನ್ನು ಮರೆತಿಲ್ಲ. ರಸ, ನೀತಿಗಳನ್ನು ಹಾಸುಹೊಕ್ಕಾಗಿ ಹೊಂದಿಸಿ, ರಸಾಭಾಸಕ್ಕೆಡೆಕೊಡದಂತೆ ಕಾವ್ಯಲಹರಿಯನ್ನು ಹರಿಸಿಕೊಂಡು ಹೋಗಿದ್ದಾನೆ.

ಹರಿಶ್ಚಂದ್ರ ಸತ್ಯವನ್ನು ನಿತ್ಯನೆನಿಸಿದ ಅಮರ ಸಾರ್ವಭೌಮನೆಂದು ಹೆಸರಾಗಿದ್ದರೂ, ರಾಘವಾಂಕನು ತನ್ನ ಒಳಗಣ್ಣಿಂದ ನೋಡಿರುವಂತೆ ಆ ಕೀರ್ತಿ ಸಂಪೂರ್ಣವಾಗಿ ಸಲ್ಲಬೇಕಾದುದು ಚಂದ್ರಮತಿ ದೇವಿಗೆ. ಅನೇಕ ಸನ್ನಿವೇಶಗಳಲ್ಲಿ ನೃಪತಿ ಅಂತಃಕರಣದ ತೊಳಲಾಟಕ್ಕೆ ಸಿಕ್ಕಿ ಸತ್ಯಭ್ರಷ್ಟತ್ವವನ್ನು ಹೊಂದುವುದರಲ್ಲಿರುತ್ತಾನೆ. ಆಗ ಬಂದು ತನ್ನ ವರದ ಹಸ್ತವನ್ನು ನೀಡಿ ಅವನನ್ನು ಮೇಲಕ್ಕೆತ್ತುವವಳು ಚಂದ್ರಮತಿ. ಅವಳ ಸೌಶೀಲ್ಯ, ಸ್ನಿಗ್ಧಶಾಂತಿ, ಸತ್ಯದ ಬಗ್ಗೆ ಇರುವ ಅಚಲವಾದ ನಂಬಿಕೆ ಅಮಾನುಷವಾಗಿದೆ. ಇಂತಹ ಮಹಾವ್ಯಕ್ತಿಯನ್ನು ನಮ್ಮ ಕಣ್ಮುಂದೆ ಅಮಲ ತೇಜಸ್ಸಿನಿಂದ ಮೂಡಿಸಿರುವ ಕವಿ ಮೂರ್ಧನ್ಯ.

ಕವಿ ಹೃದಯ ತಿಳಿಗೊಳದಂತಿದೆ. ಅಲ್ಲಿ ಕಲ್ಮಷವಿಲ್ಲ, ಕಾಷಾಯವಿಲ್ಲ, ಹೊಲಬಿಲ್ಲ. ವಿಶ್ವಾಮಿತ್ರನ ವಿಗಡತನವನ್ನು ನೋಡುವಾಗ ಕವಿ ಕನಲಿ ಅವನನ್ನು 'ವಿಶ್ವಮೃತ್ಯು-ಪಾಪಿ' ಎಂದು ಕರೆಯುತ್ತಾನೆ. ಆದರೆ ಅವನಿಂದಲೇ ಅಲ್ಲವೆ ಹರಿಶ್ಚಂದ್ರನ ಸತ್ಯನಿಷ್ಠೆ ಬಯಲಿಗೆ ಬಂದದ್ದು, ಅವನಿಂದಲೇ ಅಲ್ಲವೆ ಜಗದಾದಿದೇವ ಸ್ಮಶಾನಕ್ಕೆ ತನ್ನ ಪ್ರಿಯಶಿಷ್ಯನನ್ನು ಕಾಣುವುದಕ್ಕೆ ಬಂದದ್ದು. ಇಂತಹ ಮಹೋಪಕಾರ ಮಾಡಿದ ಮುನಿಯನ್ನು ಮುಕ್ತಕಂಠದಿಂದ ಕವಿ ಹೊಗಳುತ್ತಾನೆ.

ನಾಡಿನ ಸಂಸ್ಕೃತಿಯನ್ನು ಅದರ ಕವಿಗಳ ಮಾನದಂಡದಿಂದ ಅಳೆಯಬೇಕೆಂಬ ಮಾತು ಸಟೆಯಲ್ಲ. ರಾಘವಾಂಕನಂತಹ ಕವಿಗೆ ಜನನವಿತ್ತು ಅವನಿಂದ 'ಹರಿಶ್ಚಂದ್ರ' ಕಾವ್ಯದಂತಹ ಅಮೋಘ ರಸವರ್ಷವನ್ನು ಸುರಿಸಿದ ನಾಡಿನ ಸಂಸ್ಕೃತಿ ಬಹಳ ಮೇಲ್ಮಟ್ಟದ್ದಾಗಿರಬೇಕು; ಇತ್ತು. ಅದರಲ್ಲಿ ಸಂದೇಹವಿಲ್ಲ. ಇತ್ತ ಕಾವೇರಿ, ಅತ್ತ ತುಂಗಭದ್ರೆ ಇಬ್ಬರು ತಾಯಂದಿರ ಪುಣ್ಯಪೀಯೂಷ ಸ್ತನ್ಯಪಾನಮಾಡಿದವನು ರಾಘವಾಂಕ. ಜನತೆಯಲ್ಲಿ ಹುಟ್ಟಿ ಬೆಳೆದು, ರಾಜ ರಾಜರಿಂದ ಸನ್ಮಾನಿತನಾದರೂ ಜನತೆಯ ಮುದ್ದುಗೂಸೆಂಬುದನ್ನು ಮರೆಯದಿದ್ದ ಮಹಾನುಭಾವನೆಂದರೆ ರಾಘವಾಂಕ. ಕನ್ನಡ ತಾಯಿ ಅವನಿಂದ ನಮಗೆ ತನ್ನ ಸಂದೇಶವನ್ನು ಮುಟ್ಟಿಸಿದ್ದಾಳೆ.

"ತುಂಗಭದ್ರೆಯೇ ಗಂಗೆ; ಹಂಪೆಯೇ ಕಾಶಿ;
ವಿರೂಪಾಕ್ಷನೇ ಕಾಶೀಪತಿ; ಕನ್ನಡಿಗರ ತಪೋಭೂಮಿ ಕನ್ನಡ ನಾಡು"

ಸರ್ವಜ್ಞ ಕವಿ

ಅಷ್ಟಾದಶ ವರ್ಣನೆಗಳಿಂದ ಕೂಡಿ, ಪ್ರಸಿದ್ಧ ನಾಯಕನನ್ನು ಪಡೆದು, ನವರಸಗಳನ್ನು ಪ್ರತಿಪಾದಿಸಿ ಸಮಕಾಲೀನರಾದ ಕವಿಗಳನ್ನು ಕುಕವಿಗಳೆಂದು ಖಂಡಿಸಿ, ಪಂಡಿತರನ್ನೂ ವಿವಿಧ ಕಲಾಮಂಡಿತರನ್ನೂ ಮೆಚ್ಚಿಸುತ್ತೇನಲ್ಲದೆ ಬಡ ಬೋರೆಗೌಡನನ್ನು ಮೆಚ್ಚಿಸುವುದಿಲ್ಲವೆಂಬ ವೀರಶಪಥವನ್ನು ಮಾಡಿ ಹೊರಡದಿರುವ 'ಸರ್ವಜ್ಞ ಮೂರ್ತಿ' ಯನ್ನು ಕವಿಯೆಂದು ಕರೆಯುವುದು ಸಂಪ್ರದಾಯಕ್ಕೆ ಸ್ವಲ್ಪ ವಿರೋಧವಾಗಿ ಕಾಣಬಹುದು. ಕವಿಸಮಯ ಸಂಪ್ರದಾಯ ಪ್ರತಿಪಾದಿಸಿದ ರೀತಿಯಲ್ಲಿ ಸರ್ವಜ್ಞ ಕಾವ್ಯವನ್ನು ಬರೆಯಲಿಲ್ಲ. ಯಾವ ರಾಜನೂ ಇವನನ್ನು 'ಕವಿ ಚಕ್ರವರ್ತಿ' 'ಕವಿರಾಜಮಾನಹಂಸ' ಎಂದು ಕರೆಯಲಿಲ್ಲ. ದೊಡ್ಡದೊಡ್ಡ ಕವಿಗಳ ಮುಖಭಂಗಮಾಡಿದೆನೆಂದು ವಿಾಸೆ ತಿರುವಿಕೊಳ್ಳಲಿಲ್ಲ. ಇಂತಹವನು ಕವಿ ಹೇಗಾದನು? ಕುರಿತೋದದೆಯುಂ ಕಾವ್ಯ ಪ್ರಯೋಗಪರಿಣತಮತಿಗಳಾದ ಕನ್ನಡಿಗರ ಮುಂದೆ ಸರ್ವಜ್ಞನಂತಹ ಹರಕು ಮುರುಕು ಪದಗಳನ್ನು ಹಾಡಿದ ದಾರಿಗನನ್ನು ಕವಿಯೆಂದು ಕರೆಯುವುದು ಸಾಹಸವಾಗಿ ಕಾಣಬಹುದು.

ನಾವು ಕಾವ್ಯಗಳನ್ನು ಯಾವಾಗಲೂ ಒಂದು ಸಂಪ್ರದಾಯಶರಣ ದೃಷ್ಟಿಯಲ್ಲಿಯೇ ನೋಡುತ್ತೇವೆ. ಅರವಿಂದ ಯೋಗಿಗಳು ಹೇಳುವಂತೆ ನಾವು ಸ್ವಯಂ ಯೋಚಿಸುವುದಿಲ್ಲ; ಮುಂದಿಯ ಮಾದರಿಯಲ್ಲಿ ಯೋಚನೆ ಮಾಡುತ್ತೇವೆ* ಕಾವ್ಯವನ್ನು ಕಾಣುವ ಕಣ್ಣಿಗೆ ನಾವು ಹಾಕಿಕೊಳ್ಳುವ ಬಣ್ಣದ ಗಾಜನ್ನು ಒತ್ತಟ್ಟಿಗಿಟ್ಟು ನೇರವಾಗಿ ನೋಡಿದರೆ ಸಹಜ ಕಾವ್ಯದ ಆದ್ಯ ತತ್ತ್ವಗಳನ್ನು ಸರ್ವಜ್ಞ ಆಚರಣೆಗೆ ತಂದಿರುವುದು ವೇದ್ಯವಾಗುತ್ತದೆ.

ಸಹಜತೆಯಿಲ್ಲದೆ, ಶಾಸ್ತ್ರಬಲದಿಂದ ಸೃಷ್ಟಿಯಾದ ಕಾವ್ಯವನ್ನು ಮಳೆಯಿಲ್ಲದೆ ಹೊಯ್ಯುನೀರಿನಿಂದ ಭೂಮಿಯನ್ನು ತಣಿಸುವ ಪ್ರಕ್ರಿಯೆಗೆ ನಾಗವರ್ಮ ಹೋಲಿಸಿದ್ದಾನೆ. ಪಾಪ ಪುಣ್ಯಗಳ ಸರಿಯಾದ ಪರಿಜ್ಞಾನವನ್ನುಂಟು ಮಾಡುವುದೇ ಕಾವ್ಯವೆಂದು ನೃಪತುಂಗನ ಮತ. ಸರಿಯಾದ ಪದಪ್ರಯೋಗ

---

* "We do not THINK but think in patterns."

ಸದರ್ಥ ಸಂಪತ್ತಿ ಕಾವ್ಯದ ಜೀವವೆಂದು ನೇಮಿಚಂದ್ರ ಪ್ರತಿಪಾದಿಸಿದ್ದಾನೆ. ಉತ್ತಮ ಕಾವ್ಯ ಪಂಡಿತ ಪಾಮರ ರಂಜಕವಾಗಿರಬೇಕೆಂದು ಪೊನ್ನ ಸಾಧಿಸಿದ್ದಾನೆ. ಈ ಯೆಲ್ಲ ಅಭಿಪ್ರಾಯಗಳನ್ನೂ ಕ್ರೋಢೀಕರಿಸಿ ರಾಘವಾಂಕ

"ರಸಜೀವ ಭಾವ ಪೊಡಲರ್ಥವವಯುವ ಶಬ್ದ
ನಿಸರವೇ ನುಡಿಯಲಂಕಾರವೇ ತೊಡಿಗೆಯು ತ
ನೆ ಸುಲಕ್ಷಣವೆ ಲಕ್ಷಣ ವಿಮಳ ಪದನ್ಯಾಸ
ನಡೆ ರೀತಿ ಸುಕುಮಾರತೆ
ರಸಿಕತನ ಸುಳಿಸುಖಂ ನಿಳಯು"

ಇಂತಪ್ಪ ಕಾವ್ಯವೇ ಉತ್ತಮ ಕಾವ್ಯವೆಂದು ಸ್ಪಷ್ಟೀಕರಿಸಿದ್ದಾನೆ. ಈ ಅಭಿಪ್ರಾಯಗಳನ್ನೇ ಕೆಲವು ಆಂಗ್ಲ–ಕವಿ ವಿಮರ್ಶಕರೂ ಒಪ್ಪಿಕೊಂಡಿದ್ದಾರೆ. ಡ್ರೈಡನ್ನನ ದೃಷ್ಟಿಯಲ್ಲಿ ನೀತಿಬೋಧೆಗೇ ಕಾವ್ಯದಲ್ಲಿ ಅಗ್ರಪೂಜೆ. ಷೇಕ್ಸ್‌ಪಿಯರ್ ಕವಿಗೆ ಕಾವ್ಯ ನಿಸರ್ಗದ ರನ್ನಗನ್ನಡಿಯಾಗಿರಬೇಕು. ಮ್ಯಾಥ್ಯೂ ಆರ್ನಾಲ್ಡನು ಕಾವ್ಯವನ್ನು ಜೀವನದ ವಿಮರ್ಶೆ ಎಂದು ಕರೆದಿದ್ದಾನೆ. ಕೆಲವು ಅತ್ಯಾಧುನಿಕ ಕವಿಗಳು ಕಾವ್ಯವನ್ನು ಜೀವನ ಸೌಂದರ್ಯ ವಿನ್ಯಾಸವೆಂದು ಕರೆಯುತ್ತಿದ್ದಾರೆ. ಒಟ್ಟದಲ್ಲಿ ಉತ್ತಮ ಕಾವ್ಯದಲ್ಲಿ ನಾವು ಪ್ರೌಢಿಮೆಗಿಂತ ಸಾರಳ್ಯ ಸಹಜತೆಗಳನ್ನೂ, ಪಾಂಡಿತ್ಯಕ್ಕಿಂತ ಪ್ರತಿಭೆಯನ್ನೂ, ಸಂಪ್ರದಾಯ ಶರಣತೆಗಿಂತ ವಿಚಾರ, ವಿಮರ್ಶೆಗಳನ್ನೂ ನಿರೀಕ್ಷಿಸಬೇಕೆಂದು ಹೇಳಿದ ಹಾಗಾಯಿತು.

ಈ ಒರೆಗಲ್ಲಿಗೆ ಹಚ್ಚಿ ನೋಡಿದರೆ ಸರ್ವಜ್ಞನ ಕಾವ್ಯ ಅಪರಂಜಿ. ಕಾವ್ಯದ ನೈಜೋದ್ದೇಶವನ್ನು ಇವನು ದಿವ್ಯ ಶಕ್ತಿಯಿಂದ ಸಾಧಿಸಿದ್ದಾನೆ. ಯಾವ ಬಗೆಯ ಆಡಂಬರವನ್ನೂ ಪ್ರದರ್ಶಿಸದೆ ತನ್ನ ಪಾಂಡಿತ್ಯವನ್ನು ಅಡಗಿಸಿಕೊಂಡು ಪಂಡಿತರು, ಪಾಮರರು, ಶ್ರುತರು, ಅಲ್ಪಶ್ರುತರು, ಕನ್ನಡಿಗರು, ಕನ್ನಡೇತರರು ಎಲ್ಲರೂ ಮೆಚ್ಚುವ ರೀತಿಯಲ್ಲಿ ಎಲ್ಲರೂ ತಮ್ಮ ಬದುಕನ್ನು ಹಸನುಮಾಡಿಕೊಳ್ಳಲನುಕೂಲವಾಗುವಂತೆ ತನ್ನ ಕಾವ್ಯ ತನಿವಣ್ಣನ್ನು ಧಾರಾಳವಾಗಿ ಹಂಚಿದ್ದಾನೆ.

ಜೈನಕವಿಗಳು ಕನ್ನಡ ಸಾಹಿತ್ಯಕ್ಕೆ ಮಾಡಿರುವ ಉಪಕಾರ ಚಿರಸ್ಮರಣೀಯವಾದುದು. ತಮ್ಮ ಲೌಕಿಕ ವೈದಿಕ ಕಾವ್ಯಗಳಿಂದ ಜೈನರು ಕನ್ನಡ

ಸರಸ್ವತಿಗೆ ಸುಭದ್ರವಾದ ವೇದಿಕೆಯನ್ನು ನಿರ್ಮಿಸಿದರು. ಆದರೆ ರತ್ನಾಕರ ವರ್ಣಿಯನ್ನುಳಿದು ಬೇರೆ ಕವಿಗಳು ಜನತೆಯ ಕಡೆಗೆ ಹೆಚ್ಚು ಲಕ್ಷ್ಯವಿಟ್ಟ ಹಾಗೆ ಕಾಣಲಿಲ್ಲ. ಅವರ ಮುಂದಿದ್ದುದು ಒಂದು ಲೌಕಿಕದೇವ—ಅವರ ಧೊರೆ; ಎರಡು, ಪಾರಮಾರ್ಥಿಕ ದೇವ—ಅವರ ದೇವರು. ಈ ಲೌಕಿಕ ಪಾರಮಾರ್ಥಿಕ ದೇವರುಗಳ, ನುಗ್ಗು ಜಗ್ಗಾಟದಲ್ಲಿ ಪಾಮರ ಜನತತಿ ಹಣ್ಣಾಗಿ ಹೋಯಿತು. ರಾಜಾಂತಃಪುರದ ಭವ್ಯವಿಲಾಸದಲ್ಲಿ, ವೀರರ ಧೀರರ ಪ್ರಚಂಡ ಆಹವ ಧ್ವನಿಯಲ್ಲಿ, ರತಿವಿಲಾಸ ಪ್ರಿಯರಾದ ರಮಣಿಯರ ನೂಪುರವ ನುಣ್ದನಿಯಲ್ಲಿ ಗುಡಿಸಿಲು ವಾಸಿಗಳ ಕರುಳಿನ ಕೂಗು ಕೇಳಬರಲಿಲ್ಲ. ಜನತೆ ಯೆಂದರೆ ಸಾಮಾನ್ಯರ ಗುಂಪು, ಮೂರ್ಖರ ಸಂತೆ – ರಾಜಮನ್ನಣೆಯಿಂದ ಮೈದುಂಬಿ ಮಹಾಕವಿಯಾದ ತಾನು ಅವರಿಗಿಂತ ಎಲ್ಲ ಬಗೆಯಲ್ಲಿಯೂ ಶ್ರೇಷ್ಠ ಎಂಬ ಪ್ರಸ್ಥಾನದಿಂದ ಈ ಕವಿಜನ ಕಾವ್ಯ ಸೃಷ್ಟಿಯನ್ನು ಆರಂಭಿ ಸಿತು! ಹದಿಮೂರನೆಯ ಶತಮಾನದಲ್ಲಿ ಬಸವಣ್ಣನವರ ಕ್ರಾಂತಿ ಕೋಲಾಹ ಲಕ್ಕೆ ಸಿಕ್ಕಿ ಈ ಭಾವನೆಯು ನುಚ್ಚುನೂರಾಯಿತು. "ಎನಗಿಂತ ಕಿರಿಯ ರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ" ಎಂದು ನುಡಿದು, ಅದರಂತೆ ನಡೆದು, ಬಸವಣ್ಣನವರು ಪಾಮರ ಸಾಹಿತ್ಯ ಪರಂಪರೆಯ ಪುರಸ್ಕರ್ತರಾದರು. ನೂರಾರು ಕವಿಗಳೂ, ವಚನಕಾರರೂ ಬಸವಣ್ಣನವರ ಮತವನ್ನು ಅವಲಂಬಿ ಸಿದರು. ಆದರೆ ಅದೂ ಬರುಬರುತ್ತ ಪಂಡಿತರ ಕಡೆಗೇ ಲಕ್ಷ್ಯವಿಡುತ್ತ ಬಂದಿತು. ವಿರೂಪಾಕ್ಷಪಂಡಿತ, ಷಡಕ್ಷರ ದೇವ. ಚೆನ್ನಬಸವಾಂಕ ಮೊದ ಲಾದ ಕವಿಗಳು ಜೈನರ ಜಾಡನ್ನೇ ಹಿಡಿದರು. ಆದರೆ ಸರ್ವಜ್ಞದೇವ ತನ್ನ ಮಹಾ ಗುರುವಾದ ಬಸವೇಶ್ವರನ ಮಾರ್ಗವನ್ನು ಚಾಚೂ ಬಿಡದೆ ಅನುಸರಿಸಿ ೧೬ನೆಯ ಶತಮಾನದಲ್ಲಿ ಬಸವಣ್ಣನವರ ಅಮೃತವಾಣಿ ಮತ್ತೆ ಕೇಳಬರು ವಂತೆ ಮಾಡಿದನು. ಅವನು ಬಸವಸಣ್ಣನವರ ಉದಾರ ವಿಚಾರಗಳನ್ನು ಪ್ರತಿಪಾದಿಸಿರುವುದು ಮಾತ್ರವಲ್ಲದೆ ಅವರ ಅನೇಕ ಉಪಮೆ ಹಿಡಿನುಡಿಗಳನ್ನು ಮುಚ್ಚುಮರೆಯಿಲ್ಲದೆ ಬಳಸಿಕೊಂಡಿದ್ದಾನೆ. "ಆನೆ ಕನ್ನಡಿಯುಲ್ಲಿ ತಾನಡಗಿ ಇಪ್ಪಂತೆ—ತನ್ನ ತಾನರಿದಂಗೆ ಭಿನ್ನಭಾವನೆಯಿಲ್ಲ—ಆನೆ ನೀರಾಟವಲಿ ಮಿಾನ ಕಂಡಂಜುವುದೆ—ಮುತ್ತು ನೀರೊಳು ಪುಟ್ಟಿ ಮತ್ತೆ ನೀರಪ್ಪುದೇ— ಬಡಿಗೆಯಲಿ ಹುತ್ತಹೊಡೆಯಲಡಗಿಹ ಸರ್ಪ ಮಡಿವುದೇ" ಇತ್ಯಾದಿ.

ಆದ್ದರಿಂದಲೇ ಅವನು,

"ಬಸವನೆಂದರೆ ಪಾಪ ದೆಸೆಗೆಟ್ಟು ಹೋಗುವುದು
ಬಿಸಲಿಗೆ ಹಸುರೊಳೆಸೆದಿರ್ಪ ಹನಿಯಾರಿ
ಹಸಿದು ಹೋದಂತೆ -

ಎಂದೂ

"ನಂಬಿ ಹೇಳುವೆ ಬಸವನಿಂಬಿನಾ ಮಹಿಮೆಯನು
ಶಂಭುವಿನ ಕರುಣ ನಿಮಗುಂಟು ನಾ ನಿಮ್ಮ
ನಂಬಿ ಹೇಳುವೆನು ಸರ್ವಜ್ಞ ॥"

ಎಂದೂ ತನ್ನ ಬಂಧನವ ಬಯಲು ಮಾಡಿದ ಗುರುವನ್ನು ಅಭಿನಂದಿಸಿರುವುದು. ವಿಜಯನಗರದ ಕಡೆಯ ದಿವಸ - ಹದಿನಾರನೆಯ ಶತಮಾನ, ಆಗಲೇ ಸರ್ವಜ್ಞಮೂರ್ತಿಯ ಉದಯ. ತನ್ನ ಜೀವನ ವೃತ್ತಾಂತವನ್ನು ನಿಸ್ಸಂಕೋಚವಾಗಿ ಕವಿ ಹೇಳಿಕೊಂಡಿದ್ದಾನೆ. ಧಾರವಾಡ ಜಿಲ್ಲೆಗೆ ಸೇರಿದ ಮಾಸೂರು ಗ್ರಾಮದ ಬಸವರಸನೆಂಬ ಬ್ರಾಹ್ಮಣನಿಗೆ ಬಹಳ ದಿವಸ ಮಕ್ಕಳಾಗದಿರಲು ಕಾಶಿಗೆ ಹೋಗಿ ವಿಶ್ವೇಶ್ವರನಿಂದ ವರವನ್ನು ಪಡೆದು ಮನೆಗೆ ಬರುತ್ತಿರುತ್ತಾನೆ. ದಾರಿಯಲ್ಲಿ ಸಿಕ್ಕಿದ ಅಂಬಲೂರೆಂಬ ಹಳ್ಳಿಯಲ್ಲಿ ಊಟ ವಿಶ್ರಾಂತಿಗಾಗಿ ತಂಗುತ್ತಾನೆ. ಊರ ಹೊರಗಿನ ಕುಂಬಾರ ಸಾಲೆಯಿಂದ ಗಡಿಗೆ ಮಡಿಕೆಗಳನ್ನು ತಂದುಕೊಂಡು ಅಡಿಗೆಗಾರಂಭಿಸುವಷ್ಟರಲ್ಲಿ ಮಳೆ ಜೋರಾಗಿ ಆರಂಭವಾಗಿ ಬಿಡುತ್ತದೆ. ಅವನಿಗೆ ಆ ಹಳ್ಳಿಯಲ್ಲಿ ಪರಿಚಯದವರೆಂದರೆ ಗಡಿಗೆ ಮಡಿಕೆಗಳನ್ನು ಯಾರಲ್ಲಿ ಕೊಂಡುತಂದನೋ ಆ ಕುಂಬಾರರು. ಅವರ ಮನೆಗೇ ಬಂದು ಇಳಿದುಕೊಳ್ಳುತ್ತಾನೆ. ಕುಂಬಾರಗಿತ್ತಿ ಮಾಳಿ ಚಂದೊಳ್ಳೆ ಹೆಣ್ಣು. ಬಸವರಸನಿಗೆ ಅವಳಲ್ಲಿ ಮನಸ್ಸು ನೆಡುತ್ತದೆ. ವಿಶ್ವೇಶ್ವರನ ವರಪ್ರಸಾದವನ್ನು ಪಡೆದಿರುವ ತೇಜಸ್ವೀ ಬ್ರಾಹ್ಮಣ; ಏಕಾಂಗಿಯಾಗಿದ್ದಾನೆ; ಮಾಳಿ ತರುಣಿ, ರೂಪವತಿ, ಅವಿವಾಹಿತೆ, ಅವಳಿಗೂ ಅವನಲ್ಲಿ ಮನಸ್ಸಾಗುತ್ತದೆ. ಈ ಸಂಬಂಧದ ಫಲವೇ ಸರ್ವಜ್ಞ. ಹುಟ್ಟಿದಂದಿನಿಂದಲೂ ಸರ್ವಜ್ಞನಲ್ಲಿ ಸ್ವತಂತ್ರವೃತ್ತಿ ಮೂಡಿರುತ್ತದೆ. ತಾನು ಸಾಕ್ಷಾತ್ ಪರಶಿವನ ಮಗನೆಂದೇ ಅವನ ನಂಬಿಕೆ. ಇದು ಅವನ ತಾಯಿಗೆ ಸರಿಬೀಳುತ್ತಿರಲಿಲ್ಲ. ತಂದೆ ತನ್ನ ಊರಿಗೆ ಹಿಂದುರುಗಿ ಬಿಡುತ್ತಾನೆ. ತಾಯಿಯ ಪಾಲನೆಯಲ್ಲಿಯೋ

ಬೆಳೆದ ಸರ್ವಜ್ಞ ಕುಲಕ್ಕೆ ಬಂದ ಕಸಬನ್ನು ಅವಲಂಬಿಸಬೇಕಾಗಿತ್ತು. ಅದು ಅವನಿಗೆ ಸೇರದಾಯಿತು. ಒಂದು ದಿನ ಮಾಳಿಗೂ, ಸರ್ವಜ್ಞನಿಗೂ ಮಾತು ಬೆಳೆಯುತ್ತದೆ. ಮಾಳನೂ ಮಾಳಿಯೂ ಕೂಳಿಕ್ಕಿದ ಹೆಮ್ಮೆಯಲ್ಲಿ 'ನೀನಾರ ಮಗ'ನೆಂದು ಕೇಳಲು 'ಶಿವನ ಮೇಳದವನೆಂದು' ಉತ್ತರಿಸುತ್ತಾನೆ. ಕೋಪಗೊಂಡ ಮಾಳ ಮಾಳಿಯರು ಅವನನ್ನು ಮನೆಯಿಂದ ಹೊರದೂಡುತ್ತಾರೆ. ಅಂದಿನಿಂದ ಮಂಡೆ ಬೋಳಿಸಿಕೊಂಡು, ತುಂಡುಗಂಬಳಿ ಹೊದೆದು ಹಿಂಡನಗಲಿದ ಗಜದಂತೆ ನಿಂತಲ್ಲಿ ನಿಲ್ಲದೆ, ಯಾವ ಊರನ್ನೂ ತನ್ನದೆಂದುಕೊಳ್ಳದೆ ಊರೂರು ತಿರುಗುತ್ತ ಭಿಕ್ಷಾಟನ ವೃತ್ತಿಯಿಂದ ಜೀವಿಸಲು ತೊಡಗುತ್ತಾನೆ. ಇದರಿಂದ ಅಪಾರವಾದ ಲೋಕಾನುಭವ, ಪಾಪ ಪುಣ್ಯಗಳ ಸೂಕ್ಷ್ಮದರ್ಶನ, ಅನೇಕ ವಿಷಯಗಳ ಪರಿಜ್ಞಾನ ಲಭಿಸಿ ಸರ್ವಜ್ಞನಾಗುತ್ತಾನೆ.

"ಸರ್ವಜ್ಞನೆಂಬವನು ಗರ್ವದಿಂದಾದವನೆ?
ಸರ್ವರೊಳೊಂದೊಂದು ನುಡಿಗಲಿತು ವಿದ್ಯದ
ಪರ್ವತವೆ ಆದ ಸರ್ವಜ್ಞ ‖"

ಇದರ ಜತೆಯಲ್ಲಿ ತನ್ನ ಪೂರ್ವಜನ್ಮದ ವೃತ್ತಾಂತವನ್ನೂ ಹೇಳಿಕೊಂಡಿದ್ದಾನೆ. ತಾನು ಕೈಲಾಸನಾಥನಾದ ಪರಶಿವನ ದಾಸನಾದ ಪುಷ್ಪದತ್ತನೆಂದೂ ಮುಂದೆ ವರರುಚಿಯಾದನೆಂದೂ ಅನಂತರ ಸಾಲೆ ಸರ್ವಜ್ಞನಾದನೆಂದೂ ಹೇಳಿಕೊಂಡಿದ್ದಾನೆ. ಸುಪ್ರಸಿದ್ಧ ಸೂಫಿದಾರ್ಶನಿಕನಾದ ಅಲ್ ಘಸಲಿಯನ್ನೊಮ್ಮೆ ಕೆಲವರು 'ನೀನು ಇಂತಹ ಘನಪಂಡಿತ ಹೇಗಾದೆ' ಎಂದು ಕೇಳಿದಾಗ ಅವನು 'ಎಲ್ಲರಲ್ಲಿಯೂ ಕಲಿಯಲು ಅನೇಕರು ಅಂಜುತ್ತಾರೆ. ಅಳಕುತ್ತಾರೆ. ಎಲ್ಲರಲ್ಲಿಯೂ ಕಲಿಯಬೇಕಾದುದು ಬಹಳವಿದೆ. ನಿಸ್ಸಂಕೋಚದಿಂದ ಎಲ್ಲರಲ್ಲಿಯೂ ಕಲಿತಿದ್ದರಿಂದ ಇಷ್ಟು ಪಂಡಿತನಾದೆ' ಎಂದು ಹೇಳಿದನಂತೆ. ಸರ್ವಜ್ಞ ಈ ಪಂಥಕ್ಕೆ ಸೇರಿದವನು. ಇಡೀ ಜಗತ್ತೇ ಅವನ ವಿಶ್ವವಿದ್ಯಾನಿಲಯ. ಪ್ರಕೃತಿಯ ಪ್ರತಿಯೊಂದು ಸ್ಪಂದನವೂ ಅವನ ಹೃದಯದಲ್ಲಿ ಪ್ರತಿಸ್ಪಂದನವನ್ನುಂಟುಮಾಡುತ್ತಿತ್ತು. ಜೀವನವೇ ಅವನ ಗುರು, ಮಾನವ ಜೀವನವನ್ನು ಹದನುಮಾಡಿ ಔನ್ನತ್ಯದ ಶಿಖ

ರಕ್ಕೊಯ್ಯಬೇಕೆಂಬುದೇ ಅವನ ಗುರಿ. ಇದರ ಜತೆಗೆ ವಿಚಾರ ಭಾವರಸಗಳನ್ನು ಪೂರ್ಣವಾಗಿ ಗ್ರಹಿಸಬಲ್ಲ ಚಿತ್‌ಶಕ್ತಿ.

ಶಿವಯೋಗ, ಜ್ಯೋತಿಷ್ಯ, ವೈದ್ಯ, ಸಮಾಜ ವಿಜ್ಞಾನಗಳಲ್ಲಿ ಸರ್ವಜ್ಞನದು ಪರಿಣತಮತಿ. ಅವನು ಒಣ ಓದು ಅನುಭವವಿಲ್ಲದ ಪಾಂಡಿತ್ಯದ ಆಡಂಬರಗಳನ್ನು ಖಂಡಿಸಿರುವುದರಿಂದ ಅನಕ್ಷರಜ್ಞನೆಂದೂ ಅವಿದ್ಯಾವಂತನೆಂದೂ ಕೆಲವರು ಭಾವಿಸುತ್ತಾರೆ. 'ವಿದ್ಯಕ್ಕೆ ಕಡೆಯಿಲ್ಲ ಬುದ್ಧಿಗೆ ಬೆಲೆಯಿಲ್ಲ—ವಿದ್ಯವೇ ತಾಯ್ತಂದೆ ಬುದ್ಧಿಯೇ ಸೋದರನು—ವಿದ್ಯವ ಬಲ್ಲ ಬಡವನು ಗಿರಿಯ ಮೇಲಿದ್ದರೂ ಸಲುವ—ಓದಿದಾ ಓದು ತಾ ಮೇದ ಕಬ್ಬಿನ ಸಿಪ್ಪೆ ಓದಿನಾ ಒಡಲನರಿದಡೆ ಸಿಪ್ಪೆ ಕಬ್ಬಾದಂತೆ' ಎಂಬ ಮಾತುಗಳಿಂದ ವಿದ್ಯೆಯ ಪ್ರಭಾವದಿಂದ ಮೂಡುವ ಸಂಸ್ಕಾರ ಅನುಭಾವಗಳಿಗೆ ಸರ್ವಜ್ಞ ಎಷ್ಟು ಬೆಲೆಯಿತ್ತಿದ್ದಾನೆಂಬುದು ವ್ಯಕ್ತವಾಗುತ್ತದೆ.

ಕಾವ್ಯದ ಉದ್ದೇಶವನ್ನು ಚರ್ಚಿಸುತ್ತಾ ಮಿಸೆಸ್ ಸ್ಟೊವ್ ಎಂಬ ಅಮೆರಿಕೆಯ ವಿದುಷಿ

"ಒಂದು ಜನಾಂಗದ ಸಾಹಿತ್ಯ ಅದರ ರಾಷ್ಟ್ರೀಯ ಜ್ಞಾನದಿಂದ ಸ್ಫುರಿಸಬೇಕು, ಆತ್ಮಗೌರವವಿಲ್ಲದ ರಾಷ್ಟ್ರಜ್ಞಾನವು ಸಾಧ್ಯವಿಲ್ಲ; ಸ್ವಾತಂತ್ರ್ಯವಿಲ್ಲದೆ ಆತ್ಮಗೌರವವು ಸಾಧ್ಯವಿಲ್ಲ" * ಎಂದು ಹೇಳಿರುವ ಮಾತು ಸರ್ವಜ್ಞನಿಗೆ ಚೆನ್ನಾಗಿ ಅನ್ವಯಿಸುತ್ತದೆ, ಅವನ ಜೀವನೋದ್ದೇಶವೇ ಈ ಮಾತಿನಲ್ಲಿ ಅಡಕವಾಗಿದೆ. ಸ್ವಾತಂತ್ರ್ಯಕ್ಕೆ ಸರ್ವಜ್ಞ ಅಪಾರ ಮನ್ನಣೆಯನ್ನಿತ್ತಿದ್ದಾನೆ.

"ತಂತಿ ವಾದ್ಯವು ಲೇಸು ಮಂತ್ರಿಯಾ ಕೆಳೆ ಲೇಸು
ಯಂತ್ರವಾಹಕನ ದಯೆಲೇಸು; ಜಗದಿ ಸ್ವ
ತಂತ್ರವೇ ಲೇಸು ಸರ್ವಜ್ಞ ॥"

ಒಬ್ಬರ ಹಂಗಿಲ್ಲದ ತನ್ನ ಬಾಳುವೆಯನ್ನು

"ಕರದಿ ಕಪ್ಪರವುಂಟು ಹಿರಿದೊಂದು ನಾಡುಂಟು,
ಹರನೆಂಬ ದೈವ ನಮಗುಂಟು, ತಿರಿವರಿಂ
ಸಿರಿವಂತರಾರು ಸರ್ವಜ್ಞ ॥"

---

*"The Literature of a people must spring from the sense of its nationality; and nationality is impossible without self-respect; and self-respect is impossible without LIBERTY."

ಎಂದು ಸೂಚಿಸಿ ಸ್ವತಂತ್ರ ಜೀವನದ ಪಳವಿಗೆಯನ್ನು ನೆಟ್ಟಿದ್ದಾನೆ. ಆದ್ದರಿಂದಲೇ ಸರ್ವಜ್ಞನನ್ನು 'ಕಂಡದ್ದನ್ನು ಕಂಡಂತೆ ಆಡುವ ಗಂಡುಕವಿ' ಎಂದು ಕರೆಯುವ ಪರಿಪಾಠ ಬಂದಿದೆ.

ಹುಬ್ಬಳ್ಳಿಯ ರಾ। ಚೆನ್ನಪ್ಪ ಉತ್ತಂಗಿಯವರು ಬಹಳ ಶ್ರಮಪಟ್ಟು ೧೯೨೮ ತ್ರಿಪದಿಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇವುಗಳಲ್ಲಿ ಅನೇಕ ಪ್ರಕ್ಷಿಪ್ತವಾಗಿ ಬಂದು ಸೇರಿಕೊಂಡವು. ಯಾವ ವಚನವನ್ನೂ ಸರ್ವಜ್ಞ ಕುಳಿತು ಬರೆದಹಾಗೆ ಕಾಣುವುದಿಲ್ಲ. ಉಮ್ಮರ್ ಖಯ್ಯಾಂನ ರುಬಾಯಿಯತ್, ಪ್ಯಾಸ್ಕಲ್ಲನ 'ಪೆನ್‌ಸೀನ್' ತುಕಾರಾಮನ ಅಭಂಗಗಳು, ಕಬೀರನ ಸಾಕಿಗಳಂತೆ ಇವು ಸಂದರ್ಭೋಚಿತವಾಗಿ ಚೆಲ್ಲಿದ ಆಣಿಮುತ್ತುಗಳು. ಒಂದೊಂದೂ ಸ್ವತಂತ್ರವೂ, ಸಮಗ್ರವೂ, ಅರ್ಥಗರ್ಭಿತವೂ ಆದ ಪದ್ಯವಾಗಿದೆ. ಉತ್ತಮ ಕಾವ್ಯಲಕ್ಷಣವನ್ನು ಪ್ರತಿಪಾದಿಸುತ್ತಾ ನೃಪತುಂಗದೇವ ಹೇಳಿದ ಕಿರಿದರೊಳೆ ಪಿರಿದು ಮರ್ಥಮನರಿಪ ಜಾಣ್ಮೆ ಸರ್ವಜ್ಞನಿಗೆ ಕರತಲಾಮಲಕವಾಗಿತ್ತು. ದೊಡ್ಡ ತತ್ತ್ವ, ವಿಚಾರ, ದರ್ಶನ, ಬೋಧೆಗಳೆಲ್ಲದರ ಮರ್ಮವನ್ನು ತಿಳಿಯಾದ ಪಾಮರಗಾಹ್ಯವಾದ ಲಲಿತ ರೂಢಿಗನ್ನಡದಲ್ಲಿ ಉಸುರಿದ್ದಾನೆ. ಕಾಲಾತೀತ, ಅನಾದ್ಯನಂತ, ಅಯೋನಿಜ ಎಂದು ಕರೆಸಿಕೊಂಡಿರುವ ದೇವರನ್ನು 'ಆಗಿಲ್ಲ ಹೋಗಿಲ್ಲ, ಮೇಗಿಲ್ಲ ಕೆಳಗಿಲ್ಲ, ತಾಗಿಲ್ಲ ತಪ್ಪು-ತಡೆಯಿಲ್ಲ' ಎಂದು ಸುಲಭವಾಗಿ ವರ್ಣಿಸಬೇಕಾದರೆ ಸರ್ವಜ್ಞನಿಗಿದ್ದ ಭಾವ, ಭಾಷಾಸಂಪತ್ತಿ ವ್ಯಕ್ತವಾಗುತ್ತದೆ. 'ಕನ್ನಡದಲ್ಲಿ ಮೋಕ್ಷವನ್ನು ಗಳಿಸಿಕೊಂಡರೆ ಸಾಲದೆ ಸಂಸ್ಕೃತದೊಳಿನ್ನೇನು' ಎಂದು ಮಹಾಲಿಂಗರಂಗ ಹೇಳಿದಂತೆ ಕನ್ನಡದ ಹೆಚ್ಚಳವನ್ನು ಎತ್ತಿ ಹಿಡಿಯುವುದರಲ್ಲಿ ಮೊದಲಿಗನು ಸರ್ವಜ್ಞ. ಉದಾತ್ತ ವಿಚಾರಗಳನ್ನು ಕನ್ನಡದಲ್ಲಿ ಹೇಳಲು ಸಾಧ್ಯವಿಲ್ಲವೆಂದು ವಾದಮಾಡುವವರಿಗೆ ಸರ್ವಜ್ಞನ ತ್ರಿಪದಿಗಳು ಉತ್ತಮ ಪ್ರತ್ಯುತ್ತರಗಳಾಗಿವೆ. ಈ ಅಪಾರ ಕನ್ನಡ ಪ್ರೇಮವೇ ತ್ರಿಪದಿಯನ್ನು ಉಪಯೋಗಿಸಿಕೊಳ್ಳುವಂತೆ ಸರ್ವಜ್ಞನಿಗೆ ಪ್ರೇರಣೆಯನ್ನುಂಟುಮಾಡಿರಬೇಕು. ತ್ರಿಪದಿ ರನ್ನ ಕವಿಯ ಕಾಲದಲ್ಲಿಯೇ, ಪ್ರಚಾರದಲ್ಲಿತ್ತು. ಇದು ಜನಸಾಮಾನ್ಯರಲ್ಲಿ ಹುಟ್ಟಿ ಬಂದ ಛಂದಸ್ಸೆಂದು ಮಹಾ ಕವಿಗಳು ಅಲ್ಲಗಳೆದು ಬಿಟ್ಟರು. ಸಂಸ್ಕೃತದ ಶಂಖದಿಂದ ಬಂದ ಚಂಪೂವಿನ ಮಹಾತೀರ್ಥವಿದ್ದಾಗ ರಗಳೆ, ತ್ರಿಪದಿ,

ಚೌಪದಿ, ಅಕ್ಕರ, ಷಟ್ಪದಿ ಮೊದಲಾದ ಅಚ್ಚಗನ್ನಡ ಛಂದಸ್ಸುಗಳನ್ನು ಬಳಸಿಕೊಳ್ಳುವುದು ಮಹಾಕವಿಗಳ ಆತ್ಮಗೌರವಕ್ಕೆ ಕುಂದೆಣಿಸಿರಬೇಕು. ಆದರೆ ಸರ್ವಜ್ಞನ ನೋಟವೇ ಬೇರೆ, ರೀತಿಯೇ ಬೇರೆ, ಬಗೆಯೇ ಬೇರೆ.

ಸರ್ವಜ್ಞನ ಕಾವ್ಯವಾಣಿ ಪಳಗುವುದಕ್ಕೆ ಅವನ ತಾಯ್ನಾಡಾದ ಕನ್ನಡ ನಾಡೇ ಕಾರಣ. ಪ್ರಕೃತಿ ಮಾತೆ ಎಲ್ಲಿ ತನ್ನ ಸ್ವಚ್ಛಂದ ಲಾಸ್ಯವನ್ನು ಬೀರುತ್ತಾಳೋ, ಎಲ್ಲಿ ಹನಿಗಂಪು, ಪಚ್ಚೆ ಪಸರು, ಹೂ ಹಣ್ಣುಗಳು, ಪರ್ವತ ಸಾಲು ತಾನೇ ತಾನಾಗಿ ಮೂಡಿದೆಯೋ ಅಲ್ಲಿ ಸರ್ವಜ್ಞನ ಬಾಳು ಬಣ್ಣಗೊಂಡಿತು. ಕನ್ನಡ ದೇಶದ ಪ್ರಕೃತಿ ವೈಭವವನ್ನೂ, ಜನತೆಯ ಆಚಾರ, ನಡೆನುಡಿ ಊಟ ಉಡಿಗೆ ತೊಡಿಗೆಗಳನ್ನೂ ಅಕ್ಕರೆಯಿಂದ ಕವಿ ವರ್ಣಿಸುತ್ತಾನೆ. ತನ್ನ ಕನ್ನಡ ಸೋದರರನ್ನು ಕುರಿತು

"ಕನ್ನಡಿಗನಾಕೆಳೆಯು ಮನ್ನಿಯನ ವಿಶ್ವಾಸ
ತನ್ನ ಕೈಯುಲಗು ಪರರಿಗೆ ಕೊಟ್ಟರೆ
ಬೆನ್ನು ಕೊಟ್ಟಂತೆ ಸರ್ವಜ್ಞ ॥

ಎಂದು ತನ್ನ ಸಾಂತಃಕರಣ ಪ್ರೇಮವನ್ನು ವ್ಯಕ್ತಪಡಿಸಿದ್ದಾನೆ.

ಸರ್ವಜ್ಞನ ಕವಿತೆ ರಸವತ್ಕವಿತೆಯಾಗುವುದಕ್ಕೆ ಅವನ ಶಿಷ್ಟಅಭಿರುಚಿ ಹಾಗೂ ಶುಭ್ರರಸಿಕತೆಯೇ ಕಾರಣ. ಕಲಾಶೋಭೆಯನ್ನು ಹಳಿಯುವುದೇ ವಿರಾಗಿಯ ಲಕ್ಷಣವೆಂದು ಸರ್ವಜ್ಞ ಭಾವಿಸಲಿಲ್ಲ. ರಸಿಕತೆಯೇ ಸಂಸ್ಕೃತಿಯ ಲಕ್ಷಣವೆಂಬುದನ್ನು ಸರ್ವಜ್ಞ ತಿಳಿದಿದ್ದನು.

"ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ
ರಸಿಕನಲ್ಲದನ ಬರಿಮಾತು ಕಿವಿಯೊಳ್ಕೂ-
ರ್ದಸಿಯು ಬಡಿವಂತೆ ಸರ್ವಜ್ಞ ॥"

ಮಾತಿನ ಬೆಲೆಯನ್ನು ವರ್ಣಿಸುತ್ತಾ

"ಮಾತಿನಿಂ ನಗೆನುಡಿಯು, ಮಾತಿನಿಂ ಹಗೆಕೊಲೆಯು
ಮಾತಿನಿಂ ಸರ್ವಸಂಪದವು ! ಲೋಕಕ್ಕೆ
ಮಾತೆ ಮಾಣಿಕವು ಸರ್ವಜ್ಞ ॥"

"ಮಾತೆಬಲ್ಲಾತಂಗೆ ಯಾತವು ಸುರೆದಂತೆ
ಮಾತಾಡಲರಿಯದಾತಂಗೆ ಬರಿಯಾತ
ನೇತಾಡಿದಂತೆ ಸರ್ವಜ್ಞ ॥"

ಎಂದು ಹೇಳಿದ್ದಾನೆ. ಮಾತಿನ ಘನತೆಯನ್ನು 'ಮಾತಾಡಿದಂತೆ ನಡೆದರೆ ಕೈಲಾಸಕ್ಕಾತನೇ ಒಡೆಯ' ಎಂದು ಹೇಳುವಷ್ಟು ದೂರ ಹೋಗಿದ್ದಾನೆ.

ಗಾಯನವನ್ನು ಕುರಿತು:

"ಅರ್ಥವಿಲ್ಲದ ಹಾಡು ವ್ಯರ್ಥಸಾಸರವಿದ್ದು
ಅರ್ತಿಯಿಂ ಕತ್ತೆಯುರಚಿಡಡಲ್ಲಿ
ಅರ್ಥವುಂಟೆಂದ ಸರ್ವಜ್ಞ ॥"

ತನ್ನ ಅಭಿರುಚಿಯನ್ನು 'ನಾಟಿರಾಗವು ಲೇಸು, ತೋಟಮಲ್ಲಿಗೆ ಲೇಸು' ಎಂದು ಸೂಚಿಸಿದ್ದಾನೆ. ಕಲಾಸಾರ್ಥಕ್ಯಕ್ಕೆ ಅತ್ಯವಶ್ಯಕವಾದ ಸಾಧನೆಯನ್ನು ಕುರಿತು 'ಮೊರೆವಂಗೆ ರಾಗ' ಬರುವುದೆಂದು ಹೇಳಿದ್ದಾನೆ. ಸ್ವಾನುಭವಿಗಳ ಕೆಳೆತನಕ್ಕೆ ಗಾನವಿದ್ಯೆಯು ಲೇಸನ್ನು ಸರಿಗಟ್ಟಿದ್ದಾನೆ. ಈ ಸವ್ಯಸಾಚಿ ಚಿತ್ರ ಕಲೆಯನ್ನೂ ಮರೆತಿಲ್ಲ.

"ಚಿತ್ರವನು ನವಿಲೊಳು ವಿಚಿತ್ರವನು ಗಗನದೊಳು
ಪತ್ರಪುಷ್ಪಗಳ ವಿವಿಧ ವರ್ಣಗಳಿಂದ
ಚಿತ್ರಿಸಿದವರಾರು ಸರ್ವಜ್ಞ ॥"

"ಭಿತ್ತಿಯಾ ಚಿತ್ರದಲಿ ತತ್ವತಾ ನೆರೆದಿಹುದು
ಚಿತ್ರತ್ವ ತನ್ನ ನಿಜದೊಳಗೆ; ತ್ರೈಜಗದ
ತತ್ವ ತಾನೆಂದ; ಸರ್ವಜ್ಞ ॥"

ಭಾರತೀಯ ಚಿತ್ರಕಲಾ ಸಂಪ್ರದಾಯದಲ್ಲಿಯೇ ಮೇಲ್ಮೈಯೆನಿಸಿಕೊಂಡಿರುವ ಅಜಂತಾ, ಬಾದಾಮಿಯ ಭಿತ್ತಿಚಿತ್ರ (Fresco Paintings)ಗಳನ್ನು ರಚಿಸಿದವರು ಸರ್ವಜ್ಞನ ಪೂರ್ವಜರಾದ ಕನ್ನಡ ಶಿಲ್ಪಿಗಳಲ್ಲವೇ? ಅವುಗಳ ಕಲಾಲಹರಿ ೧೬ನೆಯ ಶತಮಾನದಲ್ಲಿಯೂ ಹರಿಯುತ್ತಿದ್ದುದಕ್ಕೆ ಸರ್ವಜ್ಞನೇ ಸಾಕ್ಷಿ. 'ಬಣ್ಣಿಸಿ ಬರೆದ ಪಠದೊಳಗೆ ಇರುವಾತ ತನ್ನೊಳಗೆ ಇರನೆ' ಎಂದು ಹೇಳಿ ಕನ್ನಡ ಚಿತ್ರಕಾರರ ರೂಪನಿರ್ಮಾಣ ಕೌಶಲ್ಯವನ್ನು ಬಣ್ಣಿಸಿದ್ದಾನೆ.

ಸರ್ವಜ್ಞನ ರಸಿಕತೆಯ ಬತ್ತಳಿಕೆಯಲ್ಲಿರುವ ಮಹಾಸ್ತ್ರವೆಂದರೆ ಅವನ ನಗೆಗಾರಿಕೆ. ನಗೆಯ ಮೂಲಕ ಮನವನ್ನರಳಿಸಿ ತನಗೆ ಬೇಕಾದ ಹಿತ ವಚನವನ್ನು ಚಿತ್ತದ ಮೇಲೊತ್ತುವುದರಲ್ಲಿ ಸರ್ವಜ್ಞ ನಿಪುಣ. ಅವನಿಗೆ **'ನಕ್ಕು ನಗಿಸುವಾ ನಗೆ ಲೇಸು.'**

"ಕತ್ತೆಯರಚಿದಡಲ್ಲಿ ತೊತ್ತು ಹಾಡಿದಡಲ್ಲಿ
ಮತ್ತೆ ಕುಲರಸಿಕನಿರುವಲ್ಲಿ ಕಡುನಗೆಯ
ಹುತ್ತ ಕಾಣಯ್ಯ ಸರ್ವಜ್ಞ ‖"

ಎಂದು ಹೇಳಿದ್ದರೂ ಹಾಸ್ಯ, ವಿಡಂಬನ, ಅಣಕ, ಕಟಕಿವಾತು ಎಲ್ಲದ ರಲ್ಲಿಯೂ ಸರ್ವಜ್ಞನದು ಪಳಗಿದ ಕೈ. ಸಂವಿಧಾನ, ಸನ್ನಿವೇಶ, ಸಂಬಂಧ ಪಟ್ಟ ವ್ಯಕ್ತಿಗಳನ್ನು ನೋಡಿ ತನ್ನ ನಗೆಯಂಬನ್ನೆಸೆಯುತ್ತಾನೆ. ಸ್ವಪ್ರಯೋ ಜನವನ್ನೇ ಎದುರುನೋಡುವ ಭಕ್ತಿಯನ್ನು ಕುರಿತು :

"ಗಾಣಿಗನು ಈಶ್ವರನ ಕಾಣನೆಂಬುದು ಸಹಜ
ಏಣಾಂಕಧರನು ಧರೆಗಿಳಿಯಲವನಿಂದ
ಗಾಣವಾಡಿಸುವ ಸರ್ವಜ್ಞ ‖"

ತಾನು ಮಹಾಭಕ್ತನೆಂದು ತೋರಿಸಿಕೊಳ್ಳಲಾಶಿಸುವ ಆಡಂಬರ ಪ್ರಿಯನನ್ನು ಕುರಿತು :

"ಕತ್ತೆ ಬೂದಿಲಿ ಹೊರಳಿ ಮತ್ತೆ ಯತಿಯಪ್ಪುದೇ
ತತ್ವವರಿಯದೆಲೆ ಭಸಿತವಿಟ್ಟವ ಶುದ್ಧ
ಕತ್ತೆಯಂತೆ ಸರ್ವಜ್ಞ ‖"

"ಆಲದ ಬಿಳಿಲಂತೆ ಜೋಲು ಜಡೆಗಳ ಬಿಟ್ಟು
ನಾಲಿಗೆ ಕೈಪ ಶುದ್ಧಿಲ್ಲ; ಮರಿನಾಯ
ಬಾಲದಂತಕ್ಕು ಸರ್ವಜ್ಞ ‖"

ಅನನುಕೂಲ ದಾಂಪತ್ಯವನ್ನು ಕುರಿತು :

"ಅಂದವಿಲ್ಲದ ಹೆಣ್ಣು ಚಂದವಿಲ್ಲದ ಮದುವೆ
ತಂದುದನು ತಿಂದು ಮಲಗುವ ಸತಿಯಿಂದ
ಬೆಂದಿಹುದೆ ಲೇಸು ಸರ್ವಜ್ಞ ‖"

"ಜುಚ್ಚುವಾ ಕಿಡಿಗಿಂತ ಕಚ್ಚುವಾ ಶುನಿಲೇಸು
ನಿಚ್ಚಲು ಉಲಿವ ಸತಿಯಿಂದ ಉರಿದಿರ್ದ
ಕಿಚ್ಚುಲೇಸೆಂದು ಸರ್ವಜ್ಞ ॥"

"ನಾರಿ ಪರರುಪಕಾರಿ ನಾರಿ ಸ್ವರ್ಗಕೆ ದಾರಿ
ನಾರಿ ಸಕಲರಿಗೆ ಹಿತಕಾರಿ, ಮುನಿದರೆ
ನಾರಿಯೇ ಮಾರಿ ! ಸರ್ವಜ್ಞ ॥"

ಸಮಾಜ, ಜನಜೀವನವನ್ನು ಕುರಿತು ಸರ್ವಜ್ಞಮೂರ್ತಿ ಹಾಡಿರುವ ಬಿಚ್ಚು ವಚನಗಳ ಉಪಮೆಗಳನ್ನು ಹಿನ್ನೋಪಮೆಗಳೆಂದು ಪಂಡಿತರು ಅಲ್ಲಗಳೆಯುತ್ತಾರೆ. ಜನತೆಯ ಗುರುವಾಗಿ ಬಂದ ಈ ಋಷಿ–ಕವಿ ಸತ್ಯ ಪ್ರಸಾರಕ್ಕೆ ಆತ್ಮವಿಸ್ಮೃತಿಯ ನಿರಸನಕ್ಕೆ 'ನಯ, ನಾಜೋಕುಗಳ ಸೋಗುಬೇಕೆಂದು' ಭಾವಿಸಲಿಲ್ಲ. ಜನಸಾಮಾನ್ಯರ ಮಾತುಗಳನ್ನೇ ಬಳಸಿಕೊಂಡು, ಅವರಿಗೆ ಚಿರಪರಿಚಿತವಾದ ಗಾದೆ, ಉಪಮೆ, ಸಾಮ್ಯಗಳ ಮೂಲಕ ತನ್ನ ಉಜ್ಜ್ವಲ ಸಂದೇಶವನ್ನು ಸಾರಿದ್ದಾನೆ. ಅವನ ಗುರಿ ಅಸಂಸ್ಕೃತರನ್ನು ಸುಸಂಸ್ಕೃತರನ್ನಾಗಿ ಮಾಡುವುದಾಗಿತ್ತಲ್ಲದೆ, ಸುಸಂಸ್ಕೃತರ ಚಾಪಲ್ಯವನ್ನು ಪೂರ್ಣಗೊಳಿಸುವುದಾಗಿರಲಿಲ್ಲ.

ಕನ್ನಡಿಗರ ಜೀವನವನ್ನು ಹಸನು ಮಾಡಬೇಕು. ಅವರಲ್ಲಿ ಪರಂಪರಾಗತವಾಗಿ ನೆಲಸಿರುವ ಮೂಢನಂಬಿಕೆಗಳನ್ನು ಹೋಗಲಾಡಿಸಿ ಅವರ ಮನಸ್ಸನ್ನು ಶುಚಿಮಾಡಿ ಪರಮಾತ್ಮನೆಡೆಗೆ ತಿರುಗಿಸಬೇಕೆಂಬ ಆಸೆ ಸರ್ವಜ್ಞನದು. ಧರ್ಮದ ಬಗ್ಗೆ ಅವನು ತಳೆದಿದ್ದ ಉದಾರದೃಷ್ಟಿ, ಹೊಲೆಯರೇ ಮೊದಲಾದ ಸಮಾಜಬಾಹಿರರ ಬಗ್ಗೆ ತಳೆದಿದ್ದ ಅಪಾರ ಕರುಣೆ, ಮಾನವಪ್ರೇಮ, ಆತ್ಮಜ್ಞಾನ, ಅನುಭಾವಗಳಿಗೆ ಕೊಟ್ಟಿದ್ದ ಪ್ರಾಶಸ್ತ್ಯ ಸರ್ವಜ್ಞನನ್ನು ಸ್ಥಿತಪ್ರಜ್ಞರಾದ ಮಹಾನುಭಾವರ ಪಂಕ್ತಿಗೆ ಸೇರಿಸುತ್ತವೆ.

"ತನ್ನ ತಾನರಿದಂಗೆ ಭಿನ್ನಭಾವನೆಯಿಲ್ಲ
ತನ್ನವರಿಲ್ಲ ತ್ರೈಭುವನ
ತನ್ನೊಳಗಿಹುದು ಸರ್ವಜ್ಞ ॥"

"ಆದೇವ ಈದೇವ ಮೂದೇವ ನೆನಬೇಡ
ಆದೇವರ ದೇವ ಭುವನ ಪ್ರಾಣಿಗಳಿ
ಗಾದವನೆ ದೇವ ಸರ್ವಜ್ಞ ॥"

"ಚಿತ್ತವಿಲ್ಲದೆ ಗುಡಿಯ ಸುತ್ತಿದಡೆ ಫಲವೇನು?
ಎತ್ತು ಗಾಣವನು ಹೊತ್ತು ತಾ ನಿತ್ಯದಿ
ಸುತ್ತಿ ಬಂದಂತೆ ಸರ್ವಜ್ಞ ‖"

"ಎಲ್ಲವೂ ಶಿವನೆಂದರಿನ್ನೆಲ್ಲಿ ಭಯುವಯ್ಯ?
ಎಲ್ಲರೂ ಶಿವನ ನೆನೆದರೆ ಕೈಲಾಸ
ವಿಲ್ಲಿಯೇ ಇಹುದು! ಸರ್ವಜ್ಞ ‖"

ಸರ್ವಜ್ಞನಂಥವರು ಕನ್ನಡ ಪ್ರಪಂಚದಲ್ಲಿ ವಿರಳ-ಏತಕ್ಕೆ ಲೋಕದಲ್ಲಿಯೇ ವಿರಳ. ಗಾವಿಲಭುವನದ ಭಾಗ್ಯದಿಂದ ಇಂತಹ ಸೀಮಾಪುರುಷರು ಹುಟ್ಟುತ್ತಾರೆ. ಷಡಕ್ಷರದೇವ ಹೇಳುವಂತೆ

"ಕಲಿಸಿದೊಡೇಂ ಬರ್ಕುಮೆ ಸ
ಲ್ಲಲಿತ ಕವಿತ್ವಂ ನಿಸರ್ಗ ಸುಭಗಂ ರಮಣೀ
ವಿಲಸಿತ ರತಿರಸ ರಸಿಕತೆ
ತಲೆದೋರ್ಪುದು ತಾನೆ ಕಲಿಸಲೇಂ ಬಂದಪುದೇ ‖"

ಸರ್ವಜ್ಞನ ಮಾತು ಚದುರರ ಮೆಚ್ಚು, ಭಾವುಕರ ಕೈಪಿಡಿ, ಜಾಣರ ಬಯಕೆ, ಸತ್ಕಲಾವಿದರ ವಿಲಾಸ, ಅಕ್ಕರಿಗಳ ಆಭರಣ, ಬುಧರಿಚ್ಛೆಯಚ್ಚು, ವೀರರ ಕಣಿ, ಕೂರ್ತುಕೂರಿಸಿದ ನಲ್ಲಳ ಮೆಯ್ಸಿರಿ ಎಂದು ಮಲ್ಲಿಕಾರ್ಜುನನ ಮಾತಿನಲ್ಲಿ ಹೃತ್ಪೂರ್ವಕವಾಗಿ ಹೇಳಬಹುದು.

ಕನ್ನಡ ಜನತೆಯ ಸಾಹಿತ್ಯ, ಜೀವನ ದರ್ಶನ, ವಿಚಾರಧೋರಣೆಗಳಿಗೆ ಸರ್ವಜ್ಞನ ಸೇವೆ ಅಪಾರ, ಅನುಪಮ, ಅನಂತ. ಅವನ ಕಾವ್ಯ ಅಚ್ಚಳಿಯದ ಅರವಿಂದ.

ಸರ್ವಜ್ಞನ ಮಾತೆ ಮಾತು, ರೀತಿ ರೀತಿ, ಬಗೆ ಬಗೆ, ಜಾಣ್ಮೆಯೇ ಜಾಣ್ಮೆ.

ಅನುಬಂಧ

ಸೂಫಿ ಮತ

ಯಾವ ಜೀವನಕ್ಕೆ ಪ್ರೇಮದ ಸ್ಫೂರ್ತಿಯೂ ಜ್ಞಾನದ ಮುಂದಾಳುತನವೂ ಇರುವುದೋ ಅದೇ ಉತ್ತಮ ಜೀವನವೆಂದು ಆಧುನಿಕ ದಾರ್ಶನಿಕ ಜಗತ್ತಿನಲ್ಲಿ ತಮ್ಮ ತಿಳಿವಿನ ಹೆಚ್ಚಳದಿಂದ ಶ್ರೇಷ್ಠಸ್ಥಾನವನ್ನು ದೊರಕಿಸಿಕೊಂಡಿರುವ ಬರ್ಟ್‌ರಾಂಡ್ ರಸ್ಸಲ್ ಅವರ ಮತ.* ಸ್ವಾಮಿ ವಿವೇಕಾನಂದರೂ ರಾಮತೀರ್ಥರೂ ಮತ್ತು ಇತರ ಕೆಲವು ಮಹನೀಯರೂ ಬೋಧಿಸಿರುವ ಮತ್ತು ಬೋಧಿಸುತ್ತಿರುವ ಧರ್ಮವಾದರೂ ಇದೇ ಆಗಿದೆ. ಎಲ್ಲ ಧರ್ಮಗಳೂ ಸತ್ಯ, ಪ್ರೇಮ, ಸಹನೆ, ದಯೆಗಳೆಂಬ ಅಸ್ತಿಭಾರದ ಮೇಲೆ ಕಟ್ಟಲ್ಪಟ್ಟಿವೆಯೆಂದು ನಾವೆಲ್ಲರೂ ಒಪ್ಪುವೆವಾದರೆ ಇಂದು ರಾಕ್ಷಸ ನೃತ್ಯವನ್ನಾಡುತ್ತಿರುವ ಜಾತಿ ಮತಗಳ ಒಣ ದಂಧಲೆಗೆ ಅವಕಾಶವೇ ಇರುತ್ತಿರಲಿಲ್ಲ. ಪರಿಸ್ಥಿತಿಯನ್ನನುಸರಿಸಿ ಬಂದ ಮತ ತತ್ತ್ವಗಳಲ್ಲಿ ಕೆಲಕೆಲವು ಒಂದಕ್ಕೊಂದು ವಿರುದ್ಧವಾಗಿರುವಂತೆ ಕಾಣಬಹುದು; ಕಾಣಬರುತ್ತವೆ. ಆದರೆ ಗೌಣವಾದ ವಿಷಯಗಳಿಗೆ ಪ್ರಾಧಾನ್ಯವನ್ನು ಕೊಡುವವರಿಗೆ ಮಾತ್ರ ಅವು ಮಹತ್ತರವಾಗಿ ಕಂಡುಬರುತ್ತವೆ. ತನ್ನನ್ನೂ ತನ್ನ ಬೋಧೆಗಳನ್ನೂ, ಅನುಯಾಯಿಗಳನ್ನೂ ನಿರ್ಮೂಲಮಾಡಲು ಕಂಕಣಬದ್ಧರಾಗಿದ್ದ ಅರ್ಚಕರ ವಿಚಾರದಲ್ಲಿ ಏಸುವು ತೋರಿದ ದಯೆಗೂ, ಅರಾಬಿನ ವಿಗ್ರಹಾರಾಧಕರು ಕೊಟ್ಟ ಅಸಹನೀಯ ಯಾತನೆಗಳನ್ನೆಲ್ಲಾ ಸಹಿಸಿಕೊಂಡು ಅವರನ್ನು ಪ್ರೇಮದ ಪ್ರಭಾವದಿಂದ ತನ್ನವರನ್ನಾಗಿಸಿಕೊಂಡ ಹಜರತ್ ಮಹಮ್ಮದರ ದಯಾರ್ದ್ರತೆಗೂ, ಯಾವ ಭೇದವು ಕಂಡುಬರುತ್ತದೆ? ಯೇಸುವೂ ಮಹಮ್ಮದನೂ ಜನತೆಯನ್ನು ಜಾಗ್ರತಗೊಳಿಸಿದ ಬಗೆಗಳು ಬೇರೆ ಬೇರೆಯಾಗಿರಬಹುದು. ಆದರದು ಗೌಣವಾದ ವಿಚಾರ. ಸೂಫಿ ಮತವೆನ್ನುವುದೂ ಹಾಗೆಯೇ ಜನರನ್ನು ಜ್ಞಾನಪ್ರೇಮಗಳ ಕಡೆಗೆ ತಿರುಗಿ

* "The good life is one inspired by Love and guided by Knowledge." —*Bertrand Russel*.

ಸುವುದಕ್ಕೆ ಇಸ್ಲಾಂ ಧರ್ಮದಿಂದ ಬೆಳೆದು ಬಂದ ಬೆಳಕು. ಅನುಯಾಯಿಗಳ ದುಷ್ಟತನದ ಮಾನದಂಡದಿಂದ ಮೂಲಧರ್ಮವನ್ನು ಅಳೆಯುತ್ತಿರುವ ನಮಗೆ ಇಸ್ಲಾಂ ಎಂದರೆ ಒಂದು ಕೈಯಲ್ಲಿ ಕುರಾನ್, ಮತ್ತೊಂದು ಕೈಯಲ್ಲಿ ಕೃಪಾಣವನ್ನು ಹಿಡಿದು ಬಂದವರ ಮತವೆಂಬ ಅಭಿಪ್ರಾಯ ಬಂದುಬಿಟ್ಟಿದೆ. ಇದಕ್ಕೆ ತಕ್ಕಮಟ್ಟಿನ ಐತಿಹಾಸಿಕ ಆಧಾರವೂ ಇದೆ. ಮಹಮ್ಮದ್ ಘಜನಿಯ ವಿಗ್ರಹವಿಚ್ಛೇದನ ಕೃತ್ಯಗಳು, ತೈಮೂರ್ಲಂಗನ ಕ್ರೂರ ಕೃತ್ಯಗಳು, ಅವರಂಗಜೇಬನ ಕಟುಧರ್ಮದ ನೀಚನಡತೆಗಳು ಭಾರತೀಯ ಇತಿಹಾಸವನ್ನು ಕಪ್ಪು ಮಾಡಿರುವ ಕೆಲ ಅಂಶಗಳು. ಆದರೆ ಈ ದೃಷ್ಟಾಂತಗಳಿಂದ ಇಸ್ಲಾಂ ಸಂಸ್ಕೃತಿಯನ್ನು ನಾವು ಅಳೆದರೆ ನಮ್ಮ ಹೇಡಿತನ, ಆಲಸ್ಯ, ದೇಶದ್ರೋಹದ ನಡತೆಗಳಿಂದ ಹಿಂದೂ ಸಂಸ್ಕೃತಿಯನ್ನು ಮಹಮ್ಮದೀಯರು ಅಳೆಯಬಾರದೇತಕ್ಕೆ ? ವೇದೋಪನಿಷತ್ತುಗಳು ಯಾವ ಅನಂತ ತತ್ತ್ವಗಳ ಬೋಧಿಸುತ್ತವೆಯೋ ಕುರಾನೂ ಅಂತಹವೇ ಆದ ತತ್ತ್ವಗಳನ್ನು ಬೋಧಿಸುತ್ತಿದೆ. ವೇದೋಪನಿಷತ್ತುಗಳಲ್ಲಿಂತಹ ಋಷಿಗಳೂ, ಮಹಾನುಭಾವರೂ ನಮಗೆ ದೊರಕುತ್ತಾರೆಯೋ ಕುರಾನದಲ್ಲಿಯೂ ಅಂತಹ ಮಹನೀಯರೇ ಸಿಕ್ಕುತ್ತಾರೆ. ಪರಧರ್ಮಗಳ ಪ್ರಧಾನ ವಿಚಾರಗಳ, ಪೂಜ್ಯ ಆಚಾರ್ಯರ, ಪರಿಚಯವಿಲ್ಲದೆ ಅವುಗಳನ್ನು ತೆಗಳುವುದೆಂದರೆ, ಜ್ಞಾನ ಮಾರ್ಗವೇ ಮಾರ್ಗವೆಂದು ಸಾರುತ್ತಿರುವ ನಮ್ಮ ಯುಗಕ್ಕೆ ಒಪ್ಪುವ ನಡತೆಯಲ್ಲ, ಇಸ್ಲಾಮಿನ ತಿರುಳಂತಿರುವ ಸೂಫಿ ಮತ ಎಂತಹ ಗಹನ ತತ್ತ್ವಗಳನ್ನು ಬೋಧಿಸುತ್ತದೆಂಬುದರ ಸೂಕ್ಷ್ಮ ಪರಿಚಯವನ್ನು ಮಾಡಿಕೊಟ್ಟ ಅಕ್ಬರ್, ಕಬೀರ್, ದಾರಾ, ರಾಮಕೃಷ್ಣ ಪರಹಂಸಾದಿ ವಿಭೂತಿಗಳು ಸಾರಿದ ಪ್ರೇಮೈಕ್ಯದ ಕಡೆಗೆ ಬೆರಳು ತೋರುವುದೇ ನಮ್ಮ ಉದ್ದೇಶ.

ಸೂಫಿಮತ ವಿಚಾರವಾಗಿ ಹೆಚ್ಚು ಐತಿಹಾಸಿಕಾಂಶಗಳು ಹೊರಬಿದ್ದಿಲ್ಲ. ಆದರೀಗ ತಿಳಿದಿರುವ ಮಟ್ಟಿಗೆ ಪ್ರವಾದಿ ಮಹಮ್ಮದರ ಕಾಲದಿಂದಲೂ ಇದು ಆಚರಣೆಯಲ್ಲಿತ್ತೆಂದು ನಂಬಬಹುದು. ಕ್ರಿ. ಶ. ೫೭೦ನೆಯ ಇಸವಿಯಲ್ಲಿ ಮಹಮ್ಮದರು ಅರೇಬಿಯಾ ದೇಶದಲ್ಲಿ ಜನಿಸುವುದಕ್ಕೆ ಮುಂಚೆ ಆ ದೇಶದ ಪರಿಸ್ಥಿತಿಯು ಬಹು ಹೀನವಾಗಿತ್ತು. ಜನರಿಗೆ ತಾವು

ಮನುಷ್ಯರೆಂಬ ಭಾವನೆಯೇ ಇರಲಿಲ್ಲವೆಂದರೂ ಅತಿಶಯೋಕ್ತಿಯಾಗಲಾರದು. ವ್ಯಭಿಚಾರ, ಮಧ್ಯಪಾನ, ವಿಗ್ರಹಾರಾಧನೆ, ಪರಸ್ಪರ ವೈಷಮ್ಯಗಳಿಂದ ಜನಾಂಗದ ಸತ್ತ್ವ ಕಂದಿ ಕುಂದಿತ್ತು. ಹಜರತ್ ಮಹಮ್ಮದರು ಅವರ ಮಧ್ಯೇ ಅವತರಿಸಿ, ೬೨ ವರ್ಷಗಳು ಏಕರೀತಿಯಾಗಿ ಶ್ರಮಿಸಿ, ಅರೇಬಿಯಾದ ಒರಟು ಜನರಿಗೆ ಒಂದು ಧರ್ಮವನ್ನಿತ್ತು ಶಾಂತಿ ಪರಂಧಾಮವನ್ನೈದಿದರು. ಆ ಕಾಲದ ಪರಿಸ್ಥಿತಿಗನುಸಾರಗಾಗಿ ಕೆಲವು ಕಠಿನ ನಿಯಮಗಳನ್ನು ವಿಧಿಸಲೂ ಬೇಕಾಯಿತು. ಅವುಗಳಲ್ಲಿ ವಿಷಯಾಸಕ್ತಿಯಿಂದ ಲಲಿತ ಕಲೆಗಳಲ್ಲಿ ಅನುರಕ್ತರಾಗಕೂಡದೆಂಬುದೂ ಒಂದಾಗಿದೆ. ಸೂಫಿಗಳು ಸೌಂದರ್ಯೋಪಾಸಕರು ; ಅವರು ಸನ್ಯಾಸಿಗಳಂತೆ ಕಠಿನ ವ್ರತಪರಿಪಾಲನೆಯನ್ನೇ ಧರ್ಮದ ಮೂಲಾಧಾರವನ್ನಾಗಿ ಗ್ರಹಿಸುವುದಿಲ್ಲ.

ಹಜರತ್ ಮಹಮ್ಮದರಿಗೆ ಸುಮಾರು ೭೦ ಮಂದಿ ಚುನಾಯಿತ ಶಿಷ್ಯರಿದ್ದರು. ತಾವು ಪ್ರಾರ್ಥನೆ ಮಾಡುತ್ತಿದ್ದ ಮಸೀದಿಯಲ್ಲಿ ಒಂದು ಪ್ರತ್ಯೇಕ ಸ್ಥಳವನ್ನೇರ್ಪಡಿಸಿಕೊಂಡು ಅಲ್ಲಿ ತಮ್ಮ ಪ್ರಧಾನ ಶಿಷ್ಯರಾದ ಅಬೂಬೇಕರ್, ಉಮರ್, ಉಸ್ಮಾನ್, ಆಲಿ ಮತ್ತು ಸುಲೇಮಾನ್ ಮೊದಲಾದವರೊಂದಿಗೆ ವಾದವಿವಾದಗಳನ್ನು ಮಾಡುತ್ತಿದ್ದರಂತೆ. ಇವರಲ್ಲಿ ಯಾರಿಗಾದರೂ ತಮ್ಮ ಪ್ರೀತಿಯನ್ನು ತೋರಬೇಕೆಂದು ಇಚ್ಛೆಯಾದರೆ ತಾವು ಹೊದೆದಿದ್ದ ವಸ್ತ್ರವನ್ನು ಅವರಿಗೆ ಕೊಡುತ್ತಿದ್ದರಂತೆ. ಹೊದೆದಿದ್ದ ವಸ್ತ್ರಕ್ಕೆ 'ಸೂಫಾ' ಎಂದೆನ್ನುತ್ತಾರೆ. ಹೀಗೆ ಪ್ರವಾದಿಯ ದಾನದ ಅಭ್ಯಾಸದಿಂದ ಸೂಫಿ ಮತ ಹುಟ್ಟಿತೆನ್ನುತ್ತಾರೆ. ಈ ಪಂಗಡಕ್ಕೆ ಸೇರಿದ ಅರೇಬಿಯಾದ ವಿರಕ್ತರು ಉಣ್ಣೆಯ ಬಟ್ಟೆಗಳನ್ನು ಹೊದೆಯುತ್ತಿದ್ದುದರಿಂದ ಸೂಫ್ ಎನ್ನುವ ಪದ ವಾಡಿಕೆಗೆ ಬಂತೆಂದೂ ಒಂದು ಮತವಿದೆ. ಅರಾಬಿಕ್ ಭಾಷೆಯಲ್ಲಿ ಸೂಫ್ ಎಂದರೆ ಪಾವಿತ್ರ್ಯವೆನ್ನುವ ಅರ್ಥವಿದೆ. ಆದ್ದರಿಂದ ಆತ್ಮವನ್ನು ಪಾವಿತ್ರ್ಯದ ಕಡೆಗೆ ಹಾಯಿಸುವವರನ್ನು ಸೂಫಿಗಳೆಂದು ತಿಳಿಯಬಹುದು.

ಸೂಫಿಗಳ ಜೀವನದ ಗುರಿ ಪರಮಾತ್ಮನೊಂದಿಗೆ ಐಕ್ಯಹೊಂದುವುದು. ಅದಕ್ಕೆ ಅವರು ತಮ್ಮನ್ನು ಸತ್ಯದ ಅನುಯಾಯಿಗಳೆಂದು ಕರೆದುಕೊಳ್ಳುವುದು. ಸತ್ಯದ ಸ್ವರೂಪವನ್ನು ಗ್ರಹಿಸಲು ಗಾಯನ ಉತ್ತಮ ಮಾರ್ಗವೆಂದು ಅವರು ನಂಬುತ್ತಾರೆ.

ಸೂಫಿಯ ಧರ್ಮ ಭಕ್ತನ ಧರ್ಮ. ದೇವರನ್ನು ಅವನು ಇನಿಯ ಳೆಂದು ಭಾವಿಸಿಕೊಂಡು (ಮೆಹರ್), ತಾನು ಇನಿಯನೆಂದು (ಅಷಿರ್) ಭಾವಿಸಿ ಕೊಳ್ಳುತ್ತಾನೆ. ಜಗತ್ತಿನಲ್ಲಿ ಅವನಿಗೆ ತೋರುವ ಪ್ರತಿಯೊಂದು ವಿಚಾರವೂ ಪರಮಾತ್ಮನ ಸಂಕೇತ. ಅಂತರಂಗದ ಅಮೃತ ಭಾವನೆಗಳು ಬಹು ಸೂಕ್ಷ್ಮ ರೀತಿಯಲ್ಲಿ ವಿಕಾಸಹೊಂದಿರುವುದರಿಂದ ಪ್ರೇಮದ ಪವಿತ್ರರೀತಿಯಲ್ಲಿ ದೇವದೇವನ ಪೂರ್ಣ ವೈಭವವನ್ನು ಕಾಣಲು ಸೂಫಿ ಪ್ರಯತ್ನಪಡುತ್ತಾನೆ. ಹಿಂದೂ ಶ್ರೀಕೃಷ್ಣ ಪ್ರೇಮಮೂರ್ತಿಯೆಂದೂ ಗೋಪಿಯರು ಭಗವಂತನ ಪ್ರೇಮದ ಸಂಪೂರ್ಣ ಸ್ವರೂಪವನ್ನು ಕಾಣಲು ಬಂದಿದ್ದ ಋಷಿಗಳೆಂದೂ ಭಾವಿಸುವಂತೆ ಸೂಫಿ ದೇವರನ್ನು ಪ್ರೇಮದ ಪಲ್ಲಂಕದಲ್ಲಿ ಪವಡಿಸಿ ಇನಿಯ ಳೆಂದು ಭಾವಿಸುತ್ತಾನೆ. ಜಲಾಲುದ್ದೀನ್ ರೂಮಿಯೆಂಬ ಕವಿ ಹೀಗೆ ಹೇಳಿದ್ದಾನೆ:—

“ವಿಜಯೋಸ್ತು ಪ್ರೇಮವೇ,
ನಮ್ಮೆಲ್ಲ ವ್ಯಾಧಿಗಳ ವೈದ್ಯನು ನೀನು
ನಮ್ಮೆಲ್ಲ ಹೆಮ್ಮೆ, ಅಹಂಕಾರಗಳ ಅರಿಯು ನೀನು”

“ಗುಲಾಬಿಯೂ, ಗುಲಾಬಿಯ ತೋಟವೂ ಹೋದ ಮೇಲೆ
ಬುಲ್‌ಬುಲ್‌ನ ಗಾಯನ ಕೇಳಿಬರುವುದೇನು ?
ಗುಲಾಬಿಯು ಸೊರಗಿ ವನವು ಗತಿಸಿದಾಗ
ಗುಲಾಬಿಯ ಸೌಂದರ್ಯವನ್ನೆಲ್ಲಿ ಅರಸುವೆ ?
ಅನಂತನೇ ಪ್ರಿಯಳು, ಪ್ರಿಯನೇ ತೆರೆಯು.
ಪ್ರಿಯಳಿಗೆ ಸಾವಿಲ್ಲ, ಪ್ರಿಯನು ಸಾವು ಬಲ್ಲವನು.
ಪ್ರೇಮಕ್ಕೆ ಆಕರ್ಷಣಶಕ್ತಿ ಅಳಿದಾಗ
ಹಾರಲಾಗದ ಹಕ್ಕಿಯಂತದು ಸುಮ್ಮನಿರುವುದು”

* * * *

“ಕನ್ನಡಿಯಲ್ಲಿ ಮುಖವೇಕೆ ಕಾಣದೆಂದು ಕೇಳುವೆಯಾ ?
ಯಾಕೆಂದರೆ ಮುಸುಕಿದ ಕಪ್ಪು ಇನ್ನೂ ನಿವೃತ್ತವಾಗಿಲ್ಲ !”

(ಇಲ್ಲಿ ಮುಖ ಪ್ರೇಮಕ್ಕೂ ಕಪ್ಪು ಪಾಪಗಳಿಗೂ ಸಂಕೇತ ಪದಗಳು.) ಈ ಅನುಭವವನ್ನು ನಿನ್ನೆ ಮೊನ್ನೆಯ ಭಾರತವರ್ಷದಲ್ಲಿ ಕೂಡಾ ನಾವು ಕಂಡಿದ್ದೇವೆ. ಶ್ರೀ ರಾಮಕೃಷ್ಣ ಪರಮಹಂಸರು ತಾವು ರಾಧೆಯೆಂದೂ

ದೇವದೇವನು ಶ್ರೀಕೃಷ್ಣನೆಂದೂ ಭಾವಿಸಿ ಸ್ತ್ರೀವೇಷಭೂಷಣ ಸಜ್ಜಿತರಾಗಿ ಹಾಗೆಯೇ ಆರಾಧನಾಮಗ್ನರಾಗುತ್ತಿರಲಿಲ್ಲವೇ?

ಸೂಫಿಕವಿಗಳ ತಿರುಳನ್ನರಿಯಬೇಕಾದರೆ ಅವರ ಕವನಗಳ ಹಿಂದಿರುವ ಸಾಂಕೇತಿಕ ಅರ್ಥಗಳನ್ನು ಮೊದಲರಿತುಕೊಳ್ಳಬೇಕು. ಹಿಂದೂ ಶಿಲ್ಪ ಶಾಸ್ತ್ರದ ಸಾಂಕೇತಿಕ ತತ್ತ್ವಗಳನ್ನು ತಿಳಿದುಕೊಳ್ಳದೆ ಅರ್ಧನಾರೀಶ್ವರ ಮೂರ್ತಿಯ, ಅಥವಾ ನರಸಿಂಹಮೂರ್ತಿಯ, ಅಥವಾ ತ್ರಿಮೂರ್ತಿ ವಿಗ್ರಹದ ಅಸಹಜತೆಯನ್ನು ಕಂಡು ಹೇಗೆ ಅಪಹಾಸ್ಯ ಮಾಡಬಹುದೋ ಹಾಗೆ ಸೂಫಿ ಕವಿಗಳು ಉಪಯೋಗಿಸಿರುವ 'ಮದ್ಯ' 'ಮದ್ಯಗೃಹ' ಮುಂತಾದ ಪದಗಳಿಂದ ವಿಪರೀತಾರ್ಥಮಾಡಿ ನಗಬಹುದು. ಸೂಫಿ ಮದ್ಯವನ್ನು ಕೋರುತ್ತಾನೆ, ಆದರೆ ಕುಡುಕನಲ್ಲ. ಸನ್ಮಾರ್ಗವನ್ನು ತೋರುವ, ಮನಸ್ಸನ್ನು ಶುದ್ಧಗೊಳಿಸಿ ವಿಚಲತೆಯನ್ನು ನಿವಾರಿಸುವ 'ಸ್ವರ್ಗೀಯ ಪಾನ'ವನ್ನು ಅವನು ಕೋರುವುದು. 'ಇಂದಿನಿಂ ಹಿಂದಿನಳಲುಗಳ ಮುಂದಿನಳುಕುಗಳ ತೊಲಗಿಸುವ ಬಟ್ಟಲನು ತುಂಬಿ ನೀಡೆನಗೀಗ' ಎಂದು ಪ್ರಿಯೆಯನ್ನು ಕೇಳುತ್ತಾನೆ. ಈ ಮಧುಪಾನದ ಆಸಕ್ತಿ ಉಮ್ಮರನಲ್ಲಿ ಎಷ್ಟು ಮೂಡಿದೆ ಎಂದರೆ—

"ಹಾ ತುಂಬು ಬಟ್ಟಲನು ಕಾಲವದು ತಾಂ ನುಚ್ಚಿ
ಕೈಗೆ ದೊರೆಯದೆ ಸರಿವ ಪರಿಯ ವಿವರಿಸಲೇಂ?
ನಿನ್ನೆ ಸತ್ತಿಹುದು ನಾಳೆ ಹುಟ್ಟಿದೆಯಿಹುದು
ಇಂದು ಸೊಗವಿರಲವನು ನೆನೆದಳುವುದೇಕೆ?"

ಎಂದು ನಾಳೆಯನ್ನು ನಿನ್ನೆಗಳ ಜೊತೆಗೆ ಸೇರಿಸಿ ಇಂದಿನ ಕಥೆಯನ್ನು ಮಾತ್ರ ಲಕ್ಷಿಸುವಷ್ಟು!! ಧುಲ್. ಇ. ನನ್. ಎಂಬ ಐಗುಪ್ತ ಸೂಫಿ ಹೇಳಿರುವಂತೆ 'ಸೂಫಿ ಮದ್ಯಾಲಯಕ್ಕೆ ಹೋದರೆ ಅದು ದೇವಮಂದಿರವಾಗುತ್ತದೆ. ಮದ್ಯವಿಕ್ರಯಿ ದೇವಮಂದಿರಕ್ಕೆ ಹೋದರೂ ಅದು ಮದ್ಯಾಲಯವೇ ಆಗುತ್ತದೆ.' ಮನಸ್ಸಿನ ಸ್ಥಿಮಿತದ ಮುಂದೆ ಮದ್ಯ ಮಾಂಸಗಳೇನೂ ಮಾಡುವುದಿಲ್ಲವೆಂಬುದೇ ಮುಖ್ಯ ತಾತ್ಪರ್ಯ.

ಸೂಫಿ ಮತ ಕ್ರಿ. ಶ. ೭೩೮ರಲ್ಲಿ ಆರಂಭವಾಗಿರಬಹುದೆಂದು ಗಿಬ್ ಎಂಬ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ ವೇಳೆಗೆ ಬಸ್ರಾದಲ್ಲಿ ಕೆಲವು ವಿರಕ್ತರು ಕಠೋರವಾಗಿ ಕಂಡುಬಂದ ಇಸ್ಲಾಂನಲ್ಲಿ ಪ್ರೇಮ

ಮಾರ್ಗವೂ ಒಂದಿದೆಯೆಂದು ತೋರಿಸಲು ಆರಂಭಿಸಿರಬಹುದು. ಆದರೆ ಕ್ರಿ. ಶ. ೮೦೦ರಲ್ಲಿ ಅರೇಬಿಯಾದಲ್ಲಿ ಜನಿಸಿದ ರಾಬಿಯಾ ಎಂಬ ಕವಯಿತ್ರಿ 'ದೇವರು ನಿಮ್ಮ ಬಂಧುವು. ಅವನನ್ನು ಪ್ರೀತಿಸಿರಿ ಮತ್ತು ಪ್ರೀತಿಯ ಮೂಲಕ ಅವನನ್ನು ಒಲಿಸಿಕೊಳ್ಳಿರಿ' ಎಂದು ಸೂಫಿಮತಕ್ಕೆ ಒಂದು ರೂಪವನ್ನು ಕೊಟ್ಟಳು. ಆದರೆ ೧೧೦೦ರವರೆಗೆ ಯಾರೂ ಪಂಡಿತ ವರ್ಗದ ಮುಂದೆ ನಿಂತು, ಅವರೊಂದಿಗೆ ವಾದಿಸಿ ಸೂಫಿಮತಕ್ಕೆ ಅವರ ಒಪ್ಪಿಗೆಯನ್ನು ದೊರಕಿಸಿಕೊಳ್ಳಲೆತ್ನಿಸಿಲ್ಲ. ಅಲ್-ಘಸಲಿ ಎಂಬ ದಾರ್ಶನಿಕ ಈ ಕೆಲಸವನ್ನು ನಿರ್ವಹಿಸಿ ಪ್ರೇಮಧರ್ಮವಾದ ಸೂಫಿಧರ್ಮಕ್ಕೆ ಜ್ಞಾನಸ್ವರೂಪವನ್ನು ಕೊಟ್ಟನು.

ಅರೇಬಿಯಾ ದೇಶದಲ್ಲಿಯೇ ಹುಟ್ಟಿ ಇಸ್ಲಾಮಿನ ರೆಂಬೆಯಾಗಿಯೇ ಸೂಫಿಮತ ಬೆಳೆದರೂ ಅದು ಹೆಚ್ಚು ಪ್ರವರ್ಧಿಸಿದುದು ಪರ್ಶಿಯಾ ದೇಶದಲ್ಲಿ. ಕ್ರಿ. ಶ. ೬೫೧ರಲ್ಲಿ ಬಂದ ಅರೇಬಿಯರ ಧಾಳಿ ಪರ್ಶಿಯಾದ ಸಸೇನಿಯರ ವಂಶವನ್ನು ಮೂಲೋತ್ಪಾಟನಮಾಡಿ ಬಿಟ್ಟಿತು. ಅಲ್ಲಿಂದ ಇಸ್ಲಾಂ ಸಂಸ್ಕೃತಿ ಕ್ರಮಕ್ರಮೇಣ ಪರ್ಶಿಯಾ ದೇಶದಲ್ಲಿ ಬೇರೂರುತ್ತ ಬಂದಿತು. ಅರಾಬರಿಗಿಂತಲೂ ನಯವಾದ ನಡತೆ, ನಾಗರಿಕತೆ, ಮತ್ತು ಸಂಸ್ಕೃತಿಗಳನ್ನು ಪಡೆದಿದ್ದ ಪರ್ಶಿಯಾ ದೇಶೀಯರು ಸೂಫಿ ತತ್ತ್ವದ ಸರಳ, ಸೂಕ್ಷ್ಮ ಸೌಂದರ್ಯದೊಂದಿಗೆ ಬೆರೆಯುತ್ತ ಬಂದರು. ಕ್ರಿ. ಶ. ೬೦೦ಕ್ಕೆ ಪೂರ್ವದಲ್ಲಿದ್ದ ಫಿರ್ದೂಸಿಯೆಂಬೊಬ್ಬ ಕವಿಯನ್ನುಳಿದು ಪರ್ಶಿಯಾದ ಮಿಕ್ಕೆಲ್ಲ ಕವಿಗಳೂ ಸೂಫಿ ತತ್ವದ ಪ್ರಬೋಧಕರಾಗಿದ್ದರು. ಅವರಲ್ಲಿ ಸಾದಿ, ಹಫೀಜ್, ಜಲಾಲುದ್ದೀನ್ ರೂಮಿ, ಜಾಮಿ, ಉಮರ್, ಫರೀದ್ ಉದ್ದೀನ್ ಅತ್ತರ್, ಹಲ್ಲಾಜ್ ಮನ್‌ಸೂರ್ ಮೊದಲಾದವರು ಮುಖ್ಯರು. ಒಟ್ಟಾರೆ ಸೂಫಿಮತವೆಂದರೆ ಎಲ್ಲ ಧರ್ಮಗಳ ಸಂಕೇತ ಸ್ವರೂಪ. ಎಲ್ಲ ಧರ್ಮಗಳೂ ಸೂಚಿವುದನ್ನೇ ಅದು ಪ್ರಧಾನವಾಗಿ ಹೇಳುತ್ತದೆ; ಪ್ರೇಮ, ಐಕಮತ್ಯ, ಮತ್ತು ಜ್ಞಾನ. ಮೌಲಾನಾ ಜಲಾಲುದ್ದೀನ್ ರೂಮಿ ಅದನ್ನೇ ಈ ಮಾತುಗಳಲ್ಲಿ ಹೇಳಿದ್ದಾನೆ:—

"ನಿನ್ನೆದೆಯ ಶುದ್ಧ ರಕ್ತವನೆ ಉಂಟು. ಅದಕ್ಕಿಂತ ಮಧುವಿಲ್ಲ.
ಸ್ವರ್ಗವಾಸಿಗಳ ಸುರೆಗಿಂತ ಅದು ಗುಣಭರಿತವಾದುದು.

ನಿನ್ನ ಕಲಿಜೆಯನೇ ಸೇವಿಸು. ಅದಕ್ಕಿಂತ ಉಣಿಸಿಲ್ಲ.
ಅದರ ಸುನರುವ ಸಮನಿಸುವುದು ಬೇರೊಂದಿಲ್ಲ.
ಅರೆಯೂ ತೆರೆಯದ ಕುರುಡು ಸೂಚನೆಯಲಿ
ತೆರೆಮುಚ್ಚಿದ ಗುಪ್ತ ವೈಯಾರದಲಿ
ನೀನೆಂದೆಂದಿಗೂ 'ದೇವ'ನನು ಕಾಣಲಾರೆ.
ಎನ್ನೊಲವೆ–ನಿನ್ನ ಹೃದಯವನ್ನೇ ಓದಿಕೊಳ್ಳು.
ಭಕ್ತಿಗೌರವಗಳ ಸಿರಿಯಿಂದ ಮನವ ತುಂಬು.
ಮತಮತಾಂತರಗಳಲಿ ಹೆಚ್ಚಿನ ದೇವಸಮ್ಮೋಹನವಿಲ್ಲ.
ತಿಳಿವಿನ ಪುಟದ ಮೇಲಣ ಎದೆಯರಿವನ್ನು ಪಠಿಸು
ಯುಗಯುಗಾಂತರಗಳ ಪವಿತ್ರ ಆಗಮವೇ ಅದು."

"Our journey is to the Rose-Garden of Union."

—*Jalaluddin Rumi.*

ಸಹಾಯಕ ಗ್ರಂಥಗಳು

ಕನ್ನಡ

ಕರ್ಣಾಟಕ ಕವಿಚರಿತ್ರೆ : ೧, ೨, ೩. : ರಾ. ನರಸಿಂಹಾಚಾರ್ಯ.
ಕೆಲವು ಕನ್ನಡ ಕವಿಗಳ ಜೀವಮಾನಕಾಲ ವಿಚಾರ : ಡಾ॥ ವೆಂಕಟಸುಬ್ಬಯ್ಯ.
ಕನ್ನಡ ಸಾಹಿತ್ಯವಾಹಿನಿ : ಎನ್. ಕೆ. ಕುಲಕರ್ಣಿ.
ವೀರಶೈವ ತತ್ತ್ವಪ್ರಕಾಶ : ಸಂ : ಪ್ರೊ. ಬಸವನಾಳ.
ವಚನಶಾಸ್ತ್ರ ರಹಸ್ಯ : ರಂ. ರಾ. ದಿವಾಕರ.
ವಚನ ಧರ್ಮಸಾರ : ಎಂ. ಆರ್. ಶ್ರೀನಿವಾಸಮೂರ್ತಿ.
ಸಿದ್ಧಾಂತ ಶಿಖಾಮಣಿ.
ಹರಿಹರ ಕವಿ : ಸಂ : ಪ್ರೊ. ಕೆ. ಜಿ. ಕುಂದಣಗಾರ.
ಹಂಪೆಯ ಹರಿಹರ : ಡಿ. ಎಲ್. ನರಸಿಂಹಾಚಾರ್.
ಶಿವರಹಸ್ಯ : ಶಂ. ಬಾ. ಜೋಶಿ.
ವೀರಶೈವ ಮತಾಚಾರ್ಯರ ಕಾಲನಿರ್ಣಯ : ಕರ್ಲಮಂಗಲಂ ಶ್ರೀಕಂಠಯ್ಯ.
ಅಲ್ಲಮಪ್ರಭು : ಬುದ್ಧಯ್ಯಸ್ವಾಮಿ ಪುರಾಣೀಕ.
ಬಸವಭಾನು : ಸಿದ್ಧರಾಮಪ್ಪ ಪಾವಟೆ.
ಅಲ್ಲಮವ್ಯೋಮ : ಸಿದ್ಧರಾಮಪ್ಪ ಪಾವಟೆ.
ಪಂಚಾಚಾರ್ಯ ವಾದಪರೀಕ್ಷಾ : ಸಿದ್ಧರಾಮಪ್ಪ ಪಾವಟೆ.
ಬಸವಾದಿ ನಿಜತತ್ವದರ್ಪಣ : ಶಾಂತಪ್ಪ ವೀರಭದ್ರಪ್ಪ ಕುಬಸದ.
ವೀರಶೈವ ರತ್ನ : ಕಾಶೀನಾಥಶಾಸ್ತ್ರಿ.
ನಿರಂಜನ ವಂಶರತ್ನಾಕರ.
ವೀರಶೈವ ಮತತತ್ತ್ವ : ಮಂಜಪ್ಪ ಹರ್ಡೇಕರ್.
ಅರುವತ್ತು ಮೂವರು ಪುರಾತನರು : ಮ. ಮ. ಮಿರ್ಜಿ.
ವೀರಶೈವ ಮಹಾತ್ಮರು : ಕಾಶೀನಾಥ ಶಾಸ್ತ್ರಿ.
ಅಕ್ಕಮಹಾದೇವಿ : ಪ್ರೊ. ಕೆ. ಜಿ. ಕುಂದಣಗಾರ.
ನವನಾಥರ ಚರಿತ್ರೆ : ಕೆ. ನರಸಿಂಹ ಲಕ್ಷ್ಮಣ ನಾಯ್ಕ.
ಉಪನಿಷತ್ಪ್ರಕಾಶ : ೧. ೨. ರಂ. ರಾ. ದಿವಾಕರ.
ಕಾಠಕೋಪನಿಷತ್ತು : ವೈ. ಸುಬ್ಬರಾವ್.
ದಶೋಪನಿಷತ್ತುಗಳು : (ಮೂಲ) ಸಂ : ದೊಡ್ಡಬೆಲೆ ನಾರಾಯಣಶಾಸ್ತ್ರಿ.
ಮಾಂಡೂಕ್ಯ ಸಂವಾದ : ಹೊಸಕೆರೆ ಚಿದಂಬರಯ್ಯ.

ಹಿಂದೂ ದರ್ಶನಸಾರ: ಮಹಾಮಹೋಪಾಧ್ಯಾಯ ಎಲ್. ಶ್ರೀನಿವಾಸಾಚಾರ್ಯ.
ಭಾರತೀಯ ತತ್ತ್ವಶಾಸ್ತ್ರ ಸಂಗ್ರಹ: ಹೆಚ್. ಎನ್. ರಾಘವೇಂದ್ರಾಚಾರ್ಯ.
ವಿಜಯನಗರ ಸಾಮ್ರಾಜ್ಯ: ದೇಸಾಯಿ ಪಾಂಡುರಂಗರಾಯ.
ಕರ್ಣಾಟಕದ ಕೈಪಿಡಿ: ಸಂ: ದ. ಕೃ. ಭಾರದ್ವಾಜ.
ಕನ್ನಡನಾಡಿನ ಚರಿತ್ರೆ: ಕ. ಸಾ. ಪರಿಷತ್ತು.
ಕರ್ನಾಟಕದ ವರ್ಣನೆಯೂ ಇತಿಹಾಸವೂ: ಸಾ. ಶ್ರೀ. ರಾಜಪುರೋಹಿತ.
ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ.
ಪ್ರಬುದ್ಧ ಕರ್ಣಾಟಕ.
ಶರಣಸಾಹಿತ್ಯ.
ಶಿವಾನುಭವ.

ತೆಲುಗು

ಶ್ರೀ ವೀರಶೈವ ಸಿದ್ಧಾಂತ ಶಿರೋಮಣಿ: ಡಾ. ಕೆ. ಎಮ್. ರುದ್ರಪ್ಪ.

ENGLISH

Kanarese Literature - E. P. Rice
An Essay on Kanarese Literature - Rev. F. Kittel
Kannada Literature - Lewis Rice
History of Kannada Literature - R. Narasimhachar
History of Kannada Language - R. Nasasimhachar
A Handbook of Virasaivaism - Dr. Nandimath
History and Philosophy of Lingayet Religion - Prof. M. R. Sakhare
Social Structure of the Veerashaiva Saints - Ed. M. M. Hardekar
Who is the founder of Virasaiva or Lingayet Religion - Jeerige Basavalingappa
Lingayets - Article in the Encyclopedia of Ethics and Religion
Shakti-Vishistadvaita - R. Chakravarti
Vaishnavaism and Shaivaism - Dr. R. G. Bhandarkar
Kashmir Shaivaism - J. C. Chatterjea
Sutdies in Shaiva Siddhanta - Nallaswami Pillai
Origin and Early History of Shaivaisam in South India - C. V. Narayana Aiyar
Dravidian India - T. R. Sesha Iyengar
Shiva School of Hinduism - Shivapadasundaram
The Metaphysics of Shaiva Siddhanta System - K. Subramanya Pillai

Dravidian Element in Indian Culture - Dr. Slater
Hymns of the Tamil Saints - Kingsbury and Phillips
Divine Wisdom of the Dravida Saints - A Govindacharya
Our Heritage of Thought - S. L. Day
Elements of Indian Iconography - T. A. Gopinath Rao
Vishnudharmottaram - Tr. Dr. Stella Kramrisch
Indian Images - Brindaban C. Bhattacharya
South Indian Bronzes - O.C. Ganguli
Some South Indian Metal Images and their Dhyanas - S. Gopalachari
Essays on Indo - Aryan Mythology - Narayan Iyengar
Indian Sculpture - Dr. Stella Kramrisch
Mysticism - Dr. Evelyn Underhill
A Metaphisique of Mysticism - A. Govindacharya
Mysticism in Maharashtra - Prof. R. D. Ranade
Mysticism in the Upanishads - Bankey Behari
The Evolution of Indian Mysticism - K. S. Ramaswami Sastri
Sikh Religion - Macauliffe
The Cultural Heritage of India - Ramakrishna Ashram
Kabir and his followers - Rev. F. E. Key
Kabir - His Biography - Dr. Mohan Singh
Goraknath and Medieval Mysticism - Dr. Mohan Singh
Goraknath - Dr. Briggs
Mirabai - S. S. Mehta
Story of Mirabai - Bankey Behari
Philosophy of Love - Hanuman Prasad Poddar
Vijayanagar Sexcentenary Commemoration Volume
A Constructive Survey of Upanishadic Philosophy - Prof. R. D. Ranade
The Philosophy of the Upanishadas - Dr. Radhakrishnan
The Teaching of the Upanishads - Edward Carpenter
The Wisdom of the Upanishads - Dr. Annie Besant
The Twelve Principal Upanishads - Dr. E. Roer
Thirty Minor Upanishads - K. Narayanaswami Aiyar
The Upanishads - T.M.P. Mahadevan
Tasaawuf - Khaja Khan
Sufism - Article in the Encyclopedia of Ethics and Religion
The Conference of Birds (ATTAR) Tr. R. P. Masani
Sufism - C. H. A. Bjerregaard

The Mystics of Islam - R.A. Nicholson
The Garden of the East - N.V. Thadani
The Oriental Caravan - Sardar Ikbal Ali Shah
Masnavi - E. H. Winfield
Rumi - F. Hadland Davis
The Alchemy of Hapiness - Al Ghazzali
The Diwan of Zeb-un-Nissa
Urdu Literature - T. Grahame Bailey
History of Urdu Literature - Ram Babu Saxena
Hindi Literature - Rev. F. E. Keay
Gujarata and its Literature - K. M. Munshi
Telugu Literature - P. Chenchaiah and Raja Bhujana Rao
Literary History of Persia - E. G. Browne
Persian Literature - Reuben Levy
Arabic Literature - H.A.R. Gibb
The Journal of the Literary Committee of the L.E. Association, Dharwar

ಅಕ್ಷರಾನುಕ್ರಮಣಿಕೆ

ಶುದ್ಧಾಶುದ್ಧ ಪತ್ರಿಕೆ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೪	೬	ಪ್ರತ್ಯವಾಯವಿಲ್ಲ,	ಪ್ರತ್ಯವಾಯವಿಲ್ಲ."
೯	೧೩	ಬದುಕ ಬದುಕಬೇಕೆಂದು	ಬದುಕಬೇಕೆಂದು
೧೭	೪	ಕವಿಯಾನದೆ	ಕಿವಿಯಾನದೆ
೫೩	೨೩	ಆರ್ಕಾಪುರದ	ಅರ್ಕಾಪುರದ
೬೮	೯	ಸಣ್ಣನಡು	ಸಣ್ಣನಡು
೯೪	೧೦	ಷಟ್ಸ್ಥಲಜಾನ	ಷಟ್ಸ್ಥಲ ಜ್ಞಾನ
೯೬	೨೧	ಸಪ್ಪಣ್ಣಸ್ನಾಮಿ	ಸಪ್ಪಣ್ಣಸ್ವಾಮಿ
೧೦೪	೨೭	ಪ್ರಭುಲಿಂಗ	ಪ್ರಭುದೇವ
೧೫೩	೨೪	ಬದ್ದವಾಗಿಲ್ಲ	ಬದ್ಧವಾಗಿಲ್ಲ
೨೦೬	೧೦	ದಂಥಲೆ	ದಾಂಥಲೆ
೨೦೭	೨೦	ಪ್ರೇಮುಕ್ಯದ	ಪ್ರೇಮೈಕ್ಯದ
೨೧೪	೨೪	Sutdies	Studies

ವೀರಶೈವ ಸಾಹಿತ್ಯ ಧರ್ಮಗ್ರಂಥಗಳು

೧. ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ (ಭಾಗ ೨)
೨. ವಚನ ಸಾಹಿತ್ಯ ಕೈಪಿಡಿ
೩. ಜಗಜ್ಜ್ಯೋತಿ ಬಸವೇಶ್ವರ: ಸಮಗ್ರ ಜೀವನ ಚರಿತ್ರೆ
೪. ಬಸವಣ್ಣನವರ ಅಮೃತವಾಣಿ: ಜೀವನ ಚರಿತ್ರೆ ಮತ್ತು ವಚನ ಪರಿಚಯ
೫. ಅಲ್ಲಮಪ್ರಭು: ,, ,,
೬. ಅಕ್ಕಮಹಾದೇವಿ: ,, ,,
೭. ವೀರಶೈವ ಮಹಾಪುರುಷರು: ಹರಿಹರನ ಬಸವರಾಜ, ಚೆನ್ನಬಸವಾಂಕನ ಅಕ್ಕಮಹಾದೇವಿ, ಚಾಮರಸನ ಅಲ್ಲಮಪ್ರಭು, ರಾಘವಾಂಕನ ಸಿದ್ಧರಾಮ, ವಿರೂಪಾಕ್ಷ ಪಂಡಿತನ ಚೆನ್ನಬಸವ - ಇವರ ಮೇಲಿನ ಪ್ರಬಂಧಗಳು.
೮. ಚೆನ್ನಬಸವಾಂಕನ ಅಕ್ಕಮಹಾದೇವಿ ಪುರಾಣ (ಸಂಗ್ರಹ)
೯. ಬಸವೇಶ್ವರ
೧೦. ಅಲ್ಲಮಪ್ರಭು } ನಾಟಕಗಳು.
೧೧. ಅಕ್ಕಮಹಾದೇವಿ
೧೨. ಶಿವಶಿಲ್ಪ: ಶಿಲ್ಪಶಾಸ್ತ್ರದಲ್ಲಿ ಶಿವನ ಕಲ್ಪನೆಯ ಬಗ್ಗೆ ವಿವೇಚನೆ.

ಶ್ರೀ ಕೃಷ್ಣರಾಯರ ಇತರ ಗ್ರಂಥಗಳು

ಕಾದಂಬರಿ
- ಜೀವನಯಾತ್ರೆ
- ಉಪಯುರಾಗ
- ಸಂಧ್ಯಾರಾಗ
- ಮಂಗಳಸೂತ್ರ
- ಸಾಹಿತ್ಯರತ್ನ
- ನಟಸಾರ್ವಭೌಮ

ಕಥೆ
- ಮಿಂಚು
- ಕಿಡಿ
- ಜಾತಿ ಹೀನನ ಮನೆಯ ಜ್ಯೋತಿ
- ಕಾಮನ ಸೋಲು

ಪ್ರಬಂಧ
- ಹೊಸ ಹುಟ್ಟು
- ರಾಜಾ ರವಿವರ್ಮ
- ಸಾಹಿತ್ಯ ಮತ್ತು ಜೀವನ

ನಾಟಕ
- ಆಹುತಿ
- ಆದದ್ದೇನು
- ಗೋಮುಖ ವ್ಯಾಘ್ರ
- ಬಣ್ಣದ ಬೀಸಣಿಗೆ
- ಎರಡು ನಾಟಕಗಳು
- ಮದುವೆಯೋ-ಮನೆ ಹಾಳೋ

ಸಂಕಲನ
- ಪ್ರಣಯ ಗೀತೆಗಳು
- ಕಾಮನಬಿಲ್ಲು

ಜೀವನ ಚರಿತ್ರೆ
- ಸ್ವಾಮಿ ವಿವೇಕಾನಂದ
- ಉಮರ್ ಖಯ್ಯಾಂ
- ಜಾರ್ಜ್ ಬರ್ನಾರ್ಡ್ ಷಾ

In English :

SHRI BASAVESWARA
SISTER MAHADEVI
ALLAMA PRABHU
STUDIES IN VEERASHAIVA MYSTICISM

ಸಂಧ್ಯಾರಾಗ ಪ್ರಶಸ್ತಿ

ಶ್ರೀ. ಅ. ನ. ಕೃಷ್ಣರಾಯರ 'ಸಂಧ್ಯರಾಗ' ವನ್ನೋದಿದವರು ಆವಶ್ಯಕ ವಾಗಿ ಓದಬೇಕಾದ ಗ್ರಂಥ ಇದು. ಸಂಧ್ಯಾರಾಗದ ವಿವಿಧ ಸೌಂದರ್ಯ ವನ್ನೆತ್ತಿ ತೋರಿಸುವ ಪಾಂಡಿತ್ಯಪೂರ್ಣ ಲೇಖನಗಳು, ಕರ್ನಾಟಕದಲ್ಲಿ ಪ್ರಸಿದ್ಧರಾದ ಪಂಡಿತರ ಲೇಖನಗಳು.

ಪ್ರಿನ್ಸಿಪಾಲ್ ವಿ. ಕೃ. **ಗೋಕಾಕ,** ಎಂ.ಎ., ಅವರ ಮುನ್ನುಡಿಯೊಡನೆ.

ಈ ಗ್ರಂಥಕ್ಕೆ ಲೇಖನಗಳನ್ನು ಬರೆದಿರುವವರು

ಪ್ರೊ. ಆರ್. ವಿ. ಜಾಗೀರದಾರ್, ಎಂ.ಎ.
ಪ್ರೊ. ಎಸ್. ಎಸ್. ಮಾಳವಾಡ, ಎಂ.ಎ.
ಶ್ರೀ ಬನ್ನಂಜೆ ರಾಮಾಚಾರ್ಯ, ಸಂಪಾದಕ, 'ಧುರೀಣ.'
ಶ್ರೀ ಎನ್. ಕೆ. ಕುಲಕರ್ಣಿ, ಎಂ.ಎ.
ಶ್ರೀ ಹನುಮಂತರಾವ್ ಮಾಂಜರೇಕರ್, ಬಿ.ಎ.
ಶ್ರೀ ಎಂ. ಎಸ್. ಅನಂತಪದ್ಮನಾಭರಾವ್, ಬಿ.ಎ.
ಶ್ರೀ **ಬಿ.** ಪುಟ್ಟಸ್ವಾಮಯ್ಯ
ಶ್ರೀಮತಿ ಅನೂರಾಧಾ, ಮುಂಬಯಿ
ಸೌ|| ಜಯಲಕ್ಷ್ಮಿ ಶ್ರೀನಿವಾಸನ್
ಶ್ರೀ ವಿ. ಎಂ. ಇನಾಂದಾರ್, ಎಂ.ಎ.
ಸಂಗೀತ ವಿದ್ವಾನ್ ಡಿ. ಸುಬ್ಬರಾಮಯ್ಯ.

ಬೆಲೆ ೧೦ ಆಣೆ.